ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಪ್ರಕೃತಿಯ ಬಗ್ಗೆ ಮನುಷ್ಯನಿಗೆ ಕುತೂಹಲ ಹೆಚ್ಚಿದಷ್ಟೂ ಪ್ರಕೃತಿಗೆ ಅಪಾಯವೂ ಹೆಚ್ಚುತ್ತಿದೆ. ಈಗ ಅವನಿಗೆ ಅಂತರಿಕ್ಷದ ಬಗ್ಗೆ ಕುತೂಹಲ ಹೆಚ್ಚುತ್ತಿದೆ. ಹೀಗಾಗಿ ಆಗಸವೂ ಮಲಿನವಾಗುತ್ತಿದೆ.

ಆಳ-ಅಗಲ
ಅಬ್ಬರದ ಸಂಗೀತ ಮತ್ತು ಹೃದಯಾಘಾತ
'ಮಣಿಪುರ ಹಿಂಸೆಗೆ ಬಾಹ್ಯಶಕ್ತಿ ಕಾರಣ' 6
'ಆರ್ಥಿಕತೆ: ಜಪಾನ್ ಹಿಂದಿಕ್ಕಲಿದೆ ಭಾರತ' 10
ಮಧ್ಯಪ್ರದೇಶ: ಕಣದಲ್ಲಿ ಸಹೋದರರು, ಅತ್ತೆ-ಮಾವ
ಕುಟುಂಬದ ಸದಸ್ಯರ ನಡುವೆ ಹಣಾಹಣಿ 7

ಶಿವ–ಕುಮಾರ ಸಮರ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿಯವರ ಜಿದ್ದಾಜಿದ್ದಿಯ ಅಖಾಡವಾದ ರಾಮನಗರ ಮತ್ತೊಮ್ಮೆ ರಾಜಕೀಯ ಸಮರಕ್ಕೆ ವೇದಿಕೆಯಾಗಿದೆ. ತಾವು ಪ್ರತಿನಿಧಿಸುವ ಕನಕಪುರ ಕ್ಷೇತ್ರವನ್ನು ಬೆಂಗಳೂರು ಜಿಲ್ಲೆಗೆ ಸೇರಿಸುವುದಾಗಿ ಶಿವಕುಮಾರ್ ಹೇಳಿರುವುದು ರಾಜಕೀಯ ಕಿಡಿ ಹೊತ್ತಿಸಿದೆ. ರಾಮನಗರದಿಂದಲೇ ರಾಜಕೀಯ ಜೀವನ ಶುರು ಮಾಡಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ, ಶಾಸಕ, ಮುಖ್ಯಮಂತ್ರಿ ಹುದ್ದೆಯವರೆಗೆ ಏರಿ ಯಶಸ್ಸು ಕಂಡಿರುವ ಎಚ್.ಡಿ. ಕುಮಾರಸ್ವಾಮಿ ಅವರು, ರಾಮನಗರ ಮತ್ತು ಚನ್ನಪಟ್ಟಣ ತಮ್ಮ ಎರಡು ಕಣ್ಣುಗಳಿದ್ದಂತೆ ಎಂದು ಹೇಳಿಕೊಂಡವರು. ಹಿಂದೆ ರಾಮನಗರವನ್ನು ಪ್ರತಿನಿಧಿಸಿದ್ದ ಅವರು, ಈಗ ಚನ್ನಪಟ್ಟಣದ ಶಾಸಕ. 2007ರಲ್ಲಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾಲ್ಕು ತಾಲ್ಲೂಕುಗಳನ್ನು ಸೇರಿಸಿ ರಾಮನಗರವನ್ನು ಜಿಲ್ಲೆಯಾಗಿ ಘೋಷಿಸಿದವರು. ಇಬ್ಬರು ಪ್ರಭಾವಿ ನಾಯಕರ ರಾಜಕೀಯ ಕರ್ಮಭೂಮಿ, ಹಲವು ಬಾರಿ ಇಬ್ಬರ ಸವಾಲು–ಜವಾಬುಗಳಿಗೂ ವೇದಿಕೆಯಾಗಿತ್ತು. ಮೈತ್ರಿ ಸರ್ಕಾರದ ಅವಧಿಯಲ್ಲಿ ಮಾತ್ರ ಇಬ್ಬರೂ ಹೆಗಲೆಣೆಯಾಗಿ ನಿಂತಿದ್ದು ಬಿಟ್ಟರೆ ರಾಜಕೀಯವಾಗಿ ಸದಾ ಪ್ರತಿಸ್ಪರ್ಧಿಗಳು. ಕನಕಪುರವನ್ನು ಬೆಂಗಳೂರಿಗೆ ಸೇರಿಸುವುದಾಗಿ ಹೇಳಿದ ಶಿವಕುಮಾರ್ ಮಾತು, ಕುಮಾರಸ್ವಾಮಿಯವರನ್ನು ರೊಚ್ಚಿಗೆಬ್ಬಿಸಿದೆ. 'ಮುಂದೆ ನಡೆಯಲಿರುವ ವಿಧಾನಸಭಾ ಕ್ಷೇತ್ರ ಪುನರ್‌ವಿಂಗಡಣೆ ವೇಳೆ ಕನಕಪುರ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರವಾಗಿ ನಿಗದಿಯಾಗಲಿದೆ. ಈ ಕಾರಣಕ್ಕೆ ಹೊಸ ರಾಜಕೀಯ ವಿವಾದ ತಲೆ ಎತ್ತಿದೆ' ಎಂಬ ವಿಶ್ಲೇಷಣೆಯೂ ರಾಜಕೀಯ ವಲಯದಲ್ಲಿ ನಡೆದಿದೆ.

ಬೆಂಗಳೂರು ವ್ಯಾಪ್ತಿಗೆ ಕನಕಪುರ: ಡಿಕೆಶಿ

ಕನಕಪುರ (ರಾಮನಗರ): 'ನಾವು ರಾಮನಗರದವರಲ್ಲ. ಬದಲಿಗೆ, ಬೆಂಗಳೂರು ಜಿಲ್ಲೆಯವರು. ಮುಂದೊಂದು ದಿನ ಕನಕಪುರವು ಬೆಂಗಳೂರು ವ್ಯಾಪ್ತಿಗೆ ಸೇರಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ತಾಲ್ಲೂಕಿನ ಶಿವನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದ ವೀರಭದ್ರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದಾರೆ.

'ಯಾರೊ ಹೆಸರು ಮಾಡಿಕೊಳ್ಳಲು ರಾಮನಗರವನ್ನು ಜಿಲ್ಲೆ ಮಾಡಿದರು. ನಮ್ಮನ್ನು ಆ ಮೂಲೆಗೆ ಸೇರಿಸಿದರು. ಆದರೆ, ನಾವೆಲ್ಲರೂ ಬೆಂಗಳೂರಿನವರು ಎಂಬುದು ನಿಮ್ಮ ತಲೆಯಲ್ಲಿರಲಿ' ಎಂದು ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಹೆಸರು ಹೇಳದೆ ವಾಗ್ದಾಳಿ ನಡೆಸಿದರು.

ಆಸ್ತಿ ಮೌಲ್ಯ ದುಪ್ಪಟ್ಟು: 'ಆಸ್ತಿ ಮಾರಬೇಡಿ ಎಂದು ನಾನು ಮತ್ತು ಪಿ.ಜಿ.ಆರ್ ಸಿಂಧ್ಯಾ ಹೇಳುತ್ತಲೇ ಬಂದಿದ್ದೇವೆ. ನಿಮ್ಮ ಜೇಬಿಗೆ ನಾನು ನೇರವಾಗಿ ದುಡ್ಡು ಹಾಕಲು ಅಥವಾ ಮನೆ ಕಟ್ಟಿಸಿ ಕೊಡಲು ಆಗುವುದಿಲ್ಲ. ಆದರೆ, ನಿಮ್ಮ ಆಸ್ತಿ ಮೌಲ್ಯವನ್ನು ಹತ್ತು ಪಟ್ಟು ಹೆಚ್ಚಿಸುವ ಶಕ್ತಿಯನ್ನು ಆ ದೇವರು ನನಗೆ ನೀಡಿದ್ದಾನೆ. ಆ ಕೆಲಸವನ್ನು ನಾನು ಮಾಡಿದ್ದೇನೆ' ಎಂದು ಶಿವಕುಮಾರ್ ಸಮಾರಂಭದಲ್ಲಿ ಹೇಳಿದರು.

5ನೇ ಪುಟ ನೋಡಿ

ಆಸ್ತಿ ಸಕ್ರಮಕ್ಕೆ ಹೊಸ ನಾಟಕ: ಎಚ್‌ಡಿಕೆ



'ಕನಕಪುರ ಸುತ್ತಮುತ್ತಲಿರುವ ತಮ್ಮ ಬೇನಾಮಿ ಆಸ್ತಿಯನ್ನು ಸಕ್ರಮ ಮಾಡಿಕೊಳ್ಳಲು ಹೊಸ ನಾಟಕ ಶುರುವಾಗಿದೆ. ಆಸ್ತಿಗಳ ಮೌಲ್ಯ ಹೆಚ್ಚಿಸಿಕೊಂಡು ಖಜಾನೆ ತುಂಬಿಸಿಕೊಳ್ಳುವ ಹುನ್ನಾರ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಎಕ್ಸ್'ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, 'ಇದು ರಾಮನಗರ ಜಿಲ್ಲೆಯ ಜನರಿಗೆ ಮಾಡುವ ದ್ರೋಹ ಮತ್ತು ಕನಕಪುರ ಜನರಿಗೆ ಮಂಕುಬೂದಿ ಎರಚುವ ಹುನ್ನಾರ. ಕನಕಪುರ ಸುತ್ತಮುತ್ತ ಯಾರ ಆಸ್ತಿಗಳಿವೆ? ಅದರಲ್ಲಿ ಬೇನಾಮಿಗಳೆಷ್ಟು' ಎಂದು ಅವರು ಪ್ರಶ್ನಿಸಿದ್ದಾರೆ.

ರಾಮನಗರದ ವೈದ್ಯಕೀಯ ಕಾಲೇಜನ್ನು ಕನಕಪುರಕ್ಕೆ ಕದ್ದೊಯ್ದಿದ್ದರ ಹಿಂದೆಯೂ ಇದೇ ದುಷ್ಟ ತಂತ್ರ ಅಡಗಿದೆ. ತಮ್ಮ ಸ್ವಾರ್ಥಕ್ಕಾಗಿ ಜಿಲ್ಲೆಯ ಜನರ ಬೆನ್ನಿಗೆ ಚೂರಿ ಹಾಕಿ, ಕನಕಪುರ ಜನರ ಹಿತಕ್ಕೆ ಕೊಡಲಿ ಪೆಟ್ಟು ಹಾಕುವ ಹುನ್ನಾರ ನಡೆದಿದೆ. ಇದನ್ನು ಸಹಿಸುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

5ನೇ ಪುಟ ನೋಡಿ

ಲಕ್ಷಾಂತರ ಮಂದಿ ಭಾಗಿ, ಚಾಮುಂಡೇಶ್ವರಿಗೆ ಮೊಳಗಿದ ಜೈಕಾರ

ಬರ ಮರೆಸಿದ ಜಂಬೂಸವಾರಿ

● ಕೆ.ನರಸಿಂಹಮೂರ್ತಿ

ಮೈಸೂರು: ಬರಗಾಲ ಮತ್ತು ಕಾವೇರಿ ಹೋರಾಟದ ನಡುವೆಯೇ, ನಾಡಹಬ್ಬ ದಸರಾ ಉತ್ಸವದ ವಿಜಯದಶಮಿ–ಜಂಬೂಸವಾರಿ ಮೆರವಣಿಗೆಯು ನಗರದಲ್ಲಿ ಮಂಗಳವಾರ ಅದ್ಧೂರಿಯಾಗಿ ನಡೆಯಿತು. ಪೊಲೀಸರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ನಡುವಣ ಸಮನ್ವಯದ ಕೊರತೆಯಿಂದಾಗಿ, ಮೆರವಣಿಗೆಗೆ 9 ನಿಮಿಷ ತಡವಾಗಿ ಚಾಲನೆ ದೊರಕಿತು.

ಬರಗಾಲವನ್ನು ಮರೆತು ಬಂದಿದ್ದ ಲಕ್ಷಾಂತರ ಮಂದಿ ಜಂಬೂಸವಾರಿಯ ಸಂಭ್ರಮಕ್ಕೆ ಸಾಕ್ಷಿಯಾದರು. ಬರಪೀಡಿತ ತಾಲ್ಲೂಕುಗಳಿಂದಲೇ ಬಂದಿದ್ದ ಬಹುತೇಕ ಕಲಾವಿದರು ಸಂಕಟ ಮರೆತು ಪ್ರದರ್ಶನ ನೀಡಿ ಮೆರವಣಿಗೆಗೆ ಮೆರುಗು ತಂದರು.

5ನೇ ಪುಟ ನೋಡಿ

ಮೈಸೂರು ದಸರಾ ಪ್ರಯುಕ್ತ ಮಂಗಳವಾರ ನಡೆದ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಹೊತ್ತ ಅಭಿಮನ್ಯು ಆನೆಯು ಕುಮ್ಕಿ ಆನೆಗಳಾದ 'ವರಲಕ್ಷ್ಮಿ' ಮತ್ತು 'ವಿಜಯ' ಜೊತೆ ಸಾಗಿತು ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.

ಶೇ 40 ಕಮಿಷನ್: ಶೀಘ್ರ ತನಿಖೆ ಆರಂಭ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಐದು ಪ್ರಮುಖ ಇಲಾಖೆಗಳ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು ಎಂಬ ಆರೋಪ ಕುರಿತು ನವೆಂಬರ್‌ನಿಂದ ತನಿಖೆ ಆರಂಭಿಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗ ಸಿದ್ಧತೆ ನಡೆಸಿದೆ. 6

ಒಳ ಪುಟ
ಗಾಜಾ: ಒಂದೇ ದಿನ 700ಕ್ಕೂ ಹೆಚ್ಚು ಸಾವು 7
ನವವರ್ಣ
3ಬಿ ಮತ್ತು 3ಡಿ ಪುಟಗಳನ್ನು ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಮಂಡಿನೋವು
ಸರ್ಜರಿ ಇಲ್ಲದೇ ನಿವಾರಣೆ
ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ನೋವಿಗೂ ಕೂಡ ಪರಿಣಾಮಕಾರಿ ಚಿಕಿತ್ಸೆ.

8000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ನೀಡಿದೆ ಅಲಿವಿಯೇಟ್

ಮಂಗಳೂರಿನ ನಿವಾಸಿ ದಿನೇಶ್ ಶರ್ಮಾ ಎಂಬುವವರಿಗೆ ತೀವ್ರ ಮೊಣಕಾಲು ನೋವು ಕಾಣಿಸಿಕೊಂಡಿದ್ದು, ಇದರಿಂದ ಮೂಲಭೂತ ಕೆಲಸಗಳನ್ನು ಮಾಡುವುದು ಕೂಡ ಕಷ್ಟಕರವಾಗಿತ್ತು. ಸಂಧಿವಾತದ ವಿರುದ್ಧದ ಹೋರಾಟದಲ್ಲಿ, ಅವರು ಹಲವಾರು ವೈದ್ಯರನ್ನು ಭೇಟಿಯಾದರು, ವಿವಿಧ ವೈದ್ಯಕೀಯ ವಿಧಾನಗಳಲ್ಲಿ ವಿಫಲರಾಗಿದ್ದರಿಂದ ಅವರ ಹುಡುಕಾಟ ಮುಂದುವರೆಯಿತು. ದಿನಪತ್ರಿಕೆಯ ಲೇಖನವನ್ನು ನೋಡಿದ ಅವರು ಬೆಂಗಳೂರಿನ 'ಅಲಿವಿಯೇಟ್ ಪೇನ್ ಕ್ಲಿನಿಕ್'ನಲ್ಲಿ ಹೆಸರಾಂತ ನೋವು ತಜ್ಞ ಡಾ. ಸ್ವಾಗತೇಶ್ ಬಸ್ತಿಯಾ ಅವರನ್ನು ಭೇಟಿಯಾದರು. ರೋಗನಿರ್ಣಯ ಮಾಡಿದ ಅಲಿವಿಯೇಟ್‌ನ ವೈದ್ಯರು, ಅವರ ಮೊಣಕಾಲುಗಳ ಸ್ಥಿತಿ ಮತ್ತು ಅವರ ಸ್ಥಿತಿಗೆ ಲಭ್ಯವಿರುವ ಕಾರ್ಯವಿಧಾನಗಳ ಬಗ್ಗೆ ಆಳವಾಗಿ ವಿವರಿಸಿದರು. ಮೊಣಕಾಲಿನ ಸಂಧಿವಾತದ ನಿರ್ವಹಣೆಯಲ್ಲಿ ಲಭ್ಯವಿರುವ ಅಂತರರಾಷ್ಟ್ರೀಯ ಪ್ರಗತಿಗಳ ಪ್ರಕಾರ ವೈದ್ಯರು ಅತ್ಯುತ್ತಮ ಚಿಕಿತ್ಸೆ ಬೊಟೊಕ್ಸ್+ ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ + ಪ್ರೊಲೋಥೆರಪಿ ನೀಡಲಾಯಿತು.
ಅಲಿವಿಯೇಟ್ ಅನ್ನು ಏಕೆ ಆಯ್ಕೆ ಮಾಡುವುದು?
- ಸರ್ಜರಿ ಇಲ್ಲದೇ ನೋವು ಉಪಶಮನ
- 30 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು
- ಕಡಿಮೆ ವೆಚ್ಚದ ಚಿಕಿತ್ಸೆ
- ರಕ್ತಸ್ರಾವವಿಲ್ಲ
ಇದಾದ ನಂತರ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಅವರು ತಮ್ಮ ಕಿರಿಯ ದಿನಗಳಂತೆ ತಮ್ಮ ಸಕ್ರಿಯ, ನೋವು ಮುಕ್ತ ಜೀವನಶೈಲಿಗೆ ಮರಳಿದರು. ದಿನೇಶ್ ಶರ್ಮಾ ರವರು ಈಗ ಹೊಸ ಜೀವನ ಮತ್ತು ಚಲನಶೀಲತೆಯ ಎರಡನೇ ಇನ್ನಿಂಗ್ಸ್ ಅನ್ನು ಸಂತೋಷದಿಂದ ಆನಂದಿಸುತ್ತಿದ್ದಾರೆ.
ಅಲಿವಿಯೇಟ್‌ನಲ್ಲಿ ನೀಡುವ ಕೆಲವು ಚಿಕಿತ್ಸೆಗಳು ಹೀಗಿವೆ:
ಬೊಟೊಕ್ಸ್ ಚುಚ್ಚುಮದ್ದು: ಈ ಚಿಕಿತ್ಸೆಯು ಮೊಣಕಾಲಿನ ಕೀಲುಗಳಿಗೆ ನೇರವಾಗಿ ಚುಚ್ಚುಮದ್ದಿನ ಮೂಲಕ ಕೆಲವು ಔಷಧಿಗಳನ್ನು ನೀಡಲಾಗುತ್ತದೆ.
ಪ್ರೊಲೋಥೆರಪಿ: ಗ್ಲೂಕೋಸ್ ದ್ರಾವಣವನ್ನು ಮೊಣಕಾಲಿನ ಜಂಟಿಗೆ ಈ ವಿಧಾನದಲ್ಲಿ ಚುಚ್ಚಲಾಗುತ್ತದೆ,
ಜೆನಿಕ್ಯುಲರ್ ನರ ರೇಡಿಯೊಫ್ರೀಕ್ವೆನ್ಸಿ ಅಬ್ಲೇಶನ್: ಜೆನಿಕ್ಯುಲರ್ ನರಗಳ ರೇಡಿಯೊಫ್ರೀಕ್ವೆನ್ಸಿ ಅಬ್ಲೇಶನ್ ಮೆದುಳಿಗೆ ನೋವಿನ ಸಂಕೇತಗಳನ್ನು ಕಳುಹಿಸುವ ಮೊಣಕಾಲಿನ ನರಗಳನ್ನು ಗುರಿಯಾಗಿಸುತ್ತದೆ ಮತ್ತು ನಿಶ್ಚೇಷ್ಟಿತಗೊಳಿಸುತದೆ. ಇದು ಯಾವುದೇ ತೊಡಕುಗಳಿಲ್ಲದೆ ತಕ್ಷಣದಲ್ಲಿಯೇ ನೋವು ಪರಿಹಾರವನ್ನು ನೀಡುತ್ತದೆ.
ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ನಿಮ್ಮ ಸಕ್ರಿಯ ಜೀವನಶೈಲಿಯನ್ನು ಮರಳಿ ತರಲು 'ಅಲಿವಿಯೇಟ್ ಕ್ಲಿನಿಕ್' ಭರವಸೆ ನೀಡುತದೆ. ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.
ಅಲಿವಿಯೇಟ್
ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
ಅಲಿವಿಯೇಟ್ ರವರ ಕ್ಲಿನಿಕ್‌ಗಳು ಬೆಂಗಳೂರಿನಲ್ಲಿ ಇಲ್ಲಿವೆ
ಸದಾಶಿವನಗರ | ಇಂದಿರಾನಗರ
ಜಯನಗರ | ಟಿ. ದಾಸರಹಳ್ಳಿ
CALL NOW 84949 73146 080 23614888

ವಚನಜ್ಯೋತಿ ಬಳಗದ 'ವಚನ ವಿಜಯದಶಮಿ' ಕಾರ್ಯಕ್ರಮದಲ್ಲಿ ಗೊ.ರು.ಚ.

'ವಿಚಾರಶೀಲ ಆಚರಣೆಯೇ ವಚನ ವಿಜಯದಶಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜಯ ದಶಮಿಯಂದು ಯಾವುದೇ ವೈದಿಕ ಆಚರಣೆಗಳಿಲ್ಲದೆ, ವಿಚಾರಶೀಲ ಆಚರಣೆಗಳಿಂದ ನಡೆಯುತ್ತಿರುವ 'ವಚನ ವಿಜಯದಶಮಿ', 'ಬಸವ ದಸರಾ' ಅರ್ಥಪೂರ್ಣ' ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

ವಚನಜ್ಯೋತಿ ಬಳಗ ಕಲ್ಯಾಣ ಲೇಔಟ್‌ನ ಬಸವ ಮಂಟಪದಲ್ಲಿ ಹಮ್ಮಿಕೊಂಡಿದ್ದ 'ವಚನ ವಿಜಯ ದಶಮಿ'ಯ ಸಮಾರೋಪ ಸಮಾರಂಭ ದಲ್ಲಿ ಅವರು ಮಾತನಾಡಿದರು.

'ಯಾವುದೇ ಖಂಡನೆ, ಮಂಡನೆ-ಗಳಿಲ್ಲದೇ, ವಚನ ನವರಾತ್ರಿ ಹೆಸರಿನಲ್ಲಿ ಒಂಬತ್ತು ಜನ ವಚನಕಾರ್ತಿಯರ ಪರಿಚಯ ಮಾಡಿಕೊಟ್ಟಿರುವುದು ಸ್ವಾಗತಾರ್ಹ. ಕಾಳವ್ವೆ, ರೇಚವ್ವೆ, ವೀರಮ್ಮರಂತಹ ಪ್ರಸಿದ್ಧರಲ್ಲದ ವಚನ-ಕಾರ್ತಿಯರನ್ನು ಪರಿಚಯಿಸಿರುವುದು ಉತ್ತಮ ಕಾರ್ಯ' ಎಂದು ಶ್ಲಾಘಿಸಿದರು.

'ಮುಕ್ಕೋಟಿ ದೇವರುಗಳ ಕಲ್ಪನೆಯನ್ನು ನಿವಾರಿಸಿದ ವಚನಕಾರರು ಶ್ರಮವೇ ಕಾಯಕ, ಹಂಚಿ ತಿನ್ನುವುದೇ ದಾಸೋಹ ಸಂಸ್ಕೃತಿ. ಮಾರಿ-ಮಸಣಿಗಳನ್ನು ತೊಡೆದು ಹಾಕಿ, ಶತಶತ ಮಾನಗಳಿಂದ ಅವಕಾಶವಂಚಿತ ಸಮುದಾಯಕ್ಕೆ ಧ್ವನಿ ನೀಡಿದವರು ವಚನಕಾರರು' ಎಂದು ವಿವರಿಸಿದರು.

ಬೇಲಿಮಠದ ಶಿವರುದ್ರಸ್ವಾಮೀಜಿ ಮಾತನಾಡಿ, 'ವಚನಕಾರರ ಸೊಲ್ನುಡಿಗಳನ್ನು ಮನೆ-ಮನಕ್ಕೆ ಮುಟ್ಟಿಸುವ ಕಾರ್ಯವನ್ನು ವಚನಜ್ಯೋತಿ ಬಳಗ ಮಾಡುತ್ತಿದೆ. ಉಳಿದ ಸಂಘಟನೆಗಳೂ ಈ ರೀತಿಯ ಕೆಲಸಗಳನ್ನು ಮಾಡಬೇಕು' ಎಂದು ಸಲಹೆ ನೀಡಿದರು.

'ವಚನಕಾರರು ನಮಗೆ ತೋರಿರುವ ದಾರಿಯಲ್ಲಿ ನಾವು ನಡೆಯಬೇಕು. ವಚನಗಳು ನಮ್ಮ ಅಂತರಂಗಕ್ಕೆ ಬೆಳಕನ್ನು ನೀಡುತ್ತ ನಮ್ಮನ್ನು ಸರಿದಾರಿಗೆ ಕೊಂಡೊಯ್ಯುತ್ತದೆ' ಎಂದರು.

'ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುವ ವಚನಜ್ಯೋತಿ ಸಂಘಟನೆಗೆ ಸಹಕಾರ ನಿರಂತರವಾಗಿ ನೀಡಲಾಗುವುದು' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಭರವಸೆ ನೀಡಿದರು.

ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, 'ರಾಜ್ಯದ ಸಾಂಸ್ಕೃತಿಕ ಇತಿಹಾಸದಲ್ಲಿಯೇ ವಚನ ನವರಾತ್ರಿ ವಿಶೇಷ. ಒಂಬತ್ತು ದಿನಗಳೂ ಮಹಿಳಾ ತಂಡಗಳು ವಚನ ಸಂಗೀತ ನೀಡಿದ್ದು, ಮಕ್ಕಳು ವಚನ ರೂಪಕಗಳನ್ನು ಅಭಿನಯಿಸಿದ್ದಾರೆ. ವಚನ ಕಲಿಕೆಯ ವಿದ್ಯಾರ್ಥಿಗಳೇ ವಚನಕಾರ್ತಿಯರ ಪರಿಚಯ ಮಾಡಿಕೊಟ್ಟಿದ್ದಾರೆ. ಬೇರೆ ಬೇರೆ ಕ್ಷೇತ್ರಗಳ ಸಾಧಕಿಯರು ನಲ್ನುಡಿಗಳನ್ನಾಡಿದ್ದಾರೆ' ಎಂದು ತಿಳಿಸಿದರು.

ದಿಶಾ, ಪ್ರದ್ಯೋತ್, ಶಾರ್ವಿ, ಮನ್ವಿತ್ ಮತ್ತು ವಚನ ಕಲಿಕಾ ತರಗತಿಯ ವಿದ್ಯಾರ್ಥಿಗಳು ವಚನಗಳನ್ನು ಪ್ರಸ್ತುತ ಪಡಿಸಿದರು. ವಚನ ನವರಾತ್ರಿಯ ಸಂಚಾಲಕರಾದ ಪದ್ಮಜ ಪ್ರಸನ್ನ, ದಿವಾಕರ್, ವಚನಜ್ಯೋತಿ ಬಳಗದ ಪ್ರಭು ಇಸುವನಹಳ್ಳಿ, ರಾಜಾಗುರು ಪ್ರಸಾದ್, ಹರೀಶ್ ಪಾಲನಹಳ್ಳಿ, ರುದ್ರೇಶ್ ಇಸುವನಹಳ್ಳಿ, ನಂ. ವಿಜಯಕುಮಾರ್, ಕಲ್ಯಾಣ ಪಟ್ಟಣದ ಚನ್ನಮಲ್ಲಯ್ಯ, ಬಸವರಾಜ್, ಚಂದ್ರ ಶೇಖರಯ್ಯ, ಶಿವಕುಮಾರ್ ಇದ್ದರು.

ವಚನಜ್ಯೋತಿ ಬಳಗ ಹಮ್ಮಿಕೊಂಡಿದ್ದ 'ವಚನ ವಿಜಯದಶಮಿ'ಯ ಸಮಾರೋಪ ಕಾರ್ಯಕ್ರಮದಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ ಬಸವಣ್ಣನ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಶಾಸಕ ಎಸ್.ಟಿ. ಸೋಮಶೇಖರ್, ಗೊ.ರು.ಚನ್ನಬಸಪ್ಪ ಇದ್ದರು

ಸುದ್ದಿ 2 ನಿಮಿಷ

ಕನಿಷ್ಠ ತಾಪಮಾನ ಇಳಿಕೆ

ಬೆಂಗಳೂರು: ನಗರದಲ್ಲಿ ಕನಿಷ್ಠ ತಾಪಮಾನ ಇಳಿಕೆ ಕಂಡಿದ್ದು, ಮಂಗಳವಾರ 17.1 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಇದು ಈ ತಿಂಗಳು ನಗರದಲ್ಲಿ ವರದಿಯಾದ ಕನಿಷ್ಠ ತಾಪಮಾನವಾಗಿದೆ.

ಈ ತಿಂಗಳ ಬಹುತೇಕ ದಿನಗಳಲ್ಲಿ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್‌ನಿಂದ 20 ಡಿಗ್ರಿ ಸೆಲ್ಸಿಯಸ್ ವರದಿಯಾಗಿತ್ತು. ಮಂಗಳವಾರ ಕನಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿದೆ. ಬೆಳಿಗ್ಗೆ 8.30ರ ವೇಳೆಗೆ ಕೆಂಪೇಗೌಡ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 17.2 ಡಿಗ್ರಿ ಸೆಲ್ಸಿಯಸ್ ಹಾಗೂ ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ 17 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಮೋಡದ ವಾತಾವರಣದಿಂದ ಉಷ್ಣಾಂಶ ಇಳಿಕೆಯಾಗಿದೆ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಇಲಾಖೆಯ ಪ್ರಕಾರ ಮುಂದಿನ ಐದು ದಿನಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 31 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರಲಿದೆ.

'ವಾಸ್ತುಶಿಲ್ಪ ಭಾರತೀಯ ಸಂಸ್ಕೃತಿಯ ಪ್ರತಿರೂಪ'

ಕೆಂಗೇರಿ: 'ವಾಸ್ತುಶಿಲ್ಪ ಭಾರತೀಯ ಸಂಸ್ಕೃತಿಯ ಪ್ರತಿರೂಪ. ಈ ಕಲೆಯನ್ನು ಮುಂದಿನ ತಲೆಮಾರಿಗೆ ದಾಟಿಸುವುದು ನಮ್ಮೆಲ್ಲರ ಜವಾಬ್ದಾರಿ' ಎಂದು ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಹೇಳಿದರು.

ಎಸ್‌ಜೆಬಿ ಸ್ಕ್ಯಾಪ್ ಕಾಲೇಜಿನ ವತಿಯಿಂದ ಬಿಜಿಎಸ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ 66ನೇ ವಿಭಾಗೀಯ ನಾಸಾ (ನ್ಯಾಷನಲ್ ಅಸೋಸಿಯೇಷನ್ ಸ್ಟೂಡೆಂಟ್ ಆಫ್ ಆರ್ಕಿಟೆಕ್ಚರ್) ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಸ್ಥಳೀಯ ಹವಾಗುಣ ಹಾಗೂ ಭೂ ಗುಣಲಕ್ಷಣಗಳನ್ನು ಅರಿತು ಕಟ್ಟಡ ನಿರ್ಮಾಣದ ರೂಪುರೇಷೆ ರಚಿಸಬೇಕು ಎಂದು ಮುಂಬೈಯ ಸ್ಟುಡಿಯೊ ಆರ್ಕಿಟೆಕ್ಟ್ ಸಂಸ್ಥೆಯ ಡರಾಯಿಸ್ ಚೋಕ್ಸಿ ಹೇಳಿದರು.

ಪ್ರತಿ ಸ್ಥಳವೂ ಪ್ರತ್ಯೇಕ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಕೆಲವು ಪ್ರದೇಶಗಳು ಬಿಸಿಲಿನಿಂದ ಕೂಡಿದ್ದರೆ, ಕೆಲವು ಚಳಿ, ಜೌಗು, ಮರುಭೂಮಿಯ ಗುಣ ಹೊಂದಿರುತ್ತದೆ. ಈ ಗುಣಲಕ್ಷಣಗಳು ಮಾನವನ ಇರುವಿಕೆಯನ್ನು ಬಾಧಿಸದಂತೆ ಕಟ್ಟಡ ನಿರ್ಮಾಣ ಮಾಡಬೇಕು. ಆಗ ಮಾತ್ರ ಯಶಸ್ವಿ ವಾಸ್ತುತಜ್ಞನಾಗಿ ರೂಪುಗೊಳ್ಳಲು ಸಾಧ್ಯ ಎಂದು ಕಿವಿ ಮಾತು ಹೇಳಿದರು.

ನಾಸಾ ಸಂಘಟನೆ ರಾಷ್ಟ್ರೀಯ ಅಧ್ಯಕ್ಷ ಹರಿ ಶಶಿಕುಮಾರ್, ವಿಭಾಗೀಯ ಅಧ್ಯಕ್ಷೆ ಇವಂತಿಕಾ ಪೆರೀರ, ಸಾರ್ವಜನಿಕ ಸಂಪರ್ಕಾಧಿಕಾರಿ ಮರಿಯಂ ಅಫೀಫಾ ಮೆಹ್ಕ್ರಿ ಬಿಜಿಎಸ್ ರಜಿಸ್ಟ್ರಾರ್ ಡಾ.ಅಮರ್ ನಾಥ್, ಪುನೀತ್ ಇದ್ದರು.

ನಾಳೆಯಿಂದ ಪಾರಂಪರಿಕ ವೈದ್ಯರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಕುದೂರು: ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಆದಿಚುಂ-ಚನಗಿರಿಯಲ್ಲಿ ಅಕ್ಟೋಬರ್ 26, 27 ಮತ್ತು 28 ರಂದು ಪಾರಂಪರಿಕ ವೈದ್ಯರ ರಾಷ್ಟ್ರೀಯ ಮತ್ತು 14 ನೇ ರಾಜ್ಯ ಸಮ್ಮೇಳನ ನಡೆಯಲಿದೆ.

ಪಾರಂಪರಿಕ ವೈದ್ಯ ಪರಿಷತ್ ಮತ್ತು ಆದಿಚುಂಚನಗಿರಿ ಮಠದ ಆಶ್ರಯದಲ್ಲಿ ನಡೆಯಲಿರುವ ಸಮ್ಮೇ-ಳನವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಲಿದ್ದಾರೆ.



ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

3000 ಪಾರಂಪರಿಕ ವೈದ್ಯರ ಮಾಹಿತಿ ಕೋಶವನ್ನು ಇದೇ ವೇಳೆ ಬಿಡುಗಡೆ ಮಾಡಲಾಗುವುದು ಎಂದು ಪಾರಂಪರಿಕ ವೈದ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಜಿ. ಮಹಾದೇವಯ್ಯ ಅವರು ಸುದ್ದಿಗೋ-ಷ್ಠಿಯಲ್ಲಿ ತಿಳಿಸಿದರು.

ಮೂರು ದಿನಗಳ ಸಮ್ಮೇಳನದಲ್ಲಿ ಸಾಂಕ್ರಾಮಿಕ ರೋಗ, ಸ್ತ್ರೀರೋಗ, ಸಂಧಿವಾತ, ಚರ್ಮರೋಗ, ಪಶುವೈದ್ಯ, ಮಧುಮೇಹ ರೋಗಗಳ ಬಗ್ಗೆ ಚರ್ಚೆ ನಡೆಯಲಿದೆ. ಐವರು ಹಿರಿಯ ಪಾರಂಪರಿಕ ವೈದ್ಯರಿಗೆ 'ವೈದ್ಯರತ್ನ ಪ್ರಶಸ್ತಿ' ನೀಡಲಾಗುವುದು ಎಂದು ತಿಳಿಸಿದರು.

ಚೆನ್ನೈ: ಬಾಲಕರ ಮೇಲೆ ಹರಿದ ರೈಲು

ಚೆನ್ನೈ (ಪಿಟಿಐ): ಇಲ್ಲಿನ ಹೊರವಲಯದ ಊರಪಕ್ಕಂ ಬಳಿ ಮೂವರು ಬಾಲಕರ ಮೇಲೆ ರೈಲು ಹರಿದಿದೆ.

ಮೂವರು ಬಾಲಕರು ಕರ್ನಾಟಕದವರಾಗಿದ್ದು, ಹಳಿ ದಾಟುವಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಬಾಲಕರು ಸಹೋದರ-ರಾಗಿದ್ದು, ಅವರಿಗೆ ವಾಕ್ ಮತ್ತು ಶ್ರವಣ ದೋಷ ಇತ್ತು. ಇನ್ನೊಬ್ಬ ಬಾಲಕನಿಗೆ ಮಾತು ಬರುತ್ತಿರಲಿಲ್ಲ ಎಂದು ವಿವರಿಸಿದ್ದಾರೆ. ಬಾಲಕರ ಪೋಷಕರು ಚೆನ್ನೈನಲ್ಲಿ ದಿನಗೂಲಿ ಮಾಡುತ್ತಿದ್ದರು.

ಶಿವಶಂಕರ್, ಯಮುನಾಗೆ ಕನ್ನಡ ಸಂಘರ್ಷ ಸಮಿತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಕನ್ನಡ ಕಟ್ಟಾಳು' ಪ್ರಶಸ್ತಿಗೆ ಕನ್ನಡಪರ ಹೋರಾಟಗಾರ ಎಲ್. ಶಿವಶಂಕರ್ ಹಾಗೂ 'ನಿಸ್ಸೀಮ ಕನ್ನಡತಿ' ಪ್ರಶಸ್ತಿಗೆ ಕನ್ನಡ ಕಾರ್ಯಕರ್ತೆ ಎಚ್.ಎಲ್. ಯಮುನಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಸ್ಮರಣಿಕೆ ಹಾಗೂ ತಲಾ ₹ 11 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 31ರಂದು ಸಂಜೆ 5 ಗಂಟೆಗೆ ಎನ್. ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಕಲಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ತಿಳಿಸಿದ್ದಾರೆ.

ಎಲ್. ಶಿವಶಂಕರ್

ಎಚ್.ಎಲ್. ಯಮುನಾ

ದಾಬಸ್ ಪೇಟೆ: ಬಸ್‌ಗಾಗಿ ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಆಯುಧ ಪೂಜೆ, ವಿಜಯ ದಶಮಿ ಹಬ್ಬದ ಪ್ರಯುಕ್ತ ರಜಾ ಇದ್ದುದರಿಂದ ಊರಿಗೆ ಬಂದಿದ್ದ ಜನರು ಮತ್ತೆ ಬೆಂಗಳೂರಿಗೆ ಹೊರಟಿದ್ದರಿಂದ ಮಂಗಳವಾರ ದಾಬಸ್ ಪೇಟೆ ಬಸ್ ನಿಲ್ದಾಣದಲ್ಲಿ ದಟ್ಟಣೆ ಕಂಡುಬಂತು.

ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಬಸ್ ಬಂದಾಗ ಹತ್ತಲು ಪ್ರಯಾಣಿಕರು ಮುಗಿಬೀಳುತ್ತಿದ್ದರು. ಪಾವಗಡ, ಮಧುಗಿರಿ, ತುಮಕೂರು ಕಡೆಗಳಿಂದ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸುಗಳು ದಾಬಸ್ ಪೇಟೆಗೆ ತಲುಪುವ ಮೊದಲೇ ತುಂಬಿರುತ್ತಿದ್ದವು.

'ಮಧುಗಿರಿ, ಪಾವಗಡ, ಕೊರಟಗೆರೆ ಹಾಗೂ ದಾಬಸ್ ಪೇಟೆ ಸುತ್ತಮುತ್ತಲ ಹಲವು ಕುಟುಂಬಗಳು ಬೆಂಗಳೂರಿನಲ್ಲಿ ವಾಸಿಸುತ್ತಿವೆ. ರಜಾ ಸಮಯದಲ್ಲಿ ಊರಿಗೆ ಬಂದಿದ್ದರು. ಬುಧವಾರದಿಂದ ಮಕ್ಕಳಿಗೆ ಶಾಲೆ, ಹೆತ್ತವರಿಗೆ ಕೆಲಸ ಆರಂಭವಾಗುತ್ತಿರುವುದರಿಂದ ಮಂಗಳವಾರ ಮಧ್ಯಾಹ್ನದ ನಂತರ ಬೆಂಗಳೂರಿಗೆ ಹೊರಟಿದ್ದರು. ಇದರಿಂದ ಜನಜಂಗುಳಿ ಉಂಟಾಗಿದೆ' ಎಂದು ಬಸ್‌ನಿಲ್ದಾಣದ ಅಂಗಡಿ ಇಟ್ಟುಕೊಂಡಿರುವ ನಾಗೇಶ್ ಎಂಬುವವರು ತಿಳಿಸಿದರು.

ಮಹಿಳೆಯರು ಶಿವಗಂಗೆ, ದೇವರಾಯನ ದುರ್ಗ, ಗೊರವನಹಳ್ಳಿ ಲಕ್ಷ್ಮೀ ದೇವಸ್ಥಾನಗಳಿಗೆ ಬಂದಿರುವುದು ಕೂಡ ದಟ್ಟಣೆಗೆ ಕಾರಣ ಎಂದು ಪ್ರಯಾಣಿಕರಾದ ಗೀತಾ ಅಭಿಪ್ರಾಯಪಟ್ಟರು.

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಸೋಮವಾರ ಮನು ಬಳಿಗಾರ ಅವರಿಗೆ 'ಶ್ರೀಚೆನ್ನರೇಣುಕಬಸವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಚನ್ನವೀರ ಶಿವಾಚಾರ್ಯರು, ಶಾಸಕರಾದ ಶರಣು ಸಲಗರ, ಡಾ.ಸಿದ್ದಲಿಂಗಪ್ಪ ಪಾಟೀಲ ಇದ್ದರು

ನಗರದಲ್ಲಿ ಇಂದು

ಆರೋಗ್ಯ ಮತ್ತು ಕ್ಯಾನ್ಸರ್ ಶಿಬಿರ: ಆಯೋಜನೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗ, ಸ್ಥಳ: ಕರುಮಾರಿಯಮ್ಮನ ದೇವಸ್ಥಾನ, ರಾಜೇಂದ್ರ ನಗರ, ಬೆಳಿಗ್ಗೆ 10

ಶ್ರೀನಿವಾಸ ವೈದ್ಯ ಅವರ 'ಕರ್ನಲ್‌ನಿಗೆ ಯಾರೂ ಬರೆಯುವುದೇ ಇಲ್ಲ' ಕಾದಂಬರಿ ಓದು: ಅತಿಥಿಗಳು: ಹರೀಶ್ ಗಂಗಾಧರ್, ಟೀನಾ ಶಶಿಕಾಂತ್, ಹಾಲೇಶ್ ಮಳಿಗೇರ್, ಶ್ರೀನಿವಾಸ್ ಕೆ. ಎಂ., ಪುನೀತ್ ಸಾಕ್ಯ, ದುರ್ಗದ ಸಿದ್ಧಣ್ಣ, ಪ್ರಶಾಂತ ಸಾಗರ, ಎಡೆಯೂರು ಪಲ್ಲವಿ, ಸೌಮ್ಯ ಭಟ್, ಸಹ್ಯಾದ್ರಿ ನಾಗರಾಜ್, ಆಯೋಜನೆ: ಜನಮನ, ಸ್ಥಳ: 168, 37ನೇ ತಿರುವು, 5ನೇ ಹಂತ, ಜಯನಗರ, ಸಂಜೆ 6

'ಕರಿನೀರ ವೀರ' ನಾಟಕ ಪ್ರದರ್ಶನ: ರಚನೆ-ನಿರ್ದೇಶನ : ಅಡ್ಡಂಡ ಕಾರ್ಯಪ್ಪ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ದೇವಿಗೆ ಗಜಲಕ್ಷ್ಮಿ ಅಲಂಕಾರ: ವಿಷ್ಣು ಸಹಸ್ರನಾಮ ಹೋಮ, ಗಾಯನ: ಕಲಾಂಬಿಕಾ ಸಹೋದರಿಯರು, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರ-ಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ನಿಧನ ವಾರ್ತೆ

ಜಯಪ್ರಕಾಶ್ ಟಿ.ಎಸ್



ಬೆಂಗಳೂರು: ಬೆಸ್ಕಾಂ ನಿವೃತ್ತ ಉದ್ಯೋಗಿ ಜಯಪ್ರಕಾಶ್ ಟಿ.ಎಸ್ (70) ಅವರು ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ-ಪುತ್ರ ಇದ್ದಾರೆ. ವಿಲ್ಸನ್ ಗಾರ್ಡನ್‌ನಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಿತು

ಊಹಾಪೋಹಗಳಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ಪಷ್ಟನೆ

ರಾಜ್ಯ ರಾಜಕಾರಣಕ್ಕೆ ಬರುವ ವಿಚಾರವೇ ಇಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: 'ನಾನು ಕೇಂದ್ರ ಸಚಿವೆಯಾಗಿ ಸಂತೋಷವಾಗಿದ್ದೇನೆ. ರಾಜ್ಯ ರಾಜಕಾರಣಕ್ಕೆ ಬರುವ ವಿಚಾರವೇ ಇಲ್ಲ' ಎಂದು ಶೋಭಾ ಕರಂದ್ಲಾಜೆ ಹೇಳಿದರು.

'ಶೋಭಾ ಕರಂದ್ಲಾಜೆ ಅವರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡಲಾಗುತ್ತಿದೆ' ಎಂಬ ಮಾತುಗಳು ಕೇಳಿಬರುತ್ತಿರುವ ಬಗ್ಗೆ ಇಲ್ಲಿ ಸುದ್ದಿಗಾರರ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನನಗೆ ಒಳ್ಳೆ ಖಾತೆ ಸಿಕ್ಕಿದೆ. ಅಲ್ಲಿಯೇ ಚೆನ್ನಾಗಿ ಕೆಲಸ ಮಾಡುತ್ತಿದ್ದೇನೆ. ರಾಜ್ಯ ರಾಜಕಾರಣಕ್ಕೆ ಬರುವಂತೆ ನನಗೆ ಯಾವ ವರಿಷ್ಠರಿಂದಲೂ ಯಾವ ಸೂಚನೆಗಳು ಇಲ್ಲ. ಇವೆಲ್ಲ ಸುದ್ದಿ ಹೇಗೆ ಬರುತ್ತಿವೆಯೋ ನನಗೆ ಗೊತ್ತಿಲ್ಲ' ಎಂದರು.

'ನನ್ನ ಇಚ್ಛೆ ಇರುವುದು ಮುಂದಿನ ಬಾರಿಯೂ ನರೇಂದ್ರ ಮೋದಿ ಅವರೇ ಪ್ರಧಾನಿಯಾಗಬೇಕು ಎನ್ನುವುದು. ಅದನ್ನೇ ದೇವರಲ್ಲಿ ಪ್ರಾರ್ಥನೆ ಮಾಡಿ-ಕೊಳ್ಳುತ್ತಿದ್ದೇನೆ' ಎಂದು ಹೇಳಿದರು.

ಇದಕ್ಕೂ ಮುನ್ನ, ದಸರಾ ಆನೆಗಳೊಂದಿಗೆ ಬಂದಿರುವ ಮಾವುತರು ಹಾಗೂ ಕಾವಾಡಿಗಳ ಕುಟುಂಬದವರಿಗೆ ತಮ್ಮ ಹುಟ್ಟುಹಬ್ಬದ ಅಂಗವಾಗಿ ಉಪಾಹಾರವನ್ನು ವ್ಯವಸ್ಥೆ ಮಾಡಿದರು. ಅವರನ್ನು ಬರಮಾಡಿಕೊಂಡ ಸಂಸದ ಪ್ರತಾಪ ಸಿಂಹ, 'ರಾಜ್ಯ ರಾಜಕಾರಣಕ್ಕೆ ಬನ್ನಿ' ಎಂದು ಆಹ್ವಾನ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವೆ, 'ನಾನು ಅಲ್ಲೇ ಸಂತೋಷವಾಗಿದ್ದೇನೆ. ಅಲ್ಲೇ ಇರುತ್ತೇನೆ. ನನ್ನನ್ನು ಮೋದಿ ಅವರೊಂದಿಗೆ ಇರಲಿ ಬಿಡಿ' ಎಂದು ನಗುತ್ತಾ ಪ್ರತಿಕ್ರಿಯಿಸಿದರು.

ಬನ್ನಿ ಎಂದಷ್ಟೇ ಹಾರೈಸಿರುವೆ: ಪ್ರತಾಪ

ಮೈಸೂರು: 'ಕಾರ್ಯಕರ್ತರ ಅಭಿಲಾಷೆಯಂತೆ ರಾಜ್ಯ ರಾಜಕಾರಣಕ್ಕೆ ಬನ್ನಿ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಕೋರಿದ್ದೇವೆ' ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಕರಂದ್ಲಾಜೆ ಹಿರಿಯ ನಾಯಕಿ. ಪಕ್ಷದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅದನ್ನು ಗುರುತಿಸಿಯೇ ಕೇಂದ್ರ ಸಚಿವೆಯನ್ನಾಗಿ ಮಾಡಲಾಗಿದೆ. ಅವರಿಗೆ ಯಾವುದೇ ಸ್ಥಾನ ಸಿಕ್ಕರೂ ನಮ್ಮ ಹಾರೈಕೆ ಅವರೊಂದಿಗೆ ಸದಾ ಇದ್ದೇ ಇರುತ್ತದೆ' ಎಂದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಯಾರಾಗಬೇಕು, ಯಾವಾಗ ಆಗಬೇಕು ಎಂಬುದನ್ನು ನಮ್ಮ ಹೈಕಮಾಂಡ್ ನಿರ್ಧರಿಸುತ್ತದೆ. ಅದನ್ನು ಹೇಳಲು, ನಾನು ಬಹಳ ಕಿರಿಯ. ನಾನು ಪಕ್ಷಕ್ಕೆ ಬಂದು 10 ವರ್ಷ ಆಗುತ್ತಿದೆಯಷ್ಟೆ. ರಾಜ್ಯ ರಾಜಕಾರಣಕ್ಕೆ ಬನ್ನಿ ಎಂದು ಪಕ್ಷದ ಕಾರ್ಯಕರ್ತರು ಶೋಭಾ ಕರಂದ್ಲಾಜೆ ಅವರನ್ನು ಕರೆಯುತ್ತಿದ್ದಾರೆ. ನಾನೂ ಶುಭಾಶಯ ಕೋರಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ಲೋಕಸಭೆ ಚುನಾವಣೆಯಲ್ಲಿ ನಾವೆಲ್ಲ ಗೆಲ್ಲುವುದು ನಮ್ಮ ದೇವರು ನರೇಂದ್ರ ಮೋದಿ ಅವರ ಹೆಸರಿನಿಂದಲೇ. ಲೋಕಸಭೆ ಚುನಾವಣೆಗೂ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ನೇಮಕಕ್ಕೂ ಸಂಬಂಧವಿಲ್ಲ. ರಾಜ್ಯದಲ್ಲಿ ಬಿಜೆಪಿ ಸಂಘಟನೆ ದೃಷ್ಟಿಯಿಂದ ಮಾತ್ರವೇ ಅಧ್ಯಕ್ಷರು ಬೇಕು. ದೇಶದಾದ್ಯಂತ ಲೋಕಸಭಾ ಚುನಾವಣೆ ಮೋದಿ ಅವರ ಹೆಸರಿನಲ್ಲೇ ನಡೆಯುತ್ತದೆ. ಜನರು ಮತ ಹಾಕುವುದು ಕೂಡ ಅವರನ್ನು ನೋಡಿಯೇ. ನಾನೂ ಎರಡು ಚುನಾವಣೆಗಳನ್ನು ಅವರ ಹೆಸರಲ್ಲೇ ಗೆದ್ದಿದ್ದೇನೆ. ಮುಂಬರುವ ಚುನಾವಣೆಯಲ್ಲೂ ಅವರ ಹೆಸರಿನಲ್ಲೇ ಗೆಲ್ಲುತ್ತೇನೆ. ಬೇರೆಯವರ ಪ್ರಭಾವವೇನೂ ಇರುವುದಿಲ್ಲ' ಎಂದರು.

'ಪಕ್ಷದ ರಾಜ್ಯ ಘಟಕಕ್ಕೂ ಒಳ್ಳೆಯ ನೇತೃತ್ವ ಬೇಕು. ಹೊಸ ನಾಯಕತ್ವ ಬರಬೇಕು ಎಂಬುದು ಬಹಳಷ್ಟು ಕಾರ್ಯಕರ್ತರ ಅಭಿಲಾಷೆಯೂ ಆಗಿದೆ. ಅದಕ್ಕೆ ಪೂರಕವಾಗಿ ಮಾಧ್ಯಮದಲ್ಲಿ ಒಂದಷ್ಟು ಊಹೆಗಳನ್ನು ಮಾಡಲಾಗುತ್ತಿದೆ ಯಷ್ಟೆ' ಎಂದು ಪ್ರತಿಕ್ರಿಯಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

HOSMAT HOSPITAL
HOSMAT HOSPITAL, is Recruiting the following staff at HOSMAT Hospital Unit –III, No.18, Bellary Road, Sadashivanagar Bangalore
01. Emergency Doctors with experience only for night duties
02. Nephrologist for Main Branch at Magrath Road
03. General Surgeon with Laparoscopy & Trauma
04. Orthopaedic consultants and Registrars
05. Pulmonologist
06. Physician MD
07. Anaesthesia Junior & Senior consultants
08. Non-invasive cardiologists
09. Gastroenterologists
10. ICU doctors - Intensivits & Registrars
11. Paediatrician
12. Night Emergency Medical Officers
13. Urologists
14. Nursing Director, OT & ICU Nurses, OT Nurse incharge OT Technicians, CSSD Technicians.
15. Rheumatologists
16. Haematologists
17. Duty doctors – MBBS & Orthopaedics
18. Manager - Rehabilitation center
19. Night duty Manager – Sr. Nurse
20. Front office Manager & executive with experience
21. ER doctors – all 3 units Day & Night
22. Call Centre Manager with experience
23. Call centre Executives with experience
24. Marketing manager & executives
25. Billing and insurance staff
Call: 91084 50312 II hr@hosmathospitals.com / coordinatorhosmat@gmail.com / veenagh@hosmathospitals.com

Engg/ Production Technical
REQUIRED SERVICE engineer diploma -electrical, min 3years experience in commercial kitchen equipment. Email:info@apolloequipments.com (M)+919512550085

POORNAPRAJNA EDUCATION CENTRE
(Promoted & Managed by Udupi Sri Admar Mutt Education Council)
C.A Site No.48, New Thippasandra, HAL 3rd Stage, Bangalore -75. Ph: 080-25292930
LIBRARIAN
M.Lib. Sc / B.Lib.Sc with experience in digital library
OFFICE ASSISTANT
B.Com qualified with thorough working knowledge of Tally, M.S Office & fluency in English & Kannada
PRE PRIMARY ASST. TEACHER
Graduation and Nursery teachers training
Apply to the Hon. Secretary before 31-10-2023 through post or email to poornaprajnants@gmail.com

St. Benedict's Academy Nursing College
Asirvanam, Anchepalya, Kengeri, Mysore Road, Bangalore-74
REQUIRES TRAINED NURSING TUTORS
M.Sc in Pediatric Nursing
B.Sc Nursing Tutors
MSc Biomechanics, Physiology, Anatomy, Biochemistry
MSW
Ct: 9886812398/ 9148326177
Mail your resume to: jeromeosb@gmail.com

Accounts & Finance
WANTED SENIOR ACCOUNTANT with minimum 15years experience preferably Construction Salary Rs.40,000/- SRS Engineers Pvt.Ltd.#446, 44th,Cross, Jayanagar 8th Block, Bangalore-560070. Phone: 080-26652223,Email: srsharma_engineers@yahoo.co.in

Teachers/ Professors
IMPACT COLLEGE of Engineering and Applied Sciences invites applications from candidates eligible for the following positions for BE-ECE (updated in emerging areas). 1.Professor, 2.Associate Professor 3.Assistant Professor, 4.Lab Instructors/ Foreman/ Assistants Walk-in between 10:00 am to 03:00 pm to IMPACT Campus, Kodigehalli, Sahakarnagar, Bangalore-560092. 080-23334101. [AICTE rules apply for eligibility and compensation]'

WANTEDFOR IMMEDIATE Appointment:HINDI, SCIENCE TEACHERS (Primary) and Typist. Contact:St.YASH PUBLIC SCHOOL. Kempegowdanagar, from Magadi Main-road, Bangalore-91. Phone:7204347583/4, 9066242255

General
MALE OFFICE Asst Bcom/ Diploma computer or well-versed in computer operating Balija Sangha near Attiguppe metro. Contact 9448476465
WANTED IMMEDIATELY ASSISTANT MANAGER-Travels, TELECALLING EXECUTIVES, LADY RECEPTIONISTS. Very Good Salary. Call: 99000 54461/62

PERSONAL

Change of Name
VIJAYLAXMI DANAPPAGOL, Wife/o, 6503159K, SEP/ASH, DONGREPPA H GOVINAKOPPA, Vill- Rolli, Bilgi, Bagalkot, Karnataka changed name VIJAYLAXMI DANAPPAGOL to VIJAYALAXMI DONGREPPA GOVINAKOPPA, 21/10/2023, Notary K.V. Mani, Bangalore

EDUCATION CORNER
RV Institute of Management
Autonomous Institution, Affiliated to Bengaluru City University | Approved by AICTE, NAAC 'A+' Accredited
Go, change the world
Autonomous Institution of Excellence
in collaboration with
Boston IT Solutions India Pvt. Ltd
is launching an
Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University
from November - December 2023
COURSE DETAILS
- Venue: Centre for Business Analytics, RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,50,000/-
- Timings: Mon to Fri: 6.30pm to 9.00pm Sat: 2.30pm to 9.00pm
Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

CHANGE OF NAME
I, G. V. KRISHNA MURTHY, R/at # 8, F-Block, Corporation Quarters, Kadhiran Palya, Old Madras Road, Indiranagar, Bengaluru-560038 have changed my name to G.V. JOSEPH KRISHNAMURTHY vide affidavit dt.08-10-2009, before Notary Shaik Mahaboob, Bangalore Henceforth I shall be know as G.V.JOSEPH KRISHNAMURTHY only

CHANGE OF NAME
I, RACAVI, R/at # A-302, ISR Sukriti Apartment, Prakash Layout, Varthur, Bengaluru-560087 have changed my name to RACAVI RAMACHANDRAN vide affidavit dt.24-10-2023, before Notary Varija C.J. Bangalore, Henceforth I shall be know as RACAVI RAMACHANDRAN only

REAL ESTATE BUYING
Sites
Banashankari
BDA SITES Wanted Banashankari 6th Stage, Anjanapura, JPNagar 8th,9th Phase BCC Layout Immediate Settlement: 9845444588

REAL ESTATE SELLING
Farm House/ Land/ Resorts
Out-Station
NILGIRIS 3.75 ACRES TEA ESTATE FOR SALE/ JV. COONOOR BUNGLOW @ RS. 55L, 10 MIN FROM TOWN, CT. 7604 939393

BUILDERS ESSENTIAL
Water Proofing
WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

DH DECCAN HERALD Classifieds
More value, more impact
Get your HIRING NEEDS answered
Get the right people for your company...
Book your Ad with us now !
JOB HUNT ಪ್ರಜಾವಾಣಿ JOB BOOK NOW
www.dhclassifieds.com
For more details contact:
+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

225 ವಾರ್ಡ್‌ಗಳು ಅಂತಿಮವಾದರೂ, ಮೀಸಲಾತಿ ಕರಡು ಪಟ್ಟಿ ಇನ್ನೂ ಪ್ರಕಟವಾಗಿಲ್ಲ

ಬಿಬಿಎಂಪಿ ಚುನಾವಣೆ: ಸದ್ಯಕ್ಕೆ ಅಸಾಧ್ಯ?

• ಆರ್. ಮಂಜುನಾಥ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸದ್ಯಕ್ಕೆ ಚುನಾವಣೆ ನಡೆಯುವ ಸಾಧ್ಯತೆ ಕ್ಷೀಣಿಸಿದೆ.

'ಡಿಸೆಂಬರ್‌ನೊಳಗೆ ಬಿಬಿಎಂಪಿಗೆ ಚುನಾವಣೆ ನಡೆಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರಕ್ಕೆ ಬಂದ ದಿನದಿಂದಲೂ ಹೇಳುತ್ತಿದ್ದಾರೆ. ಆದರೆ, ಅದಕ್ಕೆ ಬೇಕಾದ ಪ್ರಕ್ರಿಯೆಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಂಡಿಲ್ಲ. ಮೀಸಲಾತಿ ನಿಗದಿಪಡಿಸಲು ಜಾತಿ ಗಣತಿ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗದಿರುವುದೂ ಈ ಹಿನ್ನಡೆಗೆ ಕಾರಣ ಎಂಬ ಚರ್ಚೆಯೂ ಇದೆ.

ಲೋಕಸಭೆ ಚುನಾವಣೆ ಸಮೀಪವಾಗುತ್ತಿರುವ ಹಿನ್ನೆಲೆಯಲ್ಲಿ ಬಿಬಿಎಂಪಿಗೆ ಚುನಾವಣೆ ನಡೆಸುವುದು ರಾಜಕೀಯ ಪಕ್ಷಗಳಿಗೆ ಬೇಕಿಲ್ಲ. 'ಲೋಕಸಭೆ ಅವಧಿ 2024ರ ಜೂನ್‌ನಲ್ಲಿ ಅಂತ್ಯಗೊಳ್ಳಲಿದೆ. ಹೀಗಾಗಿ ಚುನಾವಣೆ ನಡೆದರೆ ಡಿಸೆಂಬರ್‌ನೊಳಗೆ ನಡೆಯಬೇಕು. ಇಲ್ಲದಿದ್ದರೆ ಬೇಡ' ಎಂದು ಪಕ್ಷಗಳ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಡಿಸೆಂಬರ್‌ನೊಳಗೆ ಚುನಾವಣೆ ಪ್ರಕ್ರಿಯೆ ಮುಗಿಯಬೇಕಿದ್ದರೆ ಒಂದೂವರೆ ತಿಂಗಳ ಮೊದಲು ಚುನಾವಣೆ ಅಧಿಸೂಚನೆ ಪ್ರಕಟವಾಗಬೇಕು. ಅದಕ್ಕಿಂತ ಮೊದಲು ಮತದಾರರ ಪಟ್ಟಿ, ಅಧಿಕಾರಿಗಳ ನೇಮಕ ಸೇರಿದಂತೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಒಂದು ತಿಂಗಳು ಬೇಕಿದೆ.

ಗೊಂದಲ ಏನು?: ಬಿಬಿಎಂಪಿ ವ್ಯಾಪ್ತಿಯ 225 ವಾರ್ಡ್‌ಗಳ ಮೀಸಲಾತಿಯನ್ನು 10 ವರ್ಗಗಳಿಗೆ ನೀಡಲಾಗುತ್ತದೆ. ಶೇ 24.10ರಷ್ಟು (54–55 ವಾರ್ಡ್) ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ; ಶೇ 34.17ರಷ್ಟು ಹಿಂದುಳಿದ ವರ್ಗಗಳಿಗೆ (ಒಬಿಸಿ) ನೀಡಬೇಕು. 77 ವಾರ್ಡ್‌ಗಳನ್ನು ಹಿಂದುಳಿದ ಪ್ರವರ್ಗ–ಎ (ಬಿಸಿಎ) ಹಾಗೂ 11 ವಾರ್ಡ್‌ಗಳನ್ನು ಹಿಂದುಳಿದ ಪ್ರವರ್ಗ– ಬಿ ಪ್ರವರ್ಗಕ್ಕೆ ಮೀಸಲಿಡಬೇಕಾಗುತ್ತದೆ. ಆದರೆ ಈಗಿನ ಲೆಕ್ಕಾಚಾರದ ಪ್ರಕಾರ, ಒಬಿಸಿಗೆ ಅಷ್ಟೊಂದು ವಾರ್ಡ್ ಮೀಸಲು ನೀಡಬೇಕಾದರೆ ಬೆಂಗಳೂರಿನಲ್ಲಿ ಆ ಮಟ್ಟದ ಜನಸಂಖ್ಯೆ ಇಲ್ಲ. ಹೀಗಾಗಿ, ಮೀಸಲಾತಿ ನಿಗದಿಪಡಿಸುವಲ್ಲಿ ಗೊಂದಲವಾಗುತ್ತಿದೆ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಜಾತಿ ಗಣತಿ ವರದಿಯನ್ನು ಸರ್ಕಾರಕ್ಕೆ ಇನ್ನೂ ನೀಡಿಲ್ಲ. ಅದು ಸರ್ಕಾರಕ್ಕೆ ಸಲ್ಲಿಕೆಯಾದ ಮೇಲೆ, ಚರ್ಚೆ, ಸ್ವೀಕಾರದ ಪ್ರಕ್ರಿಯೆ ಮುಗಿಯಬೇಕು. ನಂತರ ಅದರ ಅನುಸಾರ ಬಿಬಿಎಂಪಿ ವಾರ್ಡ್ ಮೀಸಲಾತಿ ನಿಗದಿಪಡಿಸಬೇಕು. ಕರಡು ಪಟ್ಟಿ, ಅಂತಿಮ ಪಟ್ಟಿ ಅಧಿಸೂಚನೆಗೆ ಕನಿಷ್ಠ 15 ದಿನದ ಅವಕಾಶ ಬೇಕಿದೆ.

ಆಸಕ್ತಿ ಇಲ್ಲ: 'ಬಿಬಿಎಂಪಿಗೆ ಚುನಾಯಿತ ಪ್ರತಿನಿಧಿಗಳಿಲ್ಲದೆ ಮೂರು ವರ್ಷ ಮುಗಿದಿದೆ. ಆದರೂ, ರಾಜಕೀಯ ಪಕ್ಷಗಳ ಪ್ರಮುಖ ನಾಯಕರಿಗೆ ಚುನಾವಣೆ ನಡೆಸಲು ಆಸಕ್ತಿ ಇಲ್ಲ. ಶಾಸಕ ಹಾಗೂ ಸಚಿವರ ಆಣತಿಯಂತೆಯೇ ಸ್ಥಳೀಯ ಸಂಸ್ಥೆ ಆಡಳಿತ ನಡೆಯಬೇಕು ಎಂಬ ಹುನ್ನಾರ ಅವರದ್ದಾಗಿದೆ. ಹೀಗಾಗಿ ಒಂದೊಂದು ಬಾರಿ ಒಂದೊಂದು ರೀತಿಯ ಸಬೂಬು ಹೇಳುತ್ತಿದ್ದಾರೆ' ಎಂದು ಕಾಂಗ್ರೆಸ್, ಬಿಜೆಪಿಗಳಲ್ಲಿ ಕಾರ್ಪೊರೇಟರ್ ಆಕಾಂಕ್ಷಿಗಳಾಗಿರುವವರು ದೂರುತ್ತಾರೆ.

ಮುಖ್ಯಾಂಶಗಳು

- ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲು ವಿಳಂಬ
- ಮೂರು ವರ್ಷಗಳಿಂದಲೂ ಬಿಬಿಎಂಪಿಗೆ ಚುನಾಯಿತ ಪ್ರತಿನಿಧಿಗಳು ಇಲ್ಲ
- ಹಿಂದುಳಿದ ವರ್ಗಗಳ ಆಯೋಗದಿಂದ ಇನ್ನೂ ಜಾತಿಗಣತಿ ವರದಿ ಸಲ್ಲಿಸಿಲ್ಲ

'ಮೀಸಲಾತಿ ನಿಗದಿಯಲ್ಲಿ ಸಮಸ್ಯೆ'

'ವಾರ್ಡ್ ಮೀಸಲಾತಿ ನಿಗದಿ ಮಾಡಲು ಒಬಿಸಿ ಮೀಸಲಿನ ಸ್ಪಷ್ಟತೆ ಇಲ್ಲ. ಹೀಗಾಗಿ, ಜಾತಿ ವರದಿ ಅಗತ್ಯವಿದೆ. ಇಲ್ಲದಿದ್ದರೆ, ಸುಪ್ರೀಂ ಕೋರ್ಟ್ ಹಾಗೂ ಇತರೆ ಕೋರ್ಟ್‌ಗಳಲ್ಲಿ ಸಮಸ್ಯೆಯಾಗುತ್ತದೆ. ಸುಪ್ರೀಂ ಕೋರ್ಟ್ ಎಲ್ಲವನ್ನೂ ಸಾಮಾನ್ಯ ಮಾಡಿ ಎಂದಿರುವುದರಿಂದ ಮಹಾರಾಷ್ಟ್ರದಲ್ಲಿ ಅದೇ ರೀತಿ ಚುನಾವಣೆ ಮಾಡಿದ್ದಾರೆ. ಮಧ್ಯಪ್ರದೇಶದಲ್ಲಿ ಜಾತಿ ಗಣತಿ ವರದಿಯಂತೆ ಮಾಡಿದ್ದಾರೆ. ಹೀಗಾಗಿ, ನಾವೂ ವರದಿಗಾಗಿ ಕಾಯುತ್ತಿದ್ದೇವೆ. ಮೀಸಲಾತಿ ಗೊಂದಲಗಳಿಗೆಲ್ಲ ಸ್ಪಷ್ಟತೆ ದೊರೆಯಬೇಕಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

'ಒಂದು ತಿಂಗಳಲ್ಲಿ ಸಿದ್ಧತೆ ಸಾಧ್ಯ'

'ಬಿಬಿಎಂಪಿ ಚುನಾವಣೆಗೆ ಒಂದು ತಿಂಗಳಲ್ಲಿ ಸಿದ್ಧತೆಗಳನ್ನು ಪೂರ್ಣಗೊಳಿಸಿಕೊಳ್ಳಬಹುದು. ವಾರ್ಡ್ ಮೀಸಲಾತಿ ಅಂತಿಮಗೊಂಡ ಮೇಲೆ, ಮತದಾರರ ಪಟ್ಟಿಯನ್ನು ವಾರ್ಡ್‌ವಾರು ಸಿದ್ಧಪಡಿಸಬೇಕು. ವಾರ್ಡ್ ಮರು ವಿಂಗಡಣೆಯಾಗಿರುವುದರಿಂದ ಮತದಾರರ ಕರಡು ಪಟ್ಟಿ ಸಿದ್ಧಗೊಳಿಸಿ, ನಂತರ ಅದನ್ನು ಅಂತಿಮಗೊಳಿಸಬೇಕು. ಚುನಾವಣೆಗೆ ಅಧಿಕಾರಿಗಳನ್ನು ಅಂತಿಮಗೊಳಿಸಬೇಕು' ಎಂದು ರಾಜ್ಯ ಚುನಾವಣೆ ಆಯೋಗದ ಆಯುಕ್ತ ಬಿ. ಬಸವರಾಜು ತಿಳಿಸಿದರು.

'ಮತದಾರರ ಪಟ್ಟಿ ಅಂತಿಮಗೊಂಡ ಮೇಲೆ ಚುನಾವಣೆ ದಿನಾಂಕ ನಿಗದಿ ಮಾಡಿ, ಅಧಿಸೂಚನೆ ಹೊರಡಿಸಬೇಕು. ಮತದಾನದ ಒಂದು ತಿಂಗಳು ಮುನ್ನ ಈ ಅಧಿಸೂಚನೆ ಹೊರಡಿಸಬೇಕಿದೆ. ಒಟ್ಟಾರೆ, ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ. ಲೋಕಸಭೆ ಚುನಾವಣೆಗಿಂತ ಆರು ತಿಂಗಳೊಳಗೆ ಬಿಬಿಎಂಪಿ ಚುನಾವಣೆ ಮುಗಿಸಬೇಕೆಂದೂ ಇಲ್ಲ. ಆದರೆ, ಅದಕ್ಕೆ ತೊಂದರೆಯಾಗದಂತೆ ದಿನಾಂಕ ನಿಗದಿಪಡಿಸಬೇಕು. ಲೋಕಸಭೆಗೆ ಮೇನಲ್ಲಿ ಚುನಾವಣೆ ನಡೆದರೆ ಅವರು ಅಧಿಸೂಚನೆ ಹೊರಡಿಸುವ ಮುನ್ನದ ಒಂದು ತಿಂಗಳಲ್ಲಿ ಇಲ್ಲಿನ ಚುನಾವಣೆ ಪ್ರಕ್ರಿಯೆ ಮುಗಿಯಬೇಕು' ಎಂದು ಮಾಹಿತಿ ನೀಡಿದರು.

28ಕ್ಕೆ 'ನಿಮ್ಹಾನ್ಸ್‌ನಲ್ಲಿ ನಡಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯ ಹಾಗೂ ರೋಗಿಗಳ ಬಗ್ಗೆ ಇರುವ ತಪ್ಪುಕಲ್ಪನೆಗಳನ್ನು ಹೋಗಲಾಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 28ಕ್ಕೆ 'ವಾಕಿಂಗ್ ಟೂರ್ ಆಫ್ ನಿಮ್ಹಾನ್ಸ್' ಅಭಿಯಾನ ಹಮ್ಮಿಕೊಂಡಿದೆ.

ಸಂಸ್ಥೆಯು 2019ರಲ್ಲಿ ಈ ಅಭಿಯಾನ ನಡೆಸಿತ್ತು. ಕೋವಿಡ್ ಕಾರಣ 3 ವರ್ಷಗಳು ನಡೆದಿರಲಿಲ್ಲ. ಈಗ ಮತ್ತೆ ಈ ಅಭಿಯಾನವನ್ನು ಸಂಸ್ಥೆ ಹಮ್ಮಿಕೊಂಡಿದ್ದು, 300 ಎಕರೆ ವಿಸ್ತೀರ್ಣ ಹೊಂದಿರುವ ಕ್ಯಾಂಪಸ್ ವಿಶೇಷಗಳ ಪರಿಚಯವನ್ನು ಆಸ್ಪತ್ರೆಯ ವೈದ್ಯರು ಮಾಡಿಸಲಿದ್ದಾರೆ.

ಮಾನಸಿಕ ರೋಗಿಗಳ ಸಾಮಾನ್ಯ ವಾರ್ಡ್, ವಿಶೇಷ ವಾರ್ಡ್‌ಗಳನ್ನು ವೀಕ್ಷಿಸುವ ಜತೆಗೆ ರೋಗಿಗಳ ಜತೆಗೆ ಮಾತನಾಡಬಹುದು. ಚಿಕಿತ್ಸೆ ಕುರಿತು ಮಾಹಿತಿ ಪಡೆಯಬಹುದಾಗಿದೆ. ಮಾನಸಿಕ ರೋಗಿಗಳ ಪುನರ್ವಸತಿ ಕೇಂದ್ರ, ಚಿಕಿತ್ಸಾ ವಿಭಾಗ, ಮ್ಯೂಸಿಯಂ, ಯೋಗ ಸೇರಿದಂತೆ ವಿವಿಧ ಕೇಂದ್ರಗಳ ಪರಿಚಯ ಮಾಡಿಕೊಡಲಾಗುವುದು ಎಂದು ಸಂಸ್ಥೆ ತಿಳಿಸಿದೆ.

'ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಜನರನ್ನು ಮೊದಲಿನಿಂದಲೂ ದೇಶದಲ್ಲಿ ಕಳಂಕಿತರಂತೆ ನೋಡಲಾಗುತ್ತಿದೆ. ಇದಕ್ಕೆ ಅರಿವಿನ ಕೊರತೆಯೇ ಮುಖ್ಯ ಕಾರಣ. ಸೀಮಿತ ಜನರಿಗೆ ಮಾತ್ರ ಅವಕಾಶ ಇರಲಿದ್ದು, ನೋಂದಣಿ ಶುಲ್ಕ ₹200 ನಿಗದಿಪಡಿಸಲಾಗಿದೆ' ಎಂದು ಸಂಸ್ಥೆ ಹೇಳಿದೆ. ದೂರವಾಣಿ ಸಂಪರ್ಕಕ್ಕೆ: 7902758129

ಅವ್ಯವಹಾರ: ತನಿಖೆಗೆ ಸಮಿತಿ ರಚನೆ

ನಮ್ಮ ಬೆಂಗಳೂರು ಹಬ್ಬ: ವರದಿ ಸಲ್ಲಿಕೆಗೆ ಮೂರು ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ನಗರದಲ್ಲಿ ನಡೆಸಿದ್ದ 'ನಮ್ಮ ಬೆಂಗಳೂರು ಹಬ್ಬ'ದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಸಮಿತಿ ರಚಿಸಿದ್ದು, ಮೂರು ತಿಂಗಳ ಒಳಗೆ ವರದಿ ನೀಡುವಂತೆ ಸೂಚಿಸಿದೆ.

ಬೆಂಗಳೂರಿನ ಸಂಸ್ಕೃತಿ, ಕಲೆ, ಪರಂಪರೆಯನ್ನು ಇಲ್ಲಿ ನೆಲೆಸಿರ ವವರಿಗೆ ಪರಿಚಯಿಸುವ ಉದ್ದೇಶ ದಿಂದ ಮಾರ್ಚ್ 25 ಮತ್ತು 26ರಂದು ಕಬ್ಬನ್ ಉದ್ಯಾನ, ವಿಧಾನಸೌಧದ ಆವರಣದಲ್ಲಿ ಈ ಹಬ್ಬ ನಡೆಸಲಾಗಿತ್ತು. ವಿವಿಧ ಜಾನಪದ ಕಲಾ ತಂಡಗಳು, ಚಲನಚಿತ್ರ ಗಾಯಕರ ಬ್ಯಾಂಡ್‌ಗಳು, ರಿಯಾಲಿಟಿ ಶೋಗಳ ಗಾಯಕರು ಪ್ರದರ್ಶನ ನೀಡಿದ್ದರು.

ಈ ಉತ್ಸವದ ಬಗ್ಗೆ 'ಬೆಂಗಳೂರು ಹಬ್ಬಕ್ಕೆ ₹ 5.59 ಕೋಟಿ ವೆಚ್ಚ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ಜೂನ್ 23ಕ್ಕೆ ವಿಶೇಷ ವರದಿ ಪ್ರಕಟಿಸಿತ್ತು. ಬಳಿಕ ಕಲಾವಿದರು ಹಾಗೂ ಸಂಘ– ಸಂಸ್ಥೆಗಳು ಉತ್ಸವದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಹಾಗೂ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಹೀಗಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಇಲಾಖೆಯ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು ಸಮಿತಿಯ ಸದಸ್ಯರಾಗಿದ್ದಾರೆ. ಎರಡು ದಿನಗಳ ಉತ್ಸವದ ನಿರ್ವಹಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್' ಸಂಸ್ಥೆಗೆ ನೀಡಿತ್ತು. ಈ ಸಂಸ್ಥೆ ನೀಡಿದ್ದ ದರಪಟ್ಟಿಗೆ ಆಕ್ಷೇಪವ್ಯಕ್ತವಾಗಿತ್ತು. ಇದರಿಂದಾಗಿ ಸರ್ಕಾರ ಹಣ ಪಾವತಿಯನ್ನು ತಡೆ ಹಿಡಿದಿದೆ.

ಮುಖ್ಯಾಂಶಗಳು

- ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಡೆದ ಕಾರ್ಯಕ್ರಮ
- ಹಬ್ಬಕ್ಕೆ ₹5.59 ಕೋಟಿ ವೆಚ್ಚ
- ಹಣ ಪಾವತಿಗೆ ತಡೆ ನೀಡಿದ ರಾಜ್ಯ ಸರ್ಕಾರ

ವರದಿ ಪರಿಣಾಮ

ಉತ್ತರಪ್ರದೇಶ: ಐಐಟಿ ಆಕಾಂಕ್ಷಿ ಆತ್ಮಹತ್ಯೆ

ಬಲ್ಲಿಯಾ (ಉತ್ತರಪ್ರದೇಶ) (ಪಿಟಿಐ): ಐಐಟಿಗೆ ಪ್ರವೇಶ ಪಡೆಯುವ ಆಕಾಂಕ್ಷಿಯಾಗಿದ್ದ 20 ವರ್ಷದ ವಿದ್ಯಾರ್ಥಿಯೊಬ್ಬ ಇಲ್ಲಿನ ದೇವಕಿ ಛಾಪ್ರಾ ಗ್ರಾಮದಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರೋಶನ್ ವರ್ಮಾ ಆತ್ಮಹತ್ಯೆ ಮಾಡಿಕೊಂಡವರು. 12ನೇ ತರಗತಿಯ ಬಳಿಕ ಇವರು ರಾಜಸ್ಥಾನದ ಕೋಟಾದಲ್ಲಿ ಐಐಟಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು. ರಜೆ ಇದ್ದ ಹಿನ್ನೆಲೆಯಲ್ಲಿ ಅವರು ಹುಟ್ಟೂರಿಗೆ ಬಂದಿದ್ದರು ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ರೋಶನ್ ಅವರು ಕೆಲವು ದಿನಗಳಿಂದ ತೀವ್ರ ತಲೆನೋವಿನಿಂದ ಬಳಲುತ್ತಿದ್ದರು ಮತ್ತು ಅದಕ್ಕೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಈ ಕಾರಣದಿಂದಲೇ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎಂದು ಕುಟುಂಬದವರು ತಿಳಿಸಿದ್ದಾರೆ.

'ಕುಣಿಯಲು ಬಿಟ್ಟು ನೆಲ ಅಗೆದರು'

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: 'ಕುಣಿಯಲಾರದವನಿಗೆ ನೆಲ ಡೊಂಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ಕುಣಿಯಲು ಬಿಟ್ಟು ನೆಲ ಅಗೆಯುವ ನಿಮ್ಮ ಮೈತ್ರಿ ದ್ರೋಹಕ್ಕೆ ಏನು ಹೇಳುವುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ ಅವರ ಹೇಳಿಕೆಗೆ ಮಂಗಳವಾರ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, 'ದೋಖಾ ಮಾಡುವ ದುರುದ್ದೇಶ ಹೊಂದಿದ್ದಾಗ ನೆಲ ಡೊಂಕು ಮಾಡುವುದು ಕಷ್ಟವೆ? ನೇರವಾಗಿ ಸತ್ಯ ಹೇಳಲು ನಿಮಗೆ ಭಯವೆ? ಕುಮಾರಸ್ವಾಮಿ ಸರ್ಕಾರವನ್ನು ಉರುಳಿಸಿದ್ದು ನಾನೇ ಎಂದು ಹೇಳಲು ಗುಂಡಿಗೆ ಸಾಲದೆ' ಎಂದು ಕೇಳಿದ್ದಾರೆ.

'ಸಿದ್ಧವನದಲ್ಲಿ ಹೆಣೆದ ಸೂತ್ರ ನನಗೆ ಗೊತ್ತಿಲ್ಲದ ಚಿದಂಬರ ರಹಸ್ಯವೇನಲ್ಲ. ನಾನು ವೆಸ್ಟೆಂಡ್ ಹೋಟೆಲ್‌ನಲ್ಲಿ ಏಕೆ ವಾಸ್ತವ್ಯ ಮಾಡಿದ್ದೆ ಎಂಬುದನ್ನು ಹೇಳಿದ್ದೇನೆ. ಸಚಿವರಾದ ಕೆ.ಜೆ. ಜಾರ್ಜ್ ಅವರಿಗೆ ಹಂಚಿಕೆ ಮಾಡಿದ್ದ ನಿವಾಸದಲ್ಲಿ ನೀವು ಏಕೆ ಇದ್ದಿರಿ? ಸಮಾಜವಾದಿಗೆ ಇದು ಸಭ್ಯತೆಯೆ?' ಎಂದು ವಾಗ್ದಾಳಿ ನಡೆಸಿದ್ದಾರೆ. 'ಜಾರ್ಜ್ ಮನೆಯಲ್ಲಿ ತಾವು ನಡೆಸಿದ ಸಿದ್ದಲೀಲೆಯನ್ನು ಬಹಿರಂಗ ಮಾಡುವಿರಾ? ನಿಮ್ಮ ಅಂತರಂಗವನ್ನು ಒಮ್ಮೆಯಾದರೂ ಬಹಿರಂಗ ಮಾಡಿ ಸಿದ್ದರಾಮಯ್ಯನವರೇ' ಎಂದು ಕುಟುಕಿದ್ದಾರೆ.

ಎಚ್‌ಡಿಕೆ ವಿರುದ್ಧ ಸಚಿವ ಜಿ. ಪರಮೇಶ್ವರ ವಾಗ್ದಾಳಿ

ಸಿ.ಎಂ ಆಗಿ ತಾಜ್ ವೆಸ್ಟೆಂಡ್ ಯಾಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಆದವರು ಜನರ ಕೈಗೆ ಸಿಗಬೇಕು. ಹೋಟೆಲ್‌ನಲ್ಲಿ ಇರುವುದಲ್ಲ' ಎಂದು ಹೇಳುವ ಮೂಲಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಗೃಹ ಸಚಿವ ಜಿ. ಪರಮೇಶ್ವರ ಕಿಡಿಕಾರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ನಡುವೆ ತಾಜ್ ವೆಸ್ಟೆಂಡ್ ಜಟಾಪಟಿ ಕುರಿತು ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಆಗಿದ್ದಾಗ ಕುಮಾರಸ್ವಾಮಿ ತಾಜ್ ವೆಸ್ಟೆಂಡ್‌ನಲ್ಲೇ ಇದ್ದರು. ಯಾವ ಕಚೇರಿ, ಕ್ವಾರ್ಟರ್ಸ್ ತೆಗೆದುಕೊಂಡಿರಲಿಲ್ಲ. 2–3 ಕೊಠಡಿಗಳನ್ನು ತೆಗೆದುಕೊಂಡು ಅಲ್ಲೇ ಇರುತ್ತಿದ್ದರು. ನಾನು ಅನೇಕ ಬಾರಿ ಅಲ್ಲಿಯೇ ಭೇಟಿಯಾಗಿದ್ದೇನೆ' ಎಂದರು.

ಜಿ.ಪರಮೇಶ್ವರ

'ಮುಖ್ಯಮಂತ್ರಿ ಅಲ್ಲಿದ್ದರು ಎಂಬುವುದು ಬಿಟ್ಟರೆ, ಅದು ಬೇರೇನೂ ಗೋಪ್ಯ ವಿಚಾರವಲ್ಲ. ಆದರೆ, ಮುಖ್ಯಮಂತ್ರಿಯಾಗಿ ಅಲ್ಲಿ ಇದ್ದಿದ್ದಕ್ಕೆ ಹಲವು ಪ್ರಶ್ನೆಗಳು ಹುಟ್ಟುತ್ತವೆ' ಎಂದೂ ಹೇಳಿದರು.

'ಮುಖ್ಯಮಂತ್ರಿ ಆದವರು ಜನರಿಗೆ, ಶಾಸಕರ ಕೈಗೆ ಸಿಗುವಂಥ ಜಾಗದಲ್ಲಿ ಇರಬೇಕೆಂದಲ್ಲವೇ? ಸರ್ಕಾರದಿಂದ ಅಧಿಕೃತವಾಗಿ ಕ್ವಾರ್ಟರ್ಸ್ ಕೊಡುವುದು. ಅಲ್ಲಿ ಇರಬೇಕು ಇಲ್ಲವೇ ಮನೆಯಲ್ಲಿ ಇರಬೇಕು ಎಂಬ ನಿರೀಕ್ಷೆ ಜನರಲ್ಲಿ, ಶಾಸಕರಲ್ಲಿ ಇರುತ್ತದೆ. ಮುಖ್ಯಮಂತ್ರಿಯಾಗಿದ್ದವರು ಜನರಿಗೆ ಸಿಗುವ ಜಾಗದಲ್ಲಿರಬೇಕು ಎಂಬುವುದನ್ನು ಅವರು (ಕುಮಾರಸ್ವಾಮಿ) ತಿಳಿದುಕೊಳ್ಳಬೇಕಿತ್ತು' ಎಂದು ತಿಳಿಸಿದರು.

ಎನ್‌ಜಿಟಿಗೆ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ

ವೆಂಗಯ್ಯನಕೆರೆ ಕಾಮಗಾರಿ ವಿಳಂಬ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಕೆ.ಆರ್.ಪುರದ ವೆಂಗಯ್ಯನ ಕೆರೆಗೆ ಪುನರುಜ್ಜೀವನ ಕಾಮಗಾರಿಗೆ 2022ರ ಡಿಸೆಂಬರ್‌ನಲ್ಲಿ ಕಾರ್ಯಾದೇಶ ನೀಡಲಾಗಿದೆ. ಆದರೆ, ಇಲ್ಲಿಯವರೆಗೆ ಬಿಬಿಎಂಪಿ (ಕೆರೆ ವಿಭಾಗ) ಕಾಮಗಾರಿ ಆರಂಭಿಸಿಲ್ಲ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ತಿಳಿಸಿದೆ.

ಈ ಜಲಕಾಯಕ್ಕೆ ಕೊಳಚೆ ನೀರು ಸೇರುತ್ತಿದೆ ಹಾಗೂ ಒತ್ತುವರಿಯಾಗಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಜೆ.ಜಗನ್ ಕುಮಾರ್ ಎಂಬುವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಚೆನ್ನೈ ಪೀಠದ ಮೆಟ್ಟಿಲೇರಿದ್ದರು. ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಮಂಡಳಿಗೆ ಎನ್‌ಜಿಟಿ ನಿರ್ದೇಶನ ನೀಡಿತ್ತು. ಎನ್‌ಜಿಟಿಗೆ ಮಂಡಳಿ ವರದಿ ಸಲ್ಲಿಸಿದ್ದು, 'ಪಾಲಿಕೆಯವರು ಕೆರೆಗೆ ಬೇಲಿಯನ್ನೂ ಹಾಕಿಲ್ಲ' ಎಂದು ತಿಳಿಸಿದೆ.

ಕೆರೆಯ ಉತ್ತರ ಭಾಗದಲ್ಲಿ ಏಳೆಂಟು ಮನೆಗಳು ನಿರ್ಮಾಣವಾಗಿವೆ. ಜತೆಗೆ, ಬೇಲಿಯನ್ನೂ ಹಾಕಿದ್ದಾರೆ. ಒತ್ತುವರಿ ತೆರವುಗೊಳಿಸುವಂತೆ ಬೆಂಗಳೂರು ಪೂರ್ವ ತಹಶೀಲ್ದಾರ್ ಅವರಿಗೆ ಬಿಬಿಎಂಪಿಯವರು ಈಗಾಗಲೇ ಪತ್ರ ಬರೆದಿದ್ದಾರೆ. ಆದರೆ, ಈವರೆಗೆ ಒತ್ತುವರಿ ತೆರವು ಆಗಿಲ್ಲ. ಸಾರ್ವಜನಿಕರ ವಿರೋಧದ ಕಾರಣ ಒತ್ತುವರಿ ತೆರವುಗೊಳಿಸಿಲ್ಲ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕೆರೆಗೆ ಈಗಲೂ ಕೊಳಚೆ ನೀರು ಸೇರುತ್ತಿದೆ. ಕೊಳಚೆ ನೀರು ಸೇರದಂತೆ ತಡೆಯಲು ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನಿರ್ಮಿಸುವುದಾಗಿ ಜಲಮಂಡಳಿಯು ಎನ್‌ಜಿಟಿಗೆ ವರದಿ ಸಲ್ಲಿಸಿತ್ತು. ಆದರೆ, ಈ ತನಕ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ನಿರ್ಮಿಸಿಲ್ಲ. ಈಗಲೂ ಕೆರೆಗೆ ಕೊಳಚೆ ನೀರು ಸೇರುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಸಾವನದುರ್ಗ ಬೆಟ್ಟ: ಸತತ ಐದು ತಾಸು ಶೋಧ ಕಾರ್ಯಾಚರಣೆ

ಚಾರಣದಲ್ಲಿ ದಾರಿ ತಪ್ಪಿದ್ದ ಯುವಕ ಪತ್ತೆ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಸಾವನದುರ್ಗದ ಬೆಟ್ಟದಲ್ಲಿ ಮಂಗಳವಾರ ಚಾರಣ ಕೈಗೊಂಡಿದ್ದಾಗ ದಾರಿ ತಪ್ಪಿ ಕಣ್ಮರೆಯಾಗಿದ್ದ ಯುವಕನೊಬ್ಬನನ್ನು ಅರಣ್ಯ ಇಲಾಖೆ ಸಿಬ್ಬಂದಿ ಸತತ ಐದು ತಾಸು ಶೋಧ ಕಾರ್ಯಾಚರಣೆ ನಡೆಸಿ, ರಾತ್ರಿ 9.15ರ ಸುಮಾರಿಗೆ ಪತ್ತೆ ಹಚ್ಚಿ ರಕ್ಷಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಬೆಂಗಳೂರಿನ ಬಿಟಿಎಂ ಲೇಔಟ್‌ನ 26 ವರ್ಷದ ಕಾರ್ತಿಕ್ ಚಾರಣ ಸಂದರ್ಭದಲ್ಲಿ ದಾರಿ ತಪ್ಪಿದ ಯುವಕ. ಬೆಟ್ಟವನ್ನು ಸರಿಯಾದ ಮಾರ್ಗದಲ್ಲಿ ಹತ್ತಿದ್ದ ಆತ ಇಳಿಯುವಾಗ ಬೇರೆ ದಾರಿಯಲ್ಲಿ ಬಂದಿದ್ದಾರೆ. ಆಗ, ಕೆಳಕ್ಕೆ ಬರುವ ಹಾದಿ ಗೊತ್ತಾಗಿಲ್ಲ. ಕಡೆಗೆ, ಅವರು ತಮ್ಮ ಮೊಬೈಲ್ ಫೋನ್‌ನಿಂದ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ, ವಿಷಯ ತಿಳಿಸಿದ್ದಾರೆ.

ಪೊಲೀಸರು ತಕ್ಷಣ ಅರಣ್ಯ ಇಲಾಖೆಯವರ ಗಮನಕ್ಕೆ ತಂದು, ಯುವಕನ ಶೋಧ ಕಾರ್ಯಕ್ಕೆ ಜಂಟಿ ಕಾರ್ಯಾಚರಣೆ ಕೈಗೊಂಡರು. ಯುವಕನಿಂದ ಕರೆ ಬಂದ ಮೊಬೈಲ್ ಸಂಖ್ಯೆಯ ಟವರ್ ಲೋಕೇಷನ್ ಜಾಡು ಹಿಡಿದು ತಂಡವಾಗಿ ಬೆಟ್ಟದ ಅರಣ್ಯದ ತಪ್ಪಲಿನ ಅರಣ್ಯ ಭಾಗದಲ್ಲಿ ಹುಡುಕಾಟ ನಡೆಸಿದರು.

ವಾಪಸ್ ಯುವಕನಿಗೆ ಕರೆ ಮಾಡಿದರೆ, ನೆಟ್‌ವರ್ಕ್ ಸಮಸ್ಯೆಯಿಂದಾಗಿ ಸಿಗುತ್ತಿರಲಿಲ್ಲ. ಆದರೂ, ಮೊದಲಿಗೆ ಸಿಕ್ಕ ಟವರ್ ಲೋಕೇಷನ್ ಆಧರಿಸಿ ಹುಡುಕಾಟ ಆರಂಭಿಸಿದರು. ಸಂಜೆ ಸುಮಾರು 7 ಗಂಟೆಯಾದ ಪತ್ತೆಯಾಗಲಿಲ್ಲ. ಕತ್ತಲೆಯಾಗುತ್ತಿದ್ದಂತೆ ಟಾರ್ಚ್‌ಗಳೊಂದಿಗೆ ಬೆಟ್ಟ ಹತ್ತಿ, ಅಕ್ಕಪಕ್ಕದಲ್ಲೆಲ್ಲಾ ಹುಡುಕಾಡಿದೆವು. ಕಡೆಗೆ ಅರಣ್ಯದ ಕಡೆಗಿರುವ ಬೆಟ್ಟದ ಪಾದ ಮೆಟ್ಟಿಲು ಬಳಿ ಕಿರಿದಾದ ಬಂಡೆಯ ಇಕ್ಕಲಿನಲ್ಲಿ ಸಿಲುಕಿದ್ದ ಕಾರ್ತಿಕ್ ಅವರನ್ನು ಪತ್ತೆ ಹಚ್ಚಿದೆವು ಎಂದು ಅಧಿಕಾರಿಗಳು ತಿಳಿಸಿದರು.

ಮಾಗಡಿ ತಾಲ್ಲೂಕಿನ ಸಾವನದುರ್ಗ ಬೆಟ್ಟಕ್ಕೆ ಚಾರಣ ಕೈಗೊಂಡು ದಾರಿ ತಪ್ಪಿದ್ದ ಯುವಕ ಕಾರ್ತಿಕ್ ಅವರನ್ನು ಪೊಲೀಸ್ ಮತ್ತು ಅರಣ್ಯ ಇಲಾಖೆಯ ತಂಡದವರು ಜಂಟಿ ಶೋಧ ಕಾರ್ಯಾಚರಣೆ ನಡೆಸಿ ಪತ್ತೆಹಚ್ಚಿ ರಕ್ಷಿಸಿದರು. ಎಎಸ್‌ಐ ಕೃಷ್ಣಪ್ಪ, ಮುತ್ತುರಾಜ್ ಹಾಗೂ ಸಿಬ್ಬಂದಿ ಇದ್ದಾರೆ

ಶೋಧ ಕಾರ್ಯಾಚರಣೆಯಲ್ಲಿ ಎಎಸ್‌ಐ ಕೃಷ್ಣಪ್ಪ, ಹೆಡ್ ಕಾನ್‌ಸ್ಟೆಬಲ್‌ಗಳಾದ ಮುತ್ತುರಾಜು, ಕುಮಾರ ಸ್ವಾಮಿ, ದಯಾನಂದ್, ಹೂವಣ್ಣ, ಜಂಬಣ್ಣ, ರವಿಕುಮಾರ್, ಶ್ರೀನಿವಾಸ್, ಅರಣ್ಯ ರಕ್ಷಕ ಗಂಗರಾಜು ಹಾಗೂ ಇತರರು ಇದ್ದರು. ಸಿಬ್ಬಂದಿಗೆ ಸ್ಥಳೀಯರು ಸಹ ಸಾಥ್ ನೀಡಿದರು.

SUROJ 10 Years

One Team One Suroj
COMMITTED TO GO BEYOND

To Innovate, Excel, Succeed
JOIN OUR TEAM.

At SUROJ BUILDCON PVT. LTD., our foundation is built upon unwavering moral and ethical principles, centered on honesty and trust. We specialize in a diverse range of sectors, including Industrial, Institutional, Infrastructure, Petrochemical, and EPC Project, with a broad presence across India.

We are currently on the lookout for dedicated and accomplished construction professionals to enhance our team's capabilities in Karnataka, Maharashtra, Telangana, and Andhra Pradesh.

Resident Engineer
BE/DCE - Civil with 12-18 years of experience in RCC Buildings / industrial construction.

Assistant Manager Planning
BE - Civil with P.G / Masters in Construction Management with 7-10 years of experience in industrial construction.

Planning Engineer
BE - Civil with P.G / Masters in Construction Management with 3-6 years of experience in industrial construction.

Sr. Engineer
BE/DCE - Civil with 10-12 years of experience in Finishing/RCC Buildings/industrial construction.

Site Engineer
BE/DCE - Civil with 6-10 years of experience in Finishing/RCC Buildings/industrial construction.

Quantity Surveyor - Estimation & Costing/Billing
BE/DCE - Civil with 4-12 years of experience in estimation, costing & client billing.

Quality Engineer
BE/DCE - Civil with 3-8 years of experience in the construction industry.

Site Supervisor/ Foreman - Formwork/Shuttering / Steel
HSC/SSC/ITI - with 6-12 years of experience in RCC Buildings/Industrial Construction of Formwork, Shuttering and Steel.

MEP Manager
BE / Diploma - Mechanical or Electrical with 12-15 years experience in electrical, HVAC & Fire Fighting for industrial and commercial projects.

Should have managed large/medium scale MEP Projects as an MEP lead. Should be able to co-ordinate with all stakeholders for efficient delivery.

MEP Engineer
BE / Diploma - Mechanical or Electrical with 3-7 years experience in electrical, HVAC & Fire Fighting. Should be technically sound on various IS codes and NBC requirements.

Should manage/handle subcontractors/client engineers in day to day activities.

Site Supervisor / Foreman - Civil
HSC/SSC/ITI - with 4-10 years of experience in Finishing/RCC Buildings/industrial construction in their respective fields.

Officer - Store (Project)
Graduate with 5-10 years of experience in the construction industry.

Officer - Accounts (Project)
B.Com with 2-5 years of experience in the construction industry.

Lead / Officer - Safety / EHS (Project)
Graduate/Degree or Diploma In Engineering with safety qualification, preferably ADIS, with 5-10 years of experience in industrial construction.

Walk-In

With CV, stamp-size photo, education and experience certicates along with salary proof & last 3 months bank statement on Sunday, 29th October, 2023 between 10 AM to 5 PM.

Walk-in Interview at Bengaluru -

The Lalit Ashok Bangalore (An enterprise of Bharat Hotels Ltd)
Kumarakrupa Rd, opposite Golf Club, Kumara Park East, Seshadripuram, Bengaluru, Karnataka 560001



In case you are unable to join us for the interview in person, please send your CV and the required information to cv@suroj.in and you can apply on https://www.suroj.in/career.ph

www.suroj.in

Follow us on

ಬಿಟ್ ಕಾಯಿನ್: ಎಸ್‌ಐಟಿ ತನಿಖೆ ಚುರುಕು ● ವಹಿವಾಟು ಮಾಹಿತಿ ಸಂಗ್ರಹ ● ಖರೀದಿಗೆ ಹಣ ನೀಡಿದ ಸರ್ಕಾರ

ಅಕ್ರಮ ಪತ್ತೆ: ಉಪಕರಣದ ಮೊರೆ

● ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಟ್ ಕಾಯಿನ್ (ಬಿಟಿಸಿ) ಅಕ್ರಮದ ಬಗ್ಗೆ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ಕೋಡಿಂಗ್ ರೂಪದಲ್ಲಿ ನಡೆದಿರುವ ಬಿಟ್ ಕಾಯಿನ್ ಅಕ್ರಮ ವಹಿವಾಟು ಪತ್ತೆಗಾಗಿ ಉಪಕರಣವೊಂದರ ಮೊರೆ ಹೋಗಿದ್ದಾರೆ.

ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಏಜೆನ್ಸಿಗಳ ಸರ್ವರ್ ಹ್ಯಾಕ್ ಮಾಡಿ ಬಿಟ್ ಕಾಯಿನ್‌ಗಳನ್ನು ಸಂಪಾದಿಸಿದ್ದ. ಅದೇ ಬಿಟ್ ಕಾಯಿನ್‌ಗಳನ್ನು ಆರೋಪಿಗಳು ವರ್ಗಾವಣೆ ಮಾಡಿಸಿಕೊಂಡಿರುವ ಬಗ್ಗೆ ಎಸ್‌ಐಟಿ ಅನುಮಾನ ವ್ಯಕ್ತಪಡಿಸುತ್ತಿದೆ.

'ಬಿಟ್ ಕಾಯಿನ್ ಎಂಬುದು ಕ್ರಿಪ್ಟೊ ಕರೆನ್ಸಿಯ ಒಂದು ಪ್ರಕಾರ. ಅಮೆರಿಕ, ಇಂಗ್ಲೆಂಡ್ ಹಾಗೂ ಇತರೆ ದೇಶಗಳಲ್ಲಿ ಕ್ರಿಪ್ಟೊ ಕರೆನ್ಸಿ ವ್ಯವಹಾರದಲ್ಲಿ ಸಾಕಷ್ಟು ವಂಚನೆಗಳು ಆಗಿವೆ. ಇದೇ ಕಾರಣಕ್ಕೆ ಅಲ್ಲಿಯ ಪೊಲೀಸರು, ಹೊಸ ತಂತ್ರಜ್ಞಾನದ ಉಪಕರಣಗಳನ್ನು ಬಳಸುತ್ತಿದ್ದಾರೆ. ಇದರ ಸಹಾಯದಿಂದ ಬಿಟ್ ಕಾಯಿನ್ ವಹಿವಾಟು ಪತ್ತೆ ಮಾಡುತ್ತಿದ್ದಾರೆ. ಹೀಗಾಗಿ, ರಾಜ್ಯದಲ್ಲಿ ನಡೆದಿದೆ ಎನ್ನಲಾದ ಬಿಟ್ ಕಾಯಿನ್ ಅಕ್ರಮದ ತನಿಖೆಗೆ ಉಪಕರಣ ಬಳಸಲು ತೀರ್ಮಾನಿಸಲಾಗಿದೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ಪ್ರಕರಣದಲ್ಲಿ ಸಾಕ್ಷ್ಯ ತಿರುಚಿರುವ ಆರೋಪದಡಿ ಸಿಸಿಬಿ ಇನ್‌ಸ್ಪೆಕ್ಟರ್ ಸೇರಿ ಹಲವು ಪೊಲೀಸರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಈಗಾಗಲೇ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಶ್ರೀಕಿಗೆ ವ್ಯಕ್ತಿಯೊಬ್ಬರ ಲ್ಯಾಪ್‌ಟಾಪ್ ನೀಡಿದ್ದ ಸಿಸಿಬಿಯ ಕೆಲ ಪೊಲೀಸರು, ಅದೇ ಲ್ಯಾಪ್‌ಟಾಪ್ ಮೂಲಕ ಬಿಟ್ ಕಾಯಿನ್ ವರ್ಗಾವಣೆ ಮಾಡಿಸಿಕೊಂಡಿರುವ ಅನುಮಾನ ದಟ್ಟವಾಗಿದೆ. ಆದರೆ, ಯಾರಿಗೆಲ್ಲ ಬಿಟ್ ಕಾಯಿನ್ ವರ್ಗಾವಣೆ ಆಗಿದೆ. ಎಷ್ಟು ಪ್ರಮಾಣದಲ್ಲಿ ಆಗಿದೆ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ತಿಳಿಸಿದರು.

'ಬಿಟ್ ಕಾಯಿನ್ ವಹಿವಾಟು, ಅಂಕಿಗಳ ಮೂಲಕ ನಡೆಯುತ್ತದೆ. ವೈಯಕ್ತಿಕ ಖಾತೆ ಹಾಗೂ ವೈಯಕ್ತಿಕ ಮಾಹಿತಿ ಲಭ್ಯವಿರುವುದಿಲ್ಲ. ಕೋಡಿಂಗ್ ಮೂಲಕ ವರ್ಗಾವಣೆ ಮಾಡುವ ಬಿಟ್ ಕಾಯಿನ್‌ಗಳನ್ನು ಡಾಲರ್ ಅಥವಾ ರೂಪಾಯಿಗೆ ಬದಲಾಯಿಸಿಕೊಡುವ ಏಜೆನ್ಸಿಗಳು ಸಾಕಷ್ಟಿವೆ. ಆದರೆ, ಯಾರಿಂದ ? ಯಾರಿಗೆ ? ಬಿಟ್ ಕಾಯಿನ್ ಹೋಯಿತೆಂಬ ಮಾಹಿತಿ ಎಲ್ಲಿಯೂ ಲಭ್ಯವಾಗುವುದಿಲ್ಲ. ಯಾರಿಗೆ ವರ್ಗಾವಣೆ ಮಾಡುತ್ತಿದ್ದೇವೆ? ಎಂಬುದು ವರ್ಗಾವಣೆ ಮಾಡುವವನಿಗೂ ಗೊತ್ತಾಗುವುದಿಲ್ಲ' ಎಂದು ಅಧಿಕಾರಿ ತಿಳಿಸಿದರು.

ಸರ್ಕಾರದಿಂದ ಹಣ ಬಿಡುಗಡೆ: 'ಕ್ರಿಪ್ಟೊ ಕರೆನ್ಸಿಗಳ ವಹಿವಾಟು ಪತ್ತೆ ಉಪಕರಣದ ಖರೀದಿಗೆ ₹ 30 ಲಕ್ಷದಿಂದ ₹ 50 ಲಕ್ಷ ಬೇಕಾಗುತ್ತದೆ. ಜೊತೆಗೆ, ಗೋಪ್ಯತೆಗೆ ಸಂಬಂಧಪಟ್ಟಂತೆ ಉಪಕರಣ ತಯಾರಿಕಾ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು ಮುಂದುವರಿಯಬೇಕಾಗುತ್ತದೆ' ಎಂದು ಮೂಲಗಳು ಹೇಳಿವೆ.

'ಉಪಕರಣ ಖರೀದಿಗೆ ಅಗತ್ಯವಿರುವ ಹಣ ಮಂಜೂರು ಮಾಡುವಂತೆ ಕೋರಿ ಗೃಹ ಇಲಾಖೆ ಮೂಲಕ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇದನ್ನು ಪರಿಶೀಲಿಸಿದ ಸರ್ಕಾರ, ಹಣ ಬಿಡುಗಡೆ ಮಾಡಿರುವುದಾಗಿ ಗೊತ್ತಾಗಿದೆ. ಉಪಕರಣ ಖರೀದಿ ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ತಿಳಿಸಿವೆ.

ತಂಡದ ಸಿಬ್ಬಂದಿಗೆ ತರಬೇತಿ: 'ಮೊಬೈಲ್ ಕರೆಗಳ ವಿವರ ಸಂಗ್ರಹ, ಬೆರಳಚ್ಚು ಪರಿಶೀಲನೆ, ಸೈಬರ್ ಅಪರಾಧಗಳ ಪತ್ತೆಗಾಗಿ ಈಗಾಗಲೇ ಹಲವು ಉಪಕರಣಗಳನ್ನು ಬಳಸಲಾಗುತ್ತಿದೆ. ಇದೀಗ, ಕ್ರಿಪ್ಟೊ ಕರೆನ್ಸಿ ಎಂಬುದು ಹೊಸದು. ಇದರ ತನಿಖೆಗೆ ಬಳಸುವ ಉಪಕರಣ ಬಗ್ಗೆ ಎಸ್‌ಐಟಿ ತಂಡದವರಿಗೆ ತರಬೇತಿ ಕೊಡಿಸಲಾಗುವುದು. ಉಪಯೋಗಿಸಿದ ಬಳಿಕವೇ ಉಪಕರಣ ಯಾವ ರೀತಿ ಕೆಲಸ ಮಾಡುತ್ತದೆ ಎಂಬುದು ತಿಳಿಯುತ್ತದೆ' ಎಂದು ಮೂಲಗಳು ಹೇಳಿವೆ.

'ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿದ್ದ ಎನ್ನಲಾದ ಶ್ರೀಕೃಷ್ಣ, ಬಿಟ್ ಕಾಯಿನ್ ರೂಪದಲ್ಲಿ ಹಣ ದೋಚುತ್ತಿದ್ದ. ಇವೆಲ್ಲ ವ್ಯವಹಾರವೂ ಅಂತರ್ಜಾಲದ ಐ.ಪಿ ವಿಳಾಸಗಳ (ಇಂಟರ್‌ನೆಟ್ ಪ್ರೋಟೋಕಾಲ್ ಅಡ್ರೆಸ್) ಮೂಲಕ ನಡೆದಿರುವ ಮಾಹಿತಿ ಇದೆ. ಜೊತೆಗೆ, ಬಿಟ್ ಕಾಯಿನ್ ಕೋಡಿಂಗ್‌ಗಳನ್ನು ಭೇದಿಸಬೇಕಿದೆ. ಆಗಲೇ, ಬಿಟ್ ಕಾಯಿನ್ ವಹಿವಾಟಿನ ವಿವರ ಲಭ್ಯವಾಗುವ ನಿರೀಕ್ಷೆ ಇದೆ. ಆಬಳಿಕ ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಸಾಕ್ಷ್ಯ ತಿರುಚಿದ್ದ ಬಗ್ಗೆ ವಿಚಾರಣೆ'

'ಡ್ರಗ್ಸ್ ಪ್ರಕರಣದಲ್ಲಿ ಶ್ರೀಕಿ ಹಾಗೂ ಇತರರನ್ನು ಬಂಧಿಸಿದ್ದ ಸಿಸಿಬಿ ಪೊಲೀಸರು, ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಸೇರಿ ಹಲವು ವಸ್ತುಗಳನ್ನು ಜಪ್ತಿ ಮಾಡಿದ್ದರು. ಆದರೆ, ಬಹುತೇಕ ಸಾಕ್ಷ್ಯಗಳನ್ನು ಪೊಲೀಸರು ತಿರುಚಿದ್ದಾರೆ. ಹೀಗಾಗಿ, ಸಿಸಿಬಿ ಪೊಲೀಸರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಇನ್‌ಸ್ಪೆಕ್ಟರ್‌ಗಳು, ಎಸಿಬಿ ಹಾಗೂ ಇತರರನ್ನು ಸಿಸಿಬಿ ಕಚೇರಿಯಲ್ಲಿ ಇತ್ತೀಚೆಗೆ ವಿಚಾರಣೆ ನಡೆಸಲಾಗಿದೆ. ಎಲ್ಲರ ಹೇಳಿಕೆ ಪಡೆಯಲಾಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ. ಅಗತ್ಯವಿದ್ದರೆ, ಪುನಃ ವಿಚಾರಣೆಗೆ ಕರೆಯಲಾಗುವುದು' ಎಂದು ತಿಳಿಸಿವೆ.

ಸುದ್ದಿ 2 ನಿಮಿಷ

ಉದ್ಯಮಿ ಅಪಹರಣ: ನಾಲ್ವರು ಆರೋಪಿಗಳ ಬಂಧನ

ಬೆಂಗಳೂರು: ಉದ್ಯಮಿ ಅಭಿಲಾಷ್ ಎಂಬುವವರನ್ನು ಅಪಹರಿಸಿ ₹ 50 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂಪಿಗೆಹಳ್ಳಿಯ ನಿವಾಸಿ ಅಭಿಲಾಷ್ ಅವರು ಮಹಿಳೆಯೊಬ್ಬರ ಪಾಲುದಾರಿಕೆಯಲ್ಲಿ ಉದ್ಯಮ ನಡೆಸುತ್ತಿದ್ದರು. ಅವರಿಬ್ಬರ ನಡುವೆ ₹ 1.50 ಕೋಟಿ ವ್ಯವಹಾರವಿತ್ತು. ಇದೇ ಹಣಕ್ಕೆ ಸಂಬಂಧಪಟ್ಟಂತೆ ಇಬ್ಬರ ನಡುವೆ ವೈಮನಸ್ಸು ಉಂಟಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅ.20 ರಂದು ರಾತ್ರಿ ಅಭಿಲಾಷ್ ಅವರನ್ನು ಅಪಹರಿಸಿದ್ದ ಆರೋಪಿಗಳು, ರಾಮಮೂರ್ತಿನಗರದ ಗೋದಾಮುವೊಂದರಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದರು. ಚಾಕು ತೋರಿಸಿ, ₹ 50 ಲಕ್ಷ ನೀಡಿದರೆ ಮಾತ್ರ ಬಿಡುಗಡೆ ಮಾಡುವುದಾಗಿ ಬೆದರಿಸಿದ್ದರು.'

'ಆರೋಪಿಗಳು ಊಟ ತರಲು ಹೊರಗಡೆ ಹೋಗಿದ್ದ ಸಂದರ್ಭದಲ್ಲಿ ಗೋದಾಮಿನಲ್ಲಿದ್ದ ಫೋನ್‌ನಿಂದ ಅಭಿಲಾಷ್ ಅವರು ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ತ್ವರಿತ ಕಾರ್ಯಾಚರಣೆ ನಡೆಸಿ, ಉದ್ಯಮಿಯನ್ನು ರಕ್ಷಿಸಲಾಗಿದೆ. ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದ್ದು, ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಸದ್ಯದಲ್ಲೇ ಸಂಪಿಗೆಹಳ್ಳಿಗೆ ವರ್ಗಾಯಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಪಬ್, ಬಾರ್, ರೆಸ್ಟೋರೆಂಟ್‌ಗಳ ಪರಿಶೀಲನೆ: ನೋಟಿಸ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ವಲಯವಾರು ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡಿ ಪರಿಶೀಲಿಸುವ ಕಾರ್ಯವನ್ನು ಬಿಬಿಎಂಪಿ ಆರೋಗ್ಯಾಧಿಕಾರಿಗಳ ತಂಡ ಮುಂದುವರಿಸಿದೆ. ನಿಯಮ ಉಲ್ಲಂಘಿಸಿದ ಉದ್ದಿಮೆಗಳನ್ನು ಮುಚ್ಚಿಸಿದೆ.

ಅಧಿಕಾರಿಗಳು ಭಾನುವಾರದ ಕಾರ್ಯಾಚರಣೆಯಲ್ಲಿ 157 ಉದ್ದಿಮೆಗಳನ್ನು ಪರಿಶೀಲಿಸಿದ್ದರು. ಪರವಾನಗಿ ನಿಯಮ ಪಾಲಿಸದ 10 ಉದ್ದಿಮೆಗಳನ್ನು ಸ್ಥಳದಲ್ಲೇ ಮುಚ್ಚಿಸಿದ್ದರು. ನ್ಯೂನತೆ ಇರುವ 74 ಉದ್ದಿಮೆಗಳಿಗೆ ನೋಟಿಸ್ ನೀಡಿದ್ದರು. ಸೋಮವಾರ 79 ಉದ್ದಿಮೆಗಳನ್ನು ಪರಿಶೀಲಿಸಿದ್ದರು. 26 ಉದ್ದಿಮೆಗಳಿಗೆ ನೋಟಿಸ್ ಜಾರಿಗೊಳಿಸಿದ್ದರು. 5 ಉದ್ದಿಮೆಗಳನ್ನು ಮುಚ್ಚಿಸಿದ್ದರು.

ಮಂಗಳವಾರ 76 ಉದ್ದಿಮೆಗಳನ್ನು ಪರಿಶೀಲಿಸಿ, 17 ಉದ್ದಿಮೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದ್ದಾರೆ.

ಪೊಲೀಸರಿಗೆ ಕಳಪೆ ಊಟ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ವಿಶ್ವಕಪ್ ಕ್ರಿಕೆಟ್ ಪಂದ್ಯದ ವೇಳೆ ಕರ್ತವ್ಯದಲ್ಲಿದ್ದ ಪೊಲೀಸರಿಗೆ ಕಳಪೆ ಊಟ ಪೂರೈಸಿದ್ದ ಆರೋಪದಡಿ ಗಾಯತ್ರಿ ವಿಹಾರದ ಶಾರದಾ ಕ್ಯಾಟರಿಂಗ್ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪೊಲೀಸರಿಗೆ ನೀಡಿದ್ದ ಮೊಸರನ್ನದಲ್ಲಿ ಹುಳು ಪತ್ತೆಯಾಗಿತ್ತು. ಕಳಪೆ ಊಟ ಪೂರೈಸಿದ್ದ ಆರೋಪದಡಿ ಎನ್‌ಸಿಆರ್ (ಗಂಭೀರ ವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿತ್ತು. ನ್ಯಾಯಾಲಯದ ಸೂಚನೆಯಂತೆ ಇದೀಗ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆಸ್ಟ್ರೇಲಿಯಾ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಅ. 20ರಂದು ಕ್ರಿಕೆಟ್ ಪಂದ್ಯವಿತ್ತು. ಭದ್ರತೆಗಾಗಿ 970 ಪೊಲೀಸರನ್ನು ನಿಯೋಜಿಸಲಾಗಿತ್ತು. ಕರ್ತವ್ಯನಿರತ ಪೊಲೀಸರಿಗೆ ಊಟದ ವ್ಯವಸ್ಥೆ ಮಾಡಿದ್ದ ಕ್ರೀಡಾಂಗಣದ ಆಡಳಿತ ಮಂಡಳಿ, ಊಟ ಸರಬರಾಜು ಹೊಣೆಯನ್ನು ಕಾರ್ಯಕ್ರಮ ಸಂಘಟನಾ ಸಂಸ್ಥೆ ಯೊಂದಕ್ಕೆ ವಹಿಸಿದ್ದರು. ಸಂಸ್ಥೆಯವರು, ಊಟ ತಯಾರಿಸಿ ವಿತರಿಸುವ ಜವಾಬ್ದಾರಿಯನ್ನು ಅರಮನೆ ಮೈದಾನ ಗಾಯತ್ರಿ ವಿಹಾರದ ಶಾರದಾ ಕ್ಯಾಟರಿಂಗ್‌ಗೆ ವಹಿಸಿದ್ದರು. ಅದರಂತೆ, ಪೊಲೀಸರಿಗೆ ಮೆಂತ್ಯ ಬಾತ್, ಮೊಸರನ್ನ, ಬಾಳೆ ಹಣ್ಣುಗಳನ್ನು ನೀಡಲಾಗಿತ್ತು. ಊಟ ಮಾಡುವ ಸಂದರ್ಭದಲ್ಲಿ ಮೊಸರನ್ನದಲ್ಲಿ ಹುಳು ಕಂಡಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಶಾರದಾ ಕ್ಯಾಟರಿಂಗ್‌ನವರು, ಶುಚಿತ್ವ ಕಾಪಾಡದೇ ನಿರ್ಲಕ್ಷ್ಯದಿಂದ ಊಟ ತಯಾರಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಬಿಬಿಎಂಪಿ ಅಧಿಕಾರಿಗಳ ಸಮ್ಮುಖದಲ್ಲಿ ಅಡುಗೆ ತಯಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದು ಹೇಳಿದರು.

ಗಾಯನ ಕೆ.ಆರ್.ಪುರ ಕ್ಯಾಲಸಹಳ್ಳಿಯ 'ಪುರ್ವ ಪಾಮ್ ಬೀಚ್' ಅಪಾರ್ಟ್‌ಮೆಂಟ್‌ನಲ್ಲಿ ಬೆಂಗಾಲಿ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿದ್ದ ದಸರಾ ಕಾರ್ಯಕ್ರಮದಲ್ಲಿ ಮಹಿಳೆಯರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು

₹1.24 ಕೋಟಿ ನಗದು ಕಳವು

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ರಾಯಪುರದಲ್ಲಿರುವ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮುಖ್ಯ ಕಚೇರಿಯ ಭದ್ರತಾ ಕೊಠಡಿಯಲ್ಲಿನ ಸೇಫ್ಟಿ ಲಾಕರ್‌ನಲ್ಲಿ ಸಂಗ್ರಹಿಸಿಟ್ಟಿದ್ದ ₹ 1.24 ಕೋಟಿ ನಗದು ಸೋಮವಾರ ರಾತ್ರಿ ಕಳವು ಆಗಿದೆ.

'ಸದಸ್ಯರು ಪಡೆದಿದ್ದ ಸಾಲದ ಮರುಪಾವತಿ ಹಣ ಮತ್ತು ಉಳಿತಾಯ ಖಾತೆಗೆ ಜಮಾ ಮಾಡಲು ಸಂಗ್ರಹಿಸಿಟ್ಟಿದ್ದ ಹಣ ಕಳವು ಆಗಿದೆ' ಎಂದು ಜಿಲ್ಲಾ ಯೋಜನಾಧಿಕಾರಿ ಮಮತಾ ಭಟ್ ಅವರು ವಿದ್ಯಾಗಿರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನಲ್ಲಿ ಏನಿದೆ?: ಅಕ್ಟೋಬರ್ 23ರಂದು ಬ್ಯಾಂಕ್‌ಗೆ ರಜೆ ಇದ್ದ ಕಾರಣ, ರಾಯಾಪುರದ ಮುಖ್ಯಕಚೇರಿ ಕಟ್ಟಡದಲ್ಲಿರುವ ಭದ್ರತಾ ಕೊಠಡಿಯಲ್ಲಿರುವ ಸೇಫ್ಟಿ ಲಾಕರ್‌ನಲ್ಲಿ ಹಣ ಇಡಲಾಗಿತ್ತು.

ಅಂದು ಸಂಜೆ 7.45 ರಿಂದ ರಾತ್ರಿ 10 ಗಂಟೆ ಅವಧಿಯಲ್ಲಿ ಕಳವು ಆಗಿದೆ. ಊಟಕ್ಕೆ ತೆರಳಿ, ಪುನಃ ಕಚೇರಿಗೆ ಮರಳಿದಾಗ, ಹಣ ಕಳವು ಆಗಿತ್ತು. ಭದ್ರತಾ ಕೊಠಡಿ ಬಳಿಯಿರುವ ಶೌಚಾಲಯದ ವೆಂಟಿಲೇಟರ್ ಮುರಿದು ಒಳಗೆ ಬಂದಿರುವ ಕಳ್ಳರು, ಕೊಠಡಿ ಬಾಗಿಲು, ಸೇಫ್ಟಿ ಲಾಕರ್ ಮುರಿದು ಕೃತ್ಯವೆಸಗಿದ್ದಾರೆ' ಎಂದು ತಿಳಿಸಿದ್ದಾರೆ.

ಹತ್ಯೆ ಪ್ರಕರಣ: ಐವರ ಬಂಧನ

ಮಾಲೂರು: ಅ.21ರಂದು ಕಾಂಗ್ರೆಸ್ ಬೆಂಬಲಿತ ಗ್ರಾಮ ಪಂಚಾಯಿತಿ ಸದಸ್ಯ ಅನಿಲ್ ಕುಮಾರ್ (35) ಅವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಐದು ಮಂದಿ ಆರೋಪಿಗಳನ್ನು ಪಟ್ಟಣದ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಇನ್ನುಳಿದ ಆರೋಪಿಗಳಿಗೆ ಬಲೆ ಬೀಸಿದ್ದಾರೆ.

ಮಿಣಸಂದ್ರ ಗ್ರಾಮದ ಅನಿಲ್ ಕುಮಾರ್ (35), ಕಿರಣ್ ಕುಮಾರ್ (20), ಆನಂದ್ (23), ಗೀತಾ (32), ಬೆಂಗಳೂರಿನ ಚನ್ನಸಂದ್ರ ಗ್ರಾಮದ ಹರಿಕಾಂತ್ (35) ಆರೋಪಿಗಳನ್ನು ಬಂಧಿಸಿದ್ದಾರೆ.

ಘಟನೆ ವಿವರ: ಜಯಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಿಣಸಂದ್ರ ಗ್ರಾಮದ ಎಂ.ವಿ.ಅನಿಲ್ ಕುಮಾರ್ ಅವರು ಹೊಸೂರು ರಸ್ತೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಅವರನ್ನು ಆರೋಪಿಗಳು ಅಡ್ಡಗಟ್ಟಿ ಹತ್ಯೆ ಮಾಡಿದ್ದಾರೆ. ಕೊಲೆಗೆ ರಾಜಕೀಯ ದ್ವೇಷ ಕಾರಣ ಎಂದು ಶಂಕಿಸಲಾಗಿದೆ. ಮತ್ತೊಬ್ಬ ಆರೋಪಿ ಅಶೋಕ್ ತಲೆ ತಪ್ಪಿಸಿಕೊಂಡಿದ್ದಾನೆ. ಅವರ ಪತ್ನಿ ಗೀತಾ ಅವರನ್ನು ಬಂಧಿಸಲಾಗಿದೆ.

ಕೊಲೆ ನಡೆದ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಡಿವೈಎಸ್‌ಪಿ ಮಲ್ಲೇಶ್, ಸರ್ಕಲ್ ಇನ್‌ಸ್ಪೆಕ್ಟರ್ ವಸಂತ್ ತೆರಳಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಆರೋಪಿಗಳ ಜಾಡು ಹಿಡಿದ ಪೊಲೀಸರಿಗೆ ಸೋಮವಾರ ಬೆಳಗಿನ ಜಾವ ಬೆಂಗಳೂರಿನಲ್ಲಿ ಐವರು ಪೊಲೀಸರನ್ನು ಬಂಧಿಸಿದ್ದಾರೆ.

ಉಳಿದ ಆರೋಪಿಗಳಿಗಾಗಿ ಬಲೆ ಬೀಸಿದ್ದಾರೆ. ಪಿಎಸ್‌ಐ ವರಲಕ್ಷ್ಮಿ, ಎಎಸ್‌ಐ ರಮೇಶ್, ಪೊಲೀಸ್ ಸಿಬ್ಬಂದಿ ವೆಂಕಟೇಶ್, ಮೋಹನ್, ಕೋದಂಡಪಾಣಿ, ಅಶೋಕ್ ಇತರರು ಆರೋಪಿ ಬಂಧಿಸುವ ತಂಡದಲ್ಲಿದ್ದರು.

ಅನಿಲ್ ಕುಮಾರ್

ಹರಿಕಾಂತ್

ಆನಂದ್

ಗೀತಾ

ಕಿರಣ್ ಕುಮಾರ್

ಕ್ರಿಕೆಟ್: ಕ್ರೀಡಾಂಗಣದಲ್ಲಿ ಕುಳಿತು ಬೆಟ್ಟಿಂಗ್ ದಂಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ಕ್ರಿಕೆಟ್ ಪಂದ್ಯದ ವೇಳೆ ಆ್ಯಪ್ ಮೂಲಕ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಮಹಾರಾಷ್ಟ್ರದ ಝುಕೀವುಲ್ಲಾ ಖಾನ್ ಅಲಿಯಾಸ್ ಝುಕಿ (40) ಹಾಗೂ ಮಧ್ಯಪ್ರದೇಶದ ಬಾದಲ್ ಜೈನ್ (30) ಬಂಧಿತರು. ಇವರಿಂದ ಪಂದ್ಯಾವಳಿಯ ಟಿಕೆಟ್ ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅ. 20ರಂದು ಆಸ್ಟ್ರೇಲಿಯಾ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕ್ರಿಕೆಟ್ ಪಂದ್ಯವಿತ್ತು. ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದ್ದ ಆರೋಪಿಗಳು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕುಳಿತಿದ್ದರು. ಪಂದ್ಯ ಆರಂಭವಾಗುತ್ತಿದ್ದಂತೆ, ಪ್ರತಿಯೊಂದು ಬಾಲ್ ಹಾಗೂ ಇತರೆ ಮಾಹಿತಿಯನ್ನು ಆ್ಯಪ್‌ನಲ್ಲಿ ದಾಖಲಿಸುತ್ತಿದ್ದರು. ಇದರ ಸಹಾಯದಿಂದಲೇ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು' ಎಂದು ತಿಳಿಸಿವೆ.

'ಮೈದಾನದಲ್ಲಿ ನಡೆಯುವ ಪಂದ್ಯಕ್ಕೂ ಟಿ.ವಿ.ಯಲ್ಲಿ ಪ್ರಸಾರವಾಗುವ ಪಂದ್ಯಕ್ಕೂ ಕೆಲವು ನಿಮಿಷಗಳ ವ್ಯತ್ಯಾಸವಿರುತ್ತದೆ. ಇದೇ ಕಾರಣಕ್ಕೆ ಆರೋಪಿಗಳು, ಮೈದಾನದಲ್ಲಿ ಕುಳಿತು ಪಂದ್ಯವನ್ನು ವೀಕ್ಷಿಸುತ್ತಲೇ ಬೆಟ್ಟಿಂಗ್ ನಡೆಸುತ್ತಿದ್ದರು' ಎಂದು ಹೇಳಿವೆ.

ಬಸ್ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಮೈಸೂರು ರಸ್ತೆಯ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಬಳಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಪಾದಚಾರಿ ಸೆಲ್ವಂ (57) ಎಂಬುವವರು ಮೃತಪಟ್ಟಿದ್ದಾರೆ.

'ತಮಿಳುನಾಡಿನ ಸೆಲ್ವಂ ಅವರು ಕೆಲಸ ನಿಮಿತ್ತ ನಗರಕ್ಕೆ ಬಂದಿದ್ದರು. ಶನಿವಾರ ರಾತ್ರಿ ತಮ್ಮೂರಿಗೆ ವಾಪಸು ಹೋಗಲೆಂದು ಸ್ಯಾಟ್‌ಲೈಟ್ ಬಸ್ ನಿಲ್ದಾಣದತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಬ್ಯಾಟರಾಯನಪುರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಚಾಮರಾಜನಗರದಿಂದ ನಗರಕ್ಕೆ ಬಂದಿದ್ದ ಬಸ್, ಸ್ಯಾಟ್‌ಲೈಟ್ ನಿಲ್ದಾಣದ ಎದುರಿನ ಸರ್ವೀಸ್ ರಸ್ತೆಯಲ್ಲಿ ಹೊರಟಿತ್ತು. ಸೆಲ್ವಂ ಅವರು ರಸ್ತೆ ದಾಟುತ್ತಿದ್ದರು. ತಿರುವು ತೆಗೆದುಕೊಳ್ಳುವ ವೇಳೆ ಚಾಲಕ, ಅತಿ ವೇಗವಾಗಿ ಬಸ್ ಚಲಾಯಿಸಿದ್ದ. ಸೆಲ್ವಂ ಅವರಿಗೆ ಬಸ್ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಮಹಡಿಯಿಂದ ಬಿದ್ದು ಯುವಕ ಸಾವು

ಅಪರಾಧ ಸುದ್ದಿ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿರುವ ಪುನರ್ವಸತಿ ಕೇಂದ್ರವೊಂದರಲ್ಲಿ ಮಹಡಿಯಿಂದ ಬಿದ್ದು ಶುಕೂರ್ ಪಟೇಲ್ (24) ಎಂಬುವವರು ಮಂಗಳವಾರ ಮೃತಪಟ್ಟಿದ್ದಾರೆ.

'ಯಾದಗಿರಿಯ ಶುಕೂರ್, ಮಾನಸಿಕ ಅಸ್ವಸ್ಥರಾಗಿದ್ದರು. ಕೆಂಚನಪುರ ಕ್ರಾಸ್ ಬಳಿಯ ಮನೋವೈದ್ಯಕೀಯ ಆಸ್ಪತ್ರೆ ಮತ್ತು ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆಗೆಂದು ಶುಕೂರ್ ಅವರನ್ನು ದಾಖಲಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಗಳವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಕೇಂದ್ರದ ಸಿಬ್ಬಂದಿ, ಕಟ್ಟಡದ ಮೂರನೇ ಮಹಡಿಯಲ್ಲಿ ರೋಗಿಗಳಿಗೆ ವಾಯುವಿಹಾರ ಮಾಡಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಶುಕೂರ್, ಸಿಬ್ಬಂದಿಯನ್ನು ತಳ್ಳಿ ಮೂರನೇ ಮಹಡಿಯಿಂದ ಜಿಗಿದಿದ್ದರೆಂದು ಹೇಳಲಾಗುತ್ತಿದೆ.'

'ತಲೆ ಮತ್ತು ದೇಹದ ಹಲವು ಭಾಗಗಳಿಗೆ ತೀವ್ರ ಪೆಟ್ಟು ಬಿದ್ದು ಶುಕೂರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ. ಮರಣೋತ್ತರ ಪರೀಕ್ಷೆ ನಂತರ, ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಮೂಲಗಳು ತಿಳಿಸಿವೆ.

'ಶುಕೂರ್ ಸಾವಿನ ಬಗ್ಗೆ ಅನುಮಾನಗಳಿವೆ. ಸಂಬಂಧಿಕರು ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಲಾಭದ ಆಮಿಷ: ₹ 50 ಲಕ್ಷ ಕಳೆದುಕೊಂಡ ಎಂಜಿನಿಯರ್

ಬೆಂಗಳೂರು: ಕೆಲಸ ಕೊಡಿಸುವುದಾಗಿ ಹೇಳಿ ಸಾಫ್ಟ್‌ವೇರ್ ಎಂಜಿನಿಯರ್‌ರೊಬ್ಬರನ್ನು ಸಂಪರ್ಕಿಸಿದ್ದ ಸೈಬರ್ ವಂಚಕರು, ಹೂಡಿಕೆ ಲಾಭದ ಆಮಿಷವೊಡ್ಡಿ ₹ 50 ಲಕ್ಷ ಪಡೆದು ವಂಚಿಸಿದ್ದಾರೆ.

ನಗರದ ನಿವಾಸಿಯಾಗಿರುವ ಸಾಫ್ಟ್‌ವೇರ್ ಎಂಜಿನಿಯರ್ ವಂಚನೆ ಸಂಬಂಧ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

'ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ದೂರುದಾರ, ಬೇರೆ ಕಡೆ ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಅವರಿಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, ವಿದೇಶದಲ್ಲಿ ಕೆಲಸ ಇರುವುದಾಗಿ ತಿಳಿಸಿದ್ದರು. ಅದನ್ನು ನಂಬಿದ್ದ ದೂರುದಾರ, ಆರೋಪಿಗಳ ಸಂದೇಶಗಳಿಗೆ ಪ್ರತಿಕ್ರಿಯಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸದ ವಿಚಾರವಾಗಿ ಆರಂಭದಲ್ಲಿ ಮಾತನಾಡುತ್ತಿದ್ದ ಆರೋಪಿಗಳು, 'ನಮ್ಮಲ್ಲಿ ಹೂಡಿಕೆ ಯೋಜನೆಗಳಿವೆ. ನೀವು ಹಣ ಹೂಡಿಕೆ ಮಾಡಿದರೆ, ಕೆಲವೇ ದಿನಗಳಲ್ಲಿ ದುಪ್ಪಟ್ಟು ಲಾಭ ಪಡೆಯಬಹುದು' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 50 ಲಕ್ಷ ಹೂಡಿಕೆ ಮಾಡಿದ್ದರು. ಹಣ ಪಡೆದಿದ್ದ ಆರೋಪಿಗಳು, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಹಣ ದ್ವಿಗುಣ ಆಮಿಷ: ಆರೋಪಿ ಸೆರೆ

ಚಿತ್ರದುರ್ಗ: ಹಣ ದ್ವಿಗುಣ (ಮನಿ ಡಬ್ಲಿಂಗ್) ಆಮಿಷ ತೋರಿಸಿ ₹ 17 ಲಕ್ಷ ಪಡೆದು ವಂಚಿಸುತ್ತಿದ್ದ ಆರೋಪಿಯನ್ನು ಕೋಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರದ ಜಯಲಕ್ಷ್ಮಿ ಬಡಾವಣೆಯ ಶಂಕರಗೌಡ ಪಾಟೀಲ ಬಂಧಿತ ಆರೋಪಿ. ₹ 17.6 ಲಕ್ಷ ನಗದು, ಎರಡು ಟ್ರಂಕ್ ನಕಲಿ ನೋಟು ಹಾಗೂ ಕಾರು ವಶಕ್ಕೆ ಪಡೆಯಲಾಗಿದೆ. ಮಹಾರಾಷ್ಟ್ರದ ಪುಣೆಯ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ತಾಂತ್ರಿಕ ಅಧಿಕಾರಿ ಮಹೇಶ್ ಕಾಟ್ಕರ್, ಸಚಿನ್ ಕಾಂಬ್ಳೆ ಹಾಗೂ ಅನಘ ಸುನೀಲ್ ಹಣ ದ್ವಿಗುಣದ ವಂಚನೆಗೆ ಒಳಗಾದವರು.

ಮಹೇಶ್ ಕಾಟ್ಕರ್‌ಗೆ ಶಂಕರಗೌಡ ಪಾಟೀಲ್ ಮೂರು ತಿಂಗಳ ಹಿಂದೆ ಫೋನ್ ಮೂಲಕ ಪರಿಚಿತರಾಗಿದ್ದರು. ಅಪಾರ ಪ್ರಮಾಣದ ಹಣ ಇರುವುದಾಗಿ ನಂಬಿಸಿದ ಪಾಟೀಲ್, ₹ 1 ಲಕ್ಷಕ್ಕೆ ₹ 3 ಲಕ್ಷ ನೀಡುವುದಾಗಿ ಆಮಿಷ ತೋರಿಸಿದ್ದ. ಇದನ್ನು ನಂಬಿದ ಮಹೇಶ್ ತಮ್ಮ ಇಬ್ಬರು ಸ್ನೇಹಿತರೊಂದಿಗೆ ಸೋಮವಾರ ಚಿತ್ರದುರ್ಗಕ್ಕೆ ಬಂದು ₹ 17.6 ಲಕ್ಷ ಹಣ ನೀಡಿದ್ದರು ಎಂದು ಕೋಟೆ ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಅಸಲಿ ನೋಟು ಪಡೆದ ಶಂಕರಗೌಡ ಪಾಟೀಲ್ ಎರಡು ಟ್ರಂಕ್‌ಗಳಲ್ಲಿ ನಕಲಿ ನೋಟು ನೀಡಿದ್ದ. ಹಣ ಪರಿಶೀಲಿಸಿದವರಿಗೆ ನಕಲಿ ನೋಟು ಎಂಬುದು ದೃಢಪಟ್ಟಿತ್ತು. ಇದನ್ನು ಪ್ರಶ್ನಿಸಿದಾಗ ಮಾರಕಾಸ್ತ್ರ ಹಿಡಿದು ಜೀವ ಬೆದರಿಕೆ ಹಾಕಿದ್ದನು. ಗಲಾಟೆ ನಡೆಯುತ್ತಿರುವುದನ್ನು ಗಮನಿಸಿದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿದ ಪೊಲೀಸರು ನಾಲ್ವರನ್ನು ವಿಚಾರಣೆಗೆ ಒಳಪಡಿಸಿದಾಗ ಹಣ ದ್ವಿಗುಣ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.

ಸರಣಿ ಅಪಘಾತ: ಪಾನಮತ್ತ ಚಾಲಕನಿಗೆ ಥಳಿತ

ಬೆಂಗಳೂರು: ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದ ಚಾಲಕರೊಬ್ಬರನ್ನು ಥಳಿಸಿರುವ ಜನರು, ಪೊಲೀಸರಿಗೆ ಒಪ್ಪಿಸಿದ್ದಾರೆ.

'ಬಿಟಿಎಂ ಬಡಾವಣೆಯ ಎರಡನೇ ಹಂತದಲ್ಲಿ ಸೋಮವಾರ ರಾತ್ರಿ ಸರಣಿ ಅಪಘಾತವಾಗಿದೆ. ಮೂರು ದ್ವಿಚಕ್ರ ವಾಹನಗಳು ಹಾಗೂ ಕಾರು ಜಖಂಗೊಂಡಿವೆ. ಅಪಘಾತಕ್ಕೆ ಕಾರಣ ಎನ್ನಲಾದ ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮೈಕೊ ಲೇಔಟ್ ಸಂಚಾರ ಪೊಲೀಸ್ ಮೂಲಗಳು ತಿಳಿಸಿವೆ.

'ಮದ್ಯದ ಅಮಲಿನಲ್ಲಿದ್ದ ಚಾಲಕ, ಕಾರು ಚಲಾಯಿಸಿಕೊಂಡು ಹೊರಟಿದ್ದ. ಮಾರ್ಗ ಮಧ್ಯೆ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿದ್ದ. ಅದೇ ಕಾರು, ರಸ್ತೆ ಪಕ್ಕದಲ್ಲಿದ್ದ ದ್ವಿಚಕ್ರ ವಾಹನಗಳು ಹಾಗೂ ಕಾರಿಗೆ ಡಿಕ್ಕಿ ಹೊಡೆದಿತ್ತು.'

'ಸರಣಿ ಅಪಘಾತದಿಂದಾಗಿ ಸ್ಥಳದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಚಾಲಕನನ್ನು ವಿಚಾರಿಸಿದಾಗ, ಮದ್ಯ ಕುಡಿದಿದ್ದು ಗೊತ್ತಾಗಿತ್ತು. ನಂತರ, ಚಾಲಕನನ್ನು ಜನರೇ ಥಳಿಸಿದ್ದರು' ಎಂದು ಮೂಲಗಳು ಹೇಳಿವೆ.

ಭದ್ರಾ ನದಿಯಲ್ಲಿ ಮುಳುಗಿ ಪ್ರವಾಸಿ ಸಾವು

ಕಳಸ: ಹೊರನಾಡು ರಸ್ತೆಯ ಹೆಬ್ಬೊಳೆಯ ಭದ್ರಾ ನದಿಯಲ್ಲಿ ಮುಳುಗಿ ಪ್ರವಾಸಿಗರೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ.

ಬೆಂಗಳೂರಿನ ಶ್ರೀನಗರದ ಗೋಕುಲ್ (25) ಮೃತಪಟ್ಟವರು. ಬೆಂಗಳೂರಿನ ಮೂವರು ಯುವಕರು ಹೊರನಾಡಿಗೆ ಪ್ರವಾಸಕ್ಕೆ ಬಂದಿದ್ದರು. ವಾಪಸ್ ಹೋಗುವಾಗ ಭದ್ರಾ ನದಿಯಲ್ಲಿ ಸ್ನಾನ ಮಾಡಲು ಇಳಿದಾಗ ಅವಘಡ ಸಂಭವಿಸಿದೆ. ಮೃತದೇಹವನ್ನು ನೀರಿನಿಂದ ಹೊರತೆಗೆಯಲಾಗಿದೆ. ಕಳಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3 ಕೆ.ಜಿ ಚಿನ್ನ ವಶ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ಕ್ವಾಲಾಲಂಪುರ, ದುಬೈ, ಕೊಲಂಬೊದಿಂದ ಬಂದ ನಾಲ್ವರು ಪ್ರಯಾಣಿಕರಿಂದ ಮೂರು ಚಿನ್ನದ ಬಿಸ್ಕತ್ತು ಸೇರಿದಂತೆ ಒಟ್ಟು ₹ 1.76 ಕೋಟಿ ಮೌಲ್ಯದ 3 ಕೆ.ಜಿ. ಚಿನ್ನವನ್ನು ಜಪ್ತಿ ಮಾಡಲಾಗಿದೆ. ಇಬ್ಬರು ಪ್ರಯಾಣಿಕರನ್ನು ವಶಕ್ಕೆ ಪಡೆಯಲಾಗಿದೆ.

ಕಲಬುರಗಿ: ಬುದ್ಧ ವಿಹಾರದಲ್ಲಿ 67ನೇ ಧಮ್ಮಚಕ್ರ ಪ್ರವರ್ತನ ದಿನಾಚರಣೆ

ಬುದ್ಧನ ತತ್ವ ಪಸರಿಸಿದ ಅಂಬೇಡ್ಕರ್: ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿ ಇರುವ ಮಹಾರಾಷ್ಟ್ರದ ನಾಗಪುರದಲ್ಲಿಯೇ ಮನುವಾದದ ವಿರುದ್ಧ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬುದ್ಧನ ತತ್ವಗಳನ್ನು ಪಸರಿಸುವ ಧೈರ್ಯ ತೋರಿಸಿದ್ದರು. ನಾಗಪುರದ ಒಂದೆಡೆ ಆರ್‌ಎಸ್‌ಎಸ್ ಪಥಸಂಚಲನ ನಡೆಯುತ್ತಿದ್ದರೆ, ಮತ್ತೊಂದೆಡೆ ಧಮ್ಮ ಚಕ್ರ ಪ್ರವರ್ತನ (ಬೌದ್ಧ ಧರ್ಮ ಸ್ವೀಕಾರ) ನಡೆಯುತ್ತಿತ್ತು' ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ನಗರದಲ್ಲಿ ತಾವು ಸ್ಥಾಪಿಸಿದ ಬುದ್ಧ ವಿಹಾರದಲ್ಲಿ ಮಂಗಳವಾರ 67ನೇ ಧಮ್ಮಚಕ್ರ ಪ್ರವರ್ತನ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿಷ್ಣುವಿನ ದಶಾವತಾರಗಳಲ್ಲಿ ರಾಮ, ಕೃಷ್ಣ, ಪರಶುರಾಮ ಹೀಗೆ 10 ಅವತಾರಗಳ ಪೈಕಿ 9ನೇ ಅವತಾರ ಬುದ್ಧನ ಅವತಾರ ಎನ್ನಲಾಗುತ್ತದೆ. ಹಾಗಿದ್ದರೆ ಬುದ್ಧನ ಮೂರ್ತಿಗೆ ನಮಸ್ಕರಿಸಿ ಬುದ್ಧಂ ಶರಣಂ ಗಚ್ಛಾಮಿ ಎಂದು ಹೇಳಲು ಏನು ಅಡ್ಡಿ' ಎಂದು ಪ್ರಶ್ನಿಸಿದರು. 'ಒಂದರಿಂದ ಎಂಟು ಅವತಾರಗಳನ್ನು ಹೇಳುವವರು 9ನೇ ಅವತಾರವಾದ ಬುದ್ಧನ ಬಗ್ಗೆ ಏಕೆ ಹೇಳುವುದಿಲ್ಲ' ಎಂದು ಪ್ರಶ್ನಿಸಿದರು.

ದೇಶದ ಪ್ರಧಾನಿಯಾಗಿದ್ದ ಜವಹರಲಾಲ್ ನೆಹರೂ ಅವರು ವೈಜ್ಞಾನಿಕ ಮನೋಭಾವವನ್ನು ಹೊಂದಿದ್ದರು. ಕಣ್ಣಿಗೆ ಕಾಣದ, ಅವಾಸ್ತವಿಕ ಸಂಗತಿಗಳನ್ನು ನಂಬುತ್ತಿರಲಿಲ್ಲ. ಅದಕ್ಕಾಗಿಯೇ ಹಸಿರು ಕ್ರಾಂತಿಯನ್ನು ನೆರವೇರಿಸುವ ಆಹಾರ ಧಾನ್ಯಗಳನ್ನು ಯಥೇಚ್ಛವಾಗಿ ಬೆಳೆಯುವಂತೆ ನೋಡಿಕೊಂಡರು. ಅಲ್ಲದೇ, ಶ್ವೇತಕ್ರಾಂತಿಯ ಮೂಲಕ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಸೋನಿಯಾ ಗಾಂಧಿಯವರು ಯುಪಿಎ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದರು. ದೇಶದಲ್ಲಿ 33 ಕೋಟಿ ದೇವತೆಗಳು ಇದ್ದಾರೆ ಎಂದು ಹೇಳುತ್ತಾರೆ. ಅಷ್ಟೊಂದು ದೇವತೆಗಳಿದ್ದರೆ ಜನರು ಹಸಿವಿನಿಂದ ಏಕೆ ಇರುತ್ತಿದ್ದರು. ನಾನಂತೂ 33 ಕೋಟಿ ದೇವತೆಗಳ ಹೆಸರುಗಳನ್ನು ಕೇಳಿಲ್ಲ. ನಿಮಗಾರಿಗಾದರೂ ಗೊತ್ತಿದ್ದರೆ ತಿಳಿಸಿರಿ' ಎಂದು ಸಭಿಕರಿಗೆ ಕೇಳಿದರು.

'ಅಂಬೇಡ್ಕರ್ ಕನಸಿನ ಕೋಟೆ ಛಿದ್ರಗೊಳಿಸುವ ಯತ್ನ': ದೇಶದಲ್ಲಿ ಪ್ರತಿಕ್ರಾಂತಿ ಜಾರಿಯಲ್ಲಿದ್ದು, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಕನಸಿನ ಕೋಟೆಯನ್ನು ಛಿದ್ರಗೊಳಿಸುವ ಯತ್ನವನ್ನು ಪುಷ್ಯಮಿತ್ರನ (ಬ್ರಾಹ್ಮಣಶಾಹಿ) ಸಂತತಿಯವರು ಮಾಡುತ್ತಿದ್ದಾರೆ ಎಂದು ಬೆಂಗಳೂರಿನ ಪ್ರಾಧ್ಯಾಪಕ, ಲೇಖಕ ಸಿ.ಜಿ. ಲಕ್ಷ್ಮಿಪತಿ ಎಚ್ಚರಿಸಿದರು.

67ನೇ ಧಮ್ಮಚಕ್ರ ಪ್ರವರ್ತನ ದಿನಾಚರಣೆ ಅಂಗವಾಗಿ ಇಲ್ಲಿನ ಬುದ್ಧವಿಹಾರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, 'ಅಂಬೇಡ್ಕರ್ ಅವರು ಕ್ರಾಂತಿ–ಪ್ರತಿಕ್ರಾಂತಿಯ ಬಗ್ಗೆ ಬರೆದಿದ್ದರು. ಇದೀಗ ಪ್ರತಿಕ್ರಾಂತಿ ನಡೆಯುತ್ತಿದೆ. ಶೋಷಿತರು, ಅಲಕ್ಷಿತರ ಭಾರತದ ಕುರಿತಾಗಿ ಅಂಬೇಡ್ಕರ್ ಅವರು ಹಲವು ಕನಸುಗಳನ್ನು ಕಟ್ಟಿಕೊಂಡಿದ್ದರು. ಅದಕ್ಕೆ ಭಂಗ ತರುವ ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೆ ಒಂದೇ ಪರಿಹಾರವೆಂದರೆ ಬುದ್ಧನ ತತ್ವಗಳನ್ನು ಅಳವಡಿಸಿಕೊಳ್ಳುವುದಾಗಿದೆ' ಎಂದು ಅವರು ಹೇಳಿದರು.

'67 ವರ್ಷಗಳ ಹಿಂದೆ ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸುವ ಸಂದರ್ಭದಲ್ಲಿ ಈ ಧರ್ಮದ ಅನೇಕ ಕವಲುಗಳಿದ್ದವು. ಜಪಾನ್, ಕೊರಿಯಾ, ಟಿಬೆಟ್ ಸೇರಿದಂತೆ ಹಲವೆಡೆ ಆಯಾ ದೇಶಕ್ಕೆ ಅನುಗುಣವಾಗಿ ಇದನ್ನು ಅಳವಡಿಸಿಕೊಳ್ಳಲಾಗಿತ್ತು. ಭಾರತಕ್ಕೆ ಹೊಂದುವಂತೆ ಬೌದ್ಧ ಧರ್ಮವನ್ನು ರೂಪಿಸುವ ಹೊಣೆ ಅಂಬೇಡ್ಕರ್ ಅವರ ಮೇಲೆ ಇತ್ತು. ಅದಕ್ಕಾಗಿ ಚಾರ್ವಾಕರು, ದರ್ಶನಗಳು, ವಿವಿಧ ಧರ್ಮಗ್ರಂಥಗಳ ಬಗ್ಗೆ ಮಾಹಿತಿ ಇದ್ದುದರಿಂದ ಭಾರತಕ್ಕೆ ಹೊಂದಿಕೆಯಾಗುವ ಆಚರಣೆಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು' ಎಂದು ಹೇಳಿದರು.

'ನಾನು ಹಿಂದು ಧರ್ಮದಲ್ಲಿ ಜನಿಸಿದರೂ ಹಿಂದುವಾಗಿ ಸಾಯಲಾರೆ ಎಂದು ಪ್ರತಿಜ್ಞೆ ಕೈಗೊಂಡು ಅಂಬೇಡ್ಕರ್ ಅವರು ಬೇರೆ ಧರ್ಮ ಸೇರುವ ಇಚ್ಛೆ ವ್ಯಕ್ತಪಡಿಸಿದ್ದರು. ಈ ಸಂದರ್ಭದಲ್ಲಿ ತಮ್ಮ ಧರ್ಮ ಸೇರುವಂತೆ ಕ್ರೈಸ್ತ, ಇಸ್ಲಾಂ ಸೇರಿದಂತೆ ವಿವಿಧ ಧರ್ಮದ ಗುರುಗಳು ಆಹ್ವಾನ ನೀಡಿದ್ದರು. ಅಂತಿಮವಾಗಿ ಬೌದ್ಧ ಧರ್ಮವು ಜಗದ ವಿಮೋಚನೆಗೆ ಅಗತ್ಯವಾದ ಧರ್ಮ ಎಂದು ಭಾವಿಸಿ ಬೌದ್ಧ ಧರ್ಮ ಸ್ವೀಕರಿಸಿದರು. ಈಗ ಎಲ್ಲೆಲ್ಲೂ ಬೌದ್ಧ ಧರ್ಮ ಸ್ವೀಕರಿಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ' ಎಂದು ಪ್ರತಿಪಾದಿಸಿದರು.

ಕಲಬುರಗಿಯ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ಧಮ್ಮಚಕ್ರ ಪ್ರವರ್ತನ ದಿನಾಚರಣೆ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುದ್ಧನ ಪ್ರತಿಮೆಗೆ ನಮನ ಸಲ್ಲಿಸಿದರು. ರಾಧಾಬಾಯಿ ಖರ್ಗೆ, ಸಚಿವ ಡಾ. ಶರಣಪ್ರಕಾಶ ಪಾಟೀಲ, ಸಂಗಾನಂದ ಭಂತೇಜಿ ಇದ್ದರು

ನವವರ್ಣ

ನವರಾತ್ರಿಯ ಒಂಬತ್ತನೆಯ ದಿನ ಜಗನ್ಮಾತೆಯನ್ನು 'ಸಿದ್ಧಿಧಾತ್ರಿ'ಯ ಸ್ವರೂಪದಲ್ಲಿ ಪೂಜಿಸುವುದು ವಾಡಿಕೆ. ನಮಗೆ ಬೇಕಾದ ಎಲ್ಲ ವಿಧದ ಸಿದ್ಧಿಗಳನ್ನೂ ಕೊಡಬೇಕಾದವಳು ಆ ದೇವಿಯೇ ಹೌದು. ಈ ಸಿದ್ಧಿಗಳು ಎಂಟು ಎಂದೂ, ಹದಿನೆಂಟು ಎಂದೂ ಎರಡು ರೀತಿಯ ಎಣಿಕೆಯಿದೆ.
ನೇರಳೆ ಬಣ್ಣವು ಶ್ರದ್ಧೆ, ಸೌಂದರ್ಯ, ಶುಭ್ರತೆ, ಸಮಾಧಾನದಂಥ ಹಲವು ಸ್ತ್ರೀಸಹಜ ಸಿದ್ಧಿಗಳಿಗೆ ಸಂಕೇತ. ಈ ಬಣ್ಣದಲ್ಲಿ ಲೋಕಮಾತೆಯನ್ನು ಅರ್ಚಿಸಿದ್ದಾರೆ, ಈ ನಾರಿಯರು.

ಲಲಿತಾ ಸಹಸ್ರನಾಮಾವಳಿ, ಕೊಟ್ಟೂರೇಶ್ವರ ನಿಲಯ, ಎಂಸಿಇಸಿಎಚ್‌ಎಸ್ ಲೇಔಟ್, ಜಕ್ಕೂರು, ಬೆಂಗಳೂರು

ಸಂಗೀತ ದೀಪಕ್ ಮತ್ತು ಚಂದ್ರಿಕಾ ಕಲಾಳ್‌ಬಂಡಿ, ನಾಗರಭಾವಿ, ಬೆಂಗಳೂರು

ಲಕ್ಷ್ಮಿ ಆಚಾರ್ ಮತ್ತು ಸೋನು ಆಚಾರ್, ಉತ್ತರಹಳ್ಳಿ, ಬೆಂಗಳೂರು

ಛಾಯಾದೇವಿ ಎಸ್.ಜೆ ಹಾಗೂ ಸಹೋದ್ಯೋಗಿಗಳು, ಹೆಬ್ಬಾಳ, ಬೆಂಗಳೂರು

ಲಲಿತಾ ಸಹಸ್ರನಾಮ ಪಾರಾಯಣ ಮಾಡುವ ಗಾಯಕಿಯರು, ಪಟಾಲಮ್ಮ ದೇವಸ್ಥಾನ, ಬೆಂಗಳೂರು

ಆರ್. ಸವಿತಾ, ಸುಧಾಮನಗರ, ಗೋಕುಲ, ಬೆಂಗಳೂರು


ಕಮಲಾನಾಗರಾಜ ಮತ್ತು ವಿದ್ಯಾ ವಿನಿತ್, ವಿಜಯನಗರ, ಬೆಂಗಳೂರು

ಸಂಧ್ಯಾ ಮತ್ತು ಸ್ನೇಹಿತೆಯರು, ಕೆಂಗೇರಿ, ಬೆಂಗಳೂರು

ತೇಜು ರವಿ, ಜಾಲಹಳ್ಳಿ, ಬೆಂಗಳೂರು

ಕುಸುಮಾಂಜಲಿ ಪಟೇಲ್, ತಾತಗುಣಿ, ಬೆಂಗಳೂರು

ತೇಜು ರವಿ, ಜಾಲಹಳ್ಳಿ, ಬೆಂಗಳೂರು

ಸೀಮಾ, ಹಾಸನ

ಸುಜಾತ ಎಸ್. ಮುನಿರಾಜು, ಶೆಟ್ಟಿಹಳ್ಳಿ, ಬೆಂಗಳೂರು

ಸುಧಾ ಮತ್ತು ವರ್ಷಾ, ಬಿಇಎಂಎಲ್ ಲೇಔಟ್, ಬೆಂಗಳೂರು

ಸುಮಾ ಮತ್ತು ಕುಟುಂಬ, ಮಂಜುನಾಥನಗರ, ಬೆಂಗಳೂರು

ಯಶೋಧ.ಎಂ, ಬಂಡೇಮಠ, ಬೆಂಗಳೂರು

ರಾಣಿ ಮತ್ತು ಸ್ನೇಹಿತೆಯರು, ಕೆಂಗೇರಿ ಉಪನಗರ, ಬೆಂಗಳೂರು

ಶ್ರೀ ಶಿವಗಿರಿ ಅಯ್ಯಪ್ಪ ಭಜನಾ ಮಂಡಳಿ, ಕೊಣಾಲು, ದಕ್ಷಿಣ ಕನ್ನಡ

ಪದ್ಮಾವತಿ ವಿಜಯಕುಮಾರ್ ಮತ್ತು ಸ್ನೇಹಿತೆಯರು, ಅಗ್ರಹಾರ ದಾಸರಹಳ್ಳಿ, ಬೆಂಗಳೂರು

ಸ್ನೇಹ ನೀಲಪ್ಪಗೌಡ, ರಾಜಾಜಿನಗರ, ಬೆಂಗಳೂರು

ಶ್ರೀದೇವಿ ಮತ್ತು ಸ್ನೇಹಿತೆಯರು, ನೆಳಗದರಣಹಳ್ಳಿ, ಬೆಂಗಳೂರು

ಶಶಿಕಲಾ ಮತ್ತು ಸ್ನೇಹಿತೆಯರು, ಆನೇಕಲ್, ಬೆಂಗಳೂರು

ದಿಯಾ, ಬ್ಯಾಡರಹಳ್ಳಿ, ಬೆಂಗಳೂರು

ಲಿಷಾ, ತಿಪ್ಪೇನಹಳ್ಳಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ

ಲೋಕಿತಾ, ಧಾತ್ರಿ ಮತ್ತು ಪೃಥ್ವಿ, ಕಡೂರು, ಚಿಕ್ಕಮಗಳೂರು

ಸಾಕ್ಷಿ ಆರ್, ಎನ್‌ಆರ್ ಕಾಲೊನಿ, ಬೆಂಗಳೂರು

ಬಿಂದುಶ್ರೀ. ನೆಲಮಂಗಲ, ಬೆಂಗಳೂರು

ಪ್ರಶಾಂತಿ, ರಾಜಾಜಿನಗರ, ಬೆಂಗಳೂರು

ಮಂಜು ಮತ್ತು ಸ್ನೇಹಿತೆಯರು, ಡಿಆರ್‌ಡಿಒ ಟೌನ್‌ಶಿಪ್, ಸಿ.ವಿ. ರಾಮನ್ ನಗರ, ಬೆಂಗಳೂರು

ಶಶಿಕಲಾ ಮತ್ತು ಸ್ನೇಹಿತೆಯರು, ಮುತ್ಯಾಲನಗರ, ಬೆಂಗಳೂರು

ತುಂಗಾ ಸ್ತ್ರೀಶಕ್ತಿ ಸಂಘ, ತ್ಯಾಮಗೊಂಡ್ಲು, ಬೆಂಗಳೂರು ಗ್ರಾಮಾಂತರ

1. ನಗರದ ಹಲಸೂರು ಕೆರೆಯಲ್ಲಿ ಮಂಗಳವಾರ ಬಂಗಾಲಿ ಸಮುದಾಯದ ಜನರು ದುರ್ಗಾದೇವಿ ಮೂರ್ತಿ ವಿಸರ್ಜನೆ ಸಮಯದಲ್ಲಿ ಸಂಭ್ರಮದಿಂದ ನೃತ್ಯ ಮಾಡಿದರು 2. ಜೆ.ಸಿ.ನಗರದ ಮುನಿರೆಡ್ಡಿ ಪಾಳ್ಯದಲ್ಲಿ ದಸರಾ ಮೆರವಣಿಗೆಯಲ್ಲಿ ಮಹಿಳೆ ಬಲೂನು ಮಾರುತ್ತಿದ್ದರು 3. ಹಲಸೂರು ಕೆರೆಯಲ್ಲಿ ದುರ್ಗಾದೇವಿ ಮೂರ್ತಿ ವಿಸರ್ಜನೆ ನಡೆಯಿತು

–ಪ್ರಜಾವಾಣಿ ಚಿತ್ರಗಳು ಎಂ.ಎಸ್.ಮಂಜುನಾಥ್

ವಾಹನ– ಅಂಗಡಿಗಳ ಪೂಜೆ ● ಬಂಗಾಲಿ ಸಮುದಾಯದವರಿಂದ ದುರ್ಗೆ ಮೂರ್ತಿಗಳ ವಿಸರ್ಜನೆ ● ಇಸ್ಕಾನ್‌ನಲ್ಲಿ ತಾರಕ ಯಜ್ಞ

ವಿಜಯ ದಶಮಿ, ಆಯುಧ ಪೂಜೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರ್ಮಿಕ ಮತ್ತು ಸಂಸ್ಕೃತಿ ಆಚರಣೆಯ ಸಮ್ಮಿಲನವಾದ ನಾಡಹಬ್ಬವನ್ನು ಜನರು ಸಂಭ್ರಮದಿಂದ ಆಚರಿಸಿದರು. ಆಯುಧ ಪೂಜೆ ಮತ್ತು ವಿಜಯದಶಮಿ ಪ್ರಯುಕ್ತ ನಗರದ ಎಲ್ಲೆಡೆ ಸಂಭ್ರಮದ ವಾತಾವರಣ ಕಂಡು ಬಂತು. ಮನೆ ಪೂಜೆ, ವಾಹನ ಪೂಜೆ, ಅಂಗಡಿ ಪೂಜೆಗಳನ್ನು ಶ್ರದ್ಧಾಭಕ್ತಿಯಿಂದ ನಡೆಸಿದರು.

ಕಾರು, ಬೈಕು ಇನ್ನಿತರ ವಾಹನಗಳನ್ನು ತೊಳೆದು, ಹೂವು, ಬಾಳೆ ಕಂದುಗಳಿಂದ ಅಲಂಕರಿಸಿ ಬೂದು ಕುಂಬಳ ಒಡೆದು, ಕುಂಕುಮ ಹಚ್ಚಿ, ನಿಂಬೆ ಹಣ್ಣು ಚಕ್ರದಡಿಗೆ ಇಟ್ಟು ಆಯುಧ ಪೂಜೆ ನಡೆಸಿದರು. ಮನೆಯ ಮುಂದೆ ಆಕರ್ಷಕ ರಂಗೋಲಿ ಬಿಡಿಸಿ, ಮನೆ ದೇವರಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಿದರು. ಅಕ್ಕಪಕ್ಕದ ಮನೆಯವರು ಪರಸ್ಪರ ಸಿಹಿ ಹಂಚಿ ಶುಭ ಕೋರಿದರು.

ಬಂಗಾಲಿ ಸಮುದಾಯದ ಜನರು ನವರಾತ್ರಿ ಆಚರಣೆ ಸಂದರ್ಭದಲ್ಲಿ ಪ್ರತಿಷ್ಠಾಪಿಸಿದ್ದ ದುರ್ಗಾ ವಿಗ್ರಹಗಳನ್ನು ಹಲಸೂರು ಕೆರೆಯಲ್ಲಿ ವಿಸರ್ಜಿಸಿದರು. ಮೆರವಣಿಗೆಯಲ್ಲಿ ಸಾಗಿದ ಜನರು ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇಸ್ಕಾನ್‌ನಲ್ಲಿಯೂ ಶ್ರದ್ಧಾಭಕ್ತಿಯಿಂದ ವಿಜಯದಶಮಿ ಆಚರಿಸಲಾಯಿತು. ಕೃಷ್ಣ-ಬಲರಾಮ ದೇವರಿಗೆ, ರಾಮ-ಲಕ್ಷ್ಮಣ ವಿಗ್ರಹಗಳಿಗೆ ಅಲಂಕಾರ ಮಾಡಲಾಗಿತ್ತು ಮತ್ತು ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ವಿಜಯದಶಮಿ ಹಬ್ಬದ ಕುರಿತು ಪ್ರವಚನ ನಡೆಯಿತು. ಶ್ರೀರಾಮ ತಾರಕ ಯಜ್ಞ ಹಾಗೂ ಶ್ರೀರಾಮ ಕೀರ್ತನೆಗಳನ್ನು ಆಯೋಜಿಸಲಾಗಿತ್ತು.

ಮಲ್ಲೇಶ್ವರದ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ರಾತ್ರಿವರೆಗೂ ಭಕ್ತಾದಿಗಳು ಉದ್ದನೇ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು.

ಆರ್.ಟಿ. ನಗರದಲ್ಲಿ ಸಿದ್ಧಾರ್ಥ ಸಾಂಸ್ಕೃತಿಕ ಪರಿಷತ್ ವತಿಯಿಂದ ದೇವಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಹಬ್ಬದ ಸಂಭ್ರಮದಿಂದ ಮಾರುಕಟ್ಟೆ ಪ್ರದೇಶಗಳು ಸಹ ಕಳೆಗಟ್ಟಿದ್ದವು. ನಗರದ ಕೆ.ಆರ್.ಮಾರುಕಟ್ಟೆ, ಯಶವಂತಪುರ, ಮಲ್ಲೇಶ್ವರ ಮುಂತಾದ ಪ್ರದೇಶಗಳಲ್ಲಿ ಜನಜಂಗುಳಿ ಕಂಡು ಬಂತು.

ಉತ್ತರ ಕರ್ನಾಟಕ ನಾಗರಿಕರ ಅಭಿವೃದ್ಧಿ ಸಂಘವು ರಾಜಾಜಿನಗರದ ಬಸವೇಶ್ವರ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ ಉತ್ತರ ಕರ್ನಾಟಕದ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ‘ಬನ್ನಿ ಬಂಗಾರ ಹಬ್ಬ’ ಆಕರ್ಷಕವಾಗಿತ್ತು.

ಜೆ.ಸಿ.ನಗರದ ಮುನಿರೆಡ್ಡಿ ಪಾಳ್ಯದಲ್ಲಿ ಮಂಗಳವಾರ ರಾತ್ರಿ ನಡೆದ ದಸರಾ ಮೆರವಣಿಗೆಯಲ್ಲಿ ಗಮನ ಸೆಳೆದ ಪಲ್ಲಕ್ಕಿ ಉತ್ಸವ –ಪ್ರಜಾವಾಣಿ ಚಿತ್ರ:

ನಗರದ ಬಹುತೇಕ ರಸ್ತೆಗಳಲ್ಲಿ ಕಸದ ರಾಶಿ

ಬಾಳೆ ಕಂದು, ಬೂದು ಕುಂಬಳಕಾಯಿ ಸಹಿತ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಕೆಲವು ದಿನಗಳಿಂದ ಬೆಂಗಳೂರಿನ ಬಹುತೇಕ ರಸ್ತೆಗಳ ಬದಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಮಂಗಳವಾರ ವ್ಯಾಪಾರ ಮುಗಿಸಿ ಕಸವನ್ನು ಅಲ್ಲೇ ಬಿಟ್ಟು ಹೋಗಿದ್ದರಿಂದ ಅಲ್ಲಲ್ಲಿ ಕಸದ ರಾಶಿ ಬಿದ್ದಿರುವುದು ಕಂಡು ಬಂತು.

ಉತ್ತರ ಕರ್ನಾಟಕ ನಾಗರಿಕರ ಅಭಿವೃದ್ಧಿ ಸಂಘದ ವತಿಯಿಂದ ರಾಜಾಜಿನಗರದ ಬಸವೇಶ್ವರ ಶಾಲೆಯ ಆವರಣದಲ್ಲಿ ‘ಬನ್ನಿ ಬಂಗಾರ ಹಬ್ಬವನ್ನು’ ಆಯೋಜಿಸಲಾಗಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ ಪಾಟೀಲ್ , ಕೆಎಸ್ ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಉಮಾಶಂಕರ ಅಪಾಲಿ, ಸಂಘದ ಅಧ್ಯಕ್ಷರಾದ ಮುರುಗೇಶ ಜವಳಿ, ಪದಾಧಿಕಾರಿಗಳ ಶಂಕರ ಪಾಟೀಲ್, ದಯಾನಂದ ಪಾಟೀಲ್, ಶಿವಕುಮಾರ್ ಸರಶೆಟ್ಟಿ, ಕಲ್ಲಪ್ಪ ನವಣಿ, ಶಂಕರ ಪಾಗೋಜಿ, ತಿಮ್ಮಣ್ಣ ಹೊಸೂರು ಇದ್ದರು.

ವೀರಭದ್ರ ಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ಕೈ ಜೋಡಿಸಲು ಮನವಿ

ಆಚಾರ–ವಿಚಾರ ಮುಖ್ಯ, ಪ್ರಚಾರವಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಕನಕಪುರ: ‘ನನಗೆ ಆಚಾರ-ವಿಚಾರ ಮುಖ್ಯವೇ ಹೊರತು, ಪ್ರಚಾರವಲ್ಲ. ಧರ್ಮ ಯಾವುದಾದರೂ ತತ್ವವೊಂದೇ. ನಾಮ ನೂರಾದರೂ ದೈವ ಒಂದೇ. ಪೂಜೆ ಯಾವುದಾದರೂ ಭಕ್ತಿಯೊಂದೇ. ಕರ್ಮ ಯಾವುದಾದರೂ ನಿಷ್ಠೆಯೊಂದೇ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಕಸಬಾ ಹೋಬಳಿ ಶಿವನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದ ವೀರಭದ್ರಸ್ವಾಮಿ ದೇವಾಲಯದ ಜಿರ್ಣೋದ್ದಾರದ ಭೂಮಿ ಪೂಜೆ ಮತ್ತು ಶಿಲಾ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಂದೂ ಧರ್ಮದಲ್ಲಿ ಸಾವಿರಾರು ದೇವರುಗಳನ್ನು ಪೂಜಿಸುವ ಆಚರಣೆಗಳು ಮತ್ತು ನಂಬಿಕೆಗಳನ್ನು ನಾವೆಲ್ಲ ಪಾಲಿಸಿಕೊಂಡು ಬಂದಿದ್ದೇವೆ. ಬೇರೆಯವರೆಲ್ಲಾ ಒಂದೇ ದೇವರು ಪೂಜಿಸುತ್ತಾರೆ. ವೀರಭದ್ರ ಶಿವನ ಸ್ವರೂಪ. ದೇವರುಗಳನ್ನೇ ಕಾಪಾಡುವ ದೇವರು ಈತ. ಶಿವನ ದೇವಾಲಯ ಇಲ್ಲಿ ನಿರ್ಮಾಣವಾಗುತ್ತಿದ್ದು, ಅದಕ್ಕೆ ಎಲ್ಲರೂ ಕೈ ಜೋಡಿಸೋಣ’ ಎಂದರು.

‘ದೇವಸ್ಥಾನಕ್ಕೆ ಎಷ್ಟು ಸಹಾಯ ಮಾಡುತ್ತೇನೆ ಎಂದು ಸಾರ್ವಜನಿಕವಾಗಿ ಹೇಳುವುದಿಲ್ಲ. ನಂತರ ಅದನ್ನೇ ಒಂದು ದೊಡ್ಡ ಸುದ್ದಿ ಮಾಡುತ್ತಾರೆ. ಈ ದೇವಸ್ಥಾನದಲ್ಲಿ ಪ್ರತಿ ಕುಟುಂಬದ ಹಣವಿರಬೇಕು. ಡಿಸಿಎಂ ಸ್ಥಾನ ಬೆಂಗಳೂರಿಗೆ ಸೀಮಿತ. ಇದು ನನ್ನ ಊರಿನ ಕೆಲಸ. ನಮ್ಮ ಕ್ಷೇತ್ರದ ಯಾವುದೇ ಕೆಲಸವಿದ್ದರೂ, ನಾವು ಹಿಂಜರಿಯುವುದಿಲ್ಲ. ಹಾಗಾಗಿ, ಮೈಸೂರಿನಲ್ಲಿ ಪ್ರಮುಖ ಕೆಲಸವಿದ್ದರೂ ನಾನು ಕ್ಷೇತ್ರಕ್ಕೆ ಬಂದೆ’ ಎಂದರು.

‘ಕ್ಷೇತ್ರದಲ್ಲಿ ಎಂಟು ಸಲ ಗೆದ್ದಿರುವ ನಾನು, ಮೊದಲ ಬಾರಿಗೆ ಧಾರ್ಮಿಕ ಕೆಲಸಕ್ಕೆ ಬಂದಿದ್ದೇನೆ. ಹೆಚ್ಚು ಕೆಲಸ ಮಾಡುವ ಶಕ್ತಿಯನ್ನು ಆ ದೇವರು ನನಗೆ ಮತ್ತು ನಿಮಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಉದಾರ ಮನಸ್ಸಿನಿಂದ ಈ ದೇವಸ್ಥಾನ ಕಟ್ಟಲು ಎಲ್ಲರೂ ಸಹಾಯ ಮಾಡಬೇಕು’ ಎಂದು ಮನವಿ ಮಾಡಿದರು.

‘ಕಬ್ಬಾಳಮ್ಮನ ದೇವಸ್ಥಾನ ಜೀರ್ಣೋದ್ಧಾರ ಮಾಡುವ ವೇಳೆ, ಒಂದಷ್ಟು ಜನ ದೇವಿಯನ್ನು ಮುಟ್ಟಬೇಡಿ, ಸುಟ್ಟು ಹೋಗುತ್ತೀರಿ ಎಂದಿದ್ದರು. ಈ ಕುರಿತು, ನಾನು ನೊಣವಿನಕೆರೆ ಸ್ವಾಮೀಜಿಗಳ ಬಳಿ ಪ್ರಸ್ತಾಪ ಮಾಡಿದಾಗ, ಒಬ್ಬರ ಹೆಸರು ಸೂಚಿಸಿ ಇವರ ಕಡೆಯಿಂದ ನೆರವೇರಿಸಲು ಭಿನ್ನ ಮಾಡು ಎಂದರು. ಈಗ ಅಲ್ಲಿ ಅದ್ಭುತವಾದ ದೇವಸ್ಥಾನ ನಿರ್ಮಾಣವಾಗಿದೆ’ ಎಂದು ತಿಳಿಸಿದರು.

ಹಿರಿಯ ನಾಯಕ ಪಿ.ಜಿ.ಆರ್. ಸಿಂಧ್ಯಾ ಮಾತನಾಡಿ, ‘ನಾನು ಈ ದೇವರ ವರ ಪ್ರಸಾದ. ಇಲ್ಲಿ ಹಲವಾರು ಪವಾಡಗಳ ನಡೆದಿರುವ ಇತಿಹಾಸವಿದೆ. ವೀರಭದ್ರನನ್ನು ನಂಬಿ ನಿಮಗೆ ಎಲ್ಲವೂ ಒಳ್ಳೆಯದಾಗಲಿದೆ. ನೀವು ಬೇಡಿದ್ದು ನಿಮಗೆ ಸಿಗಲಿದೆ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉದ್ಘಾಟನೆಯನ್ನು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ ನೆರವೇರಿಸಿದರು.

ದೇವಸ್ಥಾನದ ನಿರ್ಮಾಣದ ಜವಾಬ್ದಾರಿ ನಿಭಾಯಿಸುತ್ತಿರುವ ಆದರ್ಶ ಗ್ರೂಪ್‌ನ ಜಯಂಶಕರ್, ಕರುಣೇಶ್, ತಹಶೀಲ್ದಾರ್ ಡಾ. ಸ್ಮಿತಾ ರಾಮ್, ಗ್ರಾನೈಟ್ ಉದ್ಯಮಿ ಹೈದರ್ ಅಲಿ ಸೇರಿದಂತೆ ಗ್ರಾಮದ ಮುಖಂಡರು, ದೇವಸ್ಥಾನ ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಇತರರು ಇದ್ದರು.

ಕನಕಪುರ ಶಿವನಹಳ್ಳಿ ಗ್ರಾಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವೀರಭದ್ರ ಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕೆ ಭೂಮಿ ಪೂಜೆ ನೆರವೇರಿಸಿದರು

‘ಉಳಿಸಲು ಪ್ರಯತ್ನಿಸಿದರೂ ಆಗಲಿಲ್ಲ’

‘ಶಿವನಹಳ್ಳಿಯ ವೀರಭದ್ರ ದೇವಸ್ಥಾನ ಉಳಿಸಲು ಸಾಕಷ್ಟು ಪ್ರಯತ್ನ ಮಾಡಲಾಯಿತು. ಸಂಸದ ಡಿ.ಕೆ. ಸುರೇಶ್ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬಳಿ ಮಾತನಾಡಿದರೂ, ಯೋಜನೆಯ ನಕ್ಷೆ ಬದಲಾಯಿಸಲು ಸಾಧ್ಯವಾಗಲಿಲ್ಲ. ಈಗ ಆ ದೇವರ ಅನುಗ್ರಹದಿಂದ ಹೊಸ ದೇವಸ್ಥಾನ ನಿರ್ಮಾಣವಾಗುತ್ತಿದೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಎಲ್ಲರ ಕೈಗಳು ಇರುವುದು ಕಾಯಕ ಮಾಡಲು ಮತ್ತು ದಾನ ಮಾಡಲು. ಶಿವಕುಮಾರ್, ಸಿಂಧ್ಯಾಎಲ್ಲರ ಕೈಗಳು ಇರುವುದೇ ದಾನ ಮಾಡಲು. ದೇವರ ಕೆಲಸ ಮಾಡುವುದು ನಮ್ಮೆಲ್ಲರ ಕರ್ತವ್ಯ. ಕನಕಪುರ ತಾಲೂಕಿನಲ್ಲಿ ಸುಮಾರು 300ಕ್ಕೂ ಹೆಚ್ಚು ದೇವಸ್ಥಾನಗಳಿಗೆ ಹೊಸ ರೂಪ ಕೊಟ್ಟಿದ್ದೇವೆ. ಈ ಕ್ಷೇತ್ರದ ಪ್ರತಿನಿಧಿಯಾದ ಬಳಿಕ ಮಾಡಿರುವ ದೇವಾಲಯಗಳ ಜೀರ್ಣೋದ್ಧಾರ ಕುರಿತು ಪುಸ್ತಕವನ್ನೇ ಬರೆಯಬಹುದು’ ಎಂದು ಹೇಳಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಮಾತನಾಡಿದರು

ಹಲವು ಹೊಸ ಯೋಜನೆ ಘೋಷಣೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ‘ಮೈಸೂರಿನಲ್ಲಿ ವಿಜ್ಞಾನ ಮತ್ತು ಅಧ್ಯಾತ್ಮಕ್ಕೆ ಸಂಬಂಧಿಸಿದ ಹೊಸ ವಸ್ತು ಸಂಗ್ರಹಾಲಯ ಆರಂಭ, ಉಡುಪಿಯಲ್ಲಿ ಆಯುರ್ವೇದ ಕಾಲೇಜಿಗೆ ನೂತನ ಕಟ್ಟಡ ನಿರ್ಮಾಣ, ಧಾರವಾಡದಲ್ಲಿ ಕ್ಯಾನ್ಸರ್ ಚಿಕಿತ್ಸಾ ಘಟಕ ಮತ್ತು ಫಾರ್ಮಸಿ ಕಾಲೇಜು ಆರಂಭಿಸುವ ಯೋಜನೆಗಳನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಾಗುವುದು’ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ತಿಳಿಸಿದರು.

ತಮ್ಮ ಪಟ್ಟಾಭಿಷೇಕದ 56ನೇ ವರ್ಧಂತ್ಯುತ್ಸವದ ಅಂಗವಾಗಿ ಧರ್ಮಸ್ಥಳದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ₹2.5 ಕೋಟಿ ಅನುದಾನವನ್ನು ಬೀದರ್ ಜಿಲ್ಲೆಯ ಹೈನುಗಾರಿಕೆ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ. ಹಾಲು ಮತ್ತು ಹಣ್ಣು, ರೈತರಿಗೆ ನಿತ್ಯವೂ ಆದಾಯ ಕೊಡುವ ಮೂಲಗಳಾಗಿದ್ದು, ಇವುಗಳ ಉತ್ಪಾದನೆಗೆ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಪ್ರೋತ್ಸಾಹ ನೀಡಲಾಗುತ್ತದೆ’ ಎಂದು ತಿಳಿಸಿದರು.

‘ಧರ್ಮಸ್ಥಳದಲ್ಲಿ ಮೂರು ಹೊಸ ಕಲ್ಯಾಣಮಂಟಪ ನಿರ್ಮಿಸಲಾಗುವುದು. ರಜತಾದ್ರಿ ವಸತಿಗೃಹಕ್ಕೆ 200 ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗುವುದು. ಶಿಥಿಲಗೊಂಡಿರುವ ಇನ್ನಷ್ಟು ಕೆರೆಗಳಿಗೆ ಕಾಯಕಲ್ಪ ನೀಡಲಾಗುವುದು ಎಂದರು.

‘ಮಂಜುನಾಥ ಸ್ವಾಮಿಯ ಅನುಗ್ರಹ, ಕಾರ್ಯಕರ್ತರು ಮತ್ತು ಸಿಬ್ಬಂದಿಯ ನಿಷ್ಠೆ ಮತ್ತು ಕಾರ್ಯತತ್ಪರತೆಯಿಂದ ಎಲ್ಲ ಯೋಜನೆಗಳು ಮತ್ತು ಯೋಚನೆಗಳು ಯಶಸ್ವಿಯಾಗುತ್ತಿವೆ’ ಎಂದರು.

ಹೇಮಾವತಿ ವಿ. ಹೆಗ್ಗಡೆ, ಪ್ರೊ. ಎಸ್. ಪ್ರಭಾಕರ್, ಶಾಸಕ ಕೆ. ಹರೀಶ್ ಪೂಂಜ, ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಡಿ. ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಡಿ.ರಾಜೇಂದ್ರ ಕುಮಾರ್, ನೀತಾ ರಾಜೇಂದ್ರ ಕುಮಾರ್, ಶ್ರದ್ಧಾ ಅಮಿತ್, ಅಮಿತ್ ಇದ್ದರು.

ಚನ್ನಮ್ಮನ ಕಿತ್ತೂರು ಉತ್ಸವದಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಒತ್ತಾಯ

‘ಸರ್ದಾರ್ ಗುರುಸಿದ್ಧಪ್ಪ ಬಲಿದಾನ ದೇಶ ಗುರುತಿಸಲಿ’

ಪ್ರಜಾವಾಣಿ ವಾರ್ತೆ

ಕಿತ್ತೂರು ರಾಣಿ ಚನ್ನಮ್ಮನ ವೇದಿಕೆ (ಚನ್ನಮ್ಮನ ಕಿತ್ತೂರು): ‘ಕಿತ್ತೂರು ಸೇನಾಧಿಪತಿ ಆಗಿದ್ದ ಸರ್ದಾರ್ ಗುರುಸಿದ್ಧಪ್ಪ ಸ್ವಾತಂತ್ರ್ಯ ಹೋರಾಟಕ್ಕೆ ಹುತಾತ್ಮಗೊಂಡ ಮೊದಲ ಯೋಧ. ಅವರ ತ್ಯಾಗ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಗಬೇಕು’ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆಗ್ರಹಿಸಿದರು.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಕೋಟೆ ಆವರಣದಲ್ಲಿ ಸೋಮವಾರ ಆರಂಭಗೊಂಡ ಮೂರು ದಿನಗಳ ರಾಜ್ಯಮಟ್ಟದ ಕಿತ್ತೂರು ಉತ್ಸವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

‘ಕಿತ್ತೂರು ಕ್ರಾಂತಿಯ ಬಳಿಕ ಬ್ರಿಟಿಷರು ಮೊದಲು ಸರ್ದಾರ್ ಗುರುಸಿದ್ಧಪ್ಪ ಅವರನ್ನು ಕೊಲ್ಲುತ್ತಾರೆ. ಕಿತ್ತೂರು ಕ್ರಾಂತಿಯನ್ನು ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಮತ್ತು ಗುರುಸಿದ್ದಪ್ಪ ಮೊದಲ ಹೋರಾಟಗಾರನಾಗಿ ಪರಿಗಣಿಸಬೇಕು’ ಎಂದರು.

ಇದಕ್ಕೂ ಮುನ್ನ ಉತ್ಸವಕ್ಕೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ‘ಮುಂದಿನ ವರ್ಷ ಕಿತ್ತೂರು ವಿಜಯೋತ್ಸವದ 200ನೇ ವರ್ಷವಾಗಲಿದ್ದು, ಸರ್ಕಾರ ಅದ್ಧೂರಿಯಾಗಿ ಆಚರಿಸಲಿದೆ' ಎಂದರು.

ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ‘ಮುಂದಿನ ವರ್ಷದಿಂದ ಇದು ರಾಷ್ಟ್ರೀಯ ವಿಜಯೋತ್ಸವ ಆಗಬೇಕು. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ಸಚಿವರ ಜತೆಗೆ ನಾವೂ ಇರುತ್ತೇವೆ’ ಎಂದರು.

ಕಿತ್ತೂರಿನ ರಾಜಗುರು, ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಬಾಬಾಸಾಹೇಬ್ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಕಿತ್ತೂರು ಚನ್ನಮ್ಮನ ವಂಶಸ್ಥರಾದ ತೊಲಗಿಯ ಮಲ್ಲಸರ್ಜ ಚಂದ್ರಶೇಖರ ದೇಸಾಯಿ ಅವರನ್ನು ಸನ್ಮಾನಿಸಲಾಯಿತು.

ಉತ್ಸವದಲ್ಲಿ ಮಂಗಳವಾರ ನಡೆದ ‘ಕಿತ್ತೂರು ಸಂಸ್ಥಾನ’ ವಿಚಾರಗೋಷ್ಠಿಯಲ್ಲಿ ಸಂಶೋಧಕ ಸಂತೋಷ ಹಾನಗಲ್ ಮಾತನಾಡಿ, ‘ರಾಣಿ ಚನ್ನಮ್ಮ ಜೈನ ಸಮುದಾಯದಲ್ಲಿ ಜನ್ಮತಾಳಿದಳು, ಖಡ್ಗ ಎತ್ತಿಲ್ಲ ಎಂದು ಕೆಲವರಿಂದ ಅಭಿಪ್ರಾಯ ವ್ಯಕ್ತವಾಗಿವೆ. ಹಾಗಾಗಿ ಕಿತ್ತೂರು ಸಂಸ್ಥಾನದ ಬಗ್ಗೆಯೂ ಸಮಗ್ರ ಅಧ್ಯಯನ ಆಗಬೇಕು’ ಎಂದರು.

ಕಿತ್ತೂರು ಉತ್ಸವದಲ್ಲಿ ವಿದುಷಿ ಮಂಜುಳಾ ರಮೇಶ ಹಾಗೂ ತಂಡದವರು ಮಹಿಷಾಸುರ ಮರ್ದಿನಿ ನೃತ್ಯ ಪ್ರದರ್ಶಿಸಿದರು

ಜಾತೀಯತೆ, ಪ್ರಾದೇಶಿಕತೆ ಕಿತ್ತೊಗೆಯಿರಿ: ಮೋದಿ

ನವದೆಹಲಿ (ಪಿಟಿಐ): ಸಮಾಜಕ್ಕೆ ಅಂಟಿರುವ ‘ಜಾತೀಯತೆ’ ಮತ್ತು ‘ಪ್ರಾದೇಶಿಕತೆ’ಯನ್ನು ಬೇರು ಸಮೇತ ಕಿತ್ತೊಗೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ದಸರಾ ಹಬ್ಬವು ದೇಶದಲ್ಲಿರುವ ಎಲ್ಲ ದುಷ್ಟಶಕ್ತಿಗಳ ವಿರುದ್ಧ ದೇಶಭಕ್ತಿಗೆ ಸಿಗುವ ವಿಜಯದ ಸಂಕೇತವಾಗಬೇಕು ಎಂದು ಹೇಳಿದರು.

ಮಂಗಳವಾರ ದಸರಾ ಕಾರ್ಯಕ್ರಮದಲ್ಲಿ ಸೇರಿದ್ದ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಶತಮಾನಗಳ ಕಾಯುವಿಕೆ ನಂತರ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಸಾಕ್ಷಿಯಾಗಿದ್ದೇವೆ. ಇದು ನಮ್ಮೆಲ್ಲರ ಅದೃಷ್ಟ. ಮಂದಿರ ನಿರ್ಮಾಣ ಕಾಮಗಾರಿ ಕೆಲವೇ ತಿಂಗಳುಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದು ಹೇಳಿದರು.

‘ಭಾರತದ ಚಂದ್ರಯಾನ ಯೋಜನೆ ಯಶಸ್ವಿ ಯಾಗಿದೆ, ಹೊಸ ಸಂಸತ್ ಭವನ ಉದ್ಘಾಟನೆಯಾಗಿದೆ ಮತ್ತು ಮಹಿಳಾ ಮೀಸಲಾತಿ ಮಸೂದೆಯು ಸಂಸತ್ತಿನ ಎರಡೂ ಸದನದಲ್ಲಿ ಅಂಗೀಕಾರವಾಗಿ, ರಾಷ್ಟ್ರಪತಿಯೂ ಅಂಕಿತ ಹಾಕಿದ್ದಾರೆ. ಈ ಸುಸಂದರ್ಭದಲ್ಲಿ ಮಂದಿರ ನಿರ್ಮಾಣವಾಗುತ್ತಿದೆ’ ಎಂದರು.

ಒಂದು ಬಡ ಕುಟುಂಬದ ಸಾಮಾಜಿಕ-ಆರ್ಥಿಕ ಸ್ಥಾನಮಾನ ಹೆಚ್ಚಿಸುವುದೂ ಸೇರಿದಂತೆ 10 ಸತ್ಕಾರ್ಯಗಳನ್ನು ಮಾಡುವುದಾಗಿ ಪ್ರತಿಜ್ಞೆ ಮಾಡಿ. ಪ್ರತಿಯೊಬ್ಬರೂ ಅಭಿವೃದ್ಧಿಯಾದರೆ ದೇಶವೂ ಅಭಿವೃದ್ಧಿಯಾಗಲಿದೆ ಎಂದು ಹೇಳಿದರು.



ನವದೆಹಲಿಯಲ್ಲಿ ದಸರಾ ಸಂಭ್ರಮ ಆಚರಣೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿ –ಪಿಟಿಐ ಚಿತ್ರ

ದುರ್ಗಾ ಪೂಜೆ ಪೆಂಡಾಲ್‌ನಲ್ಲಿ ಕಾಲ್ತುಳಿತ: 3 ಸಾವು

ಗೋಪಾಲ್‌ಗಂಜ್ (ಪಿಟಿಐ): ಬಿಹಾರದ ಗೋಪಾಲ್‌ಗಂಜ್ ಜಿಲ್ಲೆಯ ರಾಜಾ ದಳ ಪ್ರದೇಶದಲ್ಲಿ ಸ್ಥಾಪಿಸಿದ್ದ ದುರ್ಗಾ ಪೂಜೆಯ ಪೆಂಡಾಲ್‌ನಲ್ಲಿ ಕಾಲ್ತುಳಿತ ಉಂಟಾಗಿ ಬಾಲಕ ಹಾಗೂ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಕಾಲ್ತುಳಿತದಿಂದಾಗಿ ಹಲವು ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಪೂಜೆಯ ಪ್ರಸಾದ ಸ್ವೀಕರಿಸಲು ಭಕ್ತರು ಸರದಿಯಲ್ಲಿ ನಿಂತಿದ್ದರು, ಈ ವೇಳೆ ಮಗುವೊಂದು ಕೆಳಗೆ ಬಿದ್ದಿದೆ. ಮಗುವನ್ನು ರಕ್ಷಿಸಲು ಇಬ್ಬರು ಮಹಿಳೆಯರು ಯತ್ನಿಸುತ್ತಿದ್ದಾಗ ಕಾಲ್ತುಳಿತ ಉಂಟಾಗಿದೆ ಎಂದು ವಿವರಿಸಿದ್ದಾರೆ.

ನವವರ್ಣ

ಸಾಕ್ಷಿ ಆರ್, ಎನ್‌ಆರ್ ಕಾಲೊನಿ, ಬೆಂಗಳೂರು

ಭಾವನಾ ಮತ್ತು ಮಗಳು, ಕೆಂಗೇರಿ ಉಪನಗರ, ಬೆಂಗಳೂರು

ಆದ್ಯಾ, ನಾಗದೇವನಹಳ್ಳಿ, ಬೆಂಗಳೂರು

ಅನ್ನಪೂರ್ಣೇಶ್ವರಿ ಮಹಿಳಾ ಬಳಗ, ಬಿಡದಿ, ಬೆಂಗಳೂರು

ಸುಜಾತ ಮತ್ತು ಗೆಳತಿಯರು, ಬೆಂಗಳೂರು

ಅಶ್ವಿನಿ, ಸಪ್ನಾ ಮತ್ತು ಸೃಷ್ಟಿ, ಚಿಂತಕೋಟೆ, ಕಲಬುರಗಿ

ಮೇಹಾ, ಬೆಂಗಳೂರು

ತೇಜಸ್ವಿನಿ ಮತ್ತು ಮಕ್ಕಳು, ಮುತ್ಯಾಲನಗರ, ಬೆಂಗಳೂರು

ಸಿರಿ ಅನಂತ್, ಆನೇಕಲ್, ಬೆಂಗಳೂರು

ಸ್ನೇಹಿತೆಯರು, ಸುರತ್ಕಲ್, ದಕ್ಷಿಣ ಕನ್ನಡ

ಮನೋಜ್ಞ ಜಗದೀಶ್, ಬಿಎಚ್‌ಸಿಎಸ್ ಲೇಔಟ್, ಉತ್ತರಹಳ್ಳಿ, ಬೆಂಗಳೂರು

ಅನು ಮತ್ತು ವಿಜು, ದೀಪಾಂಜಲಿ ನಗರ, ಬೆಂಗಳೂರು

ಕಲ್ಪನಾ ಮತ್ತು ಸ್ನೇಹಿತೆಯರು, ಬೆಂಗಳೂರು

ಸಿಬ್ಬಂದಿ, ಡಿಎಡಿಸಿ ಡಾನ್ಸ್ ತರಗತಿ, ಹೆಲ್ತ್ ಲೇಔಟ್, ಬೆಂಗಳೂರು

ರಮಾ ಮತ್ತು ಗೆಳತಿಯರು, ವಿದ್ಯಾಪೀಠ, ಬೆಂಗಳೂರು

ಗೀತಾ ಮತ್ತು ಸ್ನೇಹಿತೆಯರು, ನಾಗರಭಾವಿ, ಬೆಂಗಳೂರು

ಭೂಮಿಕಾ ಮಹಿಳಾ ಸಂಘ, ಗಿರಿನಗರ, ಬೆಂಗಳೂರು

ಕಾತ್ಯಾಯಿನಿ ರವೀಂದ್ರ, ಅಬ್ಬಿಗೆರೆ, ಬೆಂಗಳೂರು

ಗಾಯತ್ರಿ ಮತು ಸಂಗೀತ, ಬೆಂಗಳೂರು

ಗೀತಾ ಮತ್ತು ಸ್ನೇಹಿತೆಯರು, ನಾಗರಭಾವಿ, ಬೆಂಗಳೂರು

ಹಾನ್ವಿಕಾ, ಹೆಬ್ಬಗೋಡಿ, ಬೆಂಗಳೂರು

ಕವಿತಾ ಮತ್ತು ಸಂಗಡಿಗರು, ರಾಮಸ್ವಾಮಿಪಾಳ್ಯ, ಬೆಂಗಳೂರು

ಶೀಲಾ ಮತ್ತು ಗೆಳತಿಯರು, ನಾಗರಬಾವಿ, ಬೆಂಗಳೂರು

ಕೃತಿಕಾ, ವೈ.ಎಂ, ಮಲ್ಲತ್ತಹಳ್ಳಿ, ಬೆಂಗಳೂರು

ಸುಧಾ ಮತ್ತು ಕಿಟ್ಟಿ ಪಾರ್ಟಿ ಗೆಳತಿಯರು, ನಾಗರಬಾವಿ, ಬೆಂಗಳೂರು

ಶ್ಯಾಮಲಾ ಮತ್ತು ಸ್ನೇಹಿತೆಯರು, ಜಯನಗರ, ಬೆಂಗಳೂರು

ಸದಸ್ಯರು, ವಾಣಿ ಶ್ಲೋಕಾ ಸಂಘ, ಬಿಟಿಎಂ ಲೇಔಟ್, ಬೆಂಗಳೂರು

ಅಷ್ಟಲಕ್ಷ್ಮಿ ಗೆಳತಿಯರು, ಹೇರೋಹಳ್ಳಿ, ಬೆಂಗಳೂರು

ಹಿತಿಕ್ಷಾ ಎಲ್, ಕುರುಬರಹಳ್ಳಿ, ಬೆಂಗಳೂರು

ಸುಲೋಚನಾ ಗುರುಪ್ರಸಾದ್, ಜಯನಗರ, ಬೆಂಗಳೂರು

ಚಂದ್ರಕಲಾ ಮತ್ತು ಸ್ನೇಹಿತೆಯರು, ರುಕ್ಮಿಣಿ ನಗರ, ಬೆಂಗಳೂರು

ಮೈರಾ. ಎ, ಬೈರಸಂದ್ರ, ಸಿ.ವಿ. ರಾಮನ್ ನಗರ, ಬೆಂಗಳೂರು

ಸೌಮ್ಯಾ, ಡಿ ಗ್ರೂಪ್ ಲೇಔಟ್, ಬೆಂಗಳೂರು

ಶ್ರೀಯಾ, ಹೆಬ್ಬಗೋಡಿ, ಬೆಂಗಳೂರು

ಪ್ರಾರ್ಥನಾ ಮತ್ತು ವೇದಿಕಾ, ನಾಗಸಂದ್ರ, ಬೆಂಗಳೂರು

ರಾಧಾ ಮತ್ತು ಸದಸ್ಯರು, ಬಾಲಾಜಿ ಲೇಔಟ್, ಬೆಂಗಳೂರು



ಗುರುತ್ವಬಲಕ್ಕೆ ದಕ್ಕಿದ ಆ್ಯಂಟಿ ಮ್ಯಾಟರ್

ನೇಸರ ಕಾಡನಕುಪ್ಪೆ

'ಆ್ಯಂಟಿ ಮ್ಯಾಟರ್' ಕುರಿತಾದ ಚರ್ಚೆ ಈಚಿನ ದಿನಗಳಲ್ಲಿ ಸಾಕಷ್ಟು ನಡೆಯುತ್ತಿದೆ. ಸಾಂಪ್ರದಾಯಿಕ ಇಂಧನಮೂಲಗಳು ಗರಿಷ್ಠ 50 ವರ್ಷಗಳು ಮಾತ್ರ ಸಿಗಬಲ್ಲದು ಎಂಬ ಅಂದಾಜಿದೆ. ಹಾಗಾದರೆ, ಮುಂದಿನ ದಿನಗಳ ಗತಿಯೇನು ಎಂಬುದು ಬಹು ಮುಖ್ಯ ಪ್ರಶ್ನೆ. ನವೀಕರಿಸಬಹುದಾದ ಶಕ್ತಿಮೂಲಗಳಾದ ಸೌರಶಕ್ತಿ, ವಾಯುಶಕ್ತಿಯ ಮೂಲಗಳು ಭೂಮಿಯ ಮೇಲಿನ ಬಹುದೊಡ್ಡ ಜನಸಂಖ್ಯೆಯ ಇಂಧನ ಬೇಡಿಕೆಯನ್ನು ಈಡೇರಿಸಲಾರವು. ಆದರೆ, ಈ ಕೊರತೆಯನ್ನು ನೀಗಿಬಲ್ಲ ಭರವಸೆಯ ಇಂಧನಮೂಲ 'ಆ್ಯಂಟಿ ಮ್ಯಾಟರ್'. ಆದರೆ, ಇಂಧನಮೂಲ ನಮ್ಮ ಭೂಮಿಯ ಮೇಲೆ ಸಿಗದೇ ಇರುವುದು ದೊಡ್ಡ ದುರಂತ!

ಸ್ವಿಡ್ಜರ್ಲೆಂಡ್‌ನಲ್ಲಿರುವ 'ಸಿಇಆರ್‌ಎನ್' (ಯೂರೋಪ್ ಪರಮಾಣು ಸಂಶೋಧನಾ ಸಮಿತಿ) ವಿಜ್ಞಾನಿಗಳು 90ರ ದಶಕದಲ್ಲಿಯೇ ಕೃತಕವಾಗಿ ಕೆಲವೇ ಕೆಲವು ಮೈಕ್ರೋ ಗ್ರಾಂ ಆ್ಯಂಟಿ ಮ್ಯಾಟರ್ ಅನ್ನು ತಮ್ಮ ಪ್ರಯೋಗಾಲಯದಲ್ಲಿ ಸೃಷ್ಟಿಸಿದ್ದಾರೆ. ಆದರೆ, ಈ ಆ್ಯಂಟಿ ಮ್ಯಾಟರ್‌ಗೆ ಅದರದೇ ಮಿತಿಗಳಿವೆ. ಮೊದಲ ಮಿತಿ ತಯಾರಿ ವೆಚ್ಚ. ಒಂದು ಗ್ರಾಂ ಆ್ಯಂಟಿ ಮ್ಯಾಟರ್ ಉತ್ಪಾದನೆಗೆ ಕನಿಷ್ಠವೆಂದರೂ ಒಂದು ಕೋಟಿ ಡಾಲರ್ ಹಣ ಖರ್ಚಾಗುತ್ತದೆ! ಅಲ್ಲದೇ, ಈ ಆ್ಯಂಟಿ ಮ್ಯಾಟರ್‌ನ ಉತ್ಪಾದನೆ ಸದ್ಯಕ್ಕೆ ಅಸಾಧ್ಯ. ಏಕೆಂದರೆ, ಅದಕ್ಕೆ ಬೇಕಾಗುವ ಮೂಲಸೌಕರ್ಯ, ನುರಿತ ಸಿಬ್ಬಂದಿ, ವಿಜ್ಞಾನಿಗಳು ಹಾಗೂ ತಂತ್ರಜ್ಞಾನದ ಲಭ್ಯತೆ ಇಲ್ಲ. ಅಲ್ಲದೇ, ಇಷ್ಟೆಲ್ಲಾ ಕಸರತ್ತು ಮಾಡಿದರೂ ಉತ್ಪಾದನೆಯಾಗುವ ಆ್ಯಂಟಿ ಮ್ಯಾಟರ್ ಕೇವಲ ಕೆಲವೇ ಗ್ರಾಂಗಳು ಮಾತ್ರ. ಹಾಗಾಗಿ, ಆ್ಯಂಟಿ ಮ್ಯಾಟರ್ ಅನ್ನು ಕೃತಕವಾಗಿ ಸೃಷ್ಟಿಸದೇ ಅದಿರುವ ಜಾಗದಿಂದಲೇ ಅದನ್ನು ಭೂಮಿಗೆ ಸಾಗಿಸುವುದು ಸೂಕ್ತ ಎಂದು ವಿಜ್ಞಾನಿಗಳು ಹೊಸ ಮಾರ್ಗಸೂಚಿಗಳನ್ನು ಹಾಕಿಕೊಟ್ಟಿದ್ದಾರೆ.

ಈ ಮಾರ್ಗಸೂಚಿಗಳು ಸಂಕೀರ್ಣವಾದವು. ಇವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಆ್ಯಂಟಿ ಮ್ಯಾಟರ್ ಎಂದರೇನು ಎಂಬ ಜ್ಞಾನ ಇರಬೇಕು. ಅತಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನಮ್ಮ ಭೂಮಿ ಅಥವಾ ಪ್ರಪಂಚದಲ್ಲಿರುವ ಎಲ್ಲ ಅಣುಗಳಲ್ಲೂ ('ಮ್ಯಾಟರ್') ಎಲೆಕ್ಟ್ರಾನ್, ಪ್ರೋಟಾನ್ ಹಾಗೂ ನ್ಯೂಕ್ಲಿಯಸ್‌ಗಳೆಂಬ ಅಂಶಗಳಿರುತ್ತವೆ. ನ್ಯೂಕ್ಲಿಯಸ್ ಅಣುವಿನ ಕೇಂದ್ರ. ಅದರ ಸುತ್ತಲೂ ಎಲೆಕ್ಟ್ರಾನ್‌ಗಳು ಗಡಿಯಾರದ ಮುಳ್ಳುಗಳು ತಿರುಗುವ ದಿಕ್ಕಿನಲ್ಲಿ ಸುತ್ತುತ್ತಿರುತ್ತವೆ. ಈ ಪ್ರಕ್ರಿಯೆಗೆ ಸಂಪೂರ್ಣ ವಿರುದ್ಧವಾಗಿ ಅಂದರೆ, ಆ್ಯಂಟಿ ಮ್ಯಾಟರ್ ಒಳಗಿನ ನ್ಯೂಕ್ಲಿಯಸ್‌ನ ಸುತ್ತಲೂ ಪ್ರೋಟಾನ್ ಗಡಿಯಾರಮುಳ್ಳು ತಿರುಗುವ ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತಿರುತ್ತದೆ. ಹಾಗಾಗಿ, ಮ್ಯಾಟರ್ ಹಾಗೂ ಆ್ಯಂಟಿ ಮ್ಯಾಟರ್‌ಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಅವುಗಳ ವಿರುದ್ಧಗುಣ ಹೊಂದದೇ ಅಪಾರ ಶಕ್ತಿಯೊಂದಿಗೆ ಸ್ಫೋಟಗೊಳ್ಳುತ್ತವೆ. ಆಗ ಉತ್ಪತ್ತಿಯಾಗುವ ಶಾಖವನ್ನು ವಿದ್ಯುತ್ತಾಗಿ ಪರಿವರ್ತಿಸಬಹುದು.

ಆದರೆ, ಆ್ಯಂಟಿ ಮ್ಯಾಟರಿನ ಗುಣ ಬಲು ಅತಂತ್ರವಾದುದು. ಅದನ್ನು ಶೇಖರಿಡಿಸಿಡುವುದೂ ಕಷ್ಟ. ಜೊತೆಗೆ, ಅದು ಗುರುತ್ವಗುಣದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ವಿಜ್ಞಾನಿಗಳು ಅನುಮಾನ ವ್ಯಕ್ತಪಡಿಸಿದ್ದರು. ಇದೀಗ ಈ ಕೆಲವು ವೈಜ್ಞಾನಿಕ ಊಹೆ ಹಾಗೂ ಸಿದ್ಧಾಂತಗಳನ್ನು ವಿಜ್ಞಾನಿಗಳು ಅಲ್ಲಗಳೆದಿದ್ದು, ಆ್ಯಂಟಿ ಮ್ಯಾಟರ್ ಗುರುತ್ವಶಕ್ತಿಯಿಂದ ಬಿಡಿಸಿಕೊಂಡು ಹೋಗಲಾರದು ಎಂದು ಸಾಬೀತು ಮಾಡಿದ್ದಾರೆ.

ಮತ್ತದೇ 'ಸಿಇಆರ್‌ಎನ್'ನ ವಿಜ್ಞಾನಿಗಳು ಈ ಸಂಶೋಧನೆ ಮಾಡಿದ್ದಾರೆ. ಅಮೆರಿಕದ 'ನೇಚರ್' ನಿಯತಕಾಲಿಕೆಯಲ್ಲಿ ಈಗಷ್ಟೇ ತಮ್ಮ ಸಂಶೋಧನೆಯನ್ನು ಪ್ರಕಟಿಸಿದ್ದಾರೆ. ರಷ್ಯಾಮೂಲದ ವಿಜ್ಞಾನಿ, ಅಮೆರಿಕದ ರಾಷ್ಟ್ರೀಯ ವಿಜ್ಞಾನ ಪ್ರತಿಷ್ಠಾನದ ನಿರ್ದೇಶಕ ವಿಚೆಸ್ಲಾವ್ ಲೂಕಿನ್ ಅವರನ್ನು ಒಳಗೊಂಡ ವಿಜ್ಞಾನಿಗಳ ತಂಡವು ಈ ಮಹತ್ವದ ಸಂಶೋಧನೆಯನ್ನು ಮಾಡಿದೆ. ಲೂನಿಕ್ ಅವರ ಈ ಹೇಳಿಕೆಯನ್ನು ಗಮನಿಸಿ: 'ಆ್ಯಂಟಿ ಮ್ಯಾಟರ್ ಅನ್ನು ನಿಮ್ಮ ಕೈಯಿಂದ ಬಿಟ್ಟರೆ ಅದು ಕೆಳಗೆ ಬೀಳುವುದೋ ಅಥವಾ ಮೇಲಕ್ಕೆ ಹಾರುವುದೋ ಎಂಬ ಪ್ರಶ್ನೆ ಇಷ್ಟು ದಿನ ಚಾಲ್ತಿಯಲ್ಲಿತ್ತು. ನಾವು ತಯಾರಿಸಿರುವ ಜಲಜನಕದ ಆ್ಯಂಟಿ ಮ್ಯಾಟರ್ ಎಲ್ಲ ಸಾಮಾನ್ಯ ಅಣುಗಳಂತೆ ಗುರುತ್ವಬಲಕ್ಕೆ ಸಿಲುಕಿ ಕೆಳಮುಖವಾಗಿ ಚಲಿಸಿದೆ. ಈ ಒಂದು ಸಣ್ಣ ಹೆಜ್ಜೆಯಿಂದ ನಾವು ಭವಿಷ್ಯದಲ್ಲಿ ಬಹುದೊಡ್ಡ ದಾಪುಗಾಲು ಹಾಕುವುದಕ್ಕೆ ಮುನ್ನುಡಿ ಬರೆದಿದ್ದೇವೆ'.

'ಸಿಇಆರ್‌ಎನ್'ನ ಈ ಶೋಧದಿಂದ ಗುರುತ್ವಬಲದ ನಿಯಮಗಳಿಗೆ ಆ್ಯಂಟಿ ಮ್ಯಾಟರ್ ಒಳಪಡುವುದಿಲ್ಲ ಎಂಬ ವಾದ ಸುಳ್ಳಾಗಿದೆ. ನಮ್ಮ ನಕ್ಷತ್ರಪುಂಜದ ('ಮಿಲ್ಕೀವೇ') ಅಲ್ಲಲ್ಲಿ ಆ್ಯಂಟಿ ಮ್ಯಾಟರ್‌ನ ಮೋಡಗಳಿವೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ. ಅಷ್ಟು ದೂರದ ಜಾಗಕ್ಕೆ ತಲುಪುವ ತಂತ್ರಜ್ಞಾನವನ್ನು ಮನುಷ್ಯ ಕಂಡುಹಿಡಿದ ಮೇಲೆ ಅದನ್ನು ಸಂಗ್ರಹಿಸಿ ತರುವುದು ಈ ಸಂಶೋಧನೆಯಿಂದ ಸಾಧ್ಯವಾಗುತ್ತದೆ. ಇವರೆಗೂ ಇದ್ದ ವಾದದ ಪ್ರಕಾರ, ಆ್ಯಂಟಿ ಮ್ಯಾಟರ್ ಅದರ ಮೋಡಗಳಿಂದ ಹೀರಿ ತರಲು ಸಾಧ್ಯವೇ ಇಲ್ಲ ಎನ್ನಲಾಗಿತ್ತು. ಗುರುತ್ವಬಲವನ್ನು ಕೃತಕವಾಗಿ ಸೃಷ್ಟಿಸಿ ಅಥವಾ ಅಯಸ್ಕಾಂತೀಯ ಶಕ್ತಿಯ ಮೂಲಕ ಆ್ಯಂಟಿ ಮ್ಯಾಟರ್ ಅನ್ನು ಸೆರೆ ಹಿಡಿಯಬಹುದು ಎಂದು ಈ ಸಂಶೋಧನೆ ಹೇಳಿದೆ.

ಅಲ್ಲದೇ, ಆಲ್ಬರ್ಟ್ ಐನ್‌ಸ್ಟೀನ್ ಅವರ ಸಾಪೇಕ್ಷತಾ ಸಿದ್ಧಾಂತದ ಪ್ರಕಾರ, ಶಕ್ತಿಯು ಉತ್ಪಾದನೆ ಆಗಲು ಆ್ಯಂಟಿ ಮ್ಯಾಟರ್ ಯಥಾವತ್ತಾಗಿ ಮ್ಯಾಟರ್‌ನಂತೆಯೇ ವರ್ತಿಸಬೇಕು. ಆಗ ಮಾತ್ರ ಮ್ಯಾಟರ್ ಮತ್ತು ಆ್ಯಂಟಿ ಮ್ಯಾಟರ್ ಮಿಲನ, ಸ್ಫೋಟ ಸಾಧ್ಯ. ಇದಕ್ಕೆ ಬೇಕಾದ ಅತಿ ಪ್ರಮುಖವಾದ ಅಗತ್ಯವೇ ಗುರುತ್ವಬಲ. ಗುರುತ್ವಬಲದ ಪ್ರಭಾವಕ್ಕೆ ಆ್ಯಂಟಿ ಮ್ಯಾಟರ್ ಒಳಗಾಗದೇ ಇದ್ದಲ್ಲಿ, ಶಕ್ತಿ ಉತ್ಪಾದನೆಯ ಪ್ರಶ್ನೆಯೇ ಬರುವುದಿಲ್ಲ ಎಂಬ ವಿಜ್ಞಾನಿಗಳ ವಾದ ಈಗ ಈ ಸಂಶೋಧನೆಯಿಂದ ಸುಳ್ಳಾಗಿರುವುದು ಭವಿಷ್ಯದಲ್ಲಿನ ಹಲವು ಸಂಶೋಧನೆಗಳಿಗೆ ಹೊಸ ದಾರಿ ಸಿಕ್ಕಂತಾಗಿದೆ.

ಆಗಸದಲ್ಲಿ ಲೋಹ

ಕೊಳ್ಳೇಗಾಲ ಶರ್ಮ

ಅಕ್ಟೋಬರ್ ಇಪ್ಪತ್ತೊಂದರಂದು ಇಸ್ರೊ ಗಗನಯಾನದ ನೌಕೆಯನ್ನು ಪರೀಕ್ಷಿಸಿತು. ಆಕಾಶಕ್ಕೆ ಹಾರಿದ ಗಗನಯಾನದ ಭಾಗವೊಂದು ಭೂಮಿಗೆ ಸುರಕ್ಷಿತವಾಗಿ ಮರಳುತ್ತದೆಯೇ ಎಂಬ ಪರೀಕ್ಷೆ. ಪರೀಕ್ಷೆ ಯಶಸ್ವಿ ಆಯಿತು ಎನ್ನುವ ಖುಷಿಯ ವಿಚಾರದ ಹಿಂದೆಯೇ ಇಂತಹ ಪರೀಕ್ಷೆಗಳು ವಾಯುಮಂಡಲದಲ್ಲಿ ಲೋಹದ ಬೂದಿಯನ್ನು ಉಳಿಸಿರುತ್ತವೆ ಎನ್ನುವ ಆತಂಕದ ವಿಷಯವನ್ನು ಅಮೆರಿಕೆಯ ಸಾಗರ ಮತ್ತು ವಾಯುವಿಜ್ಞಾನಿಗಳು ವರದಿ ಮಾಡಿದ್ದಾರೆ.

ಉಪಗ್ರಹಗಳು, ಗಗನನೌಕೆಗಳು ವಾಯುಮಂಡಲವನ್ನೂ ಮೀರಿದ ಎತ್ತರದಲ್ಲಿ, ಅಂದರೆ ಅಂತರಿಕ್ಷಕ್ಕೆ ಹಾರುತ್ತವೆ. ಇದಕ್ಕೂ ವಾಯುಮಂಡಲಕ್ಕೂ ಸಂಬಂಧವೆಲ್ಲಿಯದು ಎಂದಿರಾ? ಎಲ್ಲ ಉಪಗ್ರಹಗಳೂ ಬಲು ದೂರ ಹಾರುವುದಿಲ್ಲ. ಭೂಮಿಗೆ ಅತಿ ಸಮೀಪ, ಅಂದರೆ ಕೆಲವು ನೂರು ಕಿ.ಮೀ. ಎತ್ತರದಲ್ಲಿ ಸಾವಿರಾರು ಉಪಗ್ರಹಗಳು ಹಾರುತ್ತಿವೆ. ಇವುಗಳಲ್ಲಿ ಕೆಲವು ಬದುಕು ಮುಗಿಸಿ, ಆಗಾಗ್ಗೆ ಭೂಮಿಗೆ ಧುಮುಕುತ್ತವೆ. ಇವು ಹಾಗೂ ಉಪಗ್ರಹಗಳನ್ನು ಹಾರಿಸಿದ ರಾಕೆಟುಗಳು ಮರಳುವಾಗ ಗಾಳಿಯ ಜೊತೆ ಘರ್ಷಣೆಯಿಂದಾಗಿ ಬಿಸಿಯೇರಿ ಸುಟ್ಟು ಹೋಗುತ್ತವೆ. ಆ ಲೋಹದ ಕಣಗಳು ವಾಯುಮಂಡಲದಲ್ಲಿ, 20–75 ಕಿ.ಮೀ. ಎತ್ತರದಲ್ಲಿ ಸಂಗ್ರಹವಾಗುತ್ತಿವೆ ಎಂದು ಅಮೆರಿಕೆಯ ಪರ್ಡೂ ವಿಶ್ವವಿದ್ಯಾಲಯದ ಭೂವಿಜ್ಞಾನ, ವಾಯುಮಂಡಲ ಮತ್ತು ವಾಯುಗುಣ ವಿಭಾಗದ ಡೇನಿಯೆಲ್ ಮರ್ಫಿ ಮತ್ತು ಸಂಗಡಿಗರು ವರದಿ ಮಾಡಿದ್ದಾರೆ.

ಚಳಿಗಾಲದಲ್ಲಿ ಉತ್ತರ ಹಾಗೂ ದಕ್ಷಿಣ ಧ್ರುವದ ಆಕಾಶದಲ್ಲಿ 19 ಕಿ.ಮೀ. ಎತ್ತರದಲ್ಲಿದ್ದ ಗಾಳಿಯನ್ನು ಸಂಗ್ರಹಿಸಿ, ಅದರಲ್ಲಿ ಇರುವ ವಿವಿಧ ಮೂಲವಸ್ತುಗಳ ಪ್ರಮಾಣ ಹಾಗೂ ಪರಿಮಾಣಗಳನ್ನು ಗಮನಿಸಿ ಈ ತೀರ್ಮಾನಕ್ಕೆ ಬಂದಿದ್ದಾರೆ. ಅಲ್ಲಿ ಸಾಮಾನ್ಯವಾಗಿ ಕಾಣದ ಅಲ್ಯುಮಿನಿಯಂ, ಲಿಥಿಯಂ, ತಾಮ್ರ, ನಿಕಲ್ ಮೊದಲಾದ ಲೋಹಗಳ ಅಂಶಗಳಿದ್ದು ಇವು ರಾಕೆಟ್–ಉಪಗ್ರಹಗಳು ಉರಿದು ಹುಟ್ಟಿದ ಮಾಲಿನ್ಯ ಎಂಬುದು ಇವರ ತೀರ್ಮಾನ.

ಅದೇನೊ ಸರಿ. ಆದರೆ ಮೂಲ ಇಂಥದ್ದೇ ಎಂದು ಹೇಗೆ ಹೇಳುವುದು? ಆಕಾಶದ ಅಷ್ಟೆತ್ತರದಲ್ಲಿ ಗಾಳಿಯೇ ವಿರಳವಾದರೂ, ಲೋಹಗಳ ಕಣಗಳು ಸಹಜವಾಗಿಯೇ ಇರುತ್ತವೆ. ಬಾಹ್ಯಾಕಾಶದಿಂದ ಭೂಮಿಗೆ ನಿತ್ಯವೂ ಬಂದು ಬೀಳುವ ಉಲ್ಕೆಗಳು ಉರಿದ ಬೂದಿಯ ಅವಶೇಷಗಳು ಅವು ಎನ್ನುವ ನಂಬಿಕೆ ಇದೆ. ಈ ಲೋಹದ ಮೋಡಗಳಿಗೆ ಹೊಸ ಲೋಹ ಸೇರುತ್ತಿವೆಯೇ ಎಂಬ ಪ್ರಶ್ನೆ ಇತ್ತು. ಉಪಗ್ರಹ, ರಾಕೆಟುಗಳಲ್ಲಿ ಬಳಸುವ ಲೋಹಗಳಂತಹ ಲೋಹಗಳು ಸಿಕ್ಕರೆ ಇದಕ್ಕೆ ಉತ್ತರ ಸಿಕ್ಕೀತು ಎನ್ನುವ ಆಶಯದಿಂದ ಈ ವಿಜ್ಞಾನಿಗಳು ಧ್ರುವ ಪ್ರದೇಶದಲ್ಲಿ ಅಧ್ಯಯನವನ್ನು ಕೈಗೊಂಡಿದ್ದರು. ಧ್ರುವ ಪ್ರದೇಶವೇ ಏಕೆಂದರೆ ಇಲ್ಲಿ ಚಳಿ ಇರುವುದರಿಂದ ಭೂಮಿಯ ಬೇರೆಡೆಯಿಂದ ಬಂದ ಗಾಳಿಯೆಲ್ಲವೂ ನೆಲದ ಕಡೆಗೆ ಕುಸಿಯುತ್ತವೆ. ನೆಲದಿಂದ ಮೇಲ್ಗಡೆಗೆ ಗಾಳಿ ಚಲಿಸುವುದಿಲ್ಲ. ಚಳಿಗಾಲದಲ್ಲಿ ಗಾಳಿ ತಣಿದು ಇನ್ನಷ್ಟು ಭಾರವಾಗುವುದರಿಂದ ನೆಲದ ಕಡೆಗಿನ ಕುಸಿತ ಹೆಚ್ಚು. ಆದ್ದರಿಂದ ಇಲ್ಲಿ ಎತ್ತರದ ಆಕಾಶದಲ್ಲಿರುವ ಗಾಳಿಯಲ್ಲಿ ನೆಲದ ಮೇಲಿನ ಮಾಲಿನ್ಯದ ಅಂಶಗಳು ಕಡಿಮೆ ಎಂಬ ತರ್ಕವಿದೆ.

ಮರ್ಫಿಯವರ ತಂಡ ಧ್ರುವ ಪ್ರದೇಶದಲ್ಲಿ 19 ಕಿ.ಮೀ. ಎತ್ತರದಲ್ಲಿ ಗಾಳಿಯಲ್ಲಿರುವ ದೂಳಿನಂತಹ ಕಣಗಳನ್ನು ಸಂಗ್ರಹಿಸಿ, 'ಮಾಸ್ ಸ್ಪೆಕ್ಟ್ರೊ ಮೀಟರ್' ಬಳಸಿ ವಿಶ್ಲೇಷಿಸಿದೆ. ಈ ತಂತ್ರ ಪ್ರತಿಯೊಂದು ದೂಳಿನ ಕಣವನ್ನೂ ವಿಶ್ಲೇಷಿಸಿ, ಅದರಲ್ಲಿರುವ ವಸ್ತುಗಳನ್ನು ಅವುಗಳ ಪರಮಾಣುವಿಗೆ ತಕ್ಕಂತೆ ವಿಂಗಡಿಸುತ್ತದೆ. ಸಾಮಾನ್ಯವಾಗಿ ವಾಯುಮಂಡಲದ ಈ ಭಾಗದಲ್ಲಿ ಅಲ್ಯುಮಿನಿಯಂ, ಲಿಥಿಯಂ ಮೊದಲಾದ ಲೋಹಗಳು ಕಾಣುವುದಿಲ್ಲ. ಏನಿದ್ದರೂ ಸೋಡಿಯಂ, ಕಬ್ಬಿಣ ಮತ್ತು ನಿಕಲ್‌ನ ಅಂಶಗಳು ಹೆಚ್ಚು. ಅಂತರಿಕ್ಷದಿಂದ ಬರುವ ಉಲ್ಕೆಗಳಲ್ಲಿ ಇರುವ ಈ ಲೋಹಗಳು, ಈ ಎತ್ತರಕ್ಕೆ ಇಳಿಯುವಷ್ಟರಲ್ಲಿ ಗಾಳಿಯಲ್ಲಿರುವ ಆಕ್ಸಿಜನ್‌ನ ಜೊತೆ ಸೇರಿ ಬೇರೆಯೇ ವಸ್ತುವಾಗುತ್ತದೆ. ಹೀಗಾಗಿ ಮರ್ಫಿ ತಂಡ ಸಂಗ್ರಹಿಸಿರುವ ದೂಳಿನಲ್ಲಿರುವುದೆಲ್ಲದರ ಮೂಲ ಬೇರೆ ಎನ್ನಬಹುದು. ಆದರೆ ನಾವೇ ಹಾರಿಸಿದ ನೌಕೆಗಳೇ ಮೂಲ ಎನ್ನುವುದಕ್ಕೆ ಪರೋಕ್ಷ ಪುರಾವೆ ಇದೆ. ಉಪಗ್ರಹ–ರಾಕೆಟುಗಳ ಮೈಗೆ ಅಲ್ಯುಮಿನಿಯಂ ಮಿಶ್ರಲೋಹಗಳ ಹೊದಿಕೆ ಇರುತ್ತದೆ. ಇದರೊಟ್ಟಿಗೆ ಶಾಖನಿರೋಧಕ ಪಿಂಗಾಣಿ ಅಥವಾ ಸೆರಾಮಿಕ್ಕುಗಳಿರುತ್ತವೆ. ಇವುಗಳಲ್ಲಿಯೂ ಅಲ್ಯುಮಿನಿಯಂ ಇರುತ್ತದೆ. ಮರ್ಫಿ ತಂಡ ತಾವು ಸಂಗ್ರಹಿಸಿದ ಐದುಲಕ್ಷ ಕಣಗಳು ಪ್ರತಿಯೊಂದರಲ್ಲಿಯೂ ಇರುವ ವಿವಿಧ ಲೋಹಗಳ ಪರಿಮಾಣವನ್ನು ಅಲ್ಯುಮಿನಿಯಂನದರ ಜೊತೆಗೆ ಹೋಲಿಸಿದ್ದಾರೆ. ಉದಾಹರಣೆಗೆ, ಇಲ್ಲಿರುವ ಲೋಹಾಂಶವೆಲ್ಲವೂ ಉಲ್ಕಾಮೂಲದ್ದೇ ಆದರೆ, ಕಣಗಳಲ್ಲಿ ಸೋಡಿಯಂ ಪ್ರಮಾಣ ಹೆಚ್ಚಿರಬೇಕು. ಆದರೆ ಹಾಗಿಲ್ಲ; ಕಬ್ಬಿಣದ ಅಂಶವೇ ಹೆಚ್ಚು. ಇದರ ಅರ್ಥ ಆಕಾಶನೌಕೆಗಳಲ್ಲಿ ಬಳಕೆಯಾಗುವ ವಸ್ತುಗಳೇ ಇಲ್ಲಿವೆ. ಏಕೆಂದರೆ ನೌಕೆಗಳಲ್ಲಿ ಸೋಡಿಯಂ ಬಳಕೆ ಇಲ್ಲವೇ ಇಲ್ಲ.

ಅಂತರಿಕ್ಷದಲ್ಲಿ ಕೂಡಿಕೊಂಡ ಈ ಲೋಹದ ಪರಿಣಾಮವೇನೊ, ಗೊತ್ತಿಲ್ಲ. ಆದರೆ ಅಂತರಿಕ್ಷ ಕುರಿತ ನಮ್ಮ ಕುತೂಹಲವು ವಾಯುಮಂಡಲದ ಆ ನಿಷ್ಕಳಂಕ ಭಾಗವನ್ನೂ ಮಲಿನಗೊಳಿಸಿದೆ ಎಂಬುದು ವಾಸ್ತವ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.2

12) ಎರಡು ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸ ಒಂದೇ ಆಗಿದೆ. ಅವುಗಳ 100ನೇ ಪದಗಳ ನಡುವಿನ ವ್ಯತ್ಯಾಸ 100 ಆದರೆ 1000ನೇ ಪದಗಳ ನಡುವಿನ ವ್ಯತ್ಯಾಸವೇನು?

ಪರಿಹಾರ:– ಎರಡೂ ಸಮಾಂತರ ಶ್ರೇಢಿಯ ಮೊದಲ ಪದಗಳು ಕ್ರಮವಾಗಿ a_1 ಮತ್ತು a_2 ($a_1 > a_2$) ಆಗಿರಲಿ.

ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೊದಲ ಪದ =

$a_1 + (100-1)d \quad (\because a_n = a+(n-1)d)$

$= a_1 + 99d$

ಎರಡನೇ ಪದ=

$a_2 + (100-1)d \quad (\because a_n = a+(n-1)d)$

$= a_2 + 99d$

ದತ್ತ ಪ್ರಶ್ನೆಯ ಪ್ರಕಾರ

$(a_1 + 99)d - (a_2 + 99)d = 100$

$a_1 - a_2 = 100$

ಈಗ 1000^{th} term of the 1^{st} AP

$a_1 + (1000-1)d \quad (\because a_n = a+(n-1)d)$

$= a_1 + 999d$

1000^{th} term of the 2nd AP

$a_2 + (1000-1)d \quad (\because a_n = a+(n-1)d)$

$= a_2 + 999d$

ಆದ್ದರಿಂದ ಇವುಗಳ 1000ನೇ ಪದಗಳ ನಡುವಿನ ವ್ಯತ್ಯಾಸ =

$(a_1 + 999)d - (a_2 + 999)d$

$a_1 - a_2 = 100$

∴ 1000ನೇ ಪದಗಳ ನಡುವಿನ ವ್ಯತ್ಯಾಸ 100.

13) ಮೂರು ಅಂಕಿಗಳ ಎಷ್ಟು ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತದೆ?

ಪರಿಹಾರ:– 7ರಿಂದ ಭಾಗಿಸಲ್ಪಡುವ ಮೂರು ಅಂಕಿಯ ಸಂಖ್ಯೆಗಳು 105, 112, 119, 126……..994

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 7$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಮೊದಲ ಪದ ಪದಗಳು(a) 105, ಕೊನೆಯ ಪದ (l) = 994

ಇವುಗಳ nನೇ ಪದ = (l)

$$a+(n-1)d = 994$$
$$105+(n-1)(7) = 994$$
$$(n-1)7 = 994-105$$
$$(n-1)7 = 889$$
$$(n-1) = \frac{889}{7}$$
$$(n-1) = 127$$
$$n = 127+1 = 128$$

128 ಮೂರು ಅಂಕಿಯ ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತವೆ.

14) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ 12, 16, 20, 24……………248

$\Rightarrow a_2 - a_1 = 16-12 = 4$

$\Rightarrow a_3 - a_2 = 20-16 = 4$

$\Rightarrow a_4 - a_3 = 24-20 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಕೊನೆಯ ಪದ (l)= 248

$$a+(n-1)d = 248$$
$$12+(n-1)(4) = 248$$
$$(n-1)4 = 248-12$$
$$(n-1)4 = 236$$
$$(n-1) = \frac{236}{4}$$
$$(n-1) = 59$$
$$n = 59+1 = 60$$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

15) nನ ಯಾವ ಬೆಲೆಗೆ 63, 65, 67…. ಮತ್ತು 3, 10, 17…… ಈ ಸಮಾಂತರ ಶ್ರೇಢಿಗಳ nನೇ ಪದಗಳು ಸಮವಾಗಿರುತ್ತವೆ?

ಪರಿಹಾರ:–

ಮೊದಲ ಸಮಾಂತರ ಶ್ರೇಢಿ

63, 65, 67…………

ಇಲ್ಲಿ $a = 63$

$d = 65 - 63 = 2$

nನೇ ಪದ $= 63 + (n-1)2 \quad (\because a_n = a+(n-1)d)$

ಎರಡನೇ ಸಮಾಂತರ ಶ್ರೇಢಿ

3, 10, 17…………

$a = 3$

$d = 3 - 10 = 7$

nನೇ ಪದ $= 3 + (n-1)7 \quad (\because a_n = a+(n-1)d)$

ಒಂದು ವೇಳೆ nನೇ ಪದ ಎರಡು ಸಮಾಂತರ ಶ್ರೇಢಿಗಳಲ್ಲಿ ಸಮವಾಗಿದ್ದರೆ

$63 + (n-1)2 = 3 + (n-1)7$

$(n-1)2 - (n-1)7 = -60$

$(n-1)(-5) = -60$

$(n-1) = -60/-5$

$n-1 = 12$

$n = 12+1 = 13$

$n = 13$

ಹೀಗಾಗಿ 13 ಎರಡು ಸಮಾಂತರ ಪದಗಳ nನ ಬೆಲೆಯಾಗಿದೆ

16) ಮೂರನೇ ಪದ 16, 7ನೇ ಪದವು 5ನೇ ಪದಕ್ಕಿಂತ 12 ಹೆಚ್ಚಾಗಿರುವ ಸಮಾಂತರ ಶ್ರೇಢಿ ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

3ನೇ ಪದ = 16

$a + (3-1)d = 16 \quad (\because a_n = a+(n-1)d)$

$a + 2d = 16$……………. (1)

7ನೇ ಪದ = 5ನೇ ಪದ +12

$a + (7-1)d = a + (5-1)d + 12$

$a + 6d = a + 4d + 12$

$= 6d - 4d = 12$

$= 2d = 12$

$d = 12/2 = 6$

$d = 6$ ಅನ್ನು (1) ರಲ್ಲಿ ಹಾಕಿದಾಗ

$a + 2(6) = 16 \Rightarrow a + 12 = 16 \Rightarrow a = 16 - 12 = 4$

ಹೀಗಾಗಿ ಬೇಕಾಗಿರುವ ಸಮಾಂತರ ಶ್ರೇಢಿ 4, 4 + 6, 4 + 6 + 6, 4 + 6 + 6 + 6 ………………

i.e 4, 10, 16, 22…………..

II PUC PHYSICS

Chapter – 1

ELECTRIC CHARGES AND FIELDS

5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.



Soln:- Let the pendulum be at an angle θ with the vertical.

Net force acting on the bob = $(mg - qE)$.

(…….Contd)

Torque experienced by the body about point of suspension is, is in the direction is in the direction $\tau = -(mg - qE)\, l \sin\theta$. Negative sign shows that torque is restoring torque.



As the amplitude of oscillation is small,

$\sin\theta = \theta$

$\therefore \tau = -(mg - qE)\, l\,\theta$

But $\tau = I\alpha$ (or) $\alpha = \frac{\tau}{I}$,

$= \frac{-(mg - qE)l\theta}{I}$

Where I = moment of inertia of pendulum about the point of suspension = ml^2

$$\therefore \alpha = \frac{-(mg - qE)l\theta}{ml^2}$$
$$= \frac{-(g - qE/m)\theta}{l}$$

(or) $\alpha \propto -\theta$

Therefore, the bob of the pendulum has simple harmonic motion.

Now, time period of pendulum, $T = 2\pi\sqrt{\frac{\theta}{|\alpha|}}$

$$= 2\pi\sqrt{\frac{l}{g - qE/m}}$$

6. Find electric intensity due to uniformly charged disc of radius a having surface charge density σ at any point on the axis of the disc.

Soln:- Let P be the point on the axis of disc and its distance from the centre of disc is r. disc is assumed to be formed by concentric rings.

Consider one such ring of radius x and thickness dx.

Area of the ring is given by

$dA = 2\pi x\, dx$

and change on ring,

$dq = \sigma\, dA = \sigma\, 2\pi x\, dx$



Electric field due to considered ring at a distance r from its centre,

$$dE = \frac{1}{4\pi\varepsilon_0}\frac{dq\,r}{(x^2+r^2)^{3/2}}$$
$$= \frac{1}{4\pi\varepsilon_0}\frac{(2\pi\sigma\, x\, dx)r}{(x^2+r^2)^{3/2}}$$
$$\therefore E = \int_0^a dE = \frac{2\pi\sigma r}{4\pi\varepsilon_0}\int_0^a \frac{x\,dx}{(x^2+r^2)^{3/2}}$$

Put $x^2 + r^2 = y$

$\therefore 2x\,dx = dy$

(or) $x\,dx = \frac{dy}{2}$

$$\therefore E = \frac{\sigma r}{2\epsilon_0}\int_{r^2}^{a^2+r^2}\frac{dy}{2y^{3/2}}$$
$$= \frac{\sigma r}{2\epsilon_0}\left[\frac{1}{r} - \frac{1}{(a^2+r^2)^{1/2}}\right]$$
$$= \frac{\sigma}{2\epsilon_0}\left[1 - \frac{1}{\left(\frac{a^2}{r^2}+1\right)^{1/2}}\right]$$

For $a \gg x$, we get $E = \frac{\sigma}{2\varepsilon_0}$.

7. In the given figure $q_A = -256$ C, $q_B = 299$ C and $q_C = 81$ C. Calculate net electric field along DA.



Soln :– Here, $AC = \sqrt{4^2+3^2} = 5\text{ cm}$

$= 5 \times 10^{-2}\text{ m}$

$BD = BC\sin\theta = 3 \times \frac{4}{5} = 2.4\text{ cm}$

$= 2.4 \times 10^{-2}\text{ m}$

$CD = BC\cos\theta = 3 \times \frac{3}{5} = 1.8\text{ cm}$

$= 1.8 \times 10^{-2}\text{ m}$

Then $AD = AC - CD = 5 - \frac{9}{5}$

$= 3.2\text{ cm} = 3.2 \times 10^{-2}\text{ m}$

(Contd….)

ಗೋವಾ ಗೋಡಂಬಿಗೆ ಜಿಐ ಟ್ಯಾಗ್

- ನಿರ್ದಿಷ್ಟ ಭೌಗೋಳಿಕ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಕೃಷಿ ಉತ್ಪನ್ನಗಳಿಗೆ ಮತ್ತು ವಸ್ತುಗಳಿಗೆ ನೀಡುವ ಭೌಗೋಳಿಕ ಸೂಚಕ ಸ್ಥಾನಮಾನವನ್ನು ಇತ್ತೀಚೆಗೆ ಗೋವಾದ ಗೋಡಂಬಿಗೆ ನೀಡಲಾಗಿದೆ.
- ಭೌಗೋಳಿಕ ಸೂಚಕ ಸ್ಥಾನಮಾನವನ್ನು ಚೆನ್ನೈನಲ್ಲಿರುವ ಜಿಯೋಗ್ರಾಫಿಕಲ್ ಇಂಡಿಕೇಶನ್ಸ್ ರಿಜಿಸ್ಟ್ರಿ ಸಂಸ್ಥೆಯಿಂದ ನೀಡಲಾಗುತ್ತದೆ.
- ಬಹುತೇಕ ಸಂದರ್ಭಗಳಲ್ಲಿ ಹೊರರಾಜ್ಯದಲ್ಲಿ ಬೆಳೆಯುತ್ತಿರುವ ಗೋಡಂಬಿಗೆ ಗೋವಾದ ಗೋಡಂಬಿ ಎನ್ನುವ ಹೆಸರನ್ನು ನೀಡಿ ತಯಾರಕರು ಮಾರಾಟ ಮಾಡುತ್ತಿದ್ದರು. ಇನ್ನು ಮೇಲೆ ಇತರೆ ರಾಜ್ಯಗಳಲ್ಲಿ ಉತ್ಪಾದನೆಯಾಗುತ್ತಿರುವ ಗೋಡಂಬಿಗೆ ಈ ಹೆಸರನ್ನು ಬಳಸಲು ಸಾಧ್ಯವಾಗುವುದಿಲ್ಲ.
- ಗೋವಾ ಗೋಡಂಬಿ ಉತ್ಪಾದಕರ ಸಂಘಟನೆ, ಗೋವಾ ಸರ್ಕಾರ, ವಿಜ್ಞಾನ ಇಲಾಖೆ ಮತ್ತು ತ್ಯಾಜ್ಯ ನಿರ್ವಹಣೆ ಸಂಸ್ಥೆ, ಭೌಗೋಳಿಕ ಸೂಚಕ ಸ್ಥಾನಮಾನವನ್ನು ಕಲ್ಪಿಸುವಂತೆ ಅರ್ಜಿಯನ್ನು ಸಲ್ಲಿಸಿತ್ತು.
- ಕಳಪೆ ಗುಣಮಟ್ಟದ ಗೋಡಂಬಿಗಳನ್ನೂ ಗೋವಾ ಗೋಡಂಬಿ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದ ಕಾರಣದಿಂದ ಗೋವಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಕರಣ ಘಟಕಗಳು ಮತ್ತು ತಯಾರಕರು ಸಂಕಷ್ಟದಲ್ಲಿದ್ದರು.
- ಕಳೆದ 15 ವರ್ಷಗಳಲ್ಲಿ ಗೋವಾದ ಗೋಡಂಬಿ ಸಂಸ್ಕರಣೆ ಘಟಕಗಳ ಸಂಖ್ಯೆ 40 ರಿಂದ 15 ಕ್ಕೆ ಇಳಿದಿದೆ.
- ಈ ಬೆಳೆಯನ್ನು ಮರು ಅರಣ್ಯೀಕರಣಕ್ಕಾಗಿ ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸಲು ಪೋರ್ಚುಗೀಸರು 16ನೇ ಶತಮಾನದಲ್ಲಿ ಬಿತ್ತನೆ ಪ್ರಾರಂಭಿಸಿದರು.
- ಇದರ ರುಚಿ ಮತ್ತು ಪೌಷ್ಟಿಕಾಂಶತೆ ಬಗ್ಗೆ ಅರಿವು ಹೆಚ್ಚಾಯಿತು. ಮೊದಲ ಗೋಡಂಬಿ ಕಾರ್ಖಾನೆಯನ್ನು ಗೋವಾದಲ್ಲಿ 1926 ರಲ್ಲಿ ಪ್ರಾರಂಭಿಸಲಾಯಿತು ಮತ್ತು ಗೋವಾದ ಗೋಡಂಬಿಯನ್ನು 1930 ರಿಂದ ಹೊರ ರಾಷ್ಟ್ರಗಳಿಗೆ ರಫ್ತು ಮಾಡಲಾಯಿತು.

ಮಂಗಳೂರಿನ ಕುದ್ರೋಳಿ ಶ್ರೀಗೋಕರ್ಣನಾಥೇಶ್ವರ ಕ್ಷೇತ್ರದಿಂದ ಮೆರವಣಿಗೆ ಹೊರಟ ಶ್ರೀಶಾರದಾದೇವಿಯ ಮೂರ್ತಿ ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್‌

ಮಡಿಕೇರಿಯಲ್ಲಿ ನಡೆದ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಭಾಗಿಯಾಗಿದ್ದ ವೈಕುಂಠ ದರ್ಶನ ಕಥಾವಸ್ತು ಪ್ರದರ್ಶಿಸಿದ ಶ್ರೀರಾಮಮಂದಿರದ ಮಂಟಪ

ಉಡುಪಿ ಜಿಲ್ಲೆಯ ಪಡುಬಿದ್ರಿ ಸಮೀಪದ ಉಚ್ಚಿಲ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ದಸರಾ ಮಹೋತ್ಸವ ನಿಮಿತ್ತ ಸೋಮವಾರ ರಾತ್ರಿ ನವದುರ್ಗೆಯರು ಹಾಗೂ ಶಾರದಾ ದೇವಿಗೆ ಗಂಗಾರತಿ ನಡೆಯಿತು. ಕಾಶಿಯಿಂದ ಬಂದಿದ್ದ 11 ಅರ್ಚಕರು ದೀಪಾರತಿ, ಶಂಖನಾದ ನೆರವೇರಿಸಿದರು

ವಿವಿಧೆಡೆ ನಾಡಹಬ್ಬದ ಸಂಭ್ರಮ

ವಿಜಯದಶಮಿ ದಿನವಾದ ಮಂಗಳವಾರ ನಾಡಿನ ವಿವಿಧೆಡೆ ನಾಡಹಬ್ಬ ದಸರಾ ಉತ್ಸವ, ಜಂಬೂಸವಾರಿ ಮೆರವಣಿಗೆಯ ಸಂಭ್ರಮ. ಮೈಸೂರು ನಗರವಲ್ಲದೇ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ದಶಮಂಪಟ ಉತ್ಸವ, ಮಂಗಳೂರಿನಲ್ಲಿ ನವದುರ್ಗೆಯರ ಶೋಭಾಯಾತ್ರೆ ನಡೆಯಿತು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮಡಿಕೇರಿ ದಸರೆಯ ದಶಮಂಪಟಗಳ ಶೋಭಾಯಾತ್ರೆ ಮಂಗಳವಾರ ರಾತ್ರಿ ವಿಜೃಂಭಣೆಯಿಂದ ಆರಂಭಗೊಂಡಿತು. ರಾತ್ರಿಯನ್ನೇ ಹಗಲಾಗಿಸಿದಂತೆ ಚಲಿಸಿದ ಬೆಳಕಿನ ಮಂಟಪಗಳನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡರು.

₹2.11 ಕೋಟಿ ವೆಚ್ಚದಲ್ಲಿ ರೂಪಿಸಲಾಗಿದ್ದ ಹತ್ತು ಮಂಟಪಗಳಲ್ಲಿಯೂ ಕಣ್ಣುಕೋರೈಸುವ ಬೆಳಕಿನಲ್ಲಿ ಕಂಡು ಬಂದ ವಿವಿಧ ಆಕೃತಿಗಳ ಚಲನವಲನಗಳು ವಿಸ್ಮಯಗೊಳಿಸಿದವು. ಹತ್ತು ಮಂಟಪಗಳನ್ನೂ ಸುತ್ತುವರಿದ ಅಪಾರ ಜನಸ್ತೋಮ ಮನದಣಿಯೇ ವೀಕ್ಷಿಸಿತು.

ಮಂಟಪದಲ್ಲಿ ಪೌರಾಣಿಕ ಕಥಾವಸ್ತು ಪ್ರದರ್ಶಿತಗೊಳ್ಳುತ್ತಿದ್ದರೆ, ಮತ್ತೊಂದೆಡೆ ಯುವಕರು ಗುಂಪುಗೂಡಿ ಕುಣಿದು ಸಂಭ್ರಮಿಸಿದರು. ಕರತಾಡನ, ಶಿಳ್ಳೆಗಳ ನಡುವೆ ಮಂಟಪಗಳಲ್ಲಿ ವಿವಿಧ ಕಥಾವಸ್ತುಗಳನ್ನು ಪ್ರಸ್ತುತಪಡಿಸಲಾಯಿತು.

ಮೊದಲಿಗೆ ಪೇಟೆ ಶ್ರೀರಾಮಮಂದಿರದ ಮಂಟಪವು 'ವೈಕುಂಠ ದರ್ಶನ' ಕಥಾವಸ್ತುವನ್ನು ಪ್ರದರ್ಶಿಸುತ್ತಾ ಮುಂದೆ ಸಾಗಿತು. ನಂತರ ದೇಚೂರು ಶ್ರೀರಾಮಮಂದಿರ, ದಂಡಿನ ಮಾರಿಯಮ್ಮ, ಚೌಡೇಶ್ವರಿ, ಕಂಚಿ ಕಾಮಾಕ್ಷಿ, ಚೌಟಿ ಮಾರಿಯಮ್ಮ, ಕೋದಂಡರಾಮ, ಕೋಟೆ ಮಾರಿಯಮ್ಮ, ಕೋಟೆ ಗಣಪತಿ ಹಾಗೂ ಕರವಲೆ ಭಗವತಿ ದೇಗುಲಗಳ ಮಂಟಪಗಳಲ್ಲಿ ಪೌರಾಣಿಕ ಕಥಾವಸ್ತುಗಳನ್ನು ಪ್ರದರ್ಶಿಸಿದವು.ಗೋಣಿಕೊಪ್ಪಲಿನಲ್ಲೂ ದಸರಾ ಪ್ರಯುಕ್ತ ಸ್ತಬ್ಧಚಿತ್ರಗಳ ಮೆರವಣಿಗೆ ಮಂಟಪಗಳ ಶೋಭಾಯಾತ್ರೆ ನಡೆಯಿತು.

ಮಂಗಳೂರು: ನವದುರ್ಗೆಯರ ಶೋಭಾಯಾತ್ರೆ ಸಡಗರ

ಮಂಗಳೂರು: 'ಭಾವೈಕ್ಯದ ದಸರಾ' ಎಂದೇ ಖ್ಯಾತವಾಗಿರುವ 'ಮಂಗಳೂರು ದಸರಾ' ಮಂಗಳವಾರ ವಿಜೃಂಭಣೆಯಿಂದ ನೆರವೇರಿತು. ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ಪೂಜೆಗೊಂಡ ಶ್ರೀಶಾರದಾ ದೇವಿ ಹಾಗೂ ನವದುರ್ಗೆಯರ ಮೂರ್ತಿಗಳ ಶೋಭಾಯಾತ್ರೆಯನ್ನು ಕಣ್ತುಂಬಿಕೊಂಡ ಲಕ್ಷಾಂತರ ಮಂದಿ ಭಕ್ತಿ ಭಾವದಲ್ಲಿ ಮಿಂದೆದ್ದರು.

ಶ್ರೀಶಾರದೆ, ದೇವಿಯ ವಿವಿಧ ಅವತಾರಗಳನ್ನು ಬಿಂಬಿಸುವ ಮೂರ್ತಿಗಳು, ಬ್ರಹ್ಮಶ್ರೀ ನಾರಾಯಣ ಗುರು ಮತ್ತು ಮಹಾಗಣಪತಿ ಮೂರ್ತಿ ವಿದ್ಯುದ್ದೀಪಗಳಿಂದ ಅಲಂಕೃತವಾಗಿದ್ದ ರಥದಲ್ಲಿ ಒಂದರ ಹಿಂದೆ ಒಂದರಂತೆ ಸಾಗಿ ಬರುತ್ತಿದ್ದಂತೆಯೇ ಝಗಮಗಿಸುವ ಬೆಳಕಿನ ಲೋಕವೇ ಸೃಷ್ಟಿಯಾಗಿತ್ತು.

ಈ ಮನಮೋಹಕ ದೃಶ್ಯ ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಭಕ್ತರ ಮನದಲ್ಲಿ ಅಚ್ಚಾಯಿತು. ನಗರದೆಲ್ಲೆಡೆ ತಾಸೆ ಪೆಟ್ಟಿನ ಸದ್ದು ಮಾರ್ದನಿಸುತ್ತಿದ್ದರೆ, 'ಮಾರ್ನೆಮಿ'ಯ ಹುಲಿವೇಷಗಳ ಕುಣಿತದ ಅಬ್ಬರಕ್ಕೆ ಪ್ರೇಕ್ಷಕರು ನಿಬ್ಬೆರಗಾದರು.

ಶೋಭಾಯಾತ್ರೆಯಲ್ಲಿ ರಂಗು ರಂಗಿನ ಸ್ತಬ್ಧಚಿತ್ರಗಳು ಹಾಗೂ ಹುಲಿವೇಷ ತಂಡಗಳು ಪ್ರಮುಖ ಆಕರ್ಷಣೆಯಾಗಿದ್ದವು. ಕರಾವಳಿಯ ಚೆಂಡೆ ವಾದನ, ಡೊಳ್ಳು ಕುಣಿತ, ಸೋಮನ ಕುಣಿತ, ಪೂಜಾ ಕುಣಿತ, ವೀರಗಾಸೆ, ಬ್ಯಾಂಡ್ ವಾದನ ತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು.

ಊರಿನ ಭಕ್ತಾದಿಗಳಲ್ಲದೇ, ಪರವೂರುಗಳಿಂದ ಬಂದಿದ್ದ ಲಕ್ಷಾಂತರ ಮಂದಿ ಜಾತಿ ಮತ ಭೇದ ಮರೆತು ಉತ್ಸವದಲ್ಲಿ ಭಾಗಿಯಾದರು. ವಿದ್ಯುದ್ದೀಪಗಳಿಂದ ಅಲಂಕೃತ 12 ಕಿ.ಮೀ ಉದ್ದದ ಮಾರ್ಗದುದ್ದಕ್ಕೂ ಜನ ಕಿಕ್ಕಿರಿದು ಸೇರಿದ್ದರು. ವೈಭವೋಪೇತ ದಸರಾ ಮೆರವಣಿಗೆಯ ಸೊಬಗನ್ನು ಆಸ್ವಾದಿಸಲು ಕೆಲವರು ಕಟ್ಟಡಗಳನ್ನೇರಿದ್ದರು.

ಮರಿ ಹಾಕಿದ ಆನೆ ನೇತ್ರಾವತಿ

ಶಿವಮೊಗ್ಗ: ಇಲ್ಲಿನ ಮಹಾನಗರ ಪಾಲಿಕೆ ಆಯೋಜಿಸಿದ್ದ ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಕರೆತಂದಿದ್ದ ಸಕ್ರೆಬೈಲಿನ ಆನೆ ನೇತ್ರಾವತಿ (27) ಸೋಮವಾರ ತಡರಾತ್ರಿ ಹೆಣ್ಣು ಮರಿಗೆ ಜನ್ಮನೀಡಿದೆ. ಈ ಹಿನ್ನೆಲೆಯಲ್ಲಿ ಇದರಿಂದ ದಸರಾ ಭಾಗವಾದ ಸಾಂಪ್ರದಾಯಿಕ ಜಂಬೂಸವಾರಿ ಮೆರವಣಿಗೆಯನ್ನು ರದ್ದುಪಡಿಸಲಾಯಿತು.

ದಸರಾ ಮೆರವಣಿಗೆಗೆ ಕರೆತಂದಿದ್ದ ಮೂರು ಆನೆಗಳನ್ನು ವಾಸವಿ ಶಾಲೆ ಆವರಣದಲ್ಲಿ ಬೀಡುಬಿಟ್ಟಿದ್ದವು. ಅಲ್ಲಿಯೇ ಮರಿಯ ಜನನವಾಗಿದೆ. ತಾಯಿ ಆನೆ ಮತ್ತು ಮರಿ ಆನೆ ಆರೋಗ್ಯವಾಗಿವೆ.

ವಿಷಯ ತಿಳಿದು ಶಿವಮೊಗ್ಗ ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಸನ್ನಕೃಷ್ಣ ಪಟಗಾರ ಹಾಗೂ ವೈದ್ಯ ಡಾ.ವಿನಯ್ ಸ್ಥಳಕ್ಕೆ ಬಂದು ಪರಿಶೀಲಿಸಿ ನೇತ್ರಾವತಿಯನ್ನು ಮರಿಯೊಂದಿಗೆ ಲಾರಿಯಲ್ಲಿ ಸಕ್ರೆಬೈಲು ಬಿಡಾರಕ್ಕೆ ಕರೆದೊಯ್ಯಲು ವ್ಯವಸ್ಥೆ ಮಾಡಿದರು.

ಜಂಬೂ ಸವಾರಿ ರದ್ದು: ಅಂಬಾರಿ ಹೊರಲಿದ್ದ 'ಸಾಗರ' ಆನೆಯ ಅಕ್ಕಪಕ್ಕ ಎರಡು ಆನೆಗಳು ಇಲ್ಲದ್ದರಿಂದ ಜಂಬೂಸವಾರಿ ರದ್ದುಗೊಳಿಸಿದ ಮಹಾನಗರ ಪಾಲಿಕೆ ಆಡಳಿತ, ಭುವನೇಶ್ವರಿ ಪುತ್ಥಳಿಯನ್ನು ವಾಹನದ ಮೂಲಕ ಮೆರವಣಿಗೆ ನಡೆಸಲು ನಿರ್ಧರಿಸಿತು. ಮೆರವಣಿಗೆಯಲ್ಲಿ ಸಾಗರ ಹಾಗೂ ಹೇಮಾವತಿ ಪಾಲ್ಗೊಂಡಿದ್ದವು.

ಹೆಣ್ಣು ಮರಿಗೆ ಜನ್ಮ ನೀಡಿದ ನೇತ್ರಾವತಿ

ಮಾಹಿತಿ ಇರಲಿಲ್ಲ: ಜಂಬೂಸವಾರಿಗೆ ನೇತ್ರಾವತಿಯನ್ನು ಕರೆತಂದರೂ ಅದು ಗರ್ಭ ಧರಿಸಿರುವ ಮಾಹಿತಿ ಸಕ್ರೆಬೈಲು ಆನೆ ಬಿಡಾರದ ಮಾವುತ ಹಾಗೂ ವೈದ್ಯರಿಗೆ ಇರಲಿಲ್ಲ ಎಂಬುದು ಚರ್ಚೆಗೆ ಗ್ರಾಸವಾಗಿದೆ.

ಬರ ಮರೆಸಿದ ಜಂಬೂಸವಾರಿ

ಒಂದನೇ ಪುಟದಿಂದ

ತಮ್ಮ ಜಿಲ್ಲೆಗಳ ಸಾಂಸ್ಕೃತಿಕ ವಿಶೇಷಗಳನ್ನು ಸಂಗೀತ-ನೃತ್ಯದ ಮೂಲಕ ಪ್ರಸ್ತುತಪಡಿಸಿದರು. ಸ್ತಬ್ಧಚಿತ್ರಗಳು ಸರ್ಕಾರದ ಸಾಧನೆಗಳನ್ನು ಅನಾವರಣಗೊಳಿಸಿದವು.

ಮೆರವಣಿಗೆಯಲ್ಲಿ ಪಾಲ್ಗೊಂಡ ಅರಮನೆ ಸಿಬ್ಬಂದಿ ಮತ್ತು ಪೊಲೀಸ್ ಕಾನ್‌ಸ್ಟೆಬಲ್‌ಗಳು ಇದೇ ಮೊದಲ ಬಾರಿಗೆ ವಿಶೇಷ ಪೋಷಾಕು (ಸೆರೆಮೊನಿ ಡ್ರೆಸ್) ಧರಿಸಿ ಗಮನಸೆಳೆದರು.

ಹಿಂದಿನ ವರ್ಷದಂತೆಯೇ ಈ ಬಾರಿಯೂ ಸಂಜೆ–ಕತ್ತಲಿನಲ್ಲೇ, ದೀಪಾಲಂಕಾರದಿಂದ ಝಗಮಗಿಸುತ್ತಿದ್ದ ರಸ್ತೆಯ ನಡುವೆ ಮೆರವಣಿಗೆ ಸಾಗಿತು. ವಿದ್ಯುತ್ ದೀಪಗಳ ಬೆಳಕಿನಲ್ಲಿ ಅಂಬಾರಿ ಹೊತ್ತ 'ಅಭಿಮನ್ಯು' ಸೇರಿದಂತೆ ಒಂಬತ್ತು ಆನೆಗಳೂ ಹೊಳೆದವು.

ಮಧ್ಯಾಹ್ನ 1.45ಕ್ಕೆ ಅರಮನೆ ಹೊರ ಆವರಣದ ಕೋಟೆ ಆಂಜನೇಯ ಗುಡಿಯ ಮುಂದೆ ನಂದಿಧ್ವಜಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪೂಜೆ ಸಲ್ಲಿಸಿ, ಅರಮನೆ ಒಳ ಆವರಣಕ್ಕೆ ತೆರದ ಜೀಪಿನಲ್ಲಿ ಬರುತ್ತಿದ್ದಂತೆ ಅವರು ಜನರತ್ತ ಕೈ ಬೀಸಿ ಉತ್ಸಾಹ ತುಂಬಿದರು. ಇದೇ ಮೊದಲ ಬಾರಿಗೆ 108 ನಂದಿಧ್ವಜಗಳ ಕುಣಿತವನ್ನು ಆಯೋಜಿಸಲಾಗಿತ್ತು.

ನಂತರ ಕಲಾತಂಡಗಳು ಮತ್ತು ಸ್ತಬ್ದಚಿತ್ರಗಳ ಮೆರವಣಿಗೆಗೆ ಚಾಲನೆ ದೊರಕಿತು. ಬಿರುಬಿಸಿಲನ್ನು ಲೆಕ್ಕಿಸದೆ ಅಪಾರ ಸಂಖ್ಯೆಯ ಜನರು ಎರಡು ಗಂಟೆಗೂ ಹೆಚ್ಚು ಕಾಲ ರಾಜ್ಯದ ಪ್ರಾದೇಶಿಕ, ಸಾಂಸ್ಕೃತಿಕ ವಿಶೇಷಗಳನ್ನು ಕಣ್ತುಂಬಿಕೊಂಡರು.

ಸಂಜೆ 5.09ಕ್ಕೆ ಅಭಿಮನ್ಯು ಆನೆ ಹೊತ್ತಿದ್ದ 750 ಕೆ.ಜಿ.ಯ ಚಿನ್ನದ ಅಂಬಾರಿಯಲ್ಲಿ ಅಲಂಕರಿಸಿ ಇಡಲಾಗಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಜೊತೆಯಾದರು.

ನಂತರ ಶುರುವಾದ ರಾಷ್ಟ್ರಗೀತೆಯ ನಡುವೆಯೇ 21 ಸುತ್ತು ಕುಶಾಲತೋಪುಗಳನ್ನು ಸಿಡಿಸಲಾಯಿತು. ಆನೆಗಳೆಲ್ಲವೂ ಏಕಕಾಲಕ್ಕೆ ಸೊಂಡಿಲೆತ್ತಿ ದೇವಿಗೆ ನಮಸ್ಕರಿಸಿದವು. ಎಲ್ಲರೂ ಚಾಮುಂಡೇಶ್ವರಿಗೆ ಜೈಕಾರ ಹಾಕಿದ ಬಳಿಕ ಅಂಬಾರಿಯು ಮುಂದಕ್ಕೆ ಸಾಗಿತು. ಅಂಬಾರಿ ಆನೆ ಜೊತೆ ಕುಮ್ಕಿ ಆನೆಗಳಾಗಿ 'ವಿಜಯ' ಮತ್ತು 'ವರಲಕ್ಷ್ಮಿ' ಹೆಜ್ಜೆ ಹಾಕಿದರೆ, ಅರ್ಜುನ ನಿಶಾನೆ ಆನೆಯಾಗಿ ಜವಾಬ್ದಾರಿ ನಿರ್ವಹಿಸಿದ.

ವಿವಿಧ ಜಿಲ್ಲೆಗಳ ಸಾಧನೆ, ವಿಶೇಷಗಳನ್ನು ಬಿಂಬಿಸುವ ವೈವಿಧ್ಯಮಯವಾದ 49 ಸ್ತಬ್ಧಚಿತ್ರಗಳು, 50 ಜನಪದ ಕಲಾ ತಂಡಗಳ ನೃತ್ಯ ಸಂಭ್ರಮವು ಜನರ ಮುಂದೆ ಸಾಂಸ್ಕೃತಿಕ ವೈಭವದ ಲೋಕವನ್ನು ಅನಾವರಣಗೊಳಿಸಿತು. ರಾತ್ರಿ ಬನ್ನಿಮಂಟಪ ಮೈದಾನದಲ್ಲಿ ನಡೆದ ಪಂಜಿನ ಕವಾಯತನ್ನೂ ಸಾವಿರಾರು ಮಂದಿ ವೀಕ್ಷಿಸುವುದರೊಂದಿಗೆ ಉತ್ಸವಕ್ಕೆ ಸಂಭ್ರಮದ ತೆರೆ ಬಿತ್ತು. 'ವೈಮಾನಿಕ ಪ್ರದರ್ಶನ' (ಏರ್‌ಶೋ) ಈ ಬಾರಿಯ ಉತ್ಸವದ ಮತ್ತೊಂದು ಆಕರ್ಷಣೆಯಾಗಿತ್ತು. ಸೋಮವಾರ ನಡೆದ ಮುಖ್ಯ ಪ್ರದರ್ಶನವನ್ನು ಸುಮಾರು 35 ಸಾವಿರ ಮಂದಿ ವೀಕ್ಷಿಸಿದರು. ಭಾರತೀಯ ವಾಯುಪಡೆಯ 'ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ'ದವರು ರೋಮಾಂಚಕಾರಿ ಪ್ರದರ್ಶನ ನೀಡಿದರು.

ಪೊಲೀಸರಿಗೆ ಬಿಸಿ ಮುಟ್ಟಿಸಿದ ಮಾವುತರು

ಮೈಸೂರು: ಜಂಬೂಸವಾರಿಗೂ ಮುನ್ನ ಅರಮನೆ ಆವರಣದಲ್ಲಿ ಪೊಲೀಸರು ಹಾಗೂ ಮಾವುತರ ನಡುವೆ ಮಾತಿನ ಚಕಮಕಿ ನಡೆಯಿತು. ಇದರಿಂದ ಆನೆಗಳನ್ನು ಮೆರವಣಿಗೆಗೆ ಸಿದ್ಧಪಡಿಸುವುದೂ ತಡವಾಯಿತು.

ಬೆಳಿಗ್ಗೆ ಆನೆಗಳಿಗೆ ಪೂಜೆ ಸಲ್ಲಿಸುವಾಗ ಅರಣ್ಯಾಧಿಕಾರಿಗಳನ್ನು ಪೊಲೀಸರು ಎಳೆದಾಡಿದ್ದರು. ಆಗಲೂ ಮಾತಿನ ಚಕಮಕಿ ನಡೆದಿತ್ತು. ಮಧ್ಯಾಹ್ನ ಅರಣ್ಯ ಇಲಾಖೆಯ ಜೀಪ್‌ಗಳನ್ನು ಪೊಲೀಸರು ತಡೆದಿದ್ದರು. ಅಲ್ಲದೇ, ಮಾವುತರನ್ನು ಬಿಡುವುದಕ್ಕೂ ತೊಂದರೆ ನೀಡಿದ್ದರು. ಆಗಲೂ ವಾಗ್ವಾದ ನಡೆಯಿತು. ಒಂದು ಹಂತದಲ್ಲಿ ಮಾವುತರು, 'ನಾವು ಹೋಗುತ್ತೇವೆ, ನೀವೇ ದಸರಾ ಮಾಡಿಕೊಳ್ಳಿ' ಎಂದು ಪೊಲೀಸರಿಗೆ ಬಿಸಿ ಮುಟ್ಟಿಸಿದರು.

ಆಸ್ಪತ್ರೆಯಿಂದ ಮನೆಗೆ ಮರಳಿದ ಬೊಮ್ಮಾಯಿ

ಬೆಂಗಳೂರು: ತೆರೆದ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದು, ವಿಶ್ರಾಂತಿ ಪಡೆಯುತ್ತಿದ್ದಾರೆ.

ಅಕ್ಟೋಬರ್ 16ರಂದು ಮಂಡಿ ಶಸ್ತ್ರಚಿಕಿತ್ಸೆಗಾಗಿ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದ ಬೊಮ್ಮಾಯಿ ಅವರ ಆರೋಗ್ಯ ತಪಾಸಣೆ ನಡೆಸಲಾಗಿತ್ತು. ಹೃದಯದ ಕವಾಟಗಳು ಮುಚ್ಚಿಕೊಂಡಿರುವುದು ಪತ್ತೆಯಾಗಿತ್ತು.

ಬೆಂಗಳೂರು ವ್ಯಾಪ್ತಿಗೆ ಕನಕಪುರ: ಡಿಕೆಶಿ

ಒಂದನೇ ಪುಟದಿಂದ

ಆಗ ವೇದಿಕೆಯಲ್ಲಿದ್ದವರು, 'ಹಾಗಾದರೆ, ಕನಕಪುರವನ್ನು ಬೆಂಗಳೂರಿಗೆ ಸೇರಿಸುತ್ತೀರಾ' ಎಂದು ಪ್ರಶ್ನಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅದನ್ನು ಮಾಡುತ್ತೇನೆ. ದೇವರ ಸನ್ನಿಧಿಯಲ್ಲಿ ವಿಜಯದಶಮಿ ದಿನದಂದು ಈ ಮಾತನ್ನು ಹೇಳುತ್ತಿದ್ದೇನೆ' ಎಂದು ಭರವಸೆ ನೀಡಿದರು.

'ಯಾವುದೇ ಕಾರಣಕ್ಕೂ ಇಲ್ಲಿನ ರೈತರು ತಮ್ಮ ಭೂಮಿಯನ್ನು ಬೆಂಗಳೂರಿನವರಿಗೆ ಮಾರಾಟ ಮಾಡಬಾರದು. ಒಂದಲ್ಲ ಒಂದು ದಿನ ಇಲ್ಲಿನ ಗ್ರಾಮಗಳು ಬೆಂಗಳೂರು ಸೇರುತ್ತವೆ. ಆಗ, ಇಲ್ಲಿನ ಭೂಮಿಗೆ ಅಡಿ ಲೆಕ್ಕದಲ್ಲಿ ಬೆಲೆ ಕಟ್ಟಲಾಗುತ್ತದೆ. ಆದ ಕಾರಣ ನನ್ನ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಿ' ಎಂದು ಹೇಳಿದರು.

'ಕನಕಪುರವನ್ನು ಜಿಲ್ಲಾ ಕೇಂದ್ರ ಮಾಡುವ ಕುರಿತು ಸಾರ್ವಜನಿಕವಾಗಿ ಚರ್ಚೆ ಮಾಡಲು ಹೋಗುವುದಿಲ್ಲ' ಎಂದೂ ಉಪ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

ಆಸ್ತಿ ಸಕ್ರಮಕ್ಕೆ ಹೊಸ ನಾಟಕ: ಎಚ್‌ಡಿಕೆ

ಒಂದನೇ ಪುಟದಿಂದ

'ಕನಕಪುರವು ರಾಮನಗರ ಜಿಲ್ಲೆಯಲ್ಲೇ ಉಳಿಯಬೇಕು. ಕನಕಪುರ ಸೇರಿ ನಾಲ್ಕು ವಿಧಾನಸಭಾ ಕ್ಷೇತ್ರಗಳ ಜನರೂ ಒಟ್ಟಾಗಿ ಒಂದೇ ಜಿಲ್ಲೆಯಲ್ಲಿ ಉಳಿಯಲಿದ್ದಾರೆ. ಶಿವಕುಮಾರ್ ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದಿದ್ದಾರೆ.

'ಬೆಂಗಳೂರಿನಿಂದ ಕನಕಪುರವು 52 ಕಿ.ಮೀ. ದೂರದಲ್ಲಿದೆ. ರಾಮನಗರ 25 ಕಿ.ಮೀ. ದೂರದಲ್ಲಿದೆ. ಜನರಿಗೆ ಯಾವುದು ಅನುಕೂಲ? ದಿನ ಬೆಳಗಾದರೆ ಕನಕಪುರದವರು ಬೆಂಗಳೂರಿಗೆ ಅಲೆಯಬೇಕೆ? ರಾಮನಗರ ಜಿಲ್ಲೆಯು ಕನಕಪುರ, ರಾಮನಗರ, ಚನ್ನಪಟ್ಟಣ ಹಾಗೂ ಮಾಗಡಿ ಕ್ಷೇತ್ರಗಳ ಜನರ ಬಹುಕಾಲದ ಕನಸು. ಅದನ್ನು ನಾನು ನನಸು ಮಾಡಿದ್ದೇನೆ' ಎಂದು ತಿರುಗೇಟು ಕೊಟ್ಟಿದ್ದಾರೆ.

'2006-2007ರಲ್ಲಿ ಕನಕಪುರ ಹೇಗಿತ್ತು? ಡಿಕೆಶಿ ಅವರು ನೆನಪು ಮಾಡಿಕೊಳ್ಳಬೇಕು. ಆಗಲೇ ಪಟ್ಟಣದ ಡಬಲ್ ರಸ್ತೆ ನಿರ್ಮಾಣ, ಕನಕಪುರ ಹೆಬ್ಬಾಗಿಲಿನಲ್ಲಿರುವ ಸೇತುವೆ ನಿರ್ಮಾಣಕ್ಕೆ ಯೋಜನೆ ಕೊಟ್ಟವನು ನಾನು. ಸಂಗಮದಲ್ಲಿ ಪ್ರವಾಹ ಬಂದಾಗಲೆಲ್ಲಾ ಅನೇಕರು ಹಗ್ಗ ಕಟ್ಟಿಕೊಂಡು ರಸ್ತೆ ದಾಟಲು ಹೋಗಿ ಸಾವನ್ನಪ್ಪುತ್ತಿದ್ದರು. ಇದನ್ನು ತಪ್ಪಿಸಲು ಅಲ್ಲಿ ಸೇತುವೆ ನಿರ್ಮಿಸಿ ಮಹದೇಶ್ವರ ಬೆಟ್ಟಕ್ಕೆ ಸುಲಭ ಸಂಪರ್ಕ ಕಲ್ಪಿಸುವ ಯೋಜನೆಗೆ ಇದೇ ಡಿ.ಕೆ.ಶಿವಕುಮಾರ್ ಅವರು 2006ರಲ್ಲಿಯೇ ವಿರೋಧ ಮಾಡಿದ್ದರು!' ಎಂದು ನೆನಪಿಸಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಮಾತನಾಡಿದ ಅವರು, 'ಕನಕಪುರದ ಕಲ್ಲುಬಂಡೆಗಳನ್ನು ಕರಗಿಸಿದವರ ಕಣ್ಣು ಇದೀಗ ರಾಮನಗರ ಜಿಲ್ಲೆಯ ಜಮೀನುಗಳ ಮೇಲೆ ಬಿದ್ದಿದೆ. ಅದಕ್ಕಾಗಿಯೇ ಬೆಂಗಳೂರು ಜಿಲ್ಲೆಗೆ ಸೇರಿಸುವ ಸಂಚು ನಡೆಸಿದ್ದಾರೆ' ಎಂದು ದೂರಿದರು.

ತಾಲ್ಲೂಕಿನ ಹಂಗರಹಳ್ಳಿಯಲ್ಲಿ ಮಾತನಾಡಿದ ಅವರು, ರಾಮನಗರ ಜಿಲ್ಲೆ ಅವೈಜ್ಞಾನಿಕ ಎಂದು ಹೇಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿಸಿ ಭೂಮಿ ಬೆಲೆ ಹೆಚ್ಚಳ ಮಾಡುವ ದಂಧೆ ನಡೆಸಲು ಕನಕಪುರದವರು ಸಿದ್ಧರಾಗುತ್ತಿದ್ದಾರೆ ಎಂದು ಹೇಳಿದರು.

ಅಂಕಿ-ಅಂಶಗಳು

2007 — ರಾಮನಗರ ಜಿಲ್ಲೆ ಉದಯ

4 — ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ವಿಧಾನಸಭಾ ಕ್ಷೇತ್ರಗಳು

5 — ರಾಮನಗರ, ಮಾಗಡಿ, ಚನ್ನಪಟ್ಟಣ, ಕನಕಪುರ, ಹಾರೋಹಳ್ಳಿ ತಾಲ್ಲೂಕುಗಳು

10,82,739* — ಜಿಲ್ಲೆಯ ಜನಸಂಖ್ಯೆ

1 ಜೆಡಿಎಸ್, **3** ಕಾಂಗ್ರೆಸ್ — ಶಾಸಕರ ಬಲಾಬಲ

*(2011ರ ಜನಗಣತಿ ಪ್ರಕಾರ)

ಒಳ್ಳೆಯ ಚಿಂತನೆ

ಬೆಂಗಳೂರಿಗೆ ಹೊಂದಿಕೊಂಡಂತಿರುವ ರಾಮನಗರವನ್ನು ಬೆಂಗಳೂರು ಜಿಲ್ಲೆಗೆ ಸೇರಿಸಬೇಕು ಎಂಬುದು ಈ ಭಾಗದ ಜನರ ಕನಸಾಗಿತ್ತು. ಈ ಕುರಿತು ನಾವೂ ಒತ್ತಾಯಿಸಿದ್ದೆವು. ಇದೀಗ, ನಮ್ಮ ನಾಯಕರಾದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಭಿವೃದ್ಧಿಯ ನಿಟ್ಟಿನಲ್ಲಿ ಒಳ್ಳೆಯ ಚಿಂತನೆ ಮಾಡಿದ್ದಾರೆ ಎಂದು ರಾಮನಗರ ಶಾಸಕ ಎಚ್‌.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ಉತ್ತಮ ನಿರ್ಧಾರ

ರಾಮನಗರವನ್ನು ಜಿಲ್ಲೆ ಮಾಡುವ ಬದಲು, ಬೆಂಗಳೂರು ದಕ್ಷಿಣ ಜಿಲ್ಲೆ ಮಾಡುವಂತೆ ಜಿಲ್ಲೆ ರಚನೆ ಸಂದರ್ಭದಲ್ಲಿ ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದೆ. ಬೆಂಗಳೂರಿನೊಂದಿಗೆ ರಾಮನಗರ ಸೇರಿದ್ದರೆ ಬೇರೆಯೇ ಆಗಿರುತ್ತಿತ್ತು. ಹೆಸರು ಬದಲಾವಣೆಯು ಈಗಲೇ ತೀರ್ಮಾನವಾಗುವುದಿಲ್ಲ. ಬೆಂಗಳೂರು ಬ್ರ್ಯಾಂಡ್ ನೇಮ್ ಆಗಿರುವುದರಿಂದ ಹೀಗಾದರೆ ಒಳ್ಳೆಯದ್ದು ಎನ್ನುವ ಆಲೋಚನೆ ಉಪ ಮುಖ್ಯಮಂತ್ರಿ ಅವರದ್ದಾಗಿರಬಹುದು ಎಂದು ಮಾಗಡಿ ಕ್ಷೇತ್ರದ ಶಾಸಕ ಎಚ್‌.ಸಿ. ಬಾಲಕೃಷ್ಣ ಅವರು ಹೇಳಿದ್ದಾರೆ.

'ಸ್ವಾರ್ಥ ರಾಜಕಾರಣಿ'

ಬೆಂಗಳೂರು: 'ಡಿ.ಕೆ. ಶಿವಕುಮಾರ್ ಅತ್ಯಂತ ಸ್ವಾರ್ಥಿ ರಾಜಕಾರಣಿ. ಕನಕಪುರ ತಾಲ್ಲೂಕನ್ನು ಬೆಂಗಳೂರಿಗೆ ಸೇರಿಸಬೇಕೆಂಬ ಅವರ ಹೇಳಿಕೆಯಿಂದ ಆ ಪ್ರದೇಶಕ್ಕಿಂತ ಹೆಚ್ಚಾಗಿ ಸ್ವಂತ ಕುಟುಂಬದ ಅಭಿವೃದ್ಧಿಯ ಉದ್ದೇಶವಿದೆ' ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಟೀಕಿಸಿದ್ದಾರೆ.

'ಬರಗಾಲದಲ್ಲೂ ಜನ ಖುಷಿಯಾಗಿದ್ದಾರೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜನ ಬರಗಾಲದಲ್ಲೂ ಖುಷಿಯಾಗಿದ್ದಾರಲ್ಲಾ ಅನ್ನೋದೆ ನನಗೆ ಸಂತಸ ತಂದಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹರ್ಷ ವ್ಯಕ್ತಪಡಿಸಿದರು.

ಇಲ್ಲಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೋಮವಾರ ದಸರಾ ಅಂಗವಾಗಿ ಆಯೋಜಿಸಿದ್ದ ವೈಮಾನಿಕ ಪ್ರದರ್ಶನ ವೀಕ್ಷಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಮಾತನಾಡಿದರು.

'ದಸರಾ ಜನರ ಹಬ್ಬ, ನಾಡಹಬ್ಬ. ಜನರು ಖುಷಿಯಾಗಿರುವುದು ಮುಖ್ಯ. ಆದರೆ ಈ ಬಾರಿ ಬರಗಾಲ ಬಂದಿದೆ. ಅದೇ ತೊಂದರೆ. ಅದರ ನಡುವೆಯೂ ಜನರು ಖುಷಿಯಲ್ಲಿರುವುದು ಸಂತೋಷದ ವಿಷಯ. ನಾನು ಹಿಂದೆ ಮುಖ್ಯಮಂತ್ರಿ ಆಗಿದ್ದಾಗಲೂ ಏರ್ ಶೋ ಮಾಡಿಸಿದ್ದೆ' ಎಂದರು.

'ಬರ ಪರಿಹಾರ ಕಾಮಗಾರಿಗಳು ನಡೆಯುತ್ತಲೇ ಇವೆ. ದುಡಿಯುವ ಕೈಗಳಿಗೆ ಕೆಲಸ ಕೊಡುತ್ತಿದ್ದೇವೆ. ಜನ-ಜಾನುವಾರಿಗೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ಜಾನುವಾರುಗಳಿಗೆ ಮೇವು ಒದಗಿಸಲಾಗುತ್ತಿದೆ. ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ಕೊರತೆ ಆಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ. ಎಷ್ಟೇ ಹಣ ಖರ್ಚಾದರೂ ಕೊಡುತ್ತೇವೆ ಎಂದು ಹೇಳಿದ್ದೇನೆ. ಕುಡಿಯುವ ನೀರಿಗೆ ತೊಂದರೆ ಇಲ್ಲ; ಮೇವಿಗೆ ಇನ್ನೂ ಅಭಾವ ಆರಂಭವಾಗಿಲ್ಲ. ಸಾಕಷ್ಟು ಸಂಗ್ರಹವೂ ಇದೆ. ಹೊಸದಾಗಿ ಮೇವು ಬೆಳೆಯಲು ಹಾಗೂ ಸಂಗ್ರಹಿಸಲು ಕೂಡ ಸೂಚನೆ ನೀಡಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ಈ ಬಾರಿ ವಿದ್ಯುತ್‌ಗೆ ಬೇಡಿಕೆ ಜಾಸ್ತಿಯಾಗಿದೆ. ಮಳೆ ಇಲ್ಲದಿದ್ದರಿಂದ ರೈತರು, ನದಿಯಿಂದ ನೀರು ತೆಗೆದುಕೊಳ್ಳಲು ಪಂಪ್‌ಸೆಟ್ ಬಳಸುತ್ತಿದ್ದಾರೆ. ಹೀಗಾಗಿ, ವಿದ್ಯುತ್ ಜಾಸ್ತಿ ಬೇಕಾಗುತ್ತಿದೆ. ಆದ್ದರಿಂದ ಪಂಪ್‌ಸೆಟ್‌ಗಳಿಗೆ 5 ತಾಸು ನಿಯಮಿತವಾಗಿ ಪೂರೈಸುವಂತೆ ಸೂಚಿಸಿದ್ದೇನೆ ಎಂದರು.

ನಿಧನ ವಾರ್ತೆ

ಗೋಪಾಲ ಧುತ್ತರಗಿ

ಅಮೀನಗಡ (ಬಾಗಲಕೋಟೆ ಜಿಲ್ಲೆ): ರಂಗಭೂಮಿ ನಟ, ನಿರ್ದೇಶಕ ಗೋಪಾಲ ಪುಂಡಲೀಕಪ್ಪ ಧುತ್ತರಗಿ (68) ಮಂಗಳವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರು ಇದ್ದಾರೆ.

'ರೈತ ನಗಲಿಲ್ಲ,ಸರ್ಕಾರ ಉಳಿಯಲಿಲ್ಲ', 'ಹೆಣ್ಣು ಮಗಳು' ಸೇರಿ ಹಲವು ನಾಟಕಗಳಲ್ಲಿ ಗೋಪಾಲ ಅವರು ನಟಿಸಿದ್ದರು. ತಮ್ಮ ತಂದೆ, ರಂಗಕರ್ಮಿ ಪಿ.ಬಿ. ದುತ್ತರಗಿ ಅವರು ರಚಿಸಿದ್ದ 'ಸಂಪತ್ತಿಗೆ ಸವಾಲ್', 'ಮುದುಕನ ಮದುವೆ', 'ಸುಖದ ಸುಪ್ಪತ್ತಿಗೆ', 'ಸೊಸೆ ತಂದ ಸೌಭಾಗ್ಯ' ಸೇರಿದಂತೆ ಬಹುತೇಕ ನಾಟಕಗಳನ್ನು ನಿರ್ದೇಶಿಸಿದ್ದರು. ಐದು ದಶಕಗಳಿಂದ ರಂಗಭೂಮಿಯಲ್ಲಿ ತೊಡಗಿಕೊಂಡಿದ್ದರು.

ಸುಶೀಲಮ್ಮ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ, ರಾಜಕಾರಣಿ ದಿವಂಗತ ಹಾರನಹಳ್ಳಿ ರಾಮಸ್ವಾಮಿ ಅವರ ಪತ್ನಿ ಸುಶೀಲಮ್ಮ (92) ಸೋಮವಾರ ನಿಧನರಾದರು.

ಅನಾರೋಗ್ಯಕ್ಕೀಡಾಗಿದ್ದ ಅವರನ್ನು ಚಿಕಿತ್ಸೆಗಾಗಿ ನಗರದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿಲಾಗಿತ್ತು. ಅವರು ಆಸ್ಪತ್ರೆಯಲ್ಲಿ ಮೃತಪಟ್ಟರು. ಮೃತರಿಗೆ ಪುತ್ರರಾದ ಮಾಜಿ ಅಡ್ವೊಕೇಟ್ ಜನರಲ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಅಮೆರಿಕದ ಇಂಟೆಲ್ ಅಧ್ಯಕ್ಷರಾಗಿದ್ದ ಅರವಿಂದ ಹಾರನಹಳ್ಳಿ ಇದ್ದಾರೆ.

ಚಾಮರಾಜಪೇಟೆಯ ಟಿ.ಆರ್. ಮಿಲ್ ರುದ್ರಭೂಮಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಆರು ಆರೋಪಿಗಳ ಬಂಧನ
ಶ್ರೀನಿವಾಸಪುರ: ಕಾಂಗ್ರೆಸ್ ಮುಖಂಡ ಶ್ರೀನಿವಾಸನ್ ಹತ್ಯೆ

ಪ್ರಜಾವಾಣಿ ವಾರ್ತೆ

ಕೋಲಾರ/ಶ್ರೀನಿವಾಸಪುರ: ಕೋಲಾರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ, ಶ್ರೀನಿವಾಸಪುರದ ಕಾಂಗ್ರೆಸ್ ಮುಖಂಡ ಎಂ.ಶ್ರೀನಿವಾಸನ್ ಅಲಿಯಾಸ್ ಕೌನ್ಸಿಲರ್ ಸೀನಪ್ಪ (62) ಹತ್ಯೆ ನಡೆದ 18 ತಾಸಿನಲ್ಲಿಯೇ ಪೊಲೀಸರು ಆರು ಆರೋಪಿಗಳನ್ನು ಬಂಧಿಸಿದ್ದಾರೆ. ಪಾರಾಗಲು ಯತ್ನಿಸಿದ ಮೂವರ ಕಾಲಿಗೆ ಗುಂಡು ಹಾರಿಸಿ, ಬಂಧಿಸಲಾಗಿದೆ.

ಶ್ರೀನಿವಾಸಪುರ ಪಟ್ಟಣದ ಜಗಜೀವನ ಪಾಳ್ಯದ ವೇಣುಗೋಪಾಲ್, ಬಂಗಾರಪೇಟೆ ತಾಲ್ಲೂಕಿನ ಅಜ್ಜಪ್ಪನಹಳ್ಳಿಯ ಸಂತೋಷ್ ಕುಮಾರ್, ಕೋಲಾರ ನಗರದ ಮುನೇಂದ್ರ, ಮುಳಬಾಗಿಲಿನ ನಾಗೇಂದ್ರ, ಕೋಲಾರದ ಹರ್ಷಿತ್, ವೇಮಗಲ್‌ನ ಅರುಣ್ ಕುಮಾರ್ ಬಂಧಿತರು. ಗೃಹ ಸಚಿವ ಡಾ.ಪರಮೇಶ್ವರ ಮತ್ತು ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್ ಆಪ್ತ ವಲಯದಲ್ಲಿ ಶ್ರೀನಿವಾಸನ್ ಗುರುತಿಸಿಕೊಂಡಿದ್ದರು. ದಲಿತ ಮುಖಂಡರಾಗಿದ್ದರು. ಆರೋಪಿ ವೇಣುಗೋಪಾಲ್ ಕೂಡಾ ರಮೇಶ್ ಕುಮಾರ್ ಅವರ ಕಟ್ಟಾ ಅಭಿಮಾನಿಯಾಗಿದ್ದ. ಅವರ ಭಾವಚಿತ್ರವನ್ನು ಎದೆಗೆ ಹಚ್ಚೆ ಹಾಕಿಸಿಕೊಂಡಿದ್ದ ಎಂದು ತಿಳಿದು ಬಂದಿದೆ. ಇಬ್ಬರೂ ಹತ್ತಿರದ ಸಂಬಂಧಿಗಳು. 'ತಾಲ್ಲೂಕಿನ ಲಕ್ಷ್ಮಿಸಾಗರ ಗ್ರಾಮದ ಬಳಿ ಮಂಗಳವಾರ ನಸುಕಿನಲ್ಲಿ ಆರೋಪಿಗಳಾದ ವೇಣುಗೋಪಾಲ್, ಮನೀಂದ್ರ ಹಾಗೂ ಸಂತೋಷ್ ಅವರನ್ನು ಬಂಧಿಸಲು ಹೋದ ಪೊಲೀಸರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದಾರೆ. ಈ ವೇಳೆ ಪೊಲೀಸರು ವೇಣುಗೋಪಾಲ್, ಮನೀಂದ್ರ ಕಾಲಿಗೆ ಗುಂಡು ಹಾರಿಸಿದ್ದಾರೆ.

ಶ್ರೀನಿವಾಸನ್

ಭಾರತ ಚುನಾವಣಾ ಆಯೋಗ

ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ, ಬೆಂಗಳೂರು–560 001.

ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು, ಕರ್ನಾಟಕ ಆಗ್ನೇಯ, ಕರ್ನಾಟಕ ದಕ್ಷಿಣ ಮತ್ತು ಕರ್ನಾಟಕ ನೈರುತ್ಯ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿ ತಯಾರಿಕೆ.

ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಮೇರೆಗೆ ಸೂಚನೆ

ಮತದಾರರ ನೋಂದಣಿ ನಿಯಮಗಳು 1960ರ 31(4)ನೇ ನಿಯಮದ ಅನುಸಾರ ಬೆಂಗಳೂರು, ಕರ್ನಾಟಕ ಆಗ್ನೇಯ, ಕರ್ನಾಟಕ ದಕ್ಷಿಣ ಮತ್ತು ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿಗಳು ದಿನಾಂಕ: **30ನೇ ಸೆಪ್ಟೆಂಬರ್ 2023** ರಂದು ಪ್ರಕಟಿಸಲಾದ ಸೂಚನೆಯಲ್ಲಿ ಸಂಬಂಧಿಸಿದ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಲು ಅರ್ಹರಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ನೋಂದಣಿ ನಿಯಮಗಳು 1960ಕ್ಕೆ ಲಗತ್ತಿಸಿರುವ ಮತ್ತು ದಿನಾಂಕ: 30ನೇ ಸೆಪ್ಟೆಂಬರ್ 2023ರ (1) ಇಂಡಿಯನ್ ಎಕ್ಸ್‌ಪ್ರೆಸ್ (ಕರ್ನಾಟಕ ಆವೃತ್ತಿ) ಹಾಗೂ (2) ಪ್ರಜಾವಾಣಿ (ಕರ್ನಾಟಕ ಆವೃತ್ತಿ) ದಿನಪತ್ರಿಕೆಗಳಲ್ಲಿ ಹಾಗೂ ದಿನಾಂಕ: 16ನೇ ಅಕ್ಟೋಬರ್, 2023ರಂದು ಡೆಕ್ಕನ್ ಹೆರಾಲ್ಡ್ (ಕರ್ನಾಟಕ ಆವೃತ್ತಿ) ಮತ್ತು ಕನ್ನಡ ಪ್ರಭ (ಕರ್ನಾಟಕ ಆವೃತ್ತಿ) ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುವ ಎರಡನೇ ಅನುಸೂಚಿಯಲ್ಲಿ ಪುನರುದ್ಧರಿಸಿರುವ ನಮೂನೆ 19ರಲ್ಲಿ ಅರ್ಜಿಯನ್ನು **6ನೇ ನವೆಂಬರ್, 2023** ಅಥವಾ ಅದಕ್ಕೂ ಮೊದಲು ಸಂಬಂಧಪಟ್ಟ ಮತದಾರರ ನೋಂದಣಾಧಿಕಾರಿಗಳ ಕಚೇರಿಗೆ ಕಳುಹಿಸಲು ಅಥವಾ ತಲುಪಿಸಲು ಕರೆ ನೀಡಲಾಗಿತ್ತು.

ಮೇಲೆ ತಿಳಿಸಲಾದ ಎಲ್ಲಾ ವ್ಯಕ್ತಿಗಳು ತಮ್ಮ ಹೆಸರನ್ನು ಇದುವರೆವಿಗೂ ಸೇರಿಸದೇ ಇದ್ದಲ್ಲಿ ನಿಗದಿತ ನಮೂನೆ 19ರಲ್ಲಿ ದಿನಾಂಕ: **6ನೇ ನವೆಂಬರ್, 2023** ರೊಳಗೆ ಅಥವಾ ಅದಕ್ಕೂ ಮುಂಚೆ ಅರ್ಜಿಗಳನ್ನು ಸಲ್ಲಿಸಬಹುದು. ಮೇಲ್ಕಂಡ ವಿವರಗಳು ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ ಇವರ ವೆಬ್‌ಸೈಟ್ ವಿಳಾಸ: **www.ceo.karnataka.gov.in** ರಲ್ಲಿ ಸಹ ಲಭ್ಯವಿದೆ.

ವಾಸಾಸಂಇ/ಉನಿ-ಸಿ.ಪಿ/1824/ಕೆಎಸ್‌ಎಂಸಿಎ/2023-24

'ವೈಕುಂಠ ಸಮಾರಾಧನೆ'

ಶ್ರೀ ಕೆ.ಸಿ ರಘು

ಆಹಾರ ತಜ್ಞರು ಮತ್ತು ಚಿಂತಕರು

05-03-1964 - 15-10-2023

ದಿನಾಂಕ **25-10-23** ರಂದು **ಬುಧವಾರ** ಬೆಳಗ್ಗೆ **11.30**ಕ್ಕೆ **ವೈಕುಂಠ ಸಮಾರಾಧನೆ**ಯನ್ನು ನೆರವೇರಿಸಲಾಗುವುದು

ವಿಳಾಸ :
ಕಲ್ಪತರು ರೆನ್ಯೆಸಾನ್ಸ್, ನಂ. 102, 9ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

ಇಂತಿ ದುಃಖತಪ್ತರು

ಪತ್ನಿ: **ಶ್ರೀಮತಿ ಆಶಾ ರಘು** ಮಗಳು : **ಕುಮಾರಿ ಉಪಾಸನಾ ರಘು**

ಕುಟುಂಬದವರು, ಬಂಧು ಮಿತ್ರರು ಮತ್ತು ಅಭಿಮಾನಿ ಬಳಗ

ಬುಧವಾರ ● ಅಕ್ಟೋಬರ್ 25, 2023 ಪ್ರಜಾವಾಣಿ

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗ ತಯಾರಿ ● ನಿವೃತ್ತ ಎಂಜಿನಿಯರ್‌ಗಳ ಬಳಕೆ

ಶೇ 40 ಕಮಿಷನ್: ಶೀಘ್ರ ತನಿಖೆ ಆರಂಭ

● ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಐದು ಪ್ರಮುಖ ಇಲಾಖೆಗಳ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು ಎಂಬ ಆರೋಪ ಕುರಿತು ನವೆಂಬರ್‌ನಿಂದ ತನಿಖೆ ಆರಂಭಿಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗ ಸಿದ್ಧತೆ ನಡೆಸಿದೆ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ 2019ರ ಜುಲೈನಿಂದ 2023ರ ಮಾರ್ಚ್‌ವರೆಗೆ ಕೈಗೊಂಡಿರುವ ಕಾಮಗಾರಿಗಳ ಕುರಿತು ಆಯೋಗ ತನಿಖೆ ನಡೆಸಲಿದೆ. ಅಂದಾಜು 50,000ಕ್ಕೂ ಹೆಚ್ಚು ಕಾಮಗಾರಿಗಳು ತನಿಖಾ ವ್ಯಾಪ್ತಿಗೆ ಬರಲಿವೆ. ಈ ಪೈಕಿ ತನಿಖೆಗಾಗಿ ಕೆಲವು ಕಾಮಗಾರಿಗಳನ್ನು ಆಯ್ದುಕೊಳ್ಳಲು ಸೂತ್ರವೊಂದನ್ನು ರೂಪಿಸುವ ಪ್ರಕ್ರಿಯೆ ಆರಂಭವಾಗಿದೆ.

'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಒದಗಿಸುತ್ತಿರುವ ಅನುದಾನದ ಶೇಕಡ 40ರಷ್ಟು ಲಂಚದ ರೂಪದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೇಬು ಸೇರುತ್ತಿದೆ' ಎಂದು ಆರೋಪಿಸಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ 2021ರ ಜುಲೈ 7ರಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ಆ ಪತ್ರದಲ್ಲಿ ಮಾಡಿದ್ದ ಆರೋಪಗಳನ್ನು ಆಧರಿಸಿಯೇ ತನಿಖೆ ನಡೆಸುವಂತೆ ರಾಜ್ಯ ಸರ್ಕಾರವು 2023 ಅಕ್ಟೋಬರ್ 7ರಂದು ಆಯೋಗಕ್ಕೆ ನೀಡಿರುವ ಸ್ಪಷ್ಟೀಕರಣದಲ್ಲಿ ತಿಳಿಸಿದೆ.

ಕಾಮಗಾರಿಗಳನ್ನು ಕೈಗೊಳ್ಳುವುದರಲ್ಲಿ ನಿಯಮಗಳ ಉಲ್ಲಂಘನೆ, ಕಾಮಗಾರಿಗಳ ವೆಚ್ಚದಲ್ಲಿ ಏರಿಕೆ, ಕಾಮಗಾರಿಗಳನ್ನೇ ನಡೆಸದೆ ಬಿಲ್ ಪಾವತಿಸಿರುವುದು, ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಉಲ್ಲಂಘನೆ, ಕಳಪೆ ಕಾಮಗಾರಿಗಳನ್ನು ಮಾಡಿರುವ ಆರೋಪಗಳ ಬಗ್ಗೆಯೂ ತನಿಖೆ ನಡೆಯಲಿದೆ. ಪ್ಯಾಕೇಜ್ ಟೆಂಡರ್ ಪದ್ಧತಿಯ ಸಾಧಕ– ಬಾಧಕಗಳು ಮತ್ತು ಅದನ್ನು ಮುಂದುವರಿಸಬೇಕೆ? ಬೇಡವೆ? ಎಂಬುದರ ಬಗ್ಗೆಯೂ ಆಯೋಗ ಅಧ್ಯಯನ ನಡೆಸಿ ಶಿಫಾರಸುಗಳನ್ನು ನೀಡಲಿದೆ.

ನಿವೃತ್ತ ಎಂಜಿನಿಯರ್‌ಗಳ ಬಳಕೆ: ತನಿಖೆಯಲ್ಲಿ ಸಹಕರಿಸಲು ವಿವಿಧ ಇಲಾಖೆಗಳ ನಿವೃತ್ತ ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳಲು ಆಯೋಗದ ಅಧ್ಯಕ್ಷರು ನಿರ್ಧರಿಸಿದ್ದಾರೆ. ತನಿಖೆಯ ವ್ಯಾಪ್ತಿಯಲ್ಲಿರುವ ಐದು ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಕೆಲವರನ್ನು ಆಯೋಗಕ್ಕೆ ನೇಮಿಸಲು ಪ್ರಸ್ತಾವ ಸಿದ್ಧಪಡಿಸಲಾಗುತ್ತಿದೆ.

'ಸೇವೆಯಲ್ಲಿರುವ ಎಂಜಿನಿಯರ್‌ಗಳನ್ನು ತನಿಖೆಗೆ ನೇಮಿಸಿಕೊಂಡರೆ ಹಿತಾಸಕ್ತಿ ಸಂಘರ್ಷಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಕಳಂಕರಹಿತ, ಅನುಭವಿ ಎಂಜಿನಿಯರ್‌ಗಳನ್ನು ಆಯೋಗಕ್ಕೆ ನೇಮಿಸಿಕೊಳ್ಳುತ್ತೇವೆ' ಎಂದು ನ್ಯಾ. ನಾಗಮೋಹನ್ ದಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಕುರಿತು ತನಿಖೆ ನಡೆಸಲು ಐದು ವಿಶೇಷ ತನಿಖಾ ತಂಡಗಳನ್ನು (ಎಸ್‌ಐಟಿ) ನೇಮಿಸಲಾಗಿದೆ. ಐದೂ ಎಸ್‌ಐಟಿಗಳ ಮುಖ್ಯಸ್ಥರ ಜತೆ ಸಭೆ ನಡೆಸಿರುವ ಆಯೋಗದ ಅಧ್ಯಕ್ಷರು, ಈಗ ನಡೆಯುತ್ತಿರುವ ತನಿಖೆಯಲ್ಲಿ ಅನುಸರಿಸುತ್ತಿರುವ ವಿಧಾನಗಳ ಕುರಿತು ಮಾಹಿತಿ ಪಡೆದಿದ್ದಾರೆ. ಒಂದೇ ಕಾಮಗಾರಿ ಕುರಿತು ಹಲವು ತನಿಖೆ ನಡೆಯುವುದನ್ನು ತಪ್ಪಿಸಲು ಸಮನ್ವಯದಿಂದ ಕೆಲಸ ಮಾಡಲು ಆಯೋಗ ತೀರ್ಮಾನಿಸಿದೆ.

ಆರಂಭದಲ್ಲೇ ವಿಳಂಬ

ಶೇ 40ರಷ್ಟು ಕಮಿಷನ್ ಆರೋಪದ ಕುರಿತು ತನಿಖೆ ನಡೆಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ಆಯೋಗ ನೇಮಿಸಿ ಇದೇ ಆಗಸ್ಟ್ 25ರಂದು ಆದೇಶ ಹೊರಡಿಸಲಾಗಿತ್ತು. ಆದೇಶದ ಪ್ರತಿಯು ಸೆಪ್ಟೆಂಬರ್ ಮೊದಲ ವಾರ ನಾಗಮೋಹನ್ ದಾಸ್ ಅವರ ಕೈಸೇರಿತ್ತು.

ಆದೇಶದಲ್ಲಿ ಗೊಂದಲಗಳಿದ್ದ ಕಾರಣದಿಂದ ಕೆಲವು ವಿಷಯಗಳಲ್ಲಿ ಸ್ಪಷ್ಟನೆ ಕೋರಿ ಅಧ್ಯಕ್ಷರು ಪತ್ರ ಬರೆದಿದ್ದರು. ಅಕ್ಟೋಬರ್ 7ರಂದು ಸ್ಪಷ್ಟನೆ ನೀಡಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ತನಿಖಾ ವ್ಯಾಪ್ತಿಯ ಕುರಿತು ವಿವರಣೆ ಒದಗಿಸಿತ್ತು. ಆ ಬಳಿಕ ಆಯೋಗವು ತನಿಖಾ ಸಿದ್ಧತೆಯನ್ನು ಆರಂಭಿಸಿತ್ತು.

ದೂರು ಸಲ್ಲಿಸಲು ಅವಕಾಶ

ತನಿಖಾ ವ್ಯಾಪ್ತಿಯಲ್ಲಿರುವ ಐದು ಇಲಾಖೆಗಳ ಕಾಮಗಾರಿಗಳಲ್ಲಿ ಅಕ್ರಮ, ನಿಯಮ ಉಲ್ಲಂಘನೆ, ಭ್ರಷ್ಟಾಚಾರ ನಡೆದಿರುವ ಕುರಿತು ಮಾಹಿತಿಗಳಿದ್ದರೆ ಆಯೋಗಕ್ಕೆ ದೂರು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಕಟ್ಟಡದ ಮೂರನೇ ಮಹಡಿಯಲ್ಲಿರುವ ಆಯೋಗದ ಕಚೇರಿಗೆ ನೇರವಾಗಿ ಅಥವಾ ಆಯೋಗದ ಇ-ಮೇಲ್ justicedasinquirycommission@gmail.com ವಿಳಾಸಕ್ಕೆ ದೂರು ಸಲ್ಲಿಸಬಹುದು. ನವೆಂಬರ್ 10ರವರೆಗೂ ದೂರು ಸಲ್ಲಿಸಲು ಅವಕಾಶವಿದೆ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ರಾಕ್ಷಸ ದಹನ

ದಸರಾ ಹಬ್ಬದ ಅಂಗವಾಗಿ ರಾವಣ, ಮೇಘನಾದ ಮತ್ತು ಕುಂಭಕರ್ಣರ ಪ್ರತಿಕೃತಿಗಳನ್ನು ಪಟಾಕಿಗಳಿಂದ ಮಂಗಳವಾರ ಅಮೃತಸರದಲ್ಲಿ ದಹನ ಮಾಡಲಾಯಿತು –ಪಿಟಿಐ ಚಿತ್ರ

'ನಿಗಮ, ಮಂಡಳಿಗಳಿಗೆ ಶೀಘ್ರ ನೇಮಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ, ಮಂಡಳಿಗಳಿಗೆ ಅಧ್ಯಕ್ಷ– ಉಪಾಧ್ಯಕ್ಷರ ಮತ್ತು ಕೆಪಿಸಿಸಿಗೆ ಹೊಸ ಕಾರ್ಯಾಧ್ಯಕ್ಷರು ಸೇರಿದಂತೆ ಕೆಲವು ಪದಾಧಿಕಾರಿಗಳ ನೇಮಕ ಪ್ರಕ್ರಿಯೆ ಶೀಘ್ರದಲ್ಲಿ ನಡೆಯಲಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಿಗಮ, ಮಂಡಳಿಗಳಿಗೆ ನೇಮಕ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೊತೆ ಅ. 20ರಂದು ಮೊದಲ ಸುತ್ತಿನ ಮಾತುಕತೆ ನಡೆಸಬೇಕಿತ್ತು. ಆದರೆ, ಆ ದಿನ ಬೇರೆ ಕೆಲಸಗಳು ಬಂದ ಕಾರಣ ಚರ್ಚೆ ನಡೆಸಲು ಸಾಧ್ಯವಾಗಿಲ್ಲ. ದಸರಾ ನಂತರ ಚರ್ಚೆ ನಡೆಸುತ್ತೇವೆ' ಎಂದರು.

'ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ರಾಜಸ್ಥಾನ ಸೇರಿದಂತೆ ಇತರ ರಾಜ್ಯಗಳ ವಿಧಾನಸಭೆ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿದ್ದಾರೆ. ಮೊದಲು ನಾವು ಸಭೆ ನಡೆಸಿ, ಬಳಿಕ ಅವರ ಜೊತೆಗೂ ಚರ್ಚೆ ನಡೆಸುತ್ತೇವೆ' ಎಂದರು.

'ಶಾಸಕರಿಗೆ, ಕಾರ್ಯಕರ್ತರಿಗೆ ಅಧಿಕಾರ ನೀಡಬೇಕು ಎನ್ನುವ ಹಂಬಲ ತೀವ್ರವಾಗಿ ನಮಗೂ ಇದೆ. ನಾನೂ ಒಬ್ಬ ಕಾರ್ಯಕರ್ತನಾಗಿ ಈ ಮಾತನ್ನು ಹೇಳುತ್ತಿದ್ದೇನೆ' ಎಂದೂ ಹೇಳಿದರು.

ಈ ಮಧ್ಯೆ, ಲೋಕಸಭೆ ಚುನಾವಣೆ ಹತ್ತಿರದಲ್ಲಿರುವುದರಿಂದ ಶಾಸಕರನ್ನು ಮೊದಲು ನಿಗಮ, ಮಂಡಳಿಗಳಿಗೆ ನೇಮಿಸಿ, ಮುಂದಿನ ದಿನಗಳಲ್ಲಿ ಕಾರ್ಯಕರ್ತರನ್ನು ಪರಿಗಣಿಸಲು ಮುಖ್ಯಮಂತ್ರಿ ಒಲವು ಹೊಂದಿದ್ದಾರೆ ಎನ್ನಲಾಗಿದೆ. ಆದರೆ, ಶಾಸಕರ ಜೊತೆಗೆ ಒಂದಷ್ಟು ಕಾರ್ಯಕರ್ತರನ್ನು ನೇಮಿಸಿಕೊಳ್ಳಲು ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಸೇರ್ಪಡೆ ಇಂದು: ಶಿವಮೊಗ್ಗ ಜಿಲ್ಲೆ ಜೆಡಿಎಸ್ ಘಟಕದ ಅಧ್ಯಕ್ಷ ಎಂ. ಶ್ರೀಕಾಂತ್ ಅವರು ಬುಧವಾರ (ಅ. 25) ಕಾಂಗ್ರೆಸ್‌ಗೆ ಸೇರ್ಪಡೆ ಆಗಲಿದ್ದಾರೆ.

ಸುದ್ದಿ 2 ನಿಮಿಷ

ಕುಂದಾ ಗ್ರಾಮ: ಬೃಹತ್ ಉಡ ಪತ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆಯ ತಾಲ್ಲೂಕಿನ ಕುಂದಾ ಗ್ರಾಮದಲ್ಲಿ ಸುಮಾರು 6 ಅಡಿ ಉದ್ದದ, ಬೃಹತ್ ಗಾತ್ರದ ಉಡ ಕಂಡುಬಂದಿದೆ.

ಇಲ್ಲಿನ ಕೊಡಂದೇರ ದಿಲೀಪ್ ಅವರ ಮನೆ ಸಮೀಪ ಕಂಡು ಬಂದ ಉಡ, ಅವರ ಮನೆಯ ಕಾಂಪೌಂಡ್‌ಗೆ ಕುತ್ತಿಗೆ ಹಾಕಿ ಇಣುಕಿ ನೋಡುತ್ತ ಕೆಲಹೊತ್ತು ನಿಂತಿತ್ತು. ಬಳಿಕ ಕಾಡಿನಲ್ಲಿ ಮರೆಯಾಯಿತು.

'ಇಷ್ಟು ದೊಡ್ಡ ಗಾತ್ರದ ಉಡವನ್ನು ಈ ಹಿಂದೆ ಇಲ್ಲಿ ನೋಡಿರಲಿಲ್ಲ' ಎಂದು ಸ್ಥಳೀಯರು ತಿಳಿಸಿದ್ದಾರೆ. ಕೆಲವರು ಉಡದ ವಿಡಿಯೊ ಹಾಗೂ ಫೋಟೊಗಳನ್ನು ತೆಗೆದಿದ್ದಾರೆ. ಸಮೀಪದಲ್ಲೇ ಕುಂದಾಬೆಟ್ಟ, ದಟ್ಟ ಅರಣ್ಯವಿದೆ. ಅಲ್ಲಿ, ದೊಡ್ಡ ಗವಿಗಳು, ಬಂಡೆಗಳ ಭಾಗದಿಂದ ಉಡ ಬಂದಿರುವ ಸಾಧ್ಯತೆ ಇದೆ ಎನ್ನಲಾಗಿದೆ.

'ಜಿಲ್ಲೆಯಲ್ಲಿ ಉಡಗಳಿವೆ. ದೊಡ್ಡ ಗಾತ್ರದವು ಅಪರೂಪ. ಬಹಳಷ್ಟು ಬೇಟೆಗೆ ಬಲಿಯಾಗಿವೆ. ಸದ್ಯ, ಕಾಣಿಸಿಕೊಂಡ ಉಡವು ಜಗತ್ತಿನಲ್ಲೇ ಅಪರೂಪ ಎನಿಸುವ ಕೊಮೊಡೊ ಡ್ರ್ಯಾಗನ್' ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಅದನ್ನು ನಿರಾಕರಿಸಿರುವ ಇಲ್ಲಿನ ಡಿಆರ್‌ಎಫ್‌ಒ ದಿವಾಕರ್, 'ಅದು ಕೊಮೊಡೊ ಡ್ರ್ಯಾಗನ್ ಎಂಬುದು ಖಚಿತವಾಗಿಲ್ಲ. ಜನ ಭಯಪಡಬೇಕಿಲ್ಲ. ಮತ್ತೊಮ್ಮೆ ಕಾಣಿಸಿದರೆ ಮಾಹಿತಿ ನೀಡುವಂತೆ ಸ್ಥಳೀಯರಿಗೆ ತಿಳಿಸಲಾಗಿದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ರಾಜ್ಯೋತ್ಸವ ಪ್ರಶಸ್ತಿ: ಉನ್ನತ ಮಟ್ಟದ ಸಭೆ ನಾಳೆ

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇದೇ 26ರಂದು ಬೆಳಿಗ್ಗೆ 11 ಗಂಟೆಗೆ ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯ 30 ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯು ವಿವಿಧ ಕ್ಷೇತ್ರಗಳಲ್ಲಿ ಸಾಧಕರ ಆಯ್ಕೆಗೆ ಸಂಬಂಧಿಸಿದಂತೆ ಈಗಾಗಲೇ ಹಲವು ಸಭೆಗಳನ್ನು ನಡೆಸಿದೆ.

ಸೇವಾ ಸಿಂಧು ಪೋರ್ಟಲ್ ಮೂಲಕ 25 ಸಾವಿರಕ್ಕೂ ಅಧಿಕ ನಾಮನಿರ್ದೇಶನಗಳು ಸಲ್ಲಿಕೆಯಾಗಿದ್ದು, ಕೆಲವರು ಭೌತಿಕವಾಗಿಯೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅರ್ಜಿ ಸಲ್ಲಿಸಿದ್ದಾರೆ. ತಜ್ಞರ ಸಲಹಾ ಸಮಿತಿಯು ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು1:2 ಅನುಪಾತದಲ್ಲಿ ಸಿದ್ಧಪಡಿಸಿ, ಅದನ್ನು ಮುಖ್ಯಮಂತ್ರಿಗೆ ಸಲ್ಲಿಸಲಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ಗುರುವಾರ ನಡೆಯುವ ಸಭೆಯಲ್ಲಿ 68 ಮಂದಿಯನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ.

ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿ ಇದಾಗಿದ್ದು, ಸಾಹಿತ್ಯ, ಸಂಗೀತ, ಸಮಾಜಸೇವೆ ಸೇರಿ ಕ್ಷೇತ್ರವಾರು ಆಯ್ಕೆಯಾದವರಿಗೆ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ತಲಾ ₹ 5 ಲಕ್ಷ ನಗದು, 25 ಗ್ರಾಂ ಚಿನ್ನದ ಪದಕ ಹಾಗೂ ಸ್ಮರಣಿಕೆ ಒಳಗೊಂಡಿದೆ.

ಕಾವೇರಿ ಹೋರಾಟ 50ನೇ ದಿನಕ್ಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ 50 ದಿನ ಪೂರೈಸಿದೆ. ಆದರೂ ಸರ್ಕಾರ ಸ್ಪಂದಿಸುತ್ತಿಲ್ಲ' ಎಂದು ಆರೋಪಿಸಿ ಜಿಲ್ಲಾ ಹಿತರಕ್ಷಣಾ ಸಮಿತಿ ಸದಸ್ಯರು ಮಂಗಳವಾರ ಕರಾಳ ದಿನ ಆಚರಿಸಿದರು.

ನಗರದ ಜೆ.ಸಿ.ವೃತ್ತದಿಂದ ಸರ್ ಎಂ.ವಿ ಪ್ರತಿಮೆವರೆಗೆ ಕಪ್ಪು ಬಾವುಟ ಹಿಡಿದು ಮೆರವಣಿಗೆ ನಡೆಸಿದರು. ಮಾನವ ಸರಪಳಿ ರಚಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ತೀವ್ರ ಬರ ಕಾಡುತ್ತಿದೆ. ರೈತರು ಬೆಳೆ ರಕ್ಷಣೆಗೆ ಪರದಾಡುತ್ತಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ತಮಿಳುನಾಡಿಗೆ ನೀರು ಬಿಟ್ಟು ದಸರಾ ಆಚರಿಸುತ್ತಿದ್ದಾರೆ. ವಿಜಯದಶಮಿ ರೈತರ ಪಾಲಿಗೆ ಕರಾಳ ದಿನವಾಗಿದೆ' ಎಂದು ರೈತ ಹಿತರಕ್ಷಣಾ ಸಮಿತಿ ನಾಯಕಿ ಸುನಂದಾ ಜಯರಾಂ ಟೀಕಿಸಿದರು.

'ಹೋರಾಟಗಾರರನ್ನು ಕರೆದು ಸರ್ಕಾರ ಮಾತನಾಡಿಲ್ಲ. ಅಧಿಕಾರಿಗಳು ಭೇಟಿಯಾಗಿಲ್ಲ. ರೈತರನ್ನು ನಿರ್ಲಕ್ಷ್ಯ ಮಾಡಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕು' ಎಂದು ಕಿಡಿಕಾರಿದರು.

'ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಹೋರಾಟ ಬೆಂಬಲಿಸುವುದಾಗಿ ತಿಳಿಸಿದ್ದಾರೆ. ಅವರ ಜೊತೆಗೂಡಿ ಮುಖ್ಯಮಂತ್ರಿಯನ್ನು ಭೇಟಿಯಾಗಿ ಕಾನೂನು ಹೋರಾಟದ ಬಗ್ಗೆ ಚರ್ಚಿಸಲಾಗುವುದು' ಎಂದರು.

'₹ 20 ಸಾವಿರಕ್ಕೆ ಹುಲಿ ಉಗುರು ಖರೀದಿ'

ವನ್ಯಜೀವಿ ಸಂರಕ್ಷಣಾ ಕಾಯ್ದೆ: 'ಬಿಗ್‌ಬಾಸ್' ಮನೆಯಲ್ಲಿದ್ದ ವರ್ತೂರು ಸಂತೋಷ್ ಬಂಧನ

ಪ್ರಜಾವಾಣಿ ವಾರ್ತೆ

ವರ್ತೂರು ಸಂತೋಷ್

ಬೆಂಗಳೂರು: ಹುಲಿ ಉಗುರು ಧರಿಸಿದ್ದ ಆರೋಪದಡಿ 'ಬಿಗ್‌ಬಾಸ್' ರಿಯಾಲಿಟಿ ಶೋ ಸ್ಪರ್ಧಿ ವರ್ತೂರು ಸಂತೋಷ್ (34) ಅವರನ್ನು ಕಗ್ಗಲೀಪುರ ವಲಯ ಅರಣ್ಯಾಧಿಕಾರಿ ನೇತೃತ್ವದ ತಂಡ ಬಂಧಿಸಿದ್ದು, ಆರೋಪಿಯನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ವರ್ತೂರು ನಿವಾಸಿ ಸಂತೋಷ್, ಕಲರ್ಸ್ ಕನ್ನಡ ವಾಹಿನಿಯ 10ನೇ ಆವೃತ್ತಿಯ 'ಬಿಗ್‌ಬಾಸ್' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದರು. ಬೆಂಗಳೂರು ಹೊರವಲಯದಲ್ಲಿರುವ 'ಬಿಗ್‌ಬಾಸ್' ಮನೆಗೆ ಭಾನುವಾರ ಸಂಜೆ ಹೋಗಿದ್ದ ವಲಯ ಅರಣ್ಯಾಧಿಕಾರಿ ಗೋವಿಂದರಾಜು ನೇತೃತ್ವದ ತಂಡ, ಸಂತೋಷ್ ಅವರನ್ನು ಬಂಧಿಸಿದೆ.

'ಹುಲಿಯ ಎರಡು ಉಗುರು ಒಳಗೊಂಡಿದ್ದ ಚಿನ್ನದ ಲಾಕೆಟ್‌ನ್ನು ಸಂತೋಷ್ ಧರಿಸಿದ್ದರು. ಹುಲಿಯನ್ನು ಕೊಂದು ಅದರಿಂದ ಉಗುರು ತೆಗೆದು ಮಾರಾಟ ಮಾಡಿರುವ ಅನುಮಾನ ವ್ಯಕ್ತಪಡಿಸಿದ್ದ ವ್ಯಕ್ತಿಯೊಬ್ಬರು ದೂರು ನೀಡಿದ್ದರು. ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಸಂತೋಷ್‌ನನ್ನು ಬಂಧಿಸಲಾಗಿದೆ' ಎಂದು ಅರಣ್ಯ ಇಲಾಖೆ ಮೂಲಗಳು ಹೇಳಿವೆ.

'ಆರೋಪಿಯಿಂದ ಹುಲಿ ಉಗುರುಗಳನ್ನು ಜಪ್ತಿ ಮಾಡಿ, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಜೊತೆಗೆ, ಉಗುರು ಬಗ್ಗೆ ಸಂತೋಷ್ ಹೇಳಿಕೆ ಪಡೆಯಲಾಗಿದೆ. ಇದೊಂದು ಜಾಮೀನು ರಹಿತ ಪ್ರಕರಣ. ಆರೋಪಿಯನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಬಿಡಲಾಗಿದೆ' ಎಂದಿವೆ.

ತಮಿಳುನಾಡಿನಲ್ಲಿ ಖರೀದಿ: 'ಮೂರು ವರ್ಷಗಳ ಹಿಂದೆ ತಮಿಳುನಾಡು ಹೊಸೂರು ಬಳಿಯ ಗ್ರಾಮವೊಂದರ ವ್ಯಕ್ತಿಯೊಬ್ಬರಿಂದ ₹ 20 ಸಾವಿರಕ್ಕೆ ಎರಡು ಉಗುರುಗಳನ್ನು ಖರೀದಿಸಿದ್ದೆ. ವರ್ತೂರಿನ ಚಿನ್ನ ವ್ಯಾಪಾರಿಯೊಬ್ಬರು ಉಗುರಿಗೆ ತಕ್ಕಂತೆ ಲಾಕೆಟ್ ಮಾಡಿಕೊಟ್ಟಿದ್ದರು. ಹುಲಿ ಉಗುರು ಧರಿಸುವುದು ಅಪರಾಧವೆಂಬುದು ನನಗೆ ಗೊತ್ತಿರಲಿಲ್ಲ' ಎಂದು ಸಂತೋಷ್ ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

'ಸಂತೋಷ್ ಹಾಗೂ ಇತರರ ಮೇಲಿನ ಆರೋಪ ಸಾಬೀತಾದರೆ, 7 ವರ್ಷಗಳ ಜೈಲು ಹಾಗೂ ₹5 ಲಕ್ಷದಿಂದ ₹10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ' ಎಂದು ಮೂಲಗಳು ಹೇಳಿವೆ.

ವರ್ತೂರು ಸಂತೋಷ್ ಅವರಿಂದ ಜಪ್ತಿ ಮಾಡಲಾದ ಹುಲಿ ಉಗುರುಗಳು ಹಾಗೂ ಚಿನ್ನದ ಲಾಕೆಟ್

ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಸಂಬಂಧ ಯಾವುದೇ ದೂರುಗಳು ಬಂದರೂ ಪರಿಶೀಲಿಸಿ ಕಾನೂನು ಕ್ರಮ ಜರುಗಿಸಲಾಗುವುದು

ರವೀಂದ್ರ, ಬೆಂಗಳೂರು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ

'ಚಿನ್ನದ ವ್ಯಾಪಾರಿ, ಸ್ನೇಹಿತನಿಗೆ ನೋಟಿಸ್'

'ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಸಂತೋಷ್ ಸ್ನೇಹಿತ ಹಾಗೂ ಚಿನ್ನದ ವ್ಯಾಪಾರಿಗೆ ನೋಟಿಸ್ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಹುಲಿ ಉಗುರು ನೀಡಿದ್ದ ವ್ಯಕ್ತಿ ಹೆಸರು ಗೊತ್ತಿಲ್ಲವೆಂದು ಸಂತೋಷ್ ಹೇಳುತ್ತಿದ್ದಾನೆ. ಹೀಗಾಗಿ, ಸ್ನೇಹಿತನನ್ನು ವಿಚಾರಣೆ ನಡೆಸಬೇಕಿದೆ. ಜೊತೆಗೆ, ಚಿನ್ನದ ಲಾಕೆಟ್ ಮಾಡಿಕೊಟ್ಟ ವ್ಯಾಪಾರಿಯ ಹೇಳಿಕೆ ಸಹ ಪಡೆಯಬೇಕಿದೆ' ಎಂದು ಹೇಳಿವೆ.

'ದರ್ಶನ್, ರಾಕ್‌ಲೈನ್ ಕೊರಳಲ್ಲೂ ಉಗುರು'

ನಟ ದರ್ಶನ್ ಹಾಗೂ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರು ಸಹ ಕೊರಳಿನಲ್ಲಿ ಹುಲಿ ಉಗುರಿನ ಲಾಕೆಟ್ ಧರಿಸುತ್ತಾರೆಂದು ಹೇಳಲಾಗುತ್ತಿದ್ದು, ಅವರಿಬ್ಬರ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

'ಸಂತೋಷ್ ಹಲವು ವರ್ಷಗಳಿಂದ ಲಾಕೆಟ್ ಧರಿಸಿದ್ದಾರೆ. ಆದರೆ, ರಿಯಾಲಿಟಿ ಶೋದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಅವರನ್ನು ಬಂಧಿಸಲಾಗಿದೆ. ಹುಲಿ ಉಗುರು ಧರಿಸಿದ್ದಾರೆ ಎನ್ನಲಾದ ದರ್ಶನ್, ರಾಕ್‌ಲೈನ್ ವೆಂಕಟೇಶ್ ಅವರನ್ನೂ ವಿಚಾರಣೆ ನಡೆಸಿ' ಎಂದು ಜನರು ಪ್ರತಿಕ್ರಿಯಿಸಿದ್ದಾರೆ.

ಶನಿ ದೇಗುಲದಲ್ಲಿ ತಪಾಸಣೆ

ಕುಣಿಗಲ್: ತಾಲ್ಲೂಕಿನ ಬಿದನಗೆರೆ ಸತ್ಯಶನೇಶ್ವರ ದೇವಾಲಯದ ಸಂಸ್ಥಾಪಕ ಧನಂಜಯ್ಯ ಸ್ವಾಮಿ ಅವರು ಹುಲಿ ಉಗುರಿನ ಪದಕ ಹಾಕಿಕೊಂಡಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು ವಲಯ ಅರಣ್ಯಾಧಿಕಾರಿ ತಂಡ ದೇವಾಲಯ ಮತ್ತು ಮನೆಯಲ್ಲಿ ಮಂಗಳವಾರ ಸಂಜೆ ತಪಾಸಣೆ ನಡೆಸಿತು.

ನಾಗರಾಜು ಎಂಬವರು ನೀಡಿದ ದೂರಿನ ಮೇಲೆ ತಾಲ್ಲೂಕು ವಲಯ ಅರಣ್ಯಾಧಿಕಾರಿ ಜಗದೀಶ್ ಮತ್ತು ತಂಡ ಬಿದನಗೆರೆಯಲ್ಲಿರುವ ಧನಂಜಯ್ಯ ಸ್ವಾಮಿ ಅವರಿಗೆ ಸೇರಿದ ಮನೆ ಮತ್ತು ದೇವಾಲಯಗಳಲ್ಲಿ ತಪಾಸಣೆ ನಡೆಸಿತು. ಆದರೆ, ಅಂತಹ ಪದಕ ಎಲ್ಲೂ ಸಿಕ್ಕಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. '2 ವರ್ಷದ ಹಿಂದೆ ಹುಲಿ ಉಗುರಿನ ಪದಕ ಇತ್ತು. ಕಪ್ಪು ಬಣ್ಣಕ್ಕೆ ತಿರುಗಿದ ಕಾರಣ ಎಸೆದಿರುವುದಾಗಿ ಧನಂಜಯ್ಯ ಸ್ವಾಮಿ ಹೇಳಿಕೆ ನೀಡಿದ್ದಾರೆ. ಆದರೂ ತನಿಖೆ ಮುಂದುವರೆಯುತ್ತಿದೆ' ಎಂದಿದ್ದಾರೆ.

ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಂಗಳವಾರ ಶಸ್ತ್ರಾಸ್ತ್ರಗಳಿಗೆ ಪೂಜೆ ಸಲ್ಲಿಸಿದರು – ಪಿಟಿಐ ಚಿತ್ರ

ರಕ್ಷಣಾ ಸಚಿವರಿಂದ ಆಯುಧ ಪೂಜೆ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಮಂಗಳವಾರ ಆಯುಧ ಪೂಜೆ ನೆರವೇರಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಚೀನಾದ ಗಡಿ ಸಮೀಪದ ಆಯಕಟ್ಟಿನ ಪ್ರಮುಖ ಪ್ರದೇಶಗಳಲ್ಲಿ ಸೇನಾ ಯೋಧರೊಂದಿಗೆ ದಸರಾ ಹಬ್ಬ ಆಚರಿಸಿದರು.

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಈ ವೇಳೆ ಸಿಂಗ್ ಅವರ ಜತೆಗಿದ್ದರು. ಅರುಣಾಚಲ ಪ್ರದೇಶದ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಭಾರತ ಸೇನೆಯ ಸನ್ನದ್ಧತೆಯನ್ನು ಪರಿಶೀಲಿಸಿದ ಸಚಿವರು, ಸೈನಿಕರ ಅಚಲ ಬದ್ಧತೆ ಮತ್ತು ಅಪ್ರತಿಮ ಧೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬುಮ್–ಲಾ ಮತ್ತು ಇತರ ಪ್ರಮುಖ ಪ್ರದೇಶಗಳಿಗೆ ಭೇಟಿ ನೀಡಿದ ಸಚಿವರು ಯೋಧರ ಜತೆ ಸಂವಾದ ನಡೆಸಿದರು. ಈಗಿನ ಜಾಗತಿಕ ಸನ್ನಿವೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ದೇಶದ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕಿದೆ ಎಂದು ಅವರು ಹೇಳಿದರು.

ತವಾಂಗ್ ಯುದ್ಧ ಸ್ಮಾರಕಕ್ಕೂ ಭೇಟಿ ನೀಡಿದ ರಕ್ಷಣಾ ಸಚಿವರು, ಪುಷ್ಪಗುಚ್ಛ ಇರಿಸಿ, 1962ರ ಚೀನಾದೊಂದಿಗಿನ ಯುದ್ಧದಲ್ಲಿ ಹುತಾತ್ಮರಾದ ಸೈನಿಕರಿಗೆ ಗೌರವ ಸಲ್ಲಿಸಿದರು.

ಹೃದಯಾಘಾತದಿಂದ ಸಾವು: ತನಿಖೆಗೆ ಆದೇಶ

ಗುಜರಾತ್: ನವರಾತ್ರಿ ಅವಧಿಯಲ್ಲಿ 28 ಮಂದಿ ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ವಿವಿಧೆಡೆ ಕಳೆದ ಒಂದು ವಾರದ ನವರಾತ್ರಿ ಅವಧಿಯಲ್ಲಿ ಒಟ್ಟು 28 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದು, ಈ ಸಾವಿನ ಬಗ್ಗೆ ನೈಜ ಕಾರಣ ಪತ್ತೆಹಚ್ಚಲು ಸರ್ಕಾರ ತನಿಖೆಗೆ ಆದೇಶಿಸಿದೆ.

ನವರಾತ್ರಿ ಸಂಭ್ರಮಾಚರಣೆಯಲ್ಲಿ ಸಾಂಪ್ರದಾಯಿಕ ಗಾರ್ಬಾ ನೃತ್ಯ ಪ್ರದರ್ಶಿಸುವ ವೇಳೆ ಹೃದಯಾಘಾತಕ್ಕೆ ತುತ್ತಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿ, ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ. ಮೃತರ ಸಂಬಂಧಿಕರು ಹಾಗೂ ಆಂಬುಲೆನ್ಸ್ ಸಿಬ್ಬಂದಿ ನೀಡಿರುವ ಮಾಹಿತಿ ಆಧರಿಸಿ ಈ ಸಾವಿನ ಸಂಖ್ಯೆಯನ್ನು ದೃಢೀಕರಿಸಲಾಗಿದೆ.

ಈ ಆರು ಮಂದಿ ಸಾವಿನ ಹೊರತಾಗಿ ಇದೇ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಇಬ್ಬರು ಮಹಿಳೆಯರು ಸೇರಿದಂತೆ 22 ಮಂದಿ ಹೃದಯಾಘಾತದಿಂದ ಮೃತಪಟ್ಟಿರುವುದು ವರದಿಯಾಗಿದೆ.

ತುರ್ತು ಸಭೆ ನಡೆಸಿದ ಸಚಿವ: ದುರಂತದ ಬಗ್ಗೆ ಕಳವಳಗೊಂಡ ಆರೋಗ್ಯ ಸಚಿವ ಋಷಿಕೇಶ್ ಪಟೇಲ್ ಅವರು ಸೋಮವಾರ ತುರ್ತು ಸಭೆ ನಡೆಸಿದರು. ಹೃದ್ರೋಗ ತಜ್ಞರು ಹಾಗೂ ಯು.ಎನ್. ಮೆಹ್ತಾ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

'ಒಂದು ವಾರದಲ್ಲಿ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟವರ ಸಾವಿನ ಬಗ್ಗೆ ಅಂಕಿಅಂಶ ಸಂಗ್ರಹಿಸಬೇಕು. ಇದರ ಹಿಂದಿರುವ ನೈಜ ಕಾರಣದ ಬಗ್ಗೆ ಸಂಶೋಧನೆ ನಡೆಸಿ ವರದಿ ಸಲ್ಲಿಸುವಂತೆ ಸಚಿವರು ನಿರ್ದೇಶನ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಆನಂದಿ ಬೆನ್ ಕಳವಳ: ಹೃದಯಾಘಾತ ಪ್ರಕರಣಗಳ ಬಗ್ಗೆ ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಹಾಗೂ ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಕಳವಳ ವ್ಯಕ್ತಪಡಿಸಿದ್ದಾರೆ.

750 ತುರ್ತು ಕರೆ ಸ್ವೀಕಾರ: ಅಕ್ಟೋಬರ್ 15ರಿಂದ ಗುಜರಾತ್‌ನಲ್ಲಿ ನವರಾತ್ರಿ ಸಂಭ್ರಮಾಚರಣೆ ಆರಂಭವಾಗಿತ್ತು. 15ರಿಂದ 22ರ ವರೆಗೆ ಸಂಜೆ 6ಗಂಟೆಯಿಂದ ರಾತ್ರಿ 2 ಗಂಟೆ ನಡುವೆ ಸುಮಾರು 750 ಹೃದಯ ಸಂಬಂಧಿ ತುರ್ತು ಕರೆಗಳನ್ನು ಸ್ವೀಕರಿಸಲಾಗಿದೆ ಎಂದು '108' ಆಂಬುಲೆನ್ಸ್ ವಿಭಾಗ ತಿಳಿಸಿದೆ.

ನೃತ್ಯ ಆಯೋಜಕರು ಕಡ್ಡಾಯವಾಗಿ ಪ್ರದರ್ಶನದ ಸ್ಥಳಗಳಲ್ಲಿ ಆಂಬುಲೆನ್ಸ್ ವಾಹನ ಮತ್ತು ವೈದ್ಯಕೀಯ ತಂಡವನ್ನು ನಿಯೋಜಿಸಬೇಕು ಎಂದು ನವರಾತ್ರಿ ಶುರುವಾಗುವುದಕ್ಕೂ ಮೊದಲು ಸರ್ಕಾರ ಸೂಚಿಸಿತ್ತು.

ನರ್ತಿಸುವಾಗ ಕುಸಿದು ಬಿದ್ದ ವಿದ್ಯಾರ್ಥಿ

ಖೇಡಾ ಜಿಲ್ಲೆಯ ಕಪಡ್ವಂಜ್ ಗ್ರಾಮದ ಮೈದಾನದಲ್ಲಿ ಶುಕ್ರವಾರ ರಾತ್ರಿ ಗಾರ್ಬಾ ನೃತ್ಯ ಆಯೋಜಿಸಲಾಗಿತ್ತು. ದ್ವಿತೀಯ ಪಿಯುಸಿ ಓದುತ್ತಿದ್ದ ವಿದ್ಯಾರ್ಥಿ ವೀರ್ ಶಾ ಉತ್ಸಾಹದಿಂದಲೇ ಪಾಲ್ಗೊಂಡಿದ್ದ. ನರ್ತಿಸುವಾಗ ಆತನಿಗೆ ಹೃದಯಾಘಾತ ಸಂಭವಿಸಿದ್ದರಿಂದ ದಿಢೀರ್ ಕುಸಿದು ಬಿದ್ದು ಮೂರ್ಛೆ ಹೋಗಿದ್ದಾನೆ.

ಕೂಡಲೇ, ಆತನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆತ ಬದುಕುಳಿಯಲಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಅಹಮದಾಬಾದ್ ಹೊರವಲಯದ ಹತಿಜನ್ ಪ್ರದೇಶದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ರವಿ ಪಾಂಚಾಲ್(28) ಎಂಬುವರು ಮೃತಪಟ್ಟಿದ್ದಾರೆ.

ವಡೋದರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಸಿದು ಬಿದ್ದ ಶಂಕರ್ ರಾಣಾ(55) ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ, ತಪಾಸಣೆ ನಡೆಸಿದ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದರು. ನವಸಾರಿ ಜಿಲ್ಲೆಯಲ್ಲಿ ಮೃಣಾಲ್ ಶುಕ್ಲಾ (31), ಪೋರಬಂದರ್ ಜಿಲ್ಲೆಯಲ್ಲಿ ರಾಜು ಆಲಾ (46) ಹಾಗೂ ರಾಜ್‌ಕೋಟ್‌ನಲ್ಲಿ ಕಾಂಚನ ಸಕ್ಸೇನಾ(47) ಎಂಬ ಮಹಿಳೆ ನೃತ್ಯ ಪ್ರದರ್ಶಿಸುವ ವೇಳೆ ಮೃತಪಟ್ಟಿದ್ದಾರೆ.

ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಭಾವ ಬೀರುತ್ತಿರುವ ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು: ಮೋಹನ್ ಭಾಗವತ್

'ಮಣಿಪುರ ಹಿಂಸೆಗೆ ಬಾಹ್ಯಶಕ್ತಿ ಕಾರಣ'

ಪ್ರಜಾವಾಣಿ ವಾರ್ತೆ

ಮುಂಬೈ: 'ಈಶಾನ್ಯ ರಾಜ್ಯ ಮಣಿಪುರದಲ್ಲಿ ನಡೆದ ಹಿಂಸಾಚಾರ ಕೃತ್ಯಗಳು ಯೋಜಿತವಾಗಿದ್ದವು. ಆ ರಾಜ್ಯದಲ್ಲಿನ ಈಗಿನ ಪರಿಸ್ಥಿತಿಗೆ 'ಬಾಹ್ಯ ಶಕ್ತಿಗಳು' ಕಾರಣ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮಂಗಳವಾರ ಹೇಳಿದರು.

'ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದವರು ಬಹಳ ಕಾಲದಿಂದ ಒಟ್ಟಿಗೆ ಬದುಕುತ್ತಿದ್ದಾರೆ. ಹೀಗಿರುವಾಗ ಗಡಿ ರಾಜ್ಯದಲ್ಲಿನ ಆಂತರಿಕ ಘರ್ಷಣೆ ಮತ್ತು ಪ್ರತ್ಯೇಕತಾ ಪ್ರವೃತ್ತಿಯ ಲಾಭ ಯಾರಿಗಾಗುತ್ತದೆ? ಹಿಂಸಾಚಾರ ಕೃತ್ಯಗಳಲ್ಲಿ ಹೊರಗಿನವರು ಭಾಗಿ ಆಗಿರಬಹುದೇ' ಎಂದು ಅವರು ಪ್ರಶ್ನಿಸಿದರು.

ನಾಗ್ಪುರದಲ್ಲಿ ಮಂಗಳವಾರ ನಡೆದ ವಿಜಯ ದಶಮಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಹಾಳುಗೆಡವಲು ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು ಮತ್ತು ಜಾಗೃತ ಶಕ್ತಿಗಳು ಮಾಧ್ಯಮ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮ ಪ್ರಭಾವವನ್ನು ಬಳಸುತ್ತಿವೆ' ಎಂದು ಆರೋಪಿಸಿದರು.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಮೂರು ದಿನ ಮಣಿಪುರದಲ್ಲಿದ್ದರು. ವಾಸ್ತವವಾಗಿ ಸಂಘರ್ಷಕ್ಕೆ ಪ್ರಚೋದನೆ ನೀಡಿದವರು ಯಾರು? ಆ ರಾಜ್ಯದಲ್ಲಿ ಹಿಂಸಾಚಾರ ನಡೆಯುತ್ತಿಲ್ಲ. ಹಿಂಸಾಚಾರವನ್ನು ಮಾಡಿಸಲಾಗುತ್ತದೆ. ಮಣಿಪುರದ ಅನಿಶ್ಚಿತತೆಯ ಲಾಭ ಪಡೆಯುವ ಆಸಕ್ತಿ ವಿದೇಶಿ ಶಕ್ತಿಗಳಿಗೂ ಇರಬಹುದು' ಎಂದು ಶಂಕೆ ವ್ಯಕ್ತಪಡಿಸಿದರು.

'ಏಷ್ಯಾ ಆಗ್ನೇಯ ಭಾಗದ ಭೌಗೋಳಿಕ ರಾಜಕಾರಣದ ಪಾತ್ರವು ಮಣಿಪುರದ ಹಿಂಸಾಚಾರ ಕೃತ್ಯಗಳ ಹಿಂದಿರಬಹುದು. ಅಲ್ಲಿ ಶಾಂತಿ ಸ್ಥಾಪಿಸುವ ಯತ್ನಗಳು ನಡೆಯುತ್ತಿದ್ದರೆ, ಕೆಲವೆಡೆ ಅಹಿತಕರ ಘಟನೆಗಳು ನಡೆಯುತ್ತಿದ್ದವು. ಇಂತಹ ಬೆಳವಣಿಗೆಗಳೇ ಸಮುದಾಯಗಳ ನಡುವಿನ ಅಂತರವನ್ನು ಹೆಚ್ಚಿಸಿತು' ಎಂದು ಅಭಿಪ್ರಾಯಪಟ್ಟರು.

'ಮಣಿಪುರದಲ್ಲಿ ಶಾಂತಿ ಸ್ಥಾಪಿಸಲು ಯತ್ನಿಸಿದ ಸಂಘದ ಕಾರ್ಯಕರ್ತರ ಬಗ್ಗೆ ನನಗೆ ಹೆಮ್ಮೆಯಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥರು ಇದೇ ಸಂದರ್ಭದಲ್ಲಿ ಶ್ಲಾಘಿಸಿದರು.

'ಭಾರತ, ಹಿಂದೂ ಸಮಾಜದ ಗುರುತು ಉಳಿಸಿಕೊಳ್ಳುವ ಅಪೇಕ್ಷೆ ಸಹಜ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಜಗತ್ತು ಕೂಡಾ ಈಗಿನ ಸವಾಲುಗಳನ್ನು ಎದುರಿಸಲು ಮತ್ತು ಸಮಕಾಲೀನ ಅಗತ್ಯಗಳಿಗೆ ಸ್ಪಂದಿಸಲು ಭಾರತ ತನ್ನದೇ ಮೌಲ್ಯ ಆಧರಿಸಿದ ಹೊಸ ಚಿಂತನೆಯೊಂದಿಗೆ ಉದಯಿಸಬೇಕು' ಎಂದು ಬಯಸುತ್ತಿದೆ ಎಂದು ವಿಶ್ಲೇಷಿಸಿದರು.

ಜಗತ್ತು ಈಗ ಧರ್ಮಾಂಧತೆ, ಅಹಂಕಾರ, ಧಾರ್ಮಿಕ ಅಂಧಾಭಿಮಾನದ ಪಿಡುಗುಗಳನ್ನು ಎದುರಿಸುತ್ತಿದೆ. ಮೂಲಭೂತವಾದಿತನ ಮತ್ತು ಸ್ವಹಿತಾಸಕ್ತಿಯ ಪರಿಣಾಮ ಮೂಡಿರುವ ಉಕ್ರೇನ್ ಅಥವಾ ಗಾಜಾ-ಪಟ್ಟಿಯಲ್ಲಿ ಸಂಘರ್ಷಗಳಿಗೆ ಪರಿಹಾರವು ಮರೀಚಿಕೆಯಾಗಿಯೇ ಇರುತ್ತದೆ ಎಂದು ಹೇಳಿದರು.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಮಂಗಳವಾರ ನಾಗ್ಪುರದಲ್ಲಿ ವಿಜಯದಶಮಿ ಉತ್ಸವದಲ್ಲಿ ಶಸ್ತ್ರಪೂಜೆ ನೆರವೇರಿಸಿದರು –ಪಿಟಿಐ ಚಿತ್ರ

ಜ. 22ರಂದು ರಾಮಮೂರ್ತಿ ಪ್ರತಿಷ್ಠಾಪನೆ

'ಅಯೋಧ್ಯೆಯಲ್ಲಿ ಶ್ರೀರಾಮನ ಮೂರ್ತಿಯನ್ನು ಜನವರಿ 22ರಂದು ಪ್ರತಿಷ್ಠಾಪಿಸಲಿದ್ದು, ಅಂದು ಈ ಸಂಭ್ರಮಾಚರಣೆಗೆ ದೇಶದಾದ್ಯಂತ ದೇವಸ್ಥಾನಗಳಲ್ಲಿ ಕಾರ್ಯಕ್ರಮ ಆಯೋಜಿಸಬೇಕು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದರು.

'ಕಾರ್ಯಕ್ರಮ ಆಯೋಜಿಸುವುದರಿಂದ ಪ್ರತಿಯೊಬ್ಬರ ಮನ, ಹೃದಯದಲ್ಲಿ ಶ್ರೀರಾಮನ ಕುರಿತು ಜಾಗೃತಿ ಮೂಡುತ್ತದೆ' ಎಂದು ಹೇಳಿದರು.

'ಏಕತೆ, ಅಭಿವೃದ್ಧಿಗೆ ಮತ ಚಲಾಯಿಸಿ'

2024ರ ಲೋಕಸಭೆ ಚುನಾವಣೆಯಲ್ಲಿ ಮತಗಳಿಗಾಗಿ ಜನರ ಭಾವನೆಗಳನ್ನು ಪ್ರಚೋದಿಸುವ ಯತ್ನ ನಡೆಯಬಹುದು. ಆದರೆ, ಏಕತೆ, ಭಾವೈಕ್ಯತೆ, ದೇಶದ ಅಸ್ಮಿತೆ, ಅಭಿವೃದ್ಧಿ ಗಮನಿಸಿಯೇ ಜನತೆ ಹಕ್ಕು ಚಲಾಯಿಸಬೇಕು ಎಂದು ಭಾಗವತ್ ಕೋರಿದರು.

ದೇಶದ ಏಕತೆ ಬಯಸುವವರು, ಆ ಕುರಿತ ಚಿಂತನೆಗೆ ಮೊದಲು ಎಲ್ಲ ಸಮಸ್ಯೆಗಳು ಅಂತ್ಯವಾಗಬೇಕು ಎಂದು ಬಯಸುವುದಿಲ್ಲ. ಕೆಲವು ಬೆಳವಣಿಗೆಗಳಿಂದ ವಿಚಲಿತರಾಗದೇ ಏಕತೆಗಾಗಿ ಶಾಂತ ಮತ್ತು ದೃಢಮನಸ್ಸಿನಿಂದ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ದೇಶದಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ ಬೆಳೆಸಲು, ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಲು 'ಟೂಲ್‌ಕಿಟ್' ಬಳಕೆಯಾಗಬಹುದು ಎಂದು ಹೇಳಿದರು.

'ಸಂಘರ್ಷಕ್ಕೆ ಪ್ರಚೋದಿಸಿದ್ದು ಬಿರೇನ್'

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಜನಾಂಗೀಯ ಕಲಹಕ್ಕೆ ಪ್ರಚೋದನೆ ನೀಡಿದ್ದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಎಂದು ಕುಕಿ ಸಮುದಾಯದ ಸಂಘಟನೆಯಾದ ಇಂಡಿಜೀನಿಯಸ್ ಟ್ರೈಬಲ್ ಲೀಡರ್ಸ್ ಫೋರಮ್ (ಐಟಿಎಲ್‌ಎಫ್) ಮಂಗಳವಾರ ಆರೋಪಿಸಿದೆ.

ಮಣಿಪುರದಲ್ಲಿ ಸಂಘರ್ಷಕ್ಕೆ ಪ್ರಚೋದನೆ ನೀಡಿದವರು ಯಾರು? ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಕೇಳಿರುವ ಪ್ರಶ್ನೆಗೆ ಐಟಿಎಲ್‌ಎಫ್ ಈ ಉತ್ತರ ನೀಡಿದೆ.

ಚುನಾವಣಾ ಕಣದಲ್ಲಿ...

ಸನಾತನ ಧರ್ಮ ನಾಶ ಯತ್ನದ ವಿರುದ್ಧ ಹೋರಾಟ: ತೋಮರ್

ಗ್ವಾಲಿಯರ್ (ಪಿಟಿಐ): ಸನಾತನ ಧರ್ಮ ನಾಶಪಡಿಸಲು ಮತ್ತು ದೇಶ ಒಡೆಯಲು ಬಯಸುವ ಶಕ್ತಿಗಳ ವಿರುದ್ಧ ಬಿಜೆಪಿ ಹೋರಾಡಲಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಬಿಜೆಪಿ ಮಾಧ್ಯಮ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, 'ನಮ್ಮ ಹೋರಾಟ ಕಾಂಗ್ರೆಸ್ ವಿರುದ್ಧ ಮಾತ್ರವಲ್ಲ, ದೇಶ ಒಡೆಯಲು ಮತ್ತು ಸನಾತನ ಧರ್ಮ ನಾಶಪಡಿಸಲು ಬಯಸುವ ಶಕ್ತಿಗಳ ವಿರುದ್ಧವೂ ಇದೆ' ಎಂದರು.

ಕಾಂಗ್ರೆಸ್ ಅಭಿವೃದ್ಧಿ ಕೆಲಸ ಮಾಡಿಲ್ಲ. ಈಗ ಸುಳ್ಳು ಭರವಸೆ, ಆಶ್ವಾಸನೆ ನೀಡುತ್ತಿದೆ ಎಂದರು. 'ವಿಧಾನ ಸಭಾ ಚುನಾವಣೆಗೆ ಬಿಜೆಪಿ ವರ್ಷವಿಡೀ ಸಿದ್ಧತೆ ಮಾಡಿದೆ ಮತ್ತು ಬೂತ್ ಮಟ್ಟದವರೆಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ' ಎಂದು ಹೇಳಿದರು. ದಿಮಾನಿ ವಿಧಾನಸಭಾ ಕ್ಷೇತ್ರದಿಂದ ತೋಮರ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ.

ಇ.ಡಿ. ದಾಳಿ ಕಾಂಗ್ರೆಸ್ ಗೆಲುವಿನ ಸೂಚಕ: ಗೆಹಲೋತ್

ಜೈಪುರ (ಪಿಟಿಐ): ಬಿಜೆಪಿಯು ಕಾಂಗ್ರೆಸ್ ಪಕ್ಷಕ್ಕೆ ಕಿರುಕುಳ ನೀಡುವ ಉದ್ದೇಶದಿಂದ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಬಳಕೆ ಮಾಡಿಕೊಳ್ಳುತ್ತಿದೆ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆರೋಪಿಸಿದ್ದಾರೆ.

'ರಾಜಸ್ಥಾನದಲ್ಲಿ ಇ.ಡಿ. ಅಧಿಕಾರಿಗಳು ಎಡೆಬಿಡದೆ ದಾಳಿ ನಡೆಸುತ್ತಿರುವುದು ಕಾಂಗ್ರೆಸ್ ಈ ಚುನಾವಣೆಯಲ್ಲಿ ಗೆಲ್ಲಲಿದೆ ಎಂಬುದಕ್ಕೆ ಪುರಾವೆಯಾಗಿದೆ. ರಾಜಸ್ಥಾನದಲ್ಲಿ ಜನರ ವಿಶ್ವಾಸಕ್ಕೆ ಪಾತ್ರವಾಗಲು ಸಾಧ್ಯವಾಗದ ಕಾರಣ ಬಿಜೆಪಿಯು ಇ.ಡಿ.ಯನ್ನು ಬಳಸಿಕೊಳ್ಳುತ್ತಿದೆ' ಎಂದು ಗೆಹಲೋತ್ ಅವರು ಎಕ್ಸ್ ವೇದಿಕೆಯಲ್ಲಿ ಬರೆದಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಕುರಿತ ತನಿಖೆಯ ಭಾಗವಾಗಿ ಇ.ಡಿ. ಹಲವೆಡೆ ಶೋಧ ನಡೆಸಿದೆ. ಈ ಹಿನ್ನೆಲೆಯಲ್ಲಿ ಗೆಹಲೋತ್ ಈ ಮಾತು ಆಡಿದ್ದಾರೆ

ಹಲವರು ಬಿಜೆಪಿ ಸೇರ್ಪಡೆ

ಜೈಪುರ (ಪಿಟಿಐ): ನಿವೃತ್ತ ಐಎಎಸ್ ಅಧಿಕಾರಿ ಅಂತರ್ ಸಿಂಗ್ ನೆಹ್ರಾ, ಕಾಂಗ್ರೆಸ್ ಮುಖಂಡ ಸುರೇಶ್ ಮಿಶ್ರಾ ಸೇರಿದಂತೆ ಹತ್ತು ಮಂದಿ ಸೋಮವಾರ ಬಿಜೆಪಿ ಸೇರಿದ್ದಾರೆ.

ನೆಹ್ರಾ ಜೈಪುರ ಜಿಲ್ಲಾಧಿಕಾರಿ ಆಗಿದ್ದರು. ಬ್ರಾಹ್ಮಣ ಸಮುದಾಯಕ್ಕೆ ಸೇರಿರುವ ಮಿಶ್ರಾ ಅವರು 2008ರ ವಿಧಾನಸಭಾ ಚುನಾವಣೆಯಲ್ಲಿ ಸಂಗನೇರ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಬಿಜೆಪಿಯ ಘನಶ್ಯಾಮ್ ತಿವಾರಿ ವಿರುದ್ಧ ಸೋಲು ಕಂಡಿದ್ದರು.

15 ದಿನ: ₹244 ಕೋಟಿ ನಗದು ವಶ

ಜೈಪುರ (ಪಿಟಿಐ): ವಿಧಾನಸಭಾ ಚುನಾವಣೆ ನಡೆಯುವ ರಾಜಸ್ಥಾನದಲ್ಲಿ ಕಾನೂನು ಜಾರಿ ಸಂಸ್ಥೆಗಳು ಕಳೆದ ಹದಿನೈದು ದಿನಗಳಲ್ಲಿ ₹244 ಕೋಟಿ ನಗದು ವಶಪಡಿಸಿಕೊಂಡಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪೊಲೀಸ್, ಅಬಕಾರಿ, ಆದಾಯ ತೆರಿಗೆ ಹಾಗೂ ಇತರ ಕಾನೂನು ಜಾರಿ ಸಂಸ್ಥೆಗಳು ಅಕ್ರಮ ನಗದು, ಮದ್ಯ, ಮಾದಕ ವಸ್ತು, ಚಿನ್ನ, ಬೆಳ್ಳಿ ಹಾಗೂ ಇತರ ವಸ್ತುಗಳನ್ನು ವಶಪಡಿಸಿಕೊಂಡಿವೆ. 2023ರಲ್ಲಿ ವಶಪಡಿಸಿಕೊಂಡಿರುವ ವಸ್ತುಗಳ ಒಟ್ಟು ಮೌಲ್ಯ ₹1,000 ಕೋಟಿ ದಾಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, 2021ರಲ್ಲಿ ₹322 ಕೋಟಿ, 2022ರಲ್ಲಿ ₹347 ಕೋಟಿ, ಮತ್ತು 2023ರಲ್ಲಿ ಇಲ್ಲಿಯವರೆಗೆ ₹1,021 ಕೋಟಿ ಆಗಿದೆ.

ಜೂನ್‌ನಿಂದ ಈವರೆಗೆ ನಗದು ಸೇರಿ ₹648 ಕೋಟಿ ಮೊತ್ತದ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಳೆದ ಹದಿನೈದು ದಿನಗಳಲ್ಲಿ ಪೊಲೀಸರು, ಆದಾಯ ತೆರಿಗೆ ಇಲಾಖೆ ಮತ್ತು ಇತರ ಏಜೆನ್ಸಿಗಳು ₹39.30 ಕೋಟಿ ನಗದು ಹಾಗೂ ₹20.12 ಕೋಟಿ ಮೌಲ್ಯದ 10.60 ಲಕ್ಷ ಲೀಟರ್ ಅಕ್ರಮ ಮದ್ಯ ವಶಪಡಿಸಿಕೊಂಡಿವೆ.

₹46.76 ಕೋಟಿ ಮೌಲ್ಯದ ಮಾದಕವಸ್ತು, ₹30.40 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಇತರ ಅಮೂಲ್ಯ ವಸ್ತುಗಳು ಮತ್ತು ಮತದಾರರಿಗೆ ಹಂಚಿಕೆ ಮಾಡಲು ಸಂಗ್ರಹಿಸಿದ್ದ ₹84.22 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಪ್ರವೀಣ್ ಗುಪ್ತಾ ಹೇಳಿದ್ದಾರೆ.

ಮಧ್ಯಪ್ರದೇಶ ವಿಧಾನಸಭಾ ಚುನಾವಣಾ ಕಣದಲ್ಲಿ ಎದುರಾಳಿಗಳಾಗಿರುವ ಸಹೋದರರು, ಅತ್ತೆ–ಮಾವ

ಕುಟುಂಬದ ಸದಸ್ಯರ ಮಧ್ಯೆ ಹಣಾಹಣಿ

ಭೋಪಾಲ್ (ಪಿಟಿಐ): ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್, ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಸಂಬಂಧಿಕರಿಗೆ ಟಿಕೆಟ್ ನೀಡಿರುವ ಕಾರಣ ಅಲ್ಲಿ ಕುಟುಂಬದ ಸದಸ್ಯರ ನಡುವೆ ಚುನಾವಣಾ ಹಣಾಹಣಿ ನಡೆಯಲಿದೆ.

230 ಸದಸ್ಯ ಬಲದ ವಿಧಾನಸಭೆಗೆ ನವೆಂಬರ್ 17ರಂದು ನಡೆಯಲಿರುವ ಚುನಾವಣೆಯಲ್ಲಿ ಸಹೋದರರು, ಚಿಕ್ಕಪ್ಪ-ಸೋದರಳಿಯ, ಅತ್ತೆ ಮತ್ತು ಮಾವ ಪರಸ್ಪರ ಸ್ಪರ್ಧಿಸುತ್ತಿದ್ದಾರೆ.

ಮಾಜಿ ವಿಧಾನಸಭಾ ಸ್ಪೀಕರ್, ಬಿಜೆಪಿ ಅಭ್ಯರ್ಥಿ ಸೀತಾಶರಣ್ ಶರ್ಮ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ತಮ್ಮ ಸಹೋದರ ಗಿರಿಜಾಶಂಕರ್ ಶರ್ಮ ವಿರುದ್ಧ ಕಣಕ್ಕಿಳಿದಿದ್ದಾರೆ. ಟಿಕೆಟ್ ಸಿಗದ ಕಾರಣ ಗಿರಿಜಾಶಂಕರ್ ಶರ್ಮ ಬಿಜೆಪಿ ತೊರೆದು ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದಾರೆ.

ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ನಿಧಿ ಸುನಿಲ್ ಜೈನ್ ಅವರು ತಮ್ಮ ಭಾವ, ಬಿಜೆಪಿ ಶಾಸಕ ಶೈಲೇಂದ್ರ ಜೈನ್ ಅವರನ್ನು ಎದುರಿಸುತ್ತಿದ್ದಾರೆ.

ಅದೇ ರೀತಿ ರೇವಾ ಜಿಲ್ಲೆಯ ಡಿಯೋಟಾಲಾಬ್‌ನಲ್ಲಿ ಕಾಂಗ್ರೆಸ್‌ನಿಂದ ಪದ್ಮೇಶ್ ಗೌತಮ್ ಕಣದಲ್ಲಿದ್ದಾರೆ. ಅವರ ವಿರುದ್ಧ ಅವರ ಚಿಕ್ಕಪ್ಪ ಗಿರೀಶ್ ಗೌತಮ್ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ.

ಬಿಜೆಪಿ ಶಾಸಕ ಸಂಜಯ್ ಶಾ ಅವರು ತಮ್ಮ ಹತ್ತಿರದ ಸಂಬಂಧಿ, ಕಾಂಗ್ರೆಸ್‌ನ ಅಭಿಜಿತ್ ಶಾ ವಿರುದ್ಧ ಹರ್ದಾ ಜಿಲ್ಲೆಯ ತಿಮರ್ನಿಯಲ್ಲಿ ಸ್ಪರ್ಧಿಸಿದ್ದಾರೆ.

ಗ್ವಾಲಿಯರ್ ಜಿಲ್ಲೆಯ ದಾಬ್ರಾದಲ್ಲಿ ಬಿಜೆಪಿಯ ಮಾಜಿ ಸಚಿವೆ ಇಮಾರ್ತಿ ದೇವಿ ಅವರು ತಮ್ಮ ಸಂಬಂಧಿ ಮತ್ತು ಕಾಂಗ್ರೆಸ್ ಶಾಸಕ ಸುರೇಶ್ ರಾಜೆ ಅವರನ್ನು ಎದುರಿಸುತ್ತಿದ್ದಾರೆ.

ಕೆಲವು ಸ್ಥಾನಗಳಿಗೆ ಸಂಬಂಧಿಕರ ನಡುವಿನ ಸ್ಪರ್ಧೆ ಕುರಿತ ಪ್ರಶ್ನೆಗೆ ರಾಜ್ಯ ಬಿಜೆಪಿ ವಕ್ತಾರ ಪಂಕಜ್ ಚತುರ್ವೇದಿ, 'ಮಧ್ಯಪ್ರದೇಶವು ಬಿಜೆಪಿಗೆ ಒಂದು ಕುಟುಂಬವಾಗಿದೆ. ಪಕ್ಷದ ಕಾರ್ಯಕರ್ತ ಈ ಕುಟುಂಬದ ಒಂದು ಭಾಗ. ಸೂಕ್ತ ಕಾರ್ಯಕರ್ತನನ್ನು ಕಣಕ್ಕಿಳಿಸುವ ಬಗ್ಗೆ ಪಕ್ಷ ನಿರ್ಧಾರ ತೆಗೆದುಕೊಳ್ಳುತ್ತದೆ' ಎಂದು ಹೇಳಿದರು.

'ಕಾಂಗ್ರೆಸ್ ವಂಶಪಾರಂಪರ್ಯ ಪಕ್ಷವಾಗಿದ್ದು, ಅಲ್ಲಿ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಒಂದೇ ಕುಟುಂಬ ತೆಗೆದುಕೊಳ್ಳುತ್ತದೆ. ಆದರೆ, ಬಿಜೆಪಿ ಕೇಡರ್ ಆಧಾರಿತ ಸಂಘಟನೆಯಾಗಿದೆ' ಎಂದರು.

ಮಧ್ಯಪ್ರದೇಶದ ಸೆಹೋರ್ ಜಿಲ್ಲೆಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಅಭಿಮಾನಿಗಳು ನೆನಪಿನ ಕಾಣಿಕೆ ನೀಡಿದರು ಪಿಟಿಐ ಚಿತ್ರ

ಸಂಬಂಧಿಕರಿಗೆ ಟಿಕೆಟ್ ನೀಡಿರುವುದು ಕಾಕತಾಳೀಯ. ವಿಭಿನ್ನ ಸಿದ್ಧಾಂತಗಳನ್ನು ಹೊಂದಿರುವ ಜನರು ಒಂದೇ ಸೂರಿನಡಿ ಉಳಿಯಬಹುದು. ವಸುಧೈವ ಕುಟುಂಬಕಂ (ಜಗತ್ತು ಒಂದು ಕುಟುಂಬ) ಎಂಬ ಭಾವನೆ ಇರಬೇಕು ಎಂದು ಮಧ್ಯಪ್ರದೇಶ ಕಾಂಗ್ರೆಸ್ ಮಾಧ್ಯಮ ವಿಭಾಗದ ಅಧ್ಯಕ್ಷ ಕೆ.ಕೆ.ಮಿಶ್ರಾ ಹೇಳಿದ್ದಾರೆ.

ರಾಜಕೀಯ ವಿಶ್ಲೇಷಕ ಆನಂದ್ ಪಾಂಡೆ ಅವರು 'ಇದು ಸಿದ್ಧಾಂತಗಳ ಹೋರಾಟವಲ್ಲ. ಹುದ್ದೆ ಮತ್ತು ಅಧಿಕಾರದ ಸ್ಥಾನ ಪಡೆಯುವ ಸ್ಪರ್ಧೆ. ರಾಜಕೀಯ ಹೊಸ ದಿಕ್ಕಿನಲ್ಲಿ ಸಾಗುತ್ತಿದೆ. ನರ್ಮದಾಪುರಂನಲ್ಲಿ ಪರಸ್ಪರ ವಿರುದ್ಧ ಸ್ಪರ್ಧಿಸುತ್ತಿರುವ ಶರ್ಮಾ ಸಹೋದರರು (ಸೀತಾಶರಣ್ ಮತ್ತು ಗಿರಿಜಾಶಂಕರ್) ಬಿಜೆಪಿ ಶಾಸಕರಾಗಿದ್ದರು. ಅವರಲ್ಲಿ ಒಬ್ಬರಿಗೆ ಟಿಕೆಟ್ ಸಿಗದ ಕಾರಣ ಬೇರೆ ಪಕ್ಷದಿಂದ ಸ್ಪರ್ಧಿಸುತ್ತಿದ್ದಾರೆ' ಎಂದರು.

'ಲಂಕಾದಲ್ಲಿ ಸೀತೆ ದೇವಸ್ಥಾನ, ಅರ್ಚಕರ ಗೌರವಧನ ಹೆಚ್ಚಳ'

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಶ್ರೀಲಂಕಾದಲ್ಲಿ ಸೀತಾಮಾತಾ ದೇವಸ್ಥಾನ ನಿರ್ಮಿಸುವ ಯೋಜನೆಗೆ ಪುನಃ ಜೀವ ಕೊಡಲಾಗುವುದು ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಮಂಗಳವಾರ ಹೇಳಿದ್ದಾರೆ.

ಬಿಜೆಪಿಯ ಹಿಂದುತ್ವ ರಾಜಕಾರಣವನ್ನು ಎದುರಿಸುವ ಉದ್ದೇಶದಿಂದ ಕಮಲ್ ನಾಥ್ ಅವರು, 'ಹಿಂದೂ ಪುರೋಹಿತರಿಗೆ ವಿಮಾ ರಕ್ಷಣೆ ಒದಗಿಸುವುದರ ಜೊತೆಗೆ ಅವರ ಗೌರವಧನ ಹೆಚ್ಚಿಸಲಾಗುವುದು' ಎಂದು ಭರವಸೆ ನೀಡಿದ್ದಾರೆ.

ಕಮಲ್ ನಾಥ್ ಅವರು 'ಎಕ್ಸ್'ನಲ್ಲಿ ಘೋಷಿಸಿರುವ ಪ್ರಮುಖ ಭರವಸೆಗಳಲ್ಲಿ, ಶ್ರೀರಾಮ ವನ ಗಮನ ಪಥದ ಅಭಿವೃದ್ಧಿ (ಕಾಡಿನಲ್ಲಿ ವನವಾಸದ ವೇಳೆ ರಾಮ ಸಾಗಿದ ಎನ್ನಲಾದ ಮಾರ್ಗ), ಭಗವಾನ್ ಪರಶುರಾಮನ ಜನ್ಮಸ್ಥಳ ಜನಪವ್ ಅನ್ನು ಪವಿತ್ರ ಯಾತ್ರಾ ಸ್ಥಳವೆಂದು ಘೋಷಿಸುವುದು ಹಾಗೂ ಮೊರೆನಾದಲ್ಲಿ ರವಿದಾಸ್ ಪೀಠ, ರೇವಾದಲ್ಲಿ ಸಂತ ಕಬೀರ್ ಪೀಠ ಸ್ಥಾಪನೆ ಸೇರಿವೆ.

ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಲು ಹಿಂದೂ ಸಮುದಾಯದವರಿಗೆ ಆರ್ಥಿಕ ಸಹಾಯ ವಿಸ್ತರಿಸುವ ಯೋಜನೆ ಪ್ರಾರಂಭಿಸಲಾಗುವುದು ಎಂದು ಹೇಳಿದರು.

'ರಾಮಾಯಣಕ್ಕೆ ಸಂಬಂಧಿಸಿದ ರಾಮ, ನಿಷಾದ್ರಾಜ್ ಮತ್ತು ಕೇವತ್ರಾಜ್ ವಿಗ್ರಹಗಳನ್ನು ಚಿತ್ರಕೂಟದಲ್ಲಿ ಸ್ಥಾಪಿಸಲಾಗುವುದು. ಮಹಾಕಾಲೇಶ್ವರ ಮತ್ತು ಓಂಕಾರೇಶ್ವರ ದೇವಾಲಯಗಳ ಭದ್ರತೆ ಹೆಚ್ಚಿಸಲಾಗುವುದು. ಈ ದೇವಾಲಯಗಳಲ್ಲಿ ದರ್ಶನಕ್ಕಾಗಿ ಟಿಕೆಟ್ ವ್ಯವಸ್ಥೆ ಸುವ್ಯವಸ್ಥಿತಗೊಳಿಸಲಾಗುವುದು' ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಶ್ರವಣ ಕುಮಾರ ಮಾತಾ-ಪಿತ ಭಕ್ತಿ ಯೋಜನೆ ಪ್ರಾರಂಭಿಸಲಾಗುವುದು. ಇದರ ಅಡಿ ಶವಸಂಸ್ಕಾರ ಮತ್ತು ನಂತರದ 'ಅಸ್ಥಿ ವಿಸರ್ಜನೆ'ಗೆ ₹10,000 ಒದಗಿಸಲಾಗುವುದು. ಧಾರ್ಮಿಕ ಸ್ಥಳಗಳ ಸೌಂದರ್ಯೀಕರಣ ಮತ್ತು ಗುರುಗಳ ವಿಗ್ರಹ ಸ್ಥಾಪಿಸುವ ಪ್ರಾರ್ಥನಾ ಸ್ಥಳ ಅಭಿವೃದ್ಧಿಪಡಿಸಲಾಗುವುದು' ಎಂದು ಅವರು ಭರವಸೆ ನೀಡಿದ್ದಾರೆ.

ಹೊಸ ಸರ್ಕಾರವು ಎಲ್ಲ ಧರ್ಮಗಳ ಧಾರ್ಮಿಕ ಸ್ಥಳಗಳಲ್ಲಿನ ಅತಿಕ್ರಮಣ ತೆರವು ಮಾಡಲಿದೆ. ವೈದಿಕ ಬೋಧನೆ ನೀಡಲು ತರಬೇತಿ ಸಂಸ್ಥೆ ಸ್ಥಾಪಿಸಲಾಗುವುದು ಎಂದರು.

ವಿಶೇಷವೆಂದರೆ, ಹಿಂದಿನ ಕಮಲ್ ನಾಥ್ ನೇತೃತ್ವದ ಸರ್ಕಾರ ಶ್ರೀಲಂಕಾದಲ್ಲಿ ಸೀತಾ ಮಾತಾ (ಸೀತಾ ದೇವಿ) ಮಂದಿರ ನಿರ್ಮಿಸಲು ಯೋಜಿಸಿತ್ತು. ಆದರೆ, ಸರ್ಕಾರ ಅವಧಿ ಪೂರ್ಣಗೊಳ್ಳುವ ಮೊದಲೇ ಪತನಗೊಂಡ ಕಾರಣ ಯೋಜನೆ ಮುಂದುವರಿಯಲು ಸಾಧ್ಯವಾಗಲಿಲ್ಲ.

ಸಾಲ ಮನ್ನಾ: 'ಕೈ' ಭರವಸೆ

ಭೂಪೇಶ್ ಬಘೇಲ್

ರಾಯಪುರ (ಪಿಟಿಐ): ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡರೆ ರೈತರ ಸಾಲ ಮನ್ನಾ ಮಾಡಲಾಗುವುದು ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಭರವಸೆ ನೀಡಿದ್ದಾರೆ.

ಶಕ್ತಿ ವಿಧಾನಸಭಾ ಕ್ಷೇತ್ರದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ರೈತರ ಸಾಲ ಮನ್ನಾ ಮಾಡಲು ಕಾಂಗ್ರೆಸ್ಸನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎಂದು ಜನರಿಗೆ ಮನವಿ ಮಾಡಿದರು.

'ರೈತರು, ಕಾರ್ಮಿಕರು, ಮಹಿಳೆಯರು ಅಥವಾ ಯುವಜನರಿಗೆ ಪ್ರತಿಪಕ್ಷ ಬಿಜೆಪಿ ಇನ್ನೂ ಯಾವುದೇ ಘೋಷಣೆಗಳನ್ನು ಮಾಡಿಲ್ಲ. ಆದರೆ, ಕಾಂಗ್ರೆಸ್ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಜಾತಿಗಣತಿ ನಡೆಸುವುದಾಗಿ ಪಕ್ಷದ ನಾಯಕ ರಾಹುಲ್ ಗಾಂಧಿ ಘೋಷಿಸಿದ್ದಾರೆ. ಮತ್ತೊಬ್ಬ ನಾಯಕಿ ಪ್ರಿಯಾಂಕಾ ಗಾಂಧಿ, ಬಡವರಿಗೆ ಮನೆ ಒದಗಿಸುವ ಭರವಸೆ ನೀಡಿದ್ದಾರೆ. ಅಲ್ಲದೆ ನಾವು ಈಗಾಗಲೇ ರೈತರಿಂದ ಎಕರೆಗೆ 20 ಕ್ವಿಂಟಲ್ ಭತ್ತ ಖರೀದಿಸುವುದಾಗಿ ಘೋಷಿಸಿದ್ದೇವೆ' ಎಂದು ಹೇಳಿದರು.

'ನಾವು ಇನ್ನೂ ಅನೇಕ ಭರವಸೆಗಳನ್ನು ನೀಡುತ್ತೇವೆ. ಬಿಜೆಪಿ ಅಧಿಕಾರಕ್ಕೆ ಬಂದರೆ, ಎಕರೆಗೆ 20 ಕ್ವಿಂಟಲ್ ಭತ್ತ ಖರೀದಿಸುವುದಿಲ್ಲ ಅಥವಾ ಸ್ವಾಮಿ ಆತ್ಮಾನಂದ ಶಾಲೆಗಳನ್ನು ನಡೆಸುವುದಿಲ್ಲ. ಹಸುವಿನ ಸಗಣಿ ಖರೀದಿ ಕಾರ್ಯಕ್ರಮ ಸೇರಿದಂತೆ ಪ್ರಸ್ತುತ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಎಲ್ಲ ಜನ ಕಲ್ಯಾಣ ಯೋಜನೆಗಳನ್ನು ನಿಲ್ಲಿಸುತ್ತದೆ' ಎಂದು ಎಚ್ಚರಿಕೆ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಘೇಲ್, ಸಾಲ ಮನ್ನಾ ಘೋಷಣೆ ಸಮರ್ಥಿಸಿಕೊಂಡರು ಮತ್ತು ರೈತರು ಸಶಕ್ತರಾದಾರೆ ದೇಶದ ಆರ್ಥಿಕತೆ ಬಲಗೊಳ್ಳುತ್ತದೆ ಎಂದರು. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ವ್ಯಾಪಾರ ಬೆಳವಣಿಗೆ ಆಗಿದೆ ಮತ್ತು ಆರ್ಥಿಕ ಕುಸಿತದ ಯಾವುದೇ ಪರಿಣಾಮವಿಲ್ಲ ಎಂದರು.

ಕೇಂದ್ರ ಸರ್ಕಾರ ದೊಡ್ಡ ಕೈಗಾರಿಕೋದ್ಯಮಿಗಳ ₹14.50 ಲಕ್ಷ ಕೋಟಿ ಸಾಲ ಮನ್ನಾ ಮಾಡಿದೆ. ಈ ಕ್ರಮವು ದೇಶದ ಆರ್ಥಿಕತೆಯ ಮೇಲೆ ಯಾವ ಪರಿಣಾಮ ಬೀರಿತು? ಆದರೆ, ಛತ್ತೀಸಗಢದಲ್ಲಿ ರೈತರ ಸಾಲ ಮನ್ನಾ ಮಾಡಲಾಯಿತು. ಮತ್ತು ಅದರ (ಸಕಾರಾತ್ಮಕ) ಪರಿಣಾಮವು ವ್ಯವಹಾರ ಮತ್ತು ಅವರ ಜೀವನದಲ್ಲಿ ಕಂಡುಬಂದಿದೆ ಎಂದರು.

2018ರ ಚುನಾವಣೆ ಸಂದರ್ಭದಲ್ಲಿಯೂ ಕಾಂಗ್ರೆಸ್ ರೈತರಿಗೆ ಇದೇ ರೀತಿಯ ಭರವಸೆ ನೀಡಿತ್ತು. ಇದರಿಂದ ಪಕ್ಷವು ಪ್ರಚಂಡ ಗೆಲುವು ದಾಖಲಿಸಿ, ಬಿಜೆಪಿಯ 15 ವರ್ಷಗಳ ಆಡಳಿತ ಕೊನೆಗೊಳಿಸಿತ್ತು.

'ಪ್ರಧಾನಿ ಮೋದಿ ಜೊತೆ ವೇದಿಕೆ ಹಂಚಿಕೊಳ್ಳುವುದಿಲ್ಲ'

ಐಜ್ವಾಲ್ (ಮಿಜೋರಾಂ)(ಪಿಟಿಐ): ವಿಧಾನಸಭೆ ಚುನಾವಣಾ ಪ್ರಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಆಗಮಿಸಿದರೆ ಅವರೊಂದಿಗೆ ವೇದಿಕೆ ಹಂಚಿಕೊಳ್ಳುವುದಿಲ್ಲ ಎಂದು ಮಿಜೋರಾಂ ಮುಖ್ಯಮಂತ್ರಿ ಝೊರಾಂಥಾಂಗ ಹೇಳಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡಲು ನರೇಂದ್ರ ಮೋದಿ ಅವರು ಅಕ್ಟೋಬರ್ 30ರಂದು ಮಮಿತ್ ಪಟ್ಟಣಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ.

ಝೊರಾಂಥಂಗ ಅವರ ಎಂಎನ್‌ಎಫ್ ಪಕ್ಷವು ಬಿಜೆಪಿ ನೇತೃತ್ವದ ಈಶಾನ್ಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಇಡಿಎ) ಭಾಗವಾಗಿದೆ ಮತ್ತು ಕೇಂದ್ರದಲ್ಲಿ ಎನ್‌ಡಿಎ ಮಿತ್ರ ಪಕ್ಷವಾಗಿದೆ. ಆದರೂ ರಾಜ್ಯದಲ್ಲಿ ಪಕ್ಷವು ಬಿಜೆಪಿ ಜೊತೆಗೆ ಕೆಲಸ ಮಾಡುತ್ತಿಲ್ಲ.

'ಮಿಜೋರಾಂನ ಜನರೆಲ್ಲರೂ ಕ್ರೈಸ್ತರು. ಮಣಿಪುರದ ಜನರು (ಮೈತೇಯಿ) ಅಲ್ಲಿನ ನೂರಾರು ಚರ್ಚ್‌ಗಳಿಗೆ ಬೆಂಕಿ ಹಚ್ಚಿದಾಗ, ಮಿಜೋರಾಂ ಜನ ಸಂಪೂರ್ಣವಾಗಿ ವಿರೋಧಿಸಿದರು. ಈ ಸಂದರ್ಭದಲ್ಲಿ ಬಿಜೆಪಿಯೊಂದಿಗೆ ಸಹಾನುಭೂತಿ ಹೊಂದಿರುವುದು ನನ್ನ ಪಕ್ಷಕ್ಕೆ ನಕಾರಾತ್ಮಕ ವಾಗಲಿದೆ' ಎಂದು ಝೊರಾಂಥಂಗ ಬಿಬಿಸಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಪ್ರಧಾನಿ ಒಬ್ಬರೇ ಬಂದು ವೇದಿಕೆ ಬಳಸಿದರೆ ಉತ್ತಮ. ನಾನು ವೇದಿಕೆ ಹಂಚಿಕೊಳ್ಳುವುದಿಲ್ಲ' ಎಂದರು.

ಮ್ಯಾನ್ಮಾರ್, ಬಾಂಗ್ಲಾದೇಶ ಮತ್ತು ಮಣಿಪುರದ ಜನರಿಗೆ ಆಶ್ರಯ ನೀಡುವ ಬಗ್ಗೆ ಮಾತನಾಡಿದ ಮುಖ್ಯಮಂತ್ರಿ, ಮಿಜೋರಾಂ ಸರ್ಕಾರವು ಕೇಂದ್ರದ ಕ್ರಮಗಳನ್ನು ಅನುಸರಿಸುತ್ತಿದೆ ಎಂದು ಹೇಳಿದರು.

'ನಾವು ಮ್ಯಾನ್ಮಾರ್‌ನ ನಿರಾಶ್ರಿತರಿಗೆ ಮಾನವೀಯ ಆಧಾರದ ಮೇಲೆ ಆಹಾರ ಮತ್ತು ಆಶ್ರಯ ಒದಗಿಸುತ್ತೇವೆ. ಮ್ಯಾನ್ಮಾರ್, ಬಾಂಗ್ಲಾದೇಶ, ಮಣಿಪುರ ಸೇರಿದಂತೆ ರಾಜ್ಯದಲ್ಲಿ 40 ಸಾವಿರಕ್ಕೂ ಹೆಚ್ಚು ಜನರು ಆಶ್ರಯ ಪಡೆದಿದ್ದಾರೆ. ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಶಾಂತಿ ಮರುಸ್ಥಾಪಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಯಾಗಿದೆ. ಇದರಿಂದ ಜನರು ತಾಯ್ನಾಡಿಗೆ ಮರಳುತ್ತಾರೆ' ಎಂದರು.

ಟಿಕೆಟ್ ವಂಚಿತರ ಪ್ರತಿಭಟನೆ

ಜೈಪುರ (ಪಿಟಿಐ): ರಾಜಸ್ಥಾನದ ಹಲವೆಡೆ ಟಿಕೆಟ್ ವಂಚಿತರಾಗಿರುವ ಬಿಜೆಪಿ ಆಕಾಂಕ್ಷಿಗಳು ಮತ್ತು ಅವರ ಬೆಂಬಲಿಗರು ಪ್ರತಿಭಟಿಸಿದರು.

ಭೋಪಾಲ್ ವರದಿ: ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ವಂಚಿತರಾಗಿರುವ ಕಾಂಗ್ರೆಸ್, ಬಿಜೆಪಿ ಆಕಾಂಕ್ಷಿಗಳು ಹಾಗೂ ಅವರ ಬೆಂಬಲಿಗರು ಸೋಮವಾರವೂ ಪ್ರತಿಭಟನೆ ನಡೆಸಿದರು.

ಮೊರೆನಾ ಕ್ಷೇತ್ರದಿಂದ ಟಿಕೆಟ್ ಕೈ ತಪ್ಪಿದ ಕಾರಣ ಮಾಜಿ ಆರೋಗ್ಯ ಸಚಿವ ರುಸ್ತುಂ ಸಿಂಗ್ ಬಿಜೆಪಿ ತೊರೆದು ಬಿಎಸ್‌ಪಿ ಸೇರಿದರು.

78 ವರ್ಷದ ಸಿಂಗ್ ಅವರಿಗೆ ವಯಸ್ಸಿನ ಕಾರಣದಿಂದಾಗಿ ಟಿಕೆಟ್ ನಿರಾಕರಿಸಿದ್ದರಿಂದ ಅಸಮಾಧಾನಗೊಂಡಿದ್ದರು ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಆದರೆ, ಬಿಜೆಪಿಯು ಮಾಜಿ ಸಚಿವ ಜಯಂತ್ ಮಲ್ಯೆಯಾ (76 ವರ್ಷ) ಅವರನ್ನು ದಮೋಹ್‌ನಿಂದ ಕಣಕ್ಕಿಳಿಸಿದೆ.

ಗಾಜಾ: ಒಂದೇ ದಿನ 700ಕ್ಕೂ ಹೆಚ್ಚು ಸಾವು

ರಫಾ (ಎಪಿ): ಇಸ್ರೇಲ್ ನಡೆಸುತ್ತಿರುವ ವಾಯುದಾಳಿಯು ಹೆಚ್ಚಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ ಗಾಜಾ ಪಟ್ಟಿಯಲ್ಲಿ 700ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಇವರಲ್ಲಿ 305 ಮಂದಿ ಮಕ್ಕಳು. ಬಾಂಬ್ ದಾಳಿಯಿಂದ ಆಗಿರುವ ಹಾನಿ ಹಾಗೂ ಇಂಧನ ಕೊರತೆಯ ಕಾರಣದಿಂದಾಗಿ ಗಾಜಾ ಪಟ್ಟಿಯಲ್ಲಿ ಆರೋಗ್ಯಸೇವೆಗಳು ಹಲವೆಡೆ ಸ್ಥಗಿತಗೊಂಡಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಸ್ರೇಲ್‌ನ ಭೂಸೇನೆಯು ಮಿಲಿಟರಿ ಟ್ಯಾಂಕ್ ಹಾಗೂ ಫಿರಂಗಿಗಳೊಂದಿಗೆ ಗಾಜಾ ಮೇಲೆ ಭೂದಾಳಿ ಆರಂಭಿಸಿದಲ್ಲಿ ಸಾವಿನ ಸಂಖ್ಯೆಯು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಒಂದು ದಿನದಲ್ಲಿ 400 ವಾಯುದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ತಿಳಿಸಿದೆ. ಈ ದಾಳಿಗಳಲ್ಲಿ ಹಮಾಸ್ ಕಮಾಂಡರ್‌ಗಳು ಸತ್ತಿದ್ದಾರೆ ಎಂದು ಹೇಳಿದೆ. ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಲು ಸಜ್ಜಾಗುತ್ತಿದ್ದ ಕೆಲವು ಬಂಡುಕೋರರು ಕೂಡ ಸತ್ತಿದ್ದಾರೆ ಎಂದು ತಿಳಿಸಿದೆ.

ವಾಯುದಾಳಿ ಸಂದರ್ಭದಲ್ಲಿ ವಸತಿ ಕಟ್ಟಡಗಳಿಗೂ ಹಾನಿಯಾಗಿದೆ. ಇಸ್ರೇಲ್ ಮಿಲಿಟರಿಯು ಗಾಜಾ ಪಟ್ಟಿಯ ದಕ್ಷಿಣ ಭಾಗದ ಮೇಲೆಯೂ ದಾಳಿ ನಡೆಸಿದೆ. ಖಾನ್ ಯೂನಿಸ್ ಪ್ರದೇಶದ ನಾಲ್ಕು ಅಂತಸ್ತಿನ ಕಟ್ಟಡವೊಂದರ ಮೇಲೆ ದಾಳಿಯಾಗಿದ್ದು 32 ಮಂದಿ ಮೃತಪಟ್ಟಿದ್ದಾರೆ.

ಗಾಜಾ ಪಟ್ಟಿಯಲ್ಲಿ ಆರೋಗ್ಯಸೇವೆಗಳನ್ನು ಒದಗಿಸುವ ಘಟಕಗಳು ಸ್ಥಗಿತಗೊಳ್ಳುತ್ತಿವೆ. 72 ಕೇಂದ್ರಗಳ ಪೈಕಿ 46 ಆರೋಗ್ಯ ಸೇವಾ ಕೇಂದ್ರಗಳು ಗಾಜಾ ಪಟ್ಟಿಯಲ್ಲಿ ಸ್ಥಗಿತಗೊಂಡಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಇವುಗಳಲ್ಲಿ 12 ಆಸ್ಪತ್ರೆಗಳೂ ಸೇರಿವೆ.

ಇಸ್ರೇಲ್ ವಾಯುದಾಳಿಯಿಂದಾಗಿ ಆಗಿರುವ ಹಾನಿ ಹಾಗೂ ದಿಗ್ಬಂಧನದಿಂದಾಗಿ ಆಗಿರುವ ಇಂಧನ ಕೊರತೆಯು ಈ ಘಟಕಗಳ ಸ್ಥಗಿತಕ್ಕೆ ಕಾರಣ ಎಂದು ಪ್ಯಾಲೆಸ್ಟೀನ್ ಆರೋಗ್ಯ ಅಧಿಕಾರಿಗಳು ಹೇಳಿದ್ದಾರೆ.

ಗಾಜಾ ಪಟ್ಟಿಯಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರಿಗೆ ಆಹಾರ, ನೀರು, ಔಷಧ ಪೂರೈಕೆಗೆ ಇಸ್ರೇಲ್ ಅವಕಾಶ ಮಾಡಿಕೊಟ್ಟಿದೆ. ಆದರೆ ಇಂಧನ ಪೂರೈಕೆಗೆ ತಡೆ ಮುಂದುವರಿಸಿದೆ.

ಬಾಂಬ್ ದಾಳಿಗೆ ಸಿಲುಕಿ ವಿಶ್ವಸಂಸ್ಥೆಯ ಆರು ಜನ ಸಿಬ್ಬಂದಿ ಮೃತಪಟ್ಟಿದ್ದಾರೆ. ಯುದ್ಧ ಶುರುವಾದ ನಂತರದಲ್ಲಿ ವಿಶ್ವಸಂಸ್ಥೆಯ 35 ಸಿಬ್ಬಂದಿ ಬಲಿಯಾಗಿದ್ದಾರೆ.

ಭೂದಾಳಿ ವಿಳಂಬ?

ಗಾಜಾ ಮೇಲಿನ ಉದ್ದೇಶಿತ ಭೂದಾಳಿಯನ್ನು ವಿಳಂಬಗೊಳಿಸಿದರೆ, ಒತ್ತೆಯಾಳುಗಳ ಬಿಡುಗಡೆಯ ಉದ್ದೇಶದಿಂದ ಅರಬ್ ಜಗತ್ತಿನ ಮಧ್ಯಸ್ಥಿಕೆದಾರರ ಜೊತೆ ಮಾತುಕತೆ ನಡೆಸಲು ಹೆಚ್ಚಿನ ಸಮಯ ಸಿಗುತ್ತದೆ ಎಂದು ಅಮೆರಿಕವು, ಇಸ್ರೇಲ್ ಮಿಲಿಟರಿಗೆ ಸಲಹೆ ನೀಡಿದೆ ಎಂದು ಮೂಲಗಳು ಹೇಳಿವೆ.

ಹಮಾಸ್ ವಿರುದ್ಧ ಹೋರಾಟಕ್ಕೆ ಫ್ರಾನ್ಸ್ ಕರೆ

ಜೆರುಸಲೇಂ (ಎಎಫ್‌ಪಿ): ಇಸ್ಲಾಮಿಕ್ ಸ್ಟೇಟ್ ವಿರುದ್ಧ ಹೋರಾಟ ನಡೆಸುತ್ತಿರುವ ಅಂತರರಾಷ್ಟ್ರೀಯ ಒಕ್ಕೂಟವು ಹಮಾಸ್ ಬಂಡುಕೋರರ ವಿರುದ್ಧವೂ ಹೋರಾಟ ನಡೆಸಬೇಕು ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರನ್ ಮಂಗಳವಾರ ಕರೆ ನೀಡಿದ್ದಾರೆ.

ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಅವರ ಜೊತೆ ಜೆರುಸಲೇಂನಲ್ಲಿ ಮಾತುಕತೆ ನಡೆಸಿದ ಮ್ಯಾಕ್ರನ್, ಪ್ಯಾಲೆಸ್ಟೀನ್‌ನಲ್ಲಿ ಶಾಂತಿ ನೆಲೆಸುವಂತೆ ಮಾಡಲು ನಿರ್ಣಾಯಕ ಮಾತುಕತೆಯನ್ನು ಪುನರಾರಂಭಿಸಬೇಕು ಎಂದು ಕೂಡ ಒತ್ತಾಯಿಸಿದ್ದಾರೆ.

ಗಾಜಾಪಟ್ಟಿಯಿಂದ ಹಮಾಸ್ ಬಂಡುಕೋರರು ರಾಕೆಟ್ ದಾಳಿ ನಡೆಸಿದ ವೇಳೆ ಟೆಲ್‌ಅವೀವ್‌ನಲ್ಲಿ ಜನರು ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸಿ ಅವಿತು ಕುಳಿತುಕೊಂಡರು —ಎಎಫ್‌ಪಿ ಚಿತ್ರ

ಒತ್ತೆಯಾಳುಗಳ ಮಾಹಿತಿ ಕೋರಿದ ಇಸ್ರೇಲ್

ಖಾನ್ ಯೂನಿಸ್ (ಎಎಫ್‌ಪಿ): ಹಮಾಸ್ ಬಂಡುಕೋರರು ವಶದಲ್ಲಿ ಇರಿಸಿಕೊಂಡಿರುವ ಒತ್ತೆಯಾಳುಗಳ ಬಗ್ಗೆ ಮಾಹಿತಿ ನೀಡಬೇಕು ಎಂಬ ಮನವಿ ಇರುವ ಕರಪತ್ರವನ್ನು ಇಸ್ರೇಲ್ ಮಿಲಿಟರಿಯು ಗಾಜಾ ಪಟ್ಟಿಯ ಆದ್ಯಂತ ಹಂಚಿದೆ. ಮನವಿ ಇರುವ ಕರಪತ್ರವನ್ನು ವಿಮಾನದಿಂದ ಗಾಜಾ ಪಟ್ಟಿಯ ಮೇಲೆ ಸುರಿಸಿದೆ. ವಾಯುದಾಳಿಗೆ ಸಿಲುಕಿ ಗಾಜಾ ಪಟ್ಟಿಯಲ್ಲಿ ಇದುವರೆಗೆ 5,700ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ.

'ನಿಮಗೆ ಮತ್ತು ನಿಮ್ಮ ಮಕ್ಕಳಿಗೆ ಉತ್ತಮ ಭವಿಷ್ಯ ಬೇಕು ಎಂದಾದರೆ ಸರಿಯಾದ ಕೆಲಸವನ್ನು ಮಾಡಿ. ಅಪಹರಣಕ್ಕೆ ಒಳಗಾಗಿ ನಿಮ್ಮ ಪ್ರದೇಶದಲ್ಲಿ ಇರುವವರ ಮಾಹಿತಿಯನ್ನು ನಮಗೆ ಕಳುಹಿಸಿಕೊಡಿ' ಎಂದು ಅರೇಬಿಕ್ ಭಾಷೆಯಲ್ಲಿ ಇರುವ ಸಂದೇಶದಲ್ಲಿ ಹೇಳಲಾಗಿದೆ.

'ನಿಮಗೆ ಹಾಗೂ ನಿಮ್ಮ ಮನೆಗೆ ಭದ್ರತೆ ನೀಡಲು ಇಸ್ರೇಲ್ ಸೇನೆಯು ಸಾಧ್ಯವಿರುವ ಎಲ್ಲವನ್ನೂ ಮಾಡಲಿದೆ. ಅಲ್ಲದೆ, ಹಣಕಾಸಿನ ಬಹುಮಾನ ಕೂಡ ಸಿಗಲಿದೆ' ಎಂದು ಅದರಲ್ಲಿ ಬರೆಯಲಾಗಿದೆ. 'ಮಾಹಿತಿ ಕೊಡುವುದು, ಕೊಡದೆ ಇರುವುದು ಸಂಪೂರ್ಣವಾಗಿ ನಿಮ್ಮ ಇಚ್ಛೆಗೆ ಬಿಟ್ಟಿದ್ದು' ಎಂದೂ ಅದರಲ್ಲಿ ಹೇಳಲಾಗಿದೆ.

'ಒತ್ತೆಯಾಳಾಗಿ ಇರಿಸಿಕೊಂಡಿರುವ ಇಸ್ರೇಲ್ ಹಾಗೂ ವಿದೇಶಿ ಪ್ರಜೆಗಳನ್ನು ಬಿಡುಗಡೆಗೊಳಿಸುವ ಪ್ರಯತ್ನದ ಭಾಗವಾಗಿ, ಒತ್ತೆಯಾಳು ಗಳ ಬಗ್ಗೆ ಮಾಹಿತಿ ಕೋರಿ ಗಾಜಾದ ನಿವಾಸಿಗಳಿಗೆ ಸಂದೇಶ ರವಾನಿಸಲು ಹಲವು ಮಾಧ್ಯಮಗಳನ್ನು ಬಳಸಿ ಕೊಳ್ಳಲಾಗಿದೆ' ಎಂದು ಇಸ್ರೇಲ್ ಸೇನೆಯ ಪ್ರಕಟಣೆ ತಿಳಿಸಿದೆ.

ಇಬ್ಬರ ಬಿಡುಗಡೆ

ಟೆಲ್ ಅವೀವ್ (ರಾಯಿಟರ್ಸ್): ಹಮಾಸ್ ಬಂಡುಕೋರರು ಒತ್ತೆಯಾಳಾಗಿ ಇರಿಸಿಕೊಂಡಿದ್ದ ಇಸ್ರೇಲ್‌ನ ಇಬ್ಬರು ಮಹಿಳೆಯರನ್ನು ಸೋಮವಾರ ರಾತ್ರಿ ಬಿಡುಗಡೆ ಮಾಡಿದ್ದಾರೆ. 'ಅಕ್ಟೋಬರ್ 7ರಂದು ಗಾಜಾಕ್ಕೆ ಕರೆದೊಯ್ಯುವಾಗ ಬಂಡುಕೋರರು ನನ್ನ ಮೇಲೆ ಹಲ್ಲೆ ಮಾಡಿದರು. ಆದರೆ ಒತ್ತೆಯಾಳಾಗಿ ಇರಿಸಿಕೊಂಡಿದ್ದ ಸಂದರ್ಭದಲ್ಲಿ ಚೆನ್ನಾಗಿ ನೋಡಿಕೊಂಡರು' ಎಂದು ಯೊಚೆವೆಡ್ ಹೆಸರಿನ 85 ವರ್ಷ ವಯಸ್ಸಿನ ವೃದ್ಧೆ ಹೇಳಿದ್ದಾರೆ.

ಬಂಡುಕೋರರ ವಶದಲ್ಲಿ ಇನ್ನೂ 220 ಮಂದಿ ಒತ್ತೆಯಾಳುಗಳು ಇದ್ದಾರೆ ಎಂದು ನಂಬಲಾಗಿದೆ. 'ಗಾಜಾಕ್ಕೆ ಹೊತ್ತೊಯ್ಯುವಾಗ ಅವರು ನನಗೆ ಹೊಡೆದಿದ್ದರು. ಆಗ ನನಗೆ ಉಸಿರಾಟದ ಸಮಸ್ಯೆಯೂ ಉಂಟಾಗಿತ್ತು. ಗಾಜಾದಲ್ಲಿ ಬಂಡುಕೋರರು ನನ್ನನ್ನು ಸುರಂಗದಲ್ಲಿ ಇರಿಸಿದ್ದರು. ಅಲ್ಲಿ ನನ್ನನ್ನು ಚೆನ್ನಾಗಿ ನೋಡಿಕೊಂಡರು' ಎಂದು ಯೊಚೆವೆಡ್ ಹೇಳಿದ್ದಾರೆ.

'ಕರುನಾಡ ಸವಿಯೂಟ'ದಲ್ಲಿ ಸಿಹಿ ಕಹಿ ಚಂದ್ರು ಅಡುಗೆಗಳು

ರವಿ ಮಸಾಲೆ ಮತ್ತು ಸ್ಟಾರ್ ಬಜಾರ್ ಸಹಯೋಗದಲ್ಲಿ ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸಿರುವ 'ದಿ ಕ್ಯುಸಿನ್ಸ್ ಆಫ್ ಕರ್ನಾಟಕ' (ಕರುನಾಡ ಸವಿಯೂಟ)ದಲ್ಲಿ ಪ್ರಸಿದ್ಧ ಬಾಣಸಿಗರು ತಯಾರಿಸುವ ಸೊಗಸಾದ ಭಕ್ಷ್ಯಗಳ ಪ್ರದರ್ಶನ ಇದಾಗಿದೆ. ಸೆಲೆಬ್ರಿಟಿ ತಾರಾ ಶೆಫ್ ಸಿಹಿ ಕಹಿ ಚಂದ್ರು ಅವರು ತಯಾರಿಸಿರುವ ಎರಡು ಸಿಹಿ ತಿನಿಸುಗಳು ಇಲ್ಲಿವೆ.



Freedom Healthy Cooking Oils presents cuisines of karnataka
Associate sponsors Ravi star

ಚಿರೋಟಿ

ಬೇಕಾದ ಪದಾರ್ಥಗಳು:
- ಚಿರೋಟಿ ರವೆ: 1.5 ಕಪ್
- ಮೃದುವಾದ ಬೆಣ್ಣೆ: 1ಕಪ್
- ಸಕ್ಕರೆ: ಒಂದು ಕಪ್
- ಕರಿಯಲು ಬೇಕಾದ ಎಣ್ಣೆ

ವಿಧಾನ: ಬಟ್ಟಲಲ್ಲಿ ಚಿರೋಟಿ ರವೆ ಹಾಕಿ, ಅದಕ್ಕೆ ಅರ್ಧ ಕಪ್ ಬೆಣ್ಣೆ ಸೇರಿಸಿ ಮಿಶ್ರಣ ಮಾಡಿ. ಬೆಣ್ಣೆ, ರವೆ ಚೆನ್ನಾಗಿ ಬೆರೆಯುವವರೆಗೆ ಕಲೆಸಿ. ಸ್ವಲ್ಪ ಸ್ವಲ್ಪ ನೀರನ್ನು ಹಾಕಿಕೊಂಡು ಮೃದುವಾದ ಹಿಟ್ಟು ಬರುವವರೆಗೆ ಮಿಕ್ಸ್ ಮಾಡಿ. ಹಿಟ್ಟನ್ನು 15 ನಿಮಿಷ ಮುಚ್ಚಿಡಿ. ಉಳಿದ ಬೆಣ್ಣೆಯಲ್ಲಿ ಮುಕ್ಕಾಲು ಭಾಗ ತೆಗೆದುಕೊಂಡು ಅಕ್ಕಿ ಹಿಟ್ಟು ಸೇರಿಸಿ ಹಿಟ್ಟು ಮತ್ತು ಬೆಣ್ಣೆ ಬೆರೆಯುವವರೆಗೆ ಕಲೆಸಿ, ಒಂದು ಕಡೆ ಇಡಿ. ಈಗ ಕಲೆಸಿಟ್ಟ ಎರಡೂ ಹಿಟ್ಟುಗಳನ್ನು ಒಟ್ಟಿಗೆ ಸೇರಿಸಿ ಮತ್ತೆ ಚೆನ್ನಾಗಿ ಮಿಕ್ಸ್ ಮಾಡಿ ಒಂದುಮಾಡಿ. ನಂತರ ಸಕ್ಕರೆ ನುಣ್ಣಗೆ ಪುಡಿ ಮಾಡಿಟ್ಟುಕೊಳ್ಳಿ. ಕಲೆಸಿದ ಹಿಟ್ಟನ್ನು ಮತ್ತೆ ನಾದು, ಆರು ಭಾಗ ಮಾಡಿ, ವಿಂಗಡಿಸಿ ಉಂಡೆಗಳು ಮಾಡಿಕೊಳ್ಳಿ. ಒಂದೊಂದು ಉಂಡೆ ಒಂದು ಮಧ್ಯಮ ಗಾತ್ರ ಚಪಾತಿಯಾಗಿ ಹೊಸದಿಟ್ಟುಕೊಳ್ಳಿ. ಪ್ರತಿಯೊಂದು ಚಪಾತಿ ಮೇಲೆ ಸಮನಾಗಿ ಬೆಣ್ಣೆ ಹರಡಿ. ಬೆಣ್ಣೆ ಹಚ್ಚಿದ ಮೇಲ್ಮೈ ಮೇಲೆ ಚಪಾತಿ ಇಟ್ಟು, ಅದರ ಮೇಲೆ ಬೆಣ್ಣೆ ಹಚ್ಚಿ. ಹೀಗೆ ಎಲ್ಲ ಚಪಾತಿಗಳನ್ನು ಒಂದರ ಮೇಲೊಂದು ಜೋಡಿಸಿ, ಪುನರಾವರ್ತಿಸಿ. ಬೆಣ್ಣೆ ಹರಡುವುದನ್ನು ಮರೆಯಬೇಡಿ. ಎಲ್ಲ ಚಪಾತಿಗಳನ್ನು ಒಂದು ತುದಿಯಿಂದ ಸುತ್ತಿ ದೊಡ್ಡ ಸಿಲಿಂಡರ್ ಆಕಾರ ಮಾಡಿಕೊಳ್ಳಿ. ಆ ಸಿಲಿಂಡರನ್ನು ಅರ್ಧಕ್ಕೆ ಕತ್ತರಿಸಿ. ಎರಡೂ ಸಿಲಿಂಡರ್‌ನಲ್ಲಿ ಸಮನಾದ ಆರಾರು ಸಣ್ಣ ಸಣ್ಣ ಸಿಲಿಂಡರ್‌ಗಳಾಗಿ ಕತ್ತರಿಸಿ, ಪ್ರತಿ ಸಣ್ಣ ಸಿಲಿಂಡರ್ ಚಪಾತಿ ಆಕಾರದಲ್ಲಿ ಹೊಸೆಯಿರಿ.

ಈಗ ಕಡಾಯಿಗೆ ಎಣ್ಣೆ ಹಾಕಿಕೊಂಡು, ಬಿಸಿಯಾದ ನಂತರ ಹೊಸೆದ ಚಪಾತಿಗಳನ್ನು ಚಿರೋಟಿ ಬಣ್ಣ ಬರುವವರೆಗೆ ಕರಿಯಿರಿ. ಎಣ್ಣೆಯಿಂದ ಹೊರತೆಗೆದ ಚಿರೋಟಿ ಮೇಲೆ ಸಕ್ಕರೆ ಪುಡಿ ಶೋಧಿಸಿ ಉದುರಿಸಿ. ಬಾದಾಮಿ ಹಾಲಿನ ಜತೆ ಉಣಬಡಿಸಿ.

ಬಾದಾಮ್ ಪೂರಿ

ಬೇಕಾದ ಪದಾರ್ಥಗಳು:
- ಮೈದಾ: ಒಂದು ಕಪ್
- ಚಿರೋಟಿ ರವೆ: ಅರ್ಧ ಕಪ್
- ಬ್ಲ್ಯಾಂಚ್ಡ್ ಬಾದಾಮಿ: ಅರ್ಧ ಕಪ್
- ಅಕ್ಕಿ ಹಿಟ್ಟು: ಎರಡು ಚಮಚ
- ತುಪ್ಪ: ಎರಡು ಚಮಚ
- ಹಾಲು: ಅರ್ಧ ಕಪ್
- ಲವಂಗ: 10
- ಸಕ್ಕರೆ: ಒಂದು ಕಪ್
- ಕೇಸರಿ: ಎರಡು ಚಿಟಿಕೆ
- ಬಾದಾಮಿ ಚೆಕ್ಕೆಗಳು: ಎರಡು ಚಮಚ
- ಕರಿಯಲು ಬೇಕಾದ ಎಣ್ಣೆ

ವಿಧಾನ: ನಾನ್ ಸ್ಟಿಕ್ ಪ್ಯಾನ್‌ನಲ್ಲಿ ಸಕ್ಕರೆ ಹಾಕಿ, ಬೇಕಾದಷ್ಟು ಮಾತ್ರ ನೀರು ಬಳಸಿ. ಕೇಸರಿ ಮತ್ತು ಏಲಕ್ಕಿ ಪುಡಿ ಉದುರಿಸಿ ದಪ್ಪಗಿನ ಪಾಕ ಬರುವವರೆಗೆ ಕಲೆಸುತ್ತಾ ಇರಿ. ಬೆಂದ ಪಾಕ ಪಕ್ಕಕ್ಕಿಡಿ. ಸಂಸ್ಕರಿಸಿದ ಹಿಟ್ಟು, ಚಿರೋಟಿ ರವೆ, ಅಕ್ಕಿ ಹಿಟ್ಟು, ಬಾದಾಮಿ

ಪೇಸ್ಟ್, ಕಾಲು ಚಮಚ ಏಲಕ್ಕಿ ಪುಡಿ ಹಾಗೂ ತುಪ್ಪ ಹಾಕಿ ಚೆನ್ನಾಗಿ ಕಲೆಸಿ. ನಂತರ ಸ್ವಲ್ಪ ಹಾಲು ಬೇರಿಸಿ ಗಟ್ಟಿಹಿಟ್ಟು ಮಾಡಿಟ್ಟುಕೊಳ್ಳಿ. ಮತ್ತೊಮ್ಮೆ ಮೈದಾ ಉದುರಿಸಿ ನಾದುಕೊಂಡು ಸಮಾನ ಭಾಗದ ಸಣ್ಣ ಪೂರಿಗಳಾಗಿ ಹೊಸೆದು, ತುಪ್ಪ ಸವರಿ. ಪ್ರತಿ ಪೂರಿಯನ್ನು ತ್ರಿಕೋನಾಕೃತಿ ಮಡಚಿರಿ. ಮಡಚಲು ಫೋರ್ಕ್ ಬಳಸಿ, ಮೇಲೊಂದು ಲವಂಗ ಚುಚ್ಚಿ ಸುರಕ್ಷಿತಗೊಳಿಸಿ. ಗೋಲ್ಡನ್ ಬ್ರೌನ್ ಬರುವವರೆಗೆ ಫ್ರೈ ಮಾಡಿದ ಪೂರಿಯನ್ನು ಟಿಶ್ಯು ಪೇಪರ್ ತೆಗೆದಿಟ್ಟು ನಂತರ 2 ನಿಮಿಷ ಸಕ್ಕರೆ ಪಾಕದಲ್ಲಿ ನೆನೆಸಿ. ಪಾಕದಿಂದ ಹೊರತೆಗೆದು ತಟ್ಟೆಯಲ್ಲಿಡಿ. ಕತ್ತರಿಸಿದ ಬಾದಾಮಿ ಚೂರು, ಚೆಕ್ಕೆಗಳಿಂದ ಅಲಂಕರಿಸಿ. ಬಿಸಿ ಬಾದಾಮ್ ಪೂರಿ ತಿನ್ನಲು ಕೊಡಿ.

ಅಡುಗೆ ಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಮುಕ್ತವಾದ ಮನಸ್ಸಿದ್ದರೆ ಜೀವನ ಸುಲಲಿತವಾಗುತ್ತದೆ.
–ಗೌತಮ ಬುದ್ಧ

ಆರ್‌ಟಿಐ: ವ್ಯವಸ್ಥೆ ದುರ್ಬಲ ಪೌರರ ಅಧಿಕಾರ ಕಿತ್ತುಕೊಳ್ಳಬೇಡಿ

ಮಾಹಿತಿ ಹಕ್ಕು ಕಾಯ್ದೆಯು (ಆರ್‌ಟಿಐ) ಜಾರಿಗೆ ಬಂದು 18 ವರ್ಷಗಳು ಪೂರ್ಣಗೊಂಡಿವೆ. ಆದರೆ, ಅದರ ಭವಿಷ್ಯ ಅನಿಶ್ಚಿತವಾಗಿದೆ. ಏಕೆಂದರೆ, ಅದನ್ನು ಜಾರಿಗೆ ತರುವಾಗ ಇದ್ದ ಸದುದ್ದೇಶ ಈಗ ಮರೆತುಹೋಗಿದೆ. ಆರ್‌ಟಿಐಯನ್ನು ಜಾರಿಗೊಳಿಸಲು ಬೇಕಾದ ವ್ಯವಸ್ಥೆಯನ್ನೇ ಕಳೆದ ಕೆಲವು ವರ್ಷಗಳಲ್ಲಿ ದುರ್ಬಲಗೊಳಿಸಲಾಗಿದೆ. ಸ್ವಯಂ ಸೇವಾ ಸಂಸ್ಥೆಯಾದ ಸತರ್ಕ ನಾಗರಿಕ ಸಂಘಟನೆ (ಎಸ್‌ಎನ್‌ಎಸ್), ಮಾಹಿತಿ ಆಯುಕ್ತರ ಕಾರ್ಯಕ್ಷಮತೆ ಕುರಿತಂತೆ ವರದಿಯೊಂದನ್ನು ಸಿದ್ಧಪಡಿಸಿದೆ. ದೇಶದ ಬಹುಭಾಗಗಳಲ್ಲಿ ಈ ವ್ಯವಸ್ಥೆ ನಿಷ್ಕ್ರಿಯವಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಈ ವ್ಯವಸ್ಥೆಯನ್ನು ವಿವಿಧ ರೀತಿಯಲ್ಲಿ ದುರ್ಬಲಗೊಳಿಸಲಾಗಿದೆ. ಮಾಹಿತಿಗಾಗಿ ಸಲ್ಲಿಕೆಯಾದ ಅರ್ಜಿಗಳು, ದೂರುಗಳು ಮತ್ತು ಮೇಲ್ಮನವಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗಿದ್ದು, ಈಗ ಗರಿಷ್ಠ ಮಟ್ಟಕ್ಕೆ ಮುಟ್ಟಿವೆ. ಹಲವು ಮಾಹಿತಿ ಆಯೋಗಗಳಿಗೆ ಮಾಹಿತಿ ಆಯುಕ್ತರ ನೇಮಕವನ್ನೇ ಮಾಡಿಲ್ಲ. ಹೀಗಾಗಿ, ಆಯೋಗವು ನಿಷ್ಕ್ರಿಯವಾದಂತಾಗಿದೆ. ಅದರ ಪರಿಣಾಮವಾಗಿ ಕಾಯ್ದೆಯ ವ್ಯಾಪ್ತಿಯೇ ಕುಗ್ಗಿದಂತಾಗಿದೆ. ಆರ್‌ಟಿಐಯ ಉದ್ದೇಶ ಈಡೇರುವುದನ್ನು ತಡೆಯುವ ರೀತಿಯ ಕಾಯ್ದೆಗಳನ್ನು ಸರ್ಕಾರ ರೂಪಿಸಿದೆ. ಆರ್‌ಟಿಐ ಕುರಿತಂತೆ ಸರ್ಕಾರದ ಧೋರಣೆಯು ನಕಾರಾತ್ಮಕವಾಗಿದೆ ಮತ್ತು ಎಲ್ಲ ಹಂತಗಳಲ್ಲಿಯೂ ಆರ್‌ಟಿಐಯನ್ನು ನಿರ್ಬಂಧಿಸಲಾಗುತ್ತಿದೆ.

ಆರ್‌ಟಿಐ ಕುರಿತಂತೆ ಸರ್ಕಾರದ ಧೋರಣೆಯು ನಕಾರಾತ್ಮಕವಾಗಿದೆ ಮತ್ತು ಎಲ್ಲ ಹಂತಗಳಲ್ಲಿಯೂ ಆರ್‌ಟಿಐಯನ್ನು ನಿರ್ಬಂಧಿಸಲಾಗುತ್ತಿದೆ. ಇದು ಸಾಧುವಲ್ಲ

ಎಸ್‌ಎನ್‌ಎಸ್ ಸಿದ್ಧಪಡಿಸಿರುವ ವರದಿಯ ಪ್ರಕಾರ, ಮೂರು ರಾಜ್ಯಗಳಲ್ಲಿ ಮಾಹಿತಿ ಆಯೋಗಗಳು ಸಂಪೂರ್ಣವಾಗಿ ನಿಷ್ಕ್ರಿಯವಾಗಿವೆ. ಐದು ರಾಜ್ಯಗಳ ಆಯೋಗಗಳಿಗೆ ಮುಖ್ಯಸ್ಥರೇ ಇಲ್ಲ. ಕೇಂದ್ರ ಮಾಹಿತಿ ಆಯೋಗದಲ್ಲಿ ಏಳು ಹುದ್ದೆಗಳು ಖಾಲಿ ಇವೆ. ನಾಲ್ವರು ಆಯುಕ್ತರು ಮಾತ್ರ ಕೆಲಸ ಮಾಡುತ್ತಿದ್ದಾರೆ. ನೇಮಕ ಆಗಿರುವ ಆಯುಕ್ತರು ಆ ಹುದ್ದೆಗೆ ಅರ್ಹರೇ ಎಂಬ ಪ್ರಶ್ನೆ ಕೇಳಿಬಂದಿತ್ತು. ಹಾಗೆಯೇ ಅವರ ವಿಶ್ವಾಸಾರ್ಹತೆಯ ಕುರಿತು ಕೂಡ ಸಂದೇಹ ವ್ಯಕ್ತವಾಗಿತ್ತು. ಆಯೋಗಗಳಲ್ಲಿ 3.21 ಲಕ್ಷ ಮೇಲ್ಮನವಿಗಳು ಬಾಕಿ ಇವೆ. ಈಗಿನ ವೇಗದಲ್ಲಿಯೇ ಕೆಲಸಗಳು ನಡೆದರೆ, ಪಶ್ಚಿಮ ಬಂಗಾಳದಲ್ಲಿ ಈ ವರ್ಷ ಜುಲೈ 1ರಂದು ಸಲ್ಲಿಕೆಯಾದ ಮೇಲ್ಮನವಿ ವಿಲೇವಾರಿ ಆಗಲು 24 ವರ್ಷ ಮತ್ತು ಒಂದು ತಿಂಗಳು ಬೇಕು. ಕರ್ನಾಟಕದಲ್ಲಿ 41,047 ಮೇಲ್ಮನವಿಗಳು ವಿಚಾರಣೆಗೆ ಬಾಕಿ ಇವೆ. ಇವೆಲ್ಲವನ್ನೂ ವಿಲೇವಾರಿ ಮಾಡಲು ಒಂದು ವರ್ಷ 11 ತಿಂಗಳು ಬೇಕು. ಕೇಂದ್ರ ಮಾಹಿತಿ ಆಯೋಗ ಮತ್ತು ರಾಜ್ಯ ಮಾಹಿತಿ ಆಯೋಗಗಳಿಗೆ ಸಕಾಲಕ್ಕೆ ಆಯುಕ್ತರ ನೇಮಕಕ್ಕೆ ಸರ್ಕಾರಗಳು ಉತ್ಸಾಹ ತೋರುತ್ತಿಲ್ಲ. ಮಾಹಿತಿ ನೀಡಲು ವಿಫಲರಾದ ಅಥವಾ ತಪ್ಪು ಮಾಹಿತಿ ನೀಡಿದ ಅಧಿಕಾರಿಗಳಿಗೆ ದಂಡ ವಿಧಿಸುವುದು ಕೂಡ ವಿರಳ.

ಸಾರ್ವಜನಿಕ ಹಿತಾಸಕ್ತಿ ಹೊಂದಿರುವ ಮಾಹಿತಿ ಮತ್ತು ಪೌರರಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸಬೇಕು ಎಂಬ ಕಾರಣಕ್ಕೆ ಆರ್‌ಟಿಐ ರೂಪುಗೊಂಡಿದೆ. ಇಂತಹ ಮಾಹಿತಿಯು ಪ್ರಜೆಗಳ ಹಕ್ಕು. ಪಾರದರ್ಶಕತೆ ಇದ್ದಾಗ ಭ್ರಷ್ಟಾಚಾರವು ಸಾಧ್ಯವಾಗುವುದಿಲ್ಲ. ಅದಕ್ಷತೆ, ಸಾರ್ವಜನಿಕ ಸ್ಫೂರ್ತಿಯ ಕೊರತೆ, ಅಹಂಕಾರವು ಅಂಧ ಅಧಿಕಾರದ ಜೊತೆಜೊತೆಗೆ ಸಾಗುತ್ತವೆ. ಜನರಿಗೆ ಮಾಹಿತಿ ಸಿಗಬೇಕು ಎಂಬುದು ಪ್ರಜಾಪ್ರಭುತ್ವದ ಮೂಲಭೂತ ಅಂಶ. ಆದರೆ ಈ ಹಕ್ಕನ್ನು ಈಗ ನಿರ್ಲಕ್ಷಿಸಲಾಗುತ್ತಿದೆ. ಸರ್ಕಾರವು ತಿದ್ದುಪಡಿಯ ಮೂಲಕ ಮಾಹಿತಿ ಆಯುಕ್ತರ ಸ್ಥಾನಮಾನವನ್ನು ಕುಗ್ಗಿಸಿದೆ. ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣೆ ಕಾಯ್ದೆ– 2023 ಜಾರಿಗೆ ಬಂದಿದೆ. ಇದರಿಂದಾಗಿ, ಸಾರ್ವಜನಿಕ ಹುದ್ದೆಯಲ್ಲಿರುವವರ ವೈಯಕ್ತಿಕ ಮಾಹಿತಿಯನ್ನು ಸಾರ್ವಜನಿಕ ಮಹತ್ವ ಇದ್ದಾಗಲೂ ಪಡೆದುಕೊಳ್ಳುವುದು ಅಸಾಧ್ಯವಾಗಿದೆ. ಹಲವು ರಾಜ್ಯಗಳಲ್ಲಿ ಆನ್‌ಲೈನ್ ಮೂಲಕ ಆರ್‌ಟಿಐ ಅರ್ಜಿ ಸಲ್ಲಿಕೆಯ ಸೌಲಭ್ಯವೇ ಇಲ್ಲ. ಕೆಲವೆಡೆ ಈ ಸೌಲಭ್ಯ ಇದ್ದರೂ ಅದನ್ನು ಕ್ಲಿಷ್ಟಕರಗೊಳಿಸಲಾಗಿದೆ. ಪೌರರನ್ನು ಸಶಕ್ತಗೊಳಿಸಿದ ಕೆಲವೇ ಕೆಲವು ಕಾಯ್ದೆಗಳಲ್ಲಿ ಆರ್‌ಟಿಐ ಕೂಡ ಒಂದು. ಆದರೆ, ಜನರ ಕೈಗೆ ಕೊಟ್ಟ ಈ ಅಧಿಕಾರವನ್ನು ನಿಧಾನಕ್ಕೆ ಕಸಿದುಕೊಳ್ಳಲಾಗುತ್ತಿದೆ.

ದಿನದ ಟ್ವೀಟ್

ಪೆಡಂಭೂತ ಅಲ್ಲ, ಏಣಿ!

ನಮ್ಮ ಕುಟುಂಬದಲ್ಲಿ ನಾನು ಮೊದಲ ಪೀಳಿಗೆಯ ಪದವೀಧರ. ನನ್ನ ಹಳ್ಳಿಯು 1999ರವರೆಗೂ ಬಸ್ ಸೌಲಭ್ಯವನ್ನೇ ಹೊಂದಿರಲಿಲ್ಲ. ನಾನು ಸಾಧಾರಣ ಐಕ್ಯು ಹೊಂದಿರುವ ವ್ಯಕ್ತಿ. ಇಂತಹ ನಾನು, ಪ್ರತಿಷ್ಠಿತ ಸಂಸ್ಥೆಗಳಲ್ಲಿ ಓದಲು ಸಾಧ್ಯವಾಗಿದ್ದಕ್ಕಾಗಿ ಪ್ರವೇಶ ಪರೀಕ್ಷೆಗಳಿಗೆ ಆಭಾರಿಯಾಗಿದ್ದೇನೆ. ಕಠಿಣಶ್ರಮವಹಿಸಿ ಓದುವವರಿಗೆ ಪ್ರವೇಶ ಪರೀಕ್ಷೆಗಳು ಅವಕಾಶಗಳನ್ನು ಒದಗಿಸುತ್ತವೆ. 'ನೀಟ್' ಪೆಡಂಭೂತ ಅಲ್ಲ, ಅದೊಂದು ಏಣಿ.

ದೀಪನ್ ಷಣ್ಮುಖಸುಂದರಂ, ಎಂಜಿನಿಯರ್, ಉದ್ಯಮಿ

ಕಿಡಿನುಡಿ

ದುರ್ಗಾದೇವಿಯು ಜನರಿಗೆ ತಮ್ಮ ಹಕ್ಕುಗಳಿಗಾಗಿ ಈ ರೀತಿ ಆಗ್ರಹಿಸಲು ಶಕ್ತಿ ಕೊಡಲಿ. ಪ್ರಮುಖ ಅಂಶಗಳು- ಕಂಪನಿಯ ಲೋಗೊ ಇದ್ದರೆ ಕ್ಯಾರಿಬ್ಯಾಗ್ ಮೇಲೆ ಶುಲ್ಕ ವಿಧಿಸುವಂತಿಲ್ಲ ಮತ್ತು ಸರಕುಗಳನ್ನು ಗ್ರಾಹಕ ಒಯ್ಯುವ ರೀತಿಯಲ್ಲಿ ಸಜ್ಜುಗೊಳಿಸಿ ಕೊಡುವುದರ ವೆಚ್ಚವನ್ನು ಮಾರಾಟಗಾರರೇ ಭರಿಸಬೇಕು. ಇದು ನಿಯಮವಾಗಿದ್ದರೂ ಎಲ್ಲ ಗ್ರಾಹಕರೂ ಕಣ್ಣು ಮುಚ್ಚಿಕೊಂಡು ದುಡ್ಡು ತೆರುತ್ತಿದ್ದಾರೆ ಮತ್ತು ಅತ್ಯುತ್ತಮ ಕಂಪನಿಗಳು ಶುಲ್ಕ ವಿಧಿಸುವುದನ್ನು ಮುಂದುವರಿಸಿವೆ!

(ಕಂಪನಿಯ ಲೋಗೊ ಇರುವ ಕ್ಯಾರಿಬ್ಯಾಗ್ ಕೊಟ್ಟು, ಅದಕ್ಕೆ ₹ 20 ದರ ವಿಧಿಸಿದ ಬಹುರಾಷ್ಟ್ರೀಯ ಪೀಠೋಪಕರಣ ರಿಟೇಲ್ ಕಂಪನಿಯೊಂದರ ವಿರುದ್ಧ ಬೆಂಗಳೂರಿನ ಮಹಿಳೆಯೊಬ್ಬರು ನೀಡಿದ್ದ ದೂರನ್ನು ಪರಿಗಣಿಸಿ, ಕ್ಯಾರಿಬ್ಯಾಗ್ ದರ ಮರುಪಾವತಿ ಜೊತೆಗೆ ₹ 3,000 ಪರಿಹಾರ ನೀಡುವಂತೆ ಗ್ರಾಹಕರ ನ್ಯಾಯಾಲಯ ಆದೇಶಿಸಿರುವುದಕ್ಕೆ ಪ್ರತಿಕ್ರಿಯೆ)

ಸುಚೇತಾ ದಲಾಲ್, ಪತ್ರಕರ್ತೆ, ಲೇಖಕಿ

25 ವರ್ಷಗಳ ಹಿಂದೆ

ಭಾನುವಾರ 25–10–1998

• ಅರ್ಥ ವ್ಯವಸ್ಥೆ ಚುರುಕಿಗೆ ಪ್ರಧಾನಿ 8 ಅಂಶದ ಮಹತ್ವದ ಯೋಜನೆ

ನವದೆಹಲಿ, ಅ. 24– ಉತ್ಸಾಹವೇ ಬತ್ತಿಹೋಗಿರುವ ಷೇರುಪೇಟೆಯಲ್ಲಿ ಮತ್ತೆ ನವಚೈತನ್ಯವನ್ನು ತರುವ ಉದ್ದೇಶದಿಂದ ಕಂಪನಿಗಳು ತಮ್ಮ ಷೇರುಗಳನ್ನು ಪೇಟೆಯಿಂದ ವಾಪಸು ಖರೀದಿ ಮಾಡುವುದಕ್ಕೆ ಅವಕಾಶವೂ ಸೇರಿದಂತೆ ಒಟ್ಟು ಎಂಟು ಅಂಶಗಳ ಮಹತ್ವದ ಯೋಜನೆಯನ್ನು ಪ್ರಧಾನಿ ಎ.ಬಿ.ವಾಜಪೇಯಿ ಇಂದು ಪ್ರಕಟಿಸಿದರು.

ಬೆಳವಣಿಗೆ ಕುಂಠಿತವಾಗಿರುವ ಅರ್ಥ-ವ್ಯವಸ್ಥೆಯನ್ನು ಹುರಿದುಂಬಿಸಲು ಈಗ ಹೊಸ ಟೆಲಿಸಂಪರ್ಕ ನೀತಿ ಹಾಗೂ 28 ಸಾವಿರ ಕೋಟಿ ರೂಪಾಯಿ ವೆಚ್ಚದ ಆರು ಹೊಸ ಹೆದ್ದಾರಿಗಳ ನಿರ್ಮಾಣ ಇದರಲ್ಲಿ ಸೇರಿವೆ.

ಮೂಲ ಸೌಲಭ್ಯ ಯೋಜನೆಗಳಲ್ಲಿ ಭಾರೀ ವೆಚ್ಚ ಮಾಡುವ ಉದ್ದೇಶದಿಂದ ಹೆದ್ದಾರಿಗಳನ್ನು ನಿರ್ಮಿಸಲಾಗುವುದು ಹಾಗೂ ಐದು ನಗರಗಳಲ್ಲಿ ಸಂಪೂರ್ಣ ವಿದೇಶಿ ಬಂಡವಾಳದ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣಕ್ಕೆ ಅನುಮತಿ ನೀಡಲಾಗುವುದು ಎಂದು ವಾಜಪೇಯಿ ಅವರು ಭಾರತದ ಕೈಗಾರಿಕಾ ಸಂಘಗಳ ಒಕ್ಕೂಟದ (ಎಫ್‌ಐಸಿಸಿಐ) 71ನೇ ವಾರ್ಷಿಕ ಅಧಿವೇಶನದಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಗುರುವಾರ 25–10–1973

• ಕದನವಿರಾಮ ಮತ್ತೆ ಜಾರಿ: ಈಜಿಪ್ಟ್ ಇಸ್ರೇಲ್ ಮಧ್ಯೆ ಇನ್ನೂ ಹೋರಾಟ

ಟೆಲ್ ಅವೀವ್, ಅ. 24– ಬುಧವಾರ ವಿಶ್ವಸಂಸ್ಥೆ ಕರೆ ಕೊಟ್ಟ ಎರಡನೇ ಸಲದ ಕದನ ವಿರಾಮ ಪಶ್ಚಿಮ ಏಷ್ಯಾದಲ್ಲಿ ಸ್ಥಳೀಯ ಕಾಲಮಾನ ಬೆಳಿಗ್ಗೆ 7 ಗಂಟೆಗೆ (ಭಾರತೀಯ ಕಾಲಮಾನ ಬೆಳಿಗ್ಗೆ 10.30ಕ್ಕೆ) ಅಧಿಕೃತವಾಗಿ ಜಾರಿಗೆ ಬಂದಿತಾದರೂ ಸೂಯೆಜ್ ಕಾಲುವೆ ವಿಭಾಗದಲ್ಲಿ ಹೋರಾಟ ನಡೆಯುತ್ತಲೇ ಇತ್ತು.

'ಈ ಬೆಳಿಗ್ಗೆ ಜಾರಿಗೆ ಬಂದ ಕದನ ವಿರಾಮದ ನಂತರ ಇಸ್ರೇಲಿ ಪಡೆಗಳು ಸೂಯೆಜ್‌ಗೆ ರಸ್ತೆ ಸಂಪರ್ಕ ಕಡಿದುಹಾಕಲು ಯತ್ನಿಸಿದವು. ನಮ್ಮ ಪಡೆಗಳು ಅವು ಆ ರೀತಿ ಮಾಡದಂತೆ ತಡೆದವು' ಎಂದು ಈಜಿಪ್ಟಿನ ಮಿಲಿಟರಿ ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ.

• ಉನ್ನತ ಆಡಳಿತದಲ್ಲಿ ಕನ್ನಡಕ್ಕೆ 'ಸೂಕ್ತ ಕಾಲದಲ್ಲಿ' ಅವಕಾಶ

ಬೆಂಗಳೂರು, ಅ. 24– ನೀತಿ– ನಿರ್ಧಾರಕ್ಕೆ ಅನುಗುಣವಾಗಿ, ಕನ್ನಡವನ್ನು ಅಧಿಕೃತ-ಭಾಷೆಯಾಗಿ ಜಾರಿಗೊಳಿಸಿರುವ ಕಾರ್ಯ ಪ್ರಗತಿಯನ್ನು ಗಮನಿಸಿ, ರಾಜ್ಯದ ಉನ್ನತ ಮಟ್ಟದ ಆಡಳಿತದಲ್ಲಿ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಸೂಕ್ತ ಕಾಲದಲ್ಲಿ ಜಾರಿಗೊಳಿಸಲಾಗುವುದೆಂದು ಕಂದಾಯ ಸಚಿವ ಶ್ರೀ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಹೇಳಿದರು.

ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಮಾಡಲು ಇರುವ ಕೆಲವು ತೊಂದರೆಗಳನ್ನು ನಿವಾರಿಸಬೇಕಾಗಿದೆ, ಅದಕ್ಕೆ ಎಲ್ಲರೂ ಪ್ರಯತ್ನಿಸಬೇಕೆಂದರು. ಶ್ರೀ ಎಂ.ಜಿ. ಹಂದ್ರಾಳ್ ಅವರ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಅವರ ಗೈರುಹಾಜರಿಯಲ್ಲಿ ಅವರು ಉತ್ತರ ನೀಡಿದರು.

'ಹೊರನೋಟ' ಅಷ್ಟೇ ದಕ್ಕಿ 'ಒಳನೋಟ' ನಿಲುಕದಿದ್ದರೆ ತಪ್ಪು ಕುವೆಂಪು ಅವರದಲ್ಲ!

ಒಳಗಿನ ವಿಮರ್ಶೆಯ ಅಗತ್ಯ, ಮಹತ್ವ

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಇಂದಿನ ದಿನಮಾನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯಂತ ಅಭಾವಕ್ಕೀಡಾಗಿರುವ ಅಂಶವೆಂದರೆ ಕಟು ವಿಮರ್ಶೆ, ಅದರಲ್ಲೂ ಕಟುವಾದ ಸ್ವವಿಮರ್ಶೆ. ವ್ಯಕ್ತಿಗತ ನೆಲೆಯಲ್ಲಾಗಲಿ, ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯ ವಲಯದಲ್ಲಾಗಲಿ ಕೃತಕ ವಿಮರ್ಶೆಯ ಕಲಬೆರಕೆಗಳು ಬೇಕಾದಷ್ಟು ದೊರಕಬಹುದು. ಆದರೆ ನೈಜ ಮಾದರಿಯ ಸ್ವವಿಮರ್ಶೆ ಎಂಬ ಪದಾರ್ಥ ತೀರಾ ಅಪರೂಪ. ಇದರ ಅಭಾವದ ಮೂಲವಿರುವುದು ಮೆಚ್ಚುಗೆ ಮಾತುಗಳ ಮರೆಯಲ್ಲಿ, ಆತ್ಮವಂಚನೆಯ ಪರದೆಯಲ್ಲಿ ಸದಾ ಅವಿತಿಟ್ಟುಕೊಳ್ಳಬಯಸುವ ಮನುಷ್ಯ ಸ್ವಭಾವದಲ್ಲಿ.

ಸಮಾಜದಲ್ಲಿ ವಿಮರ್ಶಾತ್ಮಕ ಒಳಗಿನವರು ಅನೇಕ ಸಂದರ್ಭಗಳಲ್ಲಿ ಮಹತ್ವದ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಒಂದು ನಿರ್ದಿಷ್ಟ ಜಾತಿ, ಧರ್ಮ, ಗುಂಪು, ಸಂಸ್ಥೆ ಅಥವಾ ಸಮುದಾಯದ ಭಾಗವಾಗಿರುವ ವ್ಯಕ್ತಿಗಳು ತಮ್ಮ ಕಟು ಟೀಕೆಗಳ ಮೂಲಕ ಸಕಾರಾತ್ಮಕ ಬದಲಾವಣೆಗೆ ಚಾಲನೆ ನೀಡಲು ಸಾಧ್ಯ. ಒಳಗಿನ ವಿಮರ್ಶಕರು ಬದಲಾವಣೆಗೆ ವೇಗವರ್ಧಕಗಳಾಗಿ ಕಾರ್ಯನಿರ್ವಹಿಸುತ್ತಾರೆ. ಜಡ್ಡುಗಟ್ಟಿದ ಯಥಾಸ್ಥಿತಿಗೆ ಸವಾಲು ಹಾಕುವ ಅವರ ನಡೆ ಇತರರನ್ನು ಪ್ರೇರೇಪಿಸುತ್ತದೆ ಮತ್ತು ಸುಧಾರಣೆಗೆ ಒತ್ತಾಸೆಯಾಗಿ ನಿಲ್ಲುತ್ತದೆ.

ಒಳಗಿನ ವಿಮರ್ಶಕರ ಅಗತ್ಯ ಮತ್ತು ಮಹತ್ವವನ್ನು ಸಾರುವ ಸಮರ್ಥನೆಗಳು ಜಾಗತಿಕವಾಗಿ, ಸ್ಥಳೀಯವಾಗಿ ಬಹಳಷ್ಟು ಸಿಗುತ್ತವೆ. ಒಳಗಿನವರ ಇಂತಹ ಪ್ರಯತ್ನಗಳು ಸಹಜವಾಗಿ ಪಟ್ಟಭದ್ರ ಹಿತಾಸಕ್ತಿಗಳಿಂದ ಪ್ರತಿರೋಧ, ಸವಾಲು ಮತ್ತು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಆದಾಗ್ಯೂ ನ್ಯಾಯಯುತ, ಸಮಾನ ಮತ್ತು ನೈತಿಕ ಸಮಾಜವನ್ನು ನಿರ್ಮಿಸುವ ಅವರ ಬದ್ಧತೆಯು ಪ್ರಶ್ನಾತೀತ.

ಬಾಂಗ್ಲಾ-ಸ್ವೀಡಿಷ್ ಲೇಖಕಿ ತಸ್ಲಿಮಾ ನಸ್ರೀನ್ ಮೂಲತಃ ಮಾನವ ಹಕ್ಕುಗಳ ಹೋರಾಟಗಾರ್ತಿ, ಧಾರ್ಮಿಕ ಮೂಲಭೂತವಾದದ ವಿರೋಧಿ. ಬಾಂಗ್ಲಾದೇಶದಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರನ್ನು ಕುರಿತ ಅವರ 'ಲಜ್ಜಾ' (ಅವಮಾನ) ಕಾದಂಬರಿ ಜಾಗತಿಕ ವಿವಾದವನ್ನೇ ಸೃಷ್ಟಿಸಿತ್ತು. ಇಸ್ಲಾಂ ಧಾರ್ಮಿಕ ಉಗ್ರವಾದದ ಬಗೆಗಿನ ಅವರ ವಿಮರ್ಶಾತ್ಮಕ ದೃಷ್ಟಿಕೋನಗಳಿಗಾಗಿ ಹತ್ಯೆಗೆ ಫತ್ವಾ ಹೊರಡಿಸಲಾಯಿತು. ನಸ್ರೀನ್ ಅವರ ಕೃತಿಗಳನ್ನು ಬಾಂಗ್ಲಾದೇಶ ಮತ್ತು ಭಾರತದಲ್ಲಿ ನಿಷೇಧಿಸಲಾಗಿದೆ. ಇಸ್ಲಾಮಿಕ್ ಸಮಾಜಗಳಲ್ಲಿ ಮಹಿಳೆಯರ ಸ್ಥಾನ ಕುರಿತ ಅವರ ಅಭಿಪ್ರಾಯಗಳು ವಿಶೇಷವಾಗಿ ವಿವಾದಾಸ್ಪದವಾಗಿವೆ.

ಬ್ರಿಟಿಷ್-ಭಾರತೀಯ ಲೇಖಕ ಸಲ್ಮಾನ್ ರಶ್ದಿ ಅವರ 'ದಿ ಸಟಾನಿಕ್ ವರ್ಸಸ್' (1988) ಕಾದಂಬರಿಯನ್ನು ಕೆಲವು ಇಸ್ಲಾಮಿಕ್ ನಾಯಕರು ಧರ್ಮನಿಂದನೆಯ ಬರವಣಿಗೆ ಎಂದು ಪರಿಗಣಿಸಿದರು. ಇರಾನ್‌ನ ಅಯತೊಲ್ಲಾ ಖೊಮೇನಿ 1989ರಲ್ಲಿ ಫತ್ವಾ ಹೊರಡಿಸಿ, ರಶ್ದಿಯವರ ಹತ್ಯೆಗೆ ಕರೆ ನೀಡಿದರು. ಈ ಇಬ್ಬರೂ ಲೇಖಕರ ವಿವಾದಗಳು ಧರ್ಮ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ಸೂಕ್ಷ್ಮತೆಗಳೊಂದಿಗೆ ಆಳವಾಗಿ ಹೆಣೆದುಕೊಂಡಿವೆ.

ಪಾಕಿಸ್ತಾನದ ನೊಬೆಲ್ ಪ್ರಶಸ್ತಿ ವಿಜೇತ ಹೋರಾಟಗಾರ್ತಿ ಮಲಾಲಾ ತನ್ನ ಖ್ಯಾತಿಯನ್ನು ಉಗ್ರವಾದ ಪೀಡಿತ ಪ್ರದೇಶದ ಮುಸ್ಲಿಂ ಹುಡುಗಿಯರ ಶಿಕ್ಷಣ ಮತ್ತು ಮಹಿಳಾ ಹಕ್ಕುಗಳಿಗಾಗಿ ಬಳಸಿಕೊಂಡರು. ಇನ್ನೊಬ್ಬ ನೊಬೆಲ್ ಪ್ರಶಸ್ತಿ ವಿಜೇತೆ ಆಂಗ್ ಸಾನ್ ಸೂಕಿ, ಬೌದ್ಧ ನಂಬಿಕೆ ಮತ್ತು ಮ್ಯಾನ್ಮಾರ್ ನಾಗರಿಕರ ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದಾರೆ. ಅವರು ದೇಶದ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ರಕ್ಷಣೆಯ ಹೋರಾಟದಲ್ಲಿ ಸರಣಿ ಸವಾಲುಗಳನ್ನೇ ಎದುರಿಸಿದರು.

ಪಾಕಿಸ್ತಾನದ ಪ್ರಧಾನಿಯಾಗಿದ್ದ ಬೆನಜೀರ್ ಭುಟ್ಟೊ ಅವರು ಮುಸ್ಲಿಂ ದೇಶದಲ್ಲಿ ಲಿಂಗ ಸಮಾನತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಪಾದಿಸಿದರು.

ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರಾದರೂ ತಮ್ಮ ಬದುಕಿನುದ್ದಕ್ಕೂ ಬ್ರಾಹ್ಮಣ್ಯವನ್ನು ಅತ್ಯಂತ ಕಟುಶಬ್ದಗಳಲ್ಲಿ ಟೀಕಿಸಿದ್ದಾರೆ, ಖಂಡಿಸಿದ್ದಾರೆ, ವಿಮರ್ಶಿಸಿದ್ದಾರೆ. 'ಕರ್ಮದ ಬಲೆಯಲ್ಲಿ ಸಿಲುಕಿ ವೃಥಾಯ ಬರುದೊರೆಹೋಹ ಕೆಡುಕ ಹಾರುವ ನಾನಲ್ಲ, ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧ ಮಾಡಿದನಾಗಿ', 'ಆನು ಹಾರುವನೆಂದೆಡೆ ಕೂಡಲಸಂಗಮ ನಗುವನಯ್ಯ' ಎಂಬಂತಹ ವಚನಗಳ ಸಾಲುಗಳು ಒಳಗಿನ ವಿಮರ್ಶೆಗೆ ಮಾದರಿಯಾಗಿ ನಿಲ್ಲುತ್ತವೆ.

ಮಹಾತ್ಮ ಗಾಂಧಿಯವರು ತಾವು ನಂಬಿದ ಹಿಂದೂ ಧರ್ಮದಲ್ಲಿನ ಅಸಮಾನತೆ, ಅಸ್ಪೃಶ್ಯತೆ ಆಚರಣೆಗಳ ವಿರುದ್ಧ ದನಿ ಎತ್ತಿ ಸುಧಾರಣಾವಾದಿ ನೆಲೆಯಲ್ಲಿ ಕಾರ್ಯ-ಕ್ರಮಗಳನ್ನು ರೂಪಿಸಿದ್ದು ನಮ್ಮೆದುರಿಗಿದೆ. ಬಿ.ಆರ್. ಅಂಬೇಡ್ಕರ್ ಅವರು ಭಾರತದ ದಲಿತ ಸಮುದಾಯದ ಹಕ್ಕುಗಳು ಮತ್ತು ಸಾಮಾಜಿಕ ಉನ್ನತಿಯ ಹೋರಾಟದಲ್ಲಿ ನಿರ್ಣಾಯಕ ಆಂತರಿಕ ಪಾತ್ರವನ್ನು ನಿರ್ವಹಿಸಿದರು. ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಬೆಳೆದ ಯು.ಆರ್. ಅನಂತಮೂರ್ತಿ ಅವರು ಸಂಸ್ಕಾರ, ಘಟಶ್ರಾದ್ಧ, ಭಾರತೀಪುರ ಕೃತಿಗಳ ಮೂಲಕ ತಮ್ಮ ಒಳಗಿನ ವಿಮರ್ಶಕನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿರುವುದನ್ನು ಕಾಣಬಹುದು.

ದೇವನೂರ ಮಹಾದೇವ ಅವರು 'ದಲಿತ ನೌಕರರ ಜೊತೆ ಪಿಸುಮಾತು' ಲೇಖನದಲ್ಲಿ, 'ದಲಿತ ನೌಕರರ ಜೀವನಚರಿತ್ರೆಯನ್ನು ಒಂದೇ ವಾಕ್ಯದಲ್ಲಿ ಬರೆಯಿರಿ ಎಂದರೆ ಏನನ್ನು ಬರೆಯಬಹುದು? 'ಬಡತನದಲ್ಲಿ ಕಷ್ಟಪಟ್ಟು ಓದಿ ವಿದ್ಯಾವಂತನಾಗಿ ಕೆಲಸಕ್ಕೆ ಸೇರಿ ಸಂಬಳ ತೆಗೆದುಕೊಂಡು ಆಮೇಲೆ ಊಟ ಮಾಡಿಕೊಂಡು ಚೆನ್ನಾಗಿ ಸತ್ತ'– ಬಹುತೇಕರದು ಇಷ್ಟೇ ಅಲ್ಲವೆ?' ಎಂದು ಕೇಳುವುದು ಒಳಗಿನ ಟೀಕೆಯ ಇನ್ನೊಂದು ಶೈಲಿ. ಹುಟ್ಟಿನಿಂದ ವೀರಶೈವ ಜಂಗಮರಾದ ಚಂದ್ರಶೇಖರ ಪಾಟೀಲರು, 'ಬ್ರಾಹ್ಮಣೋ ಬ್ರಹ್ಮಾಂಡ ಘಾತುಕ, ಜಂಗಮೋ ಜಗದ್ಘಾತುಕ' ಎಂದು ಬಹಿರಂಗ ಸಭೆಯಲ್ಲಿಯೇ ಹೇಳಿದ್ದರು. ಬಾನು ಮುಷ್ತಾಕ್, ಬೊಳುವಾರು ಮಹಮದ್ ಕುಂಞಿ, ಸಾರಾ ಅಬೂಬಕ್ಕರ್ ಅವರು ಒಳಗಿನ ವಿಮರ್ಶಕರಾಗಿ ಬಹಳಷ್ಟು ಪ್ರತಿರೋಧ ಮತ್ತು ಪ್ರಭಾವ ಎರಡಕ್ಕೂ ಕಾರಣರಾಗಿದ್ದಾರೆ.

ಬೀಚಿಯವರು ತಮ್ಮ ಆತ್ಮಕಥನ 'ನನ್ನ ಭಯಾಗ್ರಫಿ'ಯಲ್ಲಿ ಒಂದು ಪ್ರಸಂಗವನ್ನು ಉಲ್ಲೇಖಿಸುವ ಮೂಲಕ ತಮ್ಮ ಒಳಗಿನ ವಿಮರ್ಶೆ ಮೆರೆದಿದ್ದಾರೆ. ವರ್ಷಕ್ಕೊಮ್ಮೆ ಶಿವರಾತ್ರಿ ದಿನದಂದು ಮಾತ್ರ ಮಾಧ್ವರು ಕೂಡ ಸ್ಮಾರ್ತ ಬ್ರಾಹ್ಮಣರು ಪೂಜೆ ಮಾಡುವ ಈಶ್ವರನ ಗುಡಿಗೆ ಹೋಗುವುದನ್ನು ಗಮನಿಸಿದ ಬೀಚಿ, ತಮ್ಮ ಸೋದರತ್ತೆಯ ಗಂಡನನ್ನು ಈ ಬಗ್ಗೆ ಪ್ರಶ್ನಿಸುತ್ತಾರೆ. 'ವರ್ಷಕ್ಕೊಮ್ಮೆ ಆತನ ದರ್ಶನಾನೂ ಮಾಡಿಕೋಬೇಕಪ್ಪಾ. ಇಲ್ಲದಿದ್ರೆ ಮುಂದೆ ಕತ್ತೆ ಜನ್ಮ ಬರ್ತದೆ' ಎಂಬುದು ಅವರ ವಿವರಣೆಯಾಗಿತ್ತು. ಅಂದಿನಿಂದ ಬೀದಿಯಲ್ಲಿ ಒಂದು ಕತ್ತೆಯನ್ನು ನೋಡಿದಾಗಲೆಲ್ಲ ಅದರ ಹಿಂದಿನ ಜನ್ಮದ ವೃತ್ತಾಂತ ನೆನಪಿಗೆ ಬರುತ್ತಿತ್ತು. 'ಯಾರೋ ಆಚಾರ್ಯರ ಮುಂದು ಈ ಮಾತನ್ನಂದು ಬೈಗುಳನ್ನೂ ತಿಂದಿದ್ದೆ...' ಎಂದು ವಿಡಂಬಿಸಿದ್ದಾರೆ ಬೀಚಿ.

ಸಾಮಾಜಿಕ ಶ್ರೇಣಿ ವ್ಯವಸ್ಥೆ ಮತ್ತು ಜಾತಿ ಆಧಾರಿತ ತಾರತಮ್ಯವು ಚಾಲ್ತಿಯಲ್ಲಿರುವ ಸಮಾಜಗಳಲ್ಲಿ ವಿಮರ್ಶಾತ್ಮಕ ಒಳಗಿನವರು ಸಾಮಾನ್ಯವಾಗಿ ಹುಟ್ಟು ಅಥವಾ ಆಚರಣೆ ಕಾರಣದಿಂದ ಸವಲತ್ತು ಪಡೆದ ಜಾತಿಗಳಿಗೆ ಸೇರಿರುತ್ತಾರೆ. ಹಾಗಾಗಿ, ಅವರು ತಮ್ಮ ಸಮುದಾಯಗಳ ಒಳಗಿನಿಂದ ಸಾಮಾಜಿಕ ಬದಲಾವಣೆ ಪ್ರತಿಪಾದಿಸಿದಾಗ ಹೆಚ್ಚಿನ ಅರ್ಥ ಮತ್ತು ಮನ್ನಣೆ ಸಿಗಲು ಅವಕಾಶವಾಗುತ್ತದೆ. ಕುವೆಂಪು ಅವರು ಒಕ್ಕಲಿಗ ಸಮುದಾಯದ ಕುರಿತು ಆಡಿರುವ 'ಒಕ್ಕಲಿಗರಂಥಾ ಮಹಾ ಮೂಢರು... ' ಎಂಬ ಮಾತು 'ಕುವೆಂಪು ಸಮಗ್ರ ಗದ್ಯ'ದ 2ನೇ ಸಂಪುಟದಲ್ಲಿ ದಾಖಲಾಗಿದೆ. ಕೆ.ಎಸ್.ಭಗವಾನ್ ಅವರು ಅಪ್ರಾಸಂಗಿಕವಾಗಿ ಉಲ್ಲೇಖಿಸಿದ ಇದೇ ಮಾತು ಇದೀಗ ವಿವಾದಕ್ಕೆ ಕಾರಣವಾಗಿದೆ.

ಇಲ್ಲಿ ದಾರ್ಶನಿಕ ಸಾಹಿತಿ ಕುವೆಂಪು ಅವರು ಬಳಸಿರುವ ಪದಗಳನ್ನು ಮೀರಿದ 'ಒಳಗಿನ ವಿಮರ್ಶಾನೋಟ' ಎಲ್ಲರ ಗಮನ ತಪ್ಪಿಸಿಕೊಳ್ಳುತ್ತಿರುವುದು ದುಃಖಕರ. ವಿಶ್ವಮಾನವ ಪರಿಕಲ್ಪನೆಯ ಹಂತ ತಲುಪಿದ್ದ ಮಹಾನ್ ಚೇತನದ ಈ ಮಾತುಗಳ 'ಹೊರನೋಟ' ಅಷ್ಟೇ ದಕ್ಕಿ 'ಒಳನೋಟ' ನಿಲುಕದಿದ್ದರೆ ತಪ್ಪು ಕುವೆಂಪು ಅವರದಲ್ಲ!

ಚುರುಮುರಿ



ಪೊಲಿಟಿಕಲ್ ವರ್ಸ್ಟ್ ಕಪ್

• ಲಿಂಗರಾಜು ಡಿ.ಎಸ್.

ಜನರ ಮನರಂಜನೆಗೆ ಪೊಲಿಟಿಕಲ್ ವರ್ಸ್ಟ್ ಕಪ್ ಆಡಬಕು ಅಂತ ರಾಜಕಾರಣಿಗಳು ತೀರ್ಮಾನ ತಕ್ಕಂದರು! 'ನಾವು ಅಂದ್ರೆ ಇಂಡಿಯಾದೋರು ಕನ್ರೀ. ನಾವು ಅಧಿಕಾರಕ್ಕೆ ಬಂದಮ್ಯಾಲೆ ಜನ ಬರಗಾಲದಲ್ಲೂ ಖುಷಿಯಾಗ್ಯವರೆ. ಹೂವಿನ ಟೀಮಿಗೆ ಮ್ಯಾನೇಜರು ಇಲ್ಲ, ಕ್ಯಾಪ್ಟನ್ನೂ ಇಲ್ಲ!' ಅಂತ ಕೈ ಟೀಮಿನ ಕ್ಯಾಪ್ಟನ್ ಹಕ್ಲಾಸ ಮಾಡಿದ್ರು.

'ಕಂಡಿದೀವಿ ಕುತುಗಳ್ರಿ. ನಾವೂ ಭಾರತಾನೇ ಕನಾ. ನಿಮ್ಮ ಟೀಮಲ್ಲೇ ಒಬ್ಬರನ್ನ ಕಂಡ್ರೆ ಇನ್ನೊಬ್ರಿಗೆ ಆಗಕುಲ್ಲ. ಬ್ಯಾಟಿಂಗ್ ಇಲ್ದೇ ಕುಂತೋರು ಸಿಟುಗಂಡಿರದು ನಮಗೆ ಗೊತ್ತಿಲ್ವಾ' ಹೂವಿನ ಟೀಮವರು ಜರಿದ್ರು.

'ಆಯ್ತು ಕಪ್ಪ ನೀವು ಬ್ಯಾಟಿಂಗು, ಬೌಲಿಂಗು ಹ್ಯಂಗೆ ಹಂಚಿಗ್ಯತಿರಿ?' ಕೈನೋರು ತಿವಿದ್ರು.

'ನಮ್ಮದು ಶಾಮೂಹಿಕ ನಾಯಕತ್ವ ಕನ್ರೀ. ಓವರ್ ಕೊನೇ ಬಾಲನ್ನ ಬ್ಯಾಟರ್ ಯಾರ ಕಡಿಗೆ ಹೊಡಿತನೋ ಅವರುದ್ದೇ ಬೌಲಿಂಗ್. ಪ್ರಾದೇಶಿಕ ಆದ್ಯತೆ ಪ್ರಕಾರ ಬ್ಯಾಟಿಂಗ್ ಮಾಡ್ತಿವಿ' ಅಂತ ಹೂವಿನೋರು ಕೊಚ್ಚಿಕೊಂಡರು.

'ಈಗ ತೆನೆ ಟೀಮಲ್ಲಿ ಪ್ಲೇಯರುಗಳೇ ಇಲ್ಲವಲ್ಲಾ? ಅವರುನ್ನ ಹ್ಯಂಗೆ ಆಟಕ್ಕೆ ಸೇರಿಸಿಕ್ಯಳದು?' ಒಬ್ಬರು ಕ್ಯಾತೆ ತೆಗೆದ್ರು.

'ನೋಡಿ ಬ್ರದರ್, ನಮ್ಮದು ಫ್ಯಾಮಿಲಿ ಟೀಮು. ಪ್ಲೇಯರುಗಳು ಇಲ್ದೆ ಇದ್ರೂ ಎರಡು ಸಾರಿ ಟೂರ್ನಿ ನಡೆಸಿದೀವಿ. ಸದ್ಯಕ್ಕೆ ಟೀಮಲ್ಲಿ ಪ್ಲೇಯರುಗಳ ಶಾರ್ಟೇಜದೆ. ಯಾರೂ ಬೇಲಿ ಹಾರದೇ ಇರಲಿ ಅಂತ ಕಪ್ಪ ದಿಗ್ಬಂಧನ ಹಾಕ್ಸಿ, ಆಣೆ-ಪ್ರಮಾಣ ಮಾಡ್ಸಿದೀವಿ. ನಮಗೆ ಎರಡು ಸಾರಿ ಬ್ಯಾಟಿಂಗ್ ಕೊಡಬಕು' ತೆನೆಯವರು ಡಿಮ್ಯಾಂಡ್ ಇಟ್ಟರು.

ಈ ಗದ್ದಲದಲ್ಲಿ ವರ್ಸ್ಟ್ ಕಪ್ ಯಾರೋ ಕದ್ದುಕೋಗವರೆ ಅಂತ ಕೂಗೆದ್ದಿತು. ಎಲ್ಲಾ ಟೀಮುಗಳು ಬ್ಯಾಟು ಹಿಡಕಂದು 'ನೀನೇ, ನೀನೇ' ಅಂತ ಅವರವರಿಗೇ ಜಗಳ ಹತ್ತಿಕ್ಯಂದು ಹುಯ್ಯಾಡಕ್ಕೆ ಸುರು ಮಾಡಿದ್ರು. ಇವರ ಬ್ಲೇಮಿಂಗ್ ಗೇಮಿಂಗ್ ನೋಡಿದ ಜನ 'ಮಾಡಾ ಕೆಲಸ ಬುಟ್ಟು ರಂಗದ ಕುಣಿತ ಮಾಡ್ತಾವೆ ಹಾಳಾದವು' ಅಂತ ಅವುಡುಗಚ್ಚಿದರು.

ಸಂಗತ

ಯುದ್ಧೋನ್ಮಾದ: ಎಚ್ಚರಿಸಲು ಸಕಾಲ

ತಮ್ಮ ಅನುಮತಿಯಿಲ್ಲದೆ ಯುದ್ಧ ಸಾರುವ ಅಧಿಕಾರವಿಲ್ಲ ಎಂದು ಆಳುವವರನ್ನು ಎಚ್ಚರಿಸಲು ಜನರಿಗೆ ಇಂದಿಗೂ ಸಾಧ್ಯವಾಗುತ್ತಿಲ್ಲವೇಕೆ?

• ಜ್ಯೋತಿ

ಯುದ್ಧ ಸಂಸ್ಕೃತಿ ಮನುಷ್ಯನ ಇತಿಹಾಸದುದ್ದಕ್ಕೂ ಹಾಸುಹೊಕ್ಕಾಗಿರುವುದನ್ನು ನಾವು ಕಾಣುತ್ತೇವೆ. ಈ ಯುದ್ಧಗಳು ಪ್ರಕೃತಿಯೊಂದಿಗೆ ಸೆಣಸಾಟ, ಪ್ರಾಕೃತಿಕ ಸಂಪನ್ಮೂಲ ಹಾಗೂ ತನ್ನ ಸುಪರ್ದಿಯ ಕ್ಷೇತ್ರಕ್ಕಾಗಿ ಗುಂಪು ಘರ್ಷಣೆ ಮತ್ತು ಕ್ರಮೇಣ ಅವನು ತನ್ನ ಅಪ್ರತಿಮ ಬುದ್ಧಿಕ್ಷಮತೆಯಿಂದ ಆವಿಷ್ಕರಿಸಿದ ಯಂತ್ರಗಳು ಮನುಷ್ಯಕೇಂದ್ರಿತ ಯೋಚನೆಗಳನ್ನು ಹೆಚ್ಚಿಸುತ್ತಾ, ಜಗತ್ತಿನ ನಿಯಂತ್ರಕನೆನ್ನುವ ಭ್ರಮೆಯಲ್ಲಿ ಅವನನ್ನು ಇರಿಸಿವೆ.

ಮನುಷ್ಯನ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವನ ಕಾರ್ಯಯೋಜನೆಗಳೆಲ್ಲಾ ಸುಖದ ಲಾಲಸೆಗಳನ್ನು ಹೆಚ್ಚಿಸುವುದು ಮತ್ತು ಸಾಧ್ಯವಾದಷ್ಟೂ ದೈಹಿಕ ಶ್ರಮವನ್ನು ಕಡಿಮೆಗೊಳಿಸಿ ನಿರಾಯಾಸವಾಗಿ ಬದುಕುವ ಮಾರ್ಗಗಳನ್ನು ಅನ್ವೇಷಿಸುವುದರಲ್ಲಿಯೇ ತನ್ನೆಲ್ಲಾ ಸಮಯ ಕಳೆದಿರುವುದನ್ನು ಕಾಣಬಹುದು. ಈ ರೀತಿ, ಜನಸಮೂಹದ ಮುಖಂಡರು ತಮ್ಮ ಶ್ರಮವಿಲ್ಲದೆ ಜೀವನದ ಸುಖ ಅನುಭವಿಸಲು ಕಂಡುಕೊಂಡ ಮಾರ್ಗವೆಂದರೆ- ತನ್ನ ಆಧಿಪತ್ಯದ ಆಚೆಗಿನ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿನ ಸಂಪತ್ತನ್ನು ಕೊಳ್ಳೆಹೊಡೆದು ಐಷಾರಾಮದಿಂದ ಬದುಕುವುದು, ಅಲ್ಲಿನ ಗಂಡಸರು ಮತ್ತು ಮಕ್ಕಳನ್ನು ಸೆರೆಹಿಡಿದು ಗುಲಾಮರನ್ನಾಗಿಸಿಕೊಳ್ಳುವುದು, ಹೆಣ್ಣುಮಕ್ಕಳನ್ನು ಕಾಮತೃಷೆಗೆ ಬಳಸಿಕೊಳ್ಳುವುದು. ಈ ಯೋಜನೆಗೆ ರಾಜರು ಇಟ್ಟ ಪೌರುಷದ ಹೆಸರೇ ಯುದ್ಧ.

ಸಾಮಾನ್ಯವಾಗಿ, ಈ ಹಿಂಸಾತ್ಮಕ ಯುದ್ಧಗಳು ಧರ್ಮ, ಶಾಂತಿ ಮತ್ತು ನ್ಯಾಯ ಸ್ಥಾಪನೆಯ ಹೆಸರಿನಲ್ಲಿಯೇ ನಡೆಯುತ್ತವೆ. ಇದು, ಆಳುವವರಿಗೆ ಮೋಜಿನ ಬೇಟೆ, ಸೈನಿಕರಿಗೆ ಹೊಟ್ಟೆಪಾಡಿಗಾಗಿ ಹುತಾತ್ಮರಾಗುವ ಸಂದರ್ಭ, ಜನಸಾಮಾನ್ಯರಿಗೆ ಯಾವಾಗ ತಮ್ಮ ಜೀವನ ಮತ್ತು ಸಂಸಾರ ಛಿದ್ರವಾಗುತ್ತದೋ ಎನ್ನುವ ಅನಿಶ್ಚಯದ ಬದುಕು. ಈ ನಿಯಮ, ಎಲ್ಲಾ ಪ್ರದೇಶಗಳ, ಕಾಲಗಳ ಯುದ್ಧಕ್ಕೂ ಅನ್ವಯಿಸುತ್ತದೆ.

ಈ ಪ್ರಕಾರ, ಬುಡಕಟ್ಟುಗಳು ಸಂಘರ್ಷದಿಂದ ಸಾಮ್ರಾಜ್ಯಗಳಾಗಿ, ಆನಂತರ ಪ್ರಜಾಪ್ರಭುತ್ವವೂ ಒಳಗೊಂಡಂತೆ ವಿವಿಧ ಮಾದರಿಯ ಆಡಳಿತ ವ್ಯವಸ್ಥೆಗಳು ಜಾರಿಗೆ ಬಂದಾಗಲೂ ಜನಸಾಮಾನ್ಯ-ರನ್ನು ಆಳುವ ನಾಯಕರ ಯುದ್ಧೋತ್ಸಾಹ ಮಾತ್ರ ಕಡಿಮೆಯಾಗಿಲ್ಲ. ಇಂದು, ಯಾವುದೇ ರಾಷ್ಟ್ರ ಗಂಭೀರವಾಗಿ ಯುದ್ಧ ಮಾಡಿದರೆ, ಇಡೀ ಭೂಮಿಯೇ ಸ್ಮಶಾನವಾಗುವಷ್ಟು ಅಣ್ವಸ್ತ್ರಗಳನ್ನು ಹೊಂದಿದೆ. ಈ ಎಚ್ಚರಿಕೆ ಎಲ್ಲ ರಾಷ್ಟ್ರಗಳಿಗೆ ಇದ್ದರೂ ಯುದ್ಧಕ್ಕಿಳಿಯುತ್ತಿವೆ. ಯುದ್ಧವು ದೇಶದ ಸಾಮಾಜಿಕ ಮತ್ತು ಆರ್ಥಿಕ ಚಿತ್ರಣವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ.ಇಂದು ದೇಶಗಳು ಪರಸ್ಪರ ಅವಲಂಬಿಸಿರುವುದರಿಂದ, ಜಾಗತಿಕ ಮಟ್ಟದಲ್ಲಿಯೂ ಆರ್ಥಿಕ ಸ್ಥಿತ್ಯಂತರವಾಗುತ್ತದೆ.

ಸದ್ಯದ ರಷ್ಯಾ-ಉಕ್ರೇನ್ ಯುದ್ಧವಾಗಲಿ, ಇಸ್ರೇಲ್-ಹಮಾಸ್ ಸಂಘರ್ಷವಾಗಲಿ, ಯುದ್ಧ ಹೂಡಿದ ನಾಯಕರು ಜೀವ ಕಳೆದುಕೊಳ್ಳುವುದಾಗಲಿ, ವೈಯಕ್ತಿಕವಾಗಿ ಆರ್ಥಿಕ ನಷ್ಟ ಅನುಭವಿಸುವುದನ್ನಾಗಲಿ ನಾವು ಕಾಣುವುದಿಲ್ಲ. ಇಲ್ಲಿ, ಸಾಯುವವರು, ಗಾಯಗೊಳ್ಳುವವರು, ಮನೆ-ಬದುಕು-ಕೆಲಸ ಕಳೆದುಕೊಳ್ಳುವವರು, ಅತ್ಯಾಚಾರಕ್ಕೆ ಒಳಗಾಗುವವರು, ಅನಾಥರಾಗುವವರು ಯುದ್ಧದೊಂದಿಗೆ ಯಾವುದೇ ಸಂಬಂಧ ಹೊಂದಿರದ ಜನಸಾಮಾನ್ಯರು. ಹಾಗೆಯೇ ಯುದ್ಧದಿಂದಾಗುವ ಆರ್ಥಿಕ ನಷ್ಟದ ಪರಿಣಾಮವಾಗಿ ಉಂಟಾಗುವ ಬೆಲೆಯೇರಿಕೆ, ತೆರಿಗೆ ಹೆಚ್ಚಳ, ಉದ್ಯೋಗ ನಷ್ಟವನ್ನು ಭರಿಸುವವರು ಕೂಡ ಅವರೇ. ನಮ್ಮನ್ನು ಆಳುವವರು, ಸರ್ಕಾರಿ ನಿಯಂತ್ರಣದ ಮಾಧ್ಯಮಗಳ ಮೂಲಕ ಯುದ್ಧೋನ್ಮಾದ ಹೆಚ್ಚಿಸಿ, ಜನಾಭಿಪ್ರಾಯ ಕೂಡ ತಮ್ಮ ನಿರ್ಧಾರಗಳಿಗೆ ಪೂರಕವಾಗುವಂತೆ ನೋಡಿಕೊಂಡು, ಜೊತೆಗೆ ಜನ ತಮ್ಮ ದೈನಂದಿನ ಬದುಕಿನ ಕಷ್ಟ-ನಷ್ಟಗಳನ್ನು ಕ್ಷಣಕಾಲ ಮರೆಯುವಂತೆ ಮಾಡಿ ರಾಜಕಾರಣ ನಡೆಸುತ್ತಾರೆ. ವೈಯಕ್ತಿಕ ಪ್ರತಿಷ್ಠೆಗೆ ರಾಷ್ಟ್ರ ಬೆಲೆ ತೆರುತ್ತದೆ.

ಸಾಮ್ರಾಜ್ಯಗಳ ಕಾಲದಲ್ಲಿ, ಇಂಥ ಪ್ರವೃತ್ತಿಯನ್ನು ಜನ ಪ್ರಶ್ನಿಸುವಂತಿರಲಿಲ್ಲ. ಆದರೆ, ವರ್ತಮಾನದಲ್ಲಿ, ಪ್ರಜ್ಞಾವಂತ ನಾಗರಿಕರು ಆಳುವವರ ಪ್ರತಿಷ್ಠೆಯ ಈ ಚೆಲ್ಲಾಟವನ್ನು ಪ್ರತಿಭಟಿಸದೆ ಆತ್ಮಾಹುತಿಗೆ ಸಿದ್ಧರಾಗುವುದು ವಿಪರ್ಯಾಸ.



ವಿಶ್ವಸಂಸ್ಥೆಯು ಬಲಿಷ್ಠ ರಾಷ್ಟ್ರಗಳ ಕೈಗೊಂಬೆಯಾಗಿರುವ ಇಂದಿನ ಸಂದರ್ಭದಲ್ಲಿ, ಜಗತ್ತಿನ ಎಲ್ಲಾ ಸ್ವಸ್ಥ ಬುದ್ಧಿಯ ಮನಸ್ಸುಗಳು ಮೌನವಾಗಿ, ಟಿ.ವಿಯಲ್ಲಿನ ದೃಶ್ಯಗಳನ್ನು ನೋಡಿ, ಇದು ತಮ್ಮ ಲೋಕಕ್ಕೆ ಸಂಬಂಧಿಸದ ಘಟನೆ ಎಂದುಕೊಂಡು ಸುಮ್ಮನಿರದೆ, ನಾಳೆ ತಮಗೂ ಆ ಸ್ಥಿತಿ ಬರಬಹುದು ಎನ್ನುವುದನ್ನು ಮನಗಂಡು, ಅಧಿಕಾರದ ಅಮಲಿನಲ್ಲಿ ಇರುವ ಆಳುವವರ ಹುಚ್ಚುತನವನ್ನು ಪ್ರಶ್ನಿಸಿ ವಿಶ್ವಶಾಂತಿ ಸ್ಥಾಪಿಸಬೇಕಾಗಿದೆ. ಯುದ್ಧದಿಂದ ಯಾರಿಗೂ ಒಳಿತಿಲ್ಲ, ಬದಲಾಗಿ ಎಲ್ಲರ ಸೋಲಿದೆ.

ಮೊದಲ ಮಹಾಯುದ್ಧವನ್ನು ಹತ್ತಿರದಿಂದ ಗಮನಿಸಿದ ಫ್ರೆಂಚ್ ಕಾದಂಬರಿಕಾರ ಹೆನ್ರಿ ಬಾರ್ಬುಸ್ಸೆ ಪ್ರಕಾರ- 'ಯುದ್ಧದಲ್ಲಿ, ಪರಸ್ಪರ ಹೋರಾಡುವ ಎರಡು ಸೈನ್ಯಗಳು, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಒಂದು ದೊಡ್ಡ ಸೈನ್ಯದಂತೆ ಕಾಣಿಸುತ್ತವೆ'. ಇದು, ಯುದ್ಧದ ಸೂತ್ರಧಾರರಿಗೆ ಅರ್ಥವಾಗದಿರುವುದು, ಜನಸಾಮಾನ್ಯರು ಅವರನ್ನು ಎಚ್ಚರಿಸದಿರುವುದು ವರ್ತಮಾನ ಕಾಲದ ದೊಡ್ಡ ದುರಂತ.

ಈಗಾಗಲೇ, ಬಹಳಷ್ಟು ಮಾನವನಿರ್ಮಿತ ಸಮಸ್ಯೆಗಳನ್ನು ಜಗತ್ತು ಎದುರಿಸುತ್ತಿರುವಾಗ, ಒಟ್ಟಾಗಿ ಭೂಮಿಯನ್ನು ಸಂರಕ್ಷಿಸುವುದನ್ನು ಬಿಟ್ಟು, ಯುದ್ಧ ಮಾಡಿ ಇನ್ನಷ್ಟು ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳುವ ಅಗತ್ಯವಿದೆಯೇ?

ಲೇಖಕಿ: ಸಹಾಯಕ ಪ್ರಾಧ್ಯಾಪಕಿ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ವಾಚಕರ ವಾಣಿ

ರಾಜ್ಯೋತ್ಸವ ಪ್ರಶಸ್ತಿ: ಶ್ರಮಜೀವಿಗಳಿಗೆ ಸಲ್ಲಲಿ

ನವೆಂಬರ್ ತಿಂಗಳು ಸಮೀಪಿಸುತ್ತಿರುವುದರಿಂದ, ರಾಜ್ಯೋತ್ಸವ ಪ್ರಶಸ್ತಿ ಕುರಿತಾದ ಚರ್ಚೆಗಳು ಮುನ್ನೆಲೆಗೆ ಬಂದಿವೆ. ಕರ್ನಾಟಕ ಸರ್ಕಾರ ಕೊಡುವ ಪ್ರತಿಷ್ಠಿತ ಪುರಸ್ಕಾರಗಳ ಸಾಲಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದೆ. ಈ ಮೊದಲು ಇದ್ದ ಬಿಜೆಪಿ ನೇತೃತ್ವದ ಸರ್ಕಾರ ಹಿಂದಿನ ಎರಡು ವರ್ಷಗಳಲ್ಲಿ 'ಶ್ರಮ ಗೌರವ'ಕ್ಕೆ ಒತ್ತು ಸಿಗುವಂತೆ ಕೆಲವು ಹೊಸ ಕೆಟಗರಿಗಳನ್ನು ರಾಜ್ಯೋತ್ಸವ ಪ್ರಶಸ್ತಿಗೆ ಜೋಡಿಸಿತ್ತು. ಹೀಗಾಗಿ ಅನನ್ಯ ಸಾಧಕರ ಜೊತೆ ದೇಶ ಕಾಯುವ ಸೈನಿಕರು, ಪ್ರಯೋಗಶೀಲ ರೈತರು, ಶ್ರಮಜೀವಿಗಳಾದ ಪೌರಕಾರ್ಮಿಕರು, ಸ್ಮಶಾನದ ಕಾಯಕಯೋಗಿಗಳು ಪ್ರಶಸ್ತಿಗೆ ಭಾಜನರಾಗಿದ್ದರು.

ಸ್ವಂತ ಮಗಳ ಮದುವೆಯ ದಿನವೂ ಸೇರಿದಂತೆ ಒಂದು ದಿನವೂ ರಜೆ ಪಡೆಯದೇ ದುಡಿದ ಪೌರಕಾರ್ಮಿಕ ಮಹಿಳೆ ಹೂವಿನಹಡಗಲಿಯ ಮಲ್ಲಮ್ಮ, ಯಾದಗಿರಿಯ ರತ್ನಮ್ಮ, ಬೆಂಗಳೂರಿನ ದೊಮ್ಮಲೂರು ಸ್ಮಶಾನದಲ್ಲಿ ಕೈಯಾರೆ ಸಾವಿರಾರು ಗುಂಡಿಗಳನ್ನು ತೆಗೆದ ಕಾಯಕಯೋಗಿ ಮುನಿಯಪ್ಪ ರಾಜ್ಯೋತ್ಸವ ಪುರಸ್ಕಾರಕ್ಕೆ ಪಾತ್ರರಾಗಿ ಪ್ರಶಸ್ತಿಯ ಘನತೆ ಹೆಚ್ಚಿಸಿದ್ದರು. ಈ ಸಲದ ರಾಜ್ಯೋತ್ಸವ ಪ್ರಶಸ್ತಿಗಳೂ ಇಂತಹ ಶ್ರಮಜೀವಿಗಳನ್ನು ಹುಡುಕಿಕೊಂಡು ಹೋಗಲಿ. ಸಾರ್ಥಕತೆಯನ್ನು ಪಡೆಯಲಿ.

ಬಾಬುರಾವ್ ಮುಡುಬಿ, ಸೌರಿರಾಜು, ವನಜಾ ಶ್ರೀರಾಮ್, ವಾದಿರಾಜ್, ಬೆಂಗಳೂರು, **ಬಿ.ವಿ.ವಸಂತಕುಮಾರ,** ಮೈಸೂರು, **ಎಚ್.ಹನುಮಂತಪ್ಪ,** ಬಳ್ಳಾರಿ, **ಆರ್.ಭೀಮಸೇನ,** ಗಂಗಾವತಿ

ಎಚ್ಚರ... ಬೆಳೆಗೆ ಕಿಡಿ ತಾಕೀತು

ರಾಜ್ಯದಲ್ಲಿ ಬರಗಾಲದ ಛಾಯೆ ದಿನೇದಿನೇ ಹೆಚ್ಚಾಗುತ್ತಿದ್ದು, ರೈತರು ಬೆಳೆದ ಬೆಳೆ ಒಣಗತೊಡಗಿದೆ. ಅಲ್ಪಸ್ವಲ್ಪ ನೀರಾವರಿ ಇರುವ ಕಡೆಗಳಲ್ಲಿ ಇರುವ ಬೆಳೆಗಳನ್ನಾದರೂ ಉಳಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರದೂ ಆಗಿದೆ. ಹೀಗಾಗಿ, ಬೆಳೆಗಳನ್ನು ಬೆಂಕಿಯಿಂದ ರಕ್ಷಿಸಿಕೊಳ್ಳಬೇಕಾದ ಹೊಣೆ ರೈತರು ಮತ್ತು ನಾಗರಿಕರ ಮೇಲಿದೆ.

ಕಬ್ಬಿನ ಬೆಳೆ ಸಹ ಒಣಗಿದ್ದು, ಸಣ್ಣ ಬೆಂಕಿ ಕಿಡಿ ಬಿದ್ದರೂ ಸಾಕು ಬೆಳೆಯು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗುವ ಸಂಭವ ಇರುತ್ತದೆ. ಹೀಗಾಗಿ, ರೈತರು ಅದರಲ್ಲೂ ಕಬ್ಬು ಬೆಳೆಗಾರರು ಬೆಂಕಿಯ ಬಗ್ಗೆ ಹೆಚ್ಚು ಜಾಗೃತರಾಗಿ ಇರಬೇಕು. ಜೊತೆಗೆ, ಕಬ್ಬಿನ ಬೆಳೆಗಳ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳು ಹಾಗೂ ಪುಂಡುಪೋಕರಿಗಳ ಬಗ್ಗೆಯೂ ನಿಗಾ ವಹಿಸಬೇಕು.

ಜಗದೀಶ ಎಸ್. ಗಿರಡ್ಡಿ, ಗೊರಬಾಳ, ಇಳಕಲ್

ಲಂಚವನ್ನೇ ಕೊಡದೆ ಪಡೆಯಬಹುದು ಡಿ.ಎಲ್!

ನಾನು ದ್ವಿಚಕ್ರ ವಾಹನದ ಚಾಲನಾ ಪರವಾನಗಿ (ಡಿ.ಎಲ್) ಮಾಡಿಸುವ ಸಲುವಾಗಿ ಮಧ್ಯವರ್ತಿಗಳನ್ನು ಸಂಪರ್ಕಿಸಿದಾಗ, ₹ 2,000– 2,500 ಆಗುವುದೆಂದು ತಿಳಿಸಿದರು. ಅದು ದುಬಾರಿ ಎಂದೆನಿಸಿತು. ಆಗ, ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ ಸುಲಭದಲ್ಲಿ, ಕಡಿಮೆ ಖರ್ಚಿನಲ್ಲಿ ಪರವಾನಗಿ ಪಡೆಯಬಹುದು ಎಂಬ ಮಾಹಿತಿ ಪರಿಚಿತರೊಬ್ಬರಿಂದ ಸಿಕ್ಕಿತು. ಅದರಂತೆ ಸಾರಥಿ ವೆಬ್‌ಸೈಟ್‌ನಲ್ಲಿ ಮೊದಲು ಎಲ್‌ಎಲ್‌ಆರ್‌ಗೆ ಅರ್ಜಿ ಸಲ್ಲಿಸಿ, ₹ 200 ಶುಲ್ಕ ಪಾವತಿಸಿ, ಆನ್‌ಲೈನ್‌ನಲ್ಲೇ ಸಿಗ್ನಲ್ ಹಾಗೂ ಇನ್ನಿತರ ಪರೀಕ್ಷೆ ಎದುರಿಸಿದ ನಂತರ ಶೀಘ್ರವೇ ಕಲಿಕಾ ಪರವಾನಗಿ (ಎಲ್.ಎಲ್) ಸಿಕ್ಕಿತು.

ಮತ್ತೆ ಒಂದು ತಿಂಗಳ ನಂತರ ಚಾಲನಾ ಪರವಾನಗಿಗೆ (ಡಿ.ಎಲ್) ಅರ್ಜಿ ಸಲ್ಲಿಸಿ ₹ 750 ಶುಲ್ಕ ಪಾವತಿಸಿ, ವಾಹನ ಚಲಾಯಿಸಿ ತೋರಿಸುವ ದಿನವನ್ನು ಸ್ಲಾಟ್ ಮೂಲಕ ನಿಗದಿಪಡಿಸಿದೆ. ಅದರಂತೆ, ನಿಗದಿತ ದಿನದಂದು ಅಧಿಕಾರಿಗಳ ಸಮ್ಮುಖದಲ್ಲಿ ವಾಹನ ಚಲಾಯಿಸಿ ತೋರಿಸಿದೆ. ನಂತರದ ಒಂದು ತಿಂಗಳಿನಲ್ಲಿ ಡಿ.ಎಲ್. ನನ್ನ ಕೈಸೇರಿತು. ನನಗೆ ಖರ್ಚಾದದ್ದು ₹ 950 ಮಾತ್ರ! ಒಂದೇ ಒಂದು ರೂಪಾಯಿ ಲಂಚವನ್ನೂ ನೀಡದೆ, ಭ್ರಷ್ಟಾಚಾರ ತಡೆಯಲು ಪ್ರಯತ್ನಿಸಿದೆ ಎಂಬ ಸಂತೃಪ್ತಿ ನನ್ನದು.

ನೇತ್ರಅಳಪೆ ಕೆಂಬಾರ್, ಮಂಗಳೂರು

ಪ್ರಶಸ್ತಿಗಾಗಿ ಲಾಬಿ: ಇರಲಿ ಎಚ್ಚರ

ರಾಜ್ಯೋತ್ಸವ ಪ್ರಶಸ್ತಿಗೆ ಲಾಬಿ ಮುಂದುವರಿದಿರುವ ಸುದ್ದಿಯನ್ನು (ಪ್ರ.ವಾ., ಅ. 23) ಓದಿದ ಸಾಹಿತಿಗಳು, ನಿಜವಾದ ಕಲಾವಿದರು ಹಾಗೂ ಸಾಧಕರಿಗೆ ಪ್ರಶಸ್ತಿ, ಪುರಸ್ಕಾರಗಳ ಬಗ್ಗೆ ನಿರಾಸೆ, ಜುಗುಪ್ಸೆ ಉಂಟಾದರೆ ಆಶ್ಚರ್ಯಪಡಬೇಕಿಲ್ಲ. ಸೇವಾ ಸಿಂಧು ಪೋರ್ಟಲ್ ಮೂಲಕ 25 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು, ಪ್ರತಿ ಅರ್ಜಿಗೆ 15 ಮಂದಿ ಶಿಫಾರಸು ಮಾಡಿದ್ದಾರೆ; ಈ ಮಧ್ಯೆ ಅವಧಿ ಮುಗಿದ ಮೇಲೂ ಶಾಸಕರು ಹಾಗೂ ಸಚಿವರ ಮೂಲಕ ಖುದ್ದಾಗಿ ಅರ್ಜಿಗಳು ಸಲ್ಲಿಕೆ ಆಗುತ್ತಿವೆ ಎಂಬ ಸುದ್ದಿ ಆಘಾತಕಾರಿ. ಗ್ರಾಮೀಣ ಭಾಗದ ನೈಜ ಕಲಾವಿದರು ಹಾಗೂ ಸಾಹಿತಿಗಳು ಇಂದಿನ ದಿನಗಳಲ್ಲಿ ಶಾಸಕರು, ಸಚಿವರ ಬಳಿ ಹೋಗಿ ಶಿಫಾರಸು ಪತ್ರ ಪಡೆಯುವುದು ಅಸಾಧ್ಯದ ಸಂಗತಿ. ಜೊತೆಗೆ ಇಂದಿನ ಎಷ್ಟು ಮಂದಿ ಶಾಸಕರು ಹಾಗೂ ಸಚಿವರಿಗೆ ಕನಿಷ್ಠ ತಮ್ಮ ಕ್ಷೇತ್ರದಲ್ಲಿರುವ ಕಲಾವಿದರು, ಸಾಹಿತಿಗಳು, ಉತ್ತಮ ಶಿಕ್ಷಕರ ಹೆಸರು ತಿಳಿದಿದೆ ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆ. ಅಲ್ಲದೆ, ಒಂದೇ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ವೋಟಿನ ಸಲುವಾಗಿ ಮೂರ್ನಾಲ್ಕು ಮಂದಿಗೆ ಶಿಫಾರಸು ಪತ್ರ ಕೊಡುವ ಸಚಿವರು, ಶಾಸಕರೂ ಇದ್ದಾರೆ. ಶಿಫಾರಸು ಪತ್ರ ಕೊಡಿಸುವುದಾಗಿ ಕಲಾವಿದರಿಂದ ಹಣ ಪೀಕುವ ಜನಪ್ರತಿನಿಧಿಗಳ ಬೆಂಬಲಿಗರೂ ಇದ್ದಾರೆ. ಹಾಗಾಗಿ, ಅರ್ಹ ಕಲಾವಿದರು ಮತ್ತು ಸಾಹಿತಿಗಳಿಗೆ ಪ್ರಶಸ್ತಿ ಎಂಬುದು ಬಹುತೇಕ ಸಂದರ್ಭಗಳಲ್ಲಿ ಗಗನಕುಸುಮ.

ಪ್ರಶಸ್ತಿ ವಿಚಾರವಾಗಿ ನನ್ನೊಂದಿಗೆ ಮಾತನಾಡಿದ ಹಿರಿಯ ಸಾಹಿತಿಯೊಬ್ಬರು ಲಾಬಿಕೋರರಿಗಷ್ಟೇ ಈ ಪ್ರಶಸ್ತಿ ಎಂದು ಅಲವತ್ತುಕೊಂಡರು. ಇನ್ನು, ಬೆಂಗಳೂರಿನಲ್ಲಿ ನೆಲೆಸಿ ಎಷ್ಟೋ ದಶಕಗಳಾದರೂ ಕೆಲವು ಸಾಹಿತಿಗಳು ಪ್ರಶಸ್ತಿಗೋಸ್ಕರ ತಮ್ಮ ಮೂಲ ಜಿಲ್ಲೆಯ ಹೆಸರಿನಲ್ಲಿ ಅರ್ಜಿ ಸಲ್ಲಿಸುತ್ತಿದ್ದಾರೆ. ಅವರು ಜಿಲ್ಲೆಯಲ್ಲಿ ನಡೆಯುವ ಸಾಹಿತ್ಯ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಯಾವತ್ತೂ ಭಾಗವಹಿಸುವುದಿಲ್ಲ. ಆದರೆ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಇಲ್ಲವೆ ರಾಜ್ಯೋತ್ಸವ ಪ್ರಶಸ್ತಿ ಪಡೆಯಲು, ಅಪ್ಪನ ಕಾಲದಲ್ಲಿ ವಾಸವಿದ್ದ ಮೂಲ ಜಿಲ್ಲೆಯ ಹೆಸರಿನಲ್ಲಿ ಲಾಬಿ ಮಾಡಲು ಕ್ರಿಯಾಶೀಲರಾಗುತ್ತಾರೆ. ಪ್ರಶಸ್ತಿ ಆಯ್ಕೆ ಸಮಿತಿಯವರು ಇಂಥವರ ಬಗ್ಗೆ ಎಚ್ಚರ ವಹಿಸಲೇಬೇಕು. ಜಿಲ್ಲೆಯಲ್ಲಿ ವಾಸವಿದ್ದು ಕಲೆ, ಸಂಸ್ಕೃತಿ, ಸಾಹಿತ್ಯದ ಕೆಲಸ ಮಾಡುತ್ತಿರುವವರಿಗೆ ನ್ಯಾಯ ಒದಗಿಸಬೇಕು. ಈ ಮೂಲಕ, ಅರ್ಹ ಕಲಾವಿದರು ಮತ್ತು ಸಾಹಿತಿಗಳಿಗೆ ಗೌರವ ಸಲ್ಲುವಂತೆ ನೋಡಿಕೊಳ್ಳಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಬ್ಬರದ ಸಂಗೀತ ಮತ್ತು ಹೃದಯಾಘಾತ

ನವರಾತ್ರಿ ಆಚರಣೆಯ ಭಾಗವಾಗಿ ಗುಜರಾತ್, ರಾಜಸ್ಥಾನ ಮತ್ತು ಮಧ್ಯಪ್ರದೇಶದ ಹಲವೆಡೆ ಗಾರ್ಬಾ ನೃತ್ಯವನ್ನು ಆಯೋಜಿಸಲಾಗುತ್ತದೆ. ಫಲವಂತಿಕೆಯನ್ನು ಆಶಿಸಿ ನೂರಾರು ಮಂದಿ ಒಟ್ಟಿಗೇ ಈ ನೃತ್ಯ ಮಾಡುತ್ತಾರೆ. ಹುಟ್ಟಿನಿಂದ ಸಾವಿನವರೆಗೆ ಮನುಷ್ಯನ ಜೀವನದ ವಿವಿಧ ಹಂತಗಳನ್ನು ತೋರಿಸುವ ಕಥಾಪ್ರಸಂಗದ ಮಧ್ಯೆ ಗಾರ್ಬಾ ಹಾಡು–ಸಂಗೀತ ರೂಪುಗೊಂಡಿರುತ್ತದೆ. ಹುಟ್ಟು ಮತ್ತು ಸಾವನ್ನು ಹೇಳುವ ಈ ನೃತ್ಯದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲೇ ಗುಜರಾತ್‌ನಲ್ಲಿ 6 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಗಾರ್ಬಾ ನೃತ್ಯದ ವೇಳೆ ಅಬ್ಬರದ ಸಂಗೀತದ ಡಿಜೆಗಳನ್ನು ಬಳಸಿದ್ದು ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆಯಾದರೂ, ಈ ಆರೂ ಮಂದಿಯ ಸಾವಿನ ಪ್ರಕರಣಗಳಲ್ಲಿ ವೈದ್ಯಕೀಯವಾಗಿ ಅದು ಸಾಬೀತಾಗಿಲ್ಲ. ಆದರೆ, ಅಬ್ಬರದ ಸಂಗೀತವು ಹೃದಯಾಘಾತ ಮತ್ತು ಪಾರ್ಶ್ವವಾಯುವಿಗೆ ಕಾರಣವಾಗುತ್ತದೆ ಎಂಬುದನ್ನು ಹಲವು ಅಧ್ಯಯನಗಳು ಈಗಾಗಲೇ ಸಾಬೀತುಮಾಡಿವೆ

ಪ್ರಜಾವಾಣಿ ವಾರ್ತೆ

‘ನಿದ್ರಾಹೀನತೆ ಮತ್ತು ಅತೀವ ಒತ್ತಡದಂತಹ ಅನಾರೋಗ್ಯದ ಸ್ಥಿತಿಗಳನ್ನು ಗುಣಪಡಿಸಲು ಸಂಗೀತವನ್ನೂ ಚಿಕಿತ್ಸೆಯಾಗಿ ಬಳಸುವ ವಿಧಾನ ಚಾಲ್ತಿಯಲ್ಲಿದೆ. ಆದರೆ ಅಬ್ಬರದ ಸಂಗೀತವನ್ನು ಕೆಲವೇ ನಿಮಿಷಗಳಷ್ಟು ನಿರಂತರವಾಗಿ ಕೇಳಿದರೂ ಕಿವುಡುತನ ಉಂಟಾಗುವುದಲ್ಲದೆ, ಹೃದಯಾಘಾತವೂ ಸಂಭವಿಸಬಹುದು. ಅತೀವ ಸದ್ದಿನ ಸಂಗೀತವು ಸಾವನ್ನೂ ತರಬಹುದು’.

–ಯುರೋಪಿಯನ್ ಹಾರ್ಟ್ ಜರ್ನಲ್‌ನ 2019ರ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಅಧ್ಯಯನ ವರದಿಯಲ್ಲಿನ ಸಾಲುಗಳಿವು.

ಜರ್ಮನಿಯ ಮೈನ್ಜ್ ವಿಶ್ವವಿದ್ಯಾಲಯದ ವೈದ್ಯಕೀಯ ಅಧ್ಯಯನ ಕೇಂದ್ರವು ಈ ಅಧ್ಯಯನವನ್ನು ನಡೆಸಿತ್ತು. ಅಬ್ಬರದ ಸಂಗೀತ ಕೇಳುವ, ಅತೀವ ಸದ್ದಿನ ಪರಿಸರದಲ್ಲಿ ಜೀವಿಸುತ್ತಿರುವ ವ್ಯಕ್ತಿಗಳ ಮೇಲೆ ದೀರ್ಘಾವಧಿಯ ಅಧ್ಯಯನದ ನಂತರ ಈ ವರದಿಯನ್ನು ಸಿದ್ಧಪಡಿಸಲಾಗಿತ್ತು. 50 ಡೆಸಿಬಲ್‌ಗಿಂತ ಹೆಚ್ಚು ಸದ್ದಿನ ಸಂಗೀತವನ್ನು ನಿರಂತರವಾಗಿ ಕೇಳುವವರಲ್ಲಿ ಹೃದಯ ಸಂಬಂಧಿ ಸಮಸ್ಯೆಗಳು ಆರಂಭವಾಗಿದ್ದವು. ಹಲವರು ಹೃದಯಾಘಾತ ಮತ್ತು ಪಾರ್ಶ್ವವಾಯುವಿಗೂ ಒಳಗಾದರು ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿತ್ತು.

ಅಮೆರಿಕದ ಮೆಸಾಚ್ಯುಸೆಟ್ಸ್ ವಿಶ್ವವಿದ್ಯಾಲಯ, ಫೈಝರ್ ಔಷಧ ತಯಾರಿಕಾ ಕಂಪನಿಗಳು ಪ್ರತ್ಯೇಕವಾಗಿ ನಡೆಸಿದ ಅಧ್ಯಯನಗಳೂ ಈ ವಿಚಾರವನ್ನು ದೃಢಪಡಿಸಿದ್ದವು. ಗುಜರಾತ್‌ನಲ್ಲಿ ಅಬ್ಬರದ ಸಂಗೀತದೊಂದಿಗೆ ಆಯೋಜಿಸಲಾಗಿದ್ದ ಗಾರ್ಬಾ ನೃತ್ಯದ ವೇಳೆ ಹೃದಯಾಘಾತವಾಗಿ ಆರು ಮಂದಿ ಮೃತಪಟ್ಟ ಪ್ರಕರಣಗಳನ್ನು, ಈ ಅಧ್ಯಯನ ವರದಿಗಳ ಹೊಳಹುಗಳ ಮೂಲಕ ವಿಶ್ಲೇಷಿಸುವ ಯತ್ನ ಪರಿಣತರ ಮಟ್ಟದಲ್ಲಿ ನಡೆಯುತ್ತಿದೆ. ಆದರೆ, ಈ ಆರೂ ಮಂದಿಯ ಪ್ರಕರಣದಲ್ಲಿ ಹೃದಯಾಘಾತದಿಂದ ಸಾವು ಸಂಭವಿಸಿದೆ ಎಂದು ಹೇಳಲಾಗುತ್ತಿದೆಯಾದರೂ, ಹೃದಯಾಘಾತ ಸಂಭವಿಸಿದ್ದು ಏಕೆ ಎಂಬುದನ್ನು ಪತ್ತೆ ಮಾಡಲಾಗಿಲ್ಲ.

ಮೂಲ ಸ್ವರೂಪದಲ್ಲಿ ಗಾರ್ಬಾ ನೃತ್ಯದ ವೇಳೆ ಅಬ್ಬರದ ಸಂಗೀತ ಬಳಕೆಯಲ್ಲಿ ಇರಲಿಲ್ಲ. ನೃತ್ಯದಲ್ಲಿ ಭಾಗಿಯಾಗುವವರೇ ಹಾಡನ್ನೂ ಹಾಡುತ್ತಿದ್ದರು. ಆದರೆ ಈಚಿನ ವರ್ಷಗಳಲ್ಲಿ ನೃತ್ಯದ ಸ್ವರೂಪ ಸಂಪೂರ್ಣ ಬದಲಾಗಿದೆ. ಮೊದಲು ಲೌಡ್ ಸ್ಪೀಕರ್‌ಗಳ ಮೂಲಕ ಹಾಡುಗಳನ್ನು ಹಾಕುವುದು ಚಾಲ್ತಿಗೆ ಬಂದಿತು. ನಂತರದ ವರ್ಷಗಳಲ್ಲಿ ಗಾರ್ಬಾ ನೃತ್ಯದ ವೇಳೆ ಅತೀವ ಸದ್ದಿನ ಡಿಜೆಯೂ ಬಳಕೆಗೆ ಬಂದಿತು. ಇದರೊಂದಿಗೆ ದಾಂಡಿಯಾ ನೃತ್ಯವನ್ನು ಒಳಗೊಂಡ ‘ಗಾರ್ಬಾ ದಾಂಡಿಯಾ’ ನೃತ್ಯ ಪ್ರಕಾರವೂ ರೂಪುಗೊಂಡಿತು. ಗುಜರಾತ್‌ನಲ್ಲಿ ನವರಾತ್ರಿಯ ವೇಳೆ ಆಯೋಜಿಸಲಾಗುವ ಗಾರ್ಬಾ ನೃತ್ಯವು ವಾಸ್ತವವಾಗಿ ಅತೀವ ಸದ್ದಿನ ಡಿಜೆಯನ್ನು ಒಳಗೊಂಡ ಗಾರ್ಬಾ ದಾಂಡಿಯಾ ನೃತ್ಯವೇ ಆಗಿರುತ್ತದೆ.

ನೃತ್ಯದ ವೇಳೆ ಹೃದಯಾಘಾತದಿಂದ ಜನರು ಮೃತಪಟ್ಟ ಬಗ್ಗೆ ಅಧ್ಯಯನದ ಅವಶ್ಯಕತೆ ಇದೆ ಎಂದು ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಒತ್ತಾಯಿಸಿದ್ದಾರೆ. ಆದರೆ, ಗಾರ್ಬಾ ನೃತ್ಯದ ವೇಳೆ ಆಂಬುಲೆನ್ಸ್‌ನಂತಹ ವೈದ್ಯಕೀಯ ತುರ್ತು ಸೇವೆಯನ್ನು ಆಯೋಜಕರು ಒದಗಿಸಬೇಕು ಎಂದು ಗುಜರಾತ್ ಸರ್ಕಾರ ಹೇಳಿದೆ. ಜತೆಗೆ ಈ ಬಗ್ಗೆ ವಿಸ್ತೃತ ತನಿಖೆ ನಡೆಸುವಂತೆ ರಾಜ್ಯದ ಉನ್ನತ ವೈದ್ಯಾಧಿಕಾರಿಗಳಿಗೆ ಆದೇಶಿಸಿದೆ.

ಅಬ್ಬರದ ಸಂಗೀತದಿಂದ ಏನಾಗುತ್ತದೆ?

ಮಾನವನ ಮಿದುಳಿನಲ್ಲಿ ಅಮಿಗ್ದಲಾ ಎಂಬ ಭಾಗವಿದೆ. ಅದು ಮಾನವನ ಭಯ–ಗಾಬರಿಗಳ ಸಂದರ್ಭದಲ್ಲಿ ಸಕ್ರಿಯವಾಗುತ್ತದೆ ಮತ್ತು ಅವುಗಳನ್ನು ನಿರ್ವಹಿಸಲು ನೆರವಾಗುತ್ತದೆ. ತೀವ್ರ ಒತ್ತಡದ ಸಂದರ್ಭದಲ್ಲಿ ಇದು ಸಕ್ರಿಯವಾಗುತ್ತದೆ. 60 ಡೆಸಿಬಲ್‌ಗಿಂತ ಹೆಚ್ಚಿನ ಶಬ್ದ/ಸಂಗೀತವನ್ನು ಹಲವು ನಿಮಿಷಗಳವರೆಗೆ ನಿರಂತರವಾಗಿ ಕೇಳಿದವರಲ್ಲಿ ಅಮಿಗ್ದಲಾ ಭಾಗವು ಸಕ್ರಿಯವಾದುದು ಅಧ್ಯಯನದಲ್ಲಿ ಪತ್ತೆಯಾಗಿದೆ. ಅಂತಹ ಸಂದರ್ಭದಲ್ಲಿನ ಒತ್ತಡವನ್ನು ನಿರ್ವಹಿಸಲು ದೇಹವು ಹಲವು ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಅದರ ಪರಿಣಾಮವಾಗಿ ರಕ್ತದ ಒತ್ತಡವೂ ಹೆಚ್ಚುತ್ತದೆ ಎಂಬುದು ಈ ಅಧ್ಯಯನಗಳ ವೇಳೆ ಪತ್ತೆಯಾಗಿತ್ತು.

ಅಮಿಗ್ದಲಾ ಸಕ್ರಿಯವಾದ ಮತ್ತು ಅತೀವ ಸದ್ದಿನಿಂದ ತೀವ್ರ ಒತ್ತಡಕ್ಕೆ ಒಳಗಾದವರಲ್ಲಿ ರಕ್ತನಾಳಗಳು ಕುಗ್ಗುವ ಸ್ಥಿತಿ ಎದುರಾಗುತ್ತಿತ್ತು. ರಕ್ತನಾಳಗಳು ಕುಗ್ಗಿದ ಕಾರಣಕ್ಕೆ ರಕ್ತದ ಒತ್ತಡ ತೀವ್ರ ಮಟ್ಟದಲ್ಲಿ ಏರಿಕೆಯಾಗುತ್ತಿತ್ತು. ಜತೆಗೆ ಅಂತಹವರ ಹೃದಯಬಡಿತದಲ್ಲೂ ಗಣನೀಯ ಪ್ರಮಾಣದ ಏರಿಕೆ ಕಂಡುಬಂದಿತ್ತು. ದೇಹದ ರಕ್ತಪರಿಚಲನೆಯಲ್ಲಿ ಇಂತಹ ಸ್ಥಿತಿ ಉಂಟಾದಾಗ, ಹೃದಯದ ಹೃತ್ಕರ್ಣಗಳಿಗೆ ಅಗತ್ಯ ಪ್ರಮಾಣದ ರಕ್ತವು ಪೂರೈಕೆಯಾಗುವುದಿಲ್ಲ. ಇದರಿಂದ ಹೃದಯದ ಹೃತ್ಕುಹರಗಳಿಗೂ ರಕ್ತ ಪೂರೈಕೆಯಲ್ಲಿ ವ್ಯತ್ಯಯವಾಗುತ್ತದೆ. ಈ ಸಮಸ್ಯೆ ತೀವ್ರವಾದಾಗ ಹೃದಯಾಘಾತವಾಗುವ ಅಪಾಯವಿರುತ್ತದೆ. ಜತೆಗೆ ಪಾರ್ಶ್ವವಾಯು ಉಂಟಾಗಬಹುದು, ಹೃದಯಾಘಾತದ ತೀವ್ರತೆ ಹೆಚ್ಚಿದ್ದರೆ, ಸಾವೂ ಸಂಭವಿಸುತ್ತದೆ ಎಂದು ಈ ಅಧ್ಯಯನ ವರದಿಗಳಲ್ಲಿ ವಿವರಿಸಲಾಗಿದೆ.

ಅಬ್ಬರದ ಸಂಗೀತ ಮಾತ್ರವಲ್ಲ, ವಿಮಾನ ನಿಲ್ದಾಣದ ಸಮೀಪ ವಾಸವಿರುವವರು ವಿಮಾನಗಳ ಜೆಟ್ ಬ್ಲ್ಯಾಸ್ಟ್‌ನಿಂದಲೂ (ಟೇಕ್‌ಆಫ್ ವೇಳೆ ವಿಮಾನಗಳ ಜೆಟ್ ಎಂಜಿನ್‌ನಿಂದ ದಿಢೀರ್ ಎಂದು ಉಂಟಾಗುವ ಅಬ್ಬರದ ಸದ್ದು) ಹೃದಯಾಘಾತದ ಅಪಾಯ ಎದುರಿಸುತ್ತಿರುತ್ತಾರೆ. ಲಂಡನ್‌ನ ಹೀತ್ರೂ ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿದ್ದ 36,000 ಜನರನ್ನು ಅಧ್ಯಯನಕ್ಕೆ ಒಳಪಡಿಸಿ, ಈ ಅಂಶವನ್ನು ಕಂಡುಕೊಳ್ಳಲಾಗಿತ್ತು ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

ಭೋಪಾಲ್‌ನಲ್ಲಿ ಈಚೆಗೆ ಆಯೋಜಿಸಲಾಗಿದ್ದ ಗಾರ್ಬಾ ನೃತ್ಯ ಕಾರ್ಯಕ್ರಮ

ಕಾರ್ಡಿಯೊ/ಜಿಮ್‌ಗಳಲ್ಲಿ ಅಬ್ಬರದ ಸಂಗೀತ ಬಳಸುತ್ತಿದ್ದರೂ ಅಪಾಯ

ಕಾರ್ಡಿಯೊ ಮತ್ತು ಜಿಮ್‌ಗಳಲ್ಲಿ ಅಬ್ಬರದ ಸಂಗೀತ ಬಳಕೆಯಲ್ಲಿದೆ. ಬ್ರಿಟನ್ ಮತ್ತು ಜರ್ಮನಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಜಿಮ್ ಸೆಂಟರ್‌ಗಳಲ್ಲಿ 100 ಡೆಸಿಬಲ್‌ಗಿಂತಲೂ ಹೆಚ್ಚಿನ ಮಟ್ಟದ ಸಂಗೀತವನ್ನು ಕೇಳಿಸಲಾಗುತ್ತಿತ್ತು. ಕಾರ್ಡಿಯೊ ಮತ್ತು ವ್ಯಾಯಾಮದಲ್ಲಿ ಭಾಗಿಯಾದವರಲ್ಲಿ ಉತ್ಸಾಹ ತುಂಬಲು ಅಬ್ಬರದ ಸಂಗೀತ ಬಳಸಲಾಗುತ್ತದೆ ಎಂದು ಜಿಮ್ ತರಬೇತುದಾರರು ಹೇಳಿದ್ದರು. ಅಂತಹ ವಾತಾವರಣದಲ್ಲಿ ಕಾರ್ಡಿಯೊ ಮತ್ತು ವ್ಯಾಯಾಮ ಮಾಡುತ್ತಿದ್ದ 500 ಮಂದಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರಲ್ಲಿ ಹಲವರು ಹೃದಯಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅವರ ಮಿದುಳಿನ ಅಮಿಗ್ದಲಾ ಅನಗತ್ಯವಾಗಿ ಹೆಚ್ಚು ಸಕ್ರಿಯವಾಗಿತ್ತು ಎಂಬುದನ್ನು ಪಿಇಟಿ ಸ್ಕ್ಯಾನ್ ಮೂಲಕ ಪತ್ತೆ ಮಾಡಲಾಗಿತ್ತು. ಅಬ್ಬರದ ಸಂಗೀತವು ರಕ್ತದ ಒತ್ತಡವನ್ನು ಹೆಚ್ಚಿಸುತ್ತಿದ್ದುದಲ್ಲದೇ, ವ್ಯಾಯಾಮದಿಂದ ಅವರ ರಕ್ತದೊತ್ತಡ ಅಪಾಯಕಾರಿ ಮಟ್ಟಕ್ಕೆ ಏರಿಕೆಯಾಗುತ್ತಿತ್ತು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಭಾರತದಲ್ಲೂ ಕಾರ್ಡಿಯೊ ಮತ್ತು ಜಿಮ್‌ಗಳಲ್ಲಿ ಅಬ್ಬರದ ಸಂಗೀತ ಹಾಕುವ ಪರಿಪಾಟವಿದೆ. ಕನ್ನಡದ ಹಲವು ನಟರೂ ಸೇರಿ ಭಾರತದ ಹಲವು ಗಣ್ಯರು ಜಿಮ್‌ನಲ್ಲಿಯೇ ಕುಸಿದುಬಿದ್ದು, ಹೃದಯಾಘಾತದಿಂದ ಮೃತಪಟ್ಟ ಹಲವು ನಿದರ್ಶನಗಳಿವೆ. ಇನ್ನು ಅಬ್ಬರದ ಸಂಗೀತ ಕಾರ್ಯಕ್ರಮಗಳ ವೇಳೆ ವೇದಿಕೆಯಲ್ಲೇ ಗಾಯಕರು ಕುಸಿದುಬಿದ್ದು, ಹೃದಯಾಘಾತದಿಂದ ಮೃತಪಟ್ಟ ಸಂಖ್ಯೆಯೂ ಕಡಿಮೆಯಿಲ್ಲ. ಗುಜರಾತ್‌ನಲ್ಲಿ ಅಬ್ಬರದ ಸಂಗೀತದ ಗಾರ್ಬಾ ನೃತ್ಯದ ವೇಳೆ 15 ವರ್ಷದ ಬಾಲಕ ಸೇರಿ ಹಲವರು ಮೃತಪಟ್ಟ ಬಳಿಕ, ವ್ಯಾಯಾಮ ಮತ್ತು ಸಂಗೀತ ಕಾರ್ಯಕ್ರಮಗಳಲ್ಲಿ ಗಣ್ಯರು ಮೃತಪಟ್ಟ ಬಗ್ಗೆಯೂ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ.

ಅಹಮದಾಬಾದ್‌ನಲ್ಲಿ ಗಾರ್ಬಾ ನೃತ್ಯದ ತಾಲೀಮು ಪಿಟಿಐ ಚಿತ್ರಗಳು

ಶಬ್ದ ನಿಯಂತ್ರಣ...

ಭಾರತದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಶಬ್ದ ಮಾಲಿನ್ಯಕ್ಕೆ ನಿಯಂತ್ರಣಗಳಿವೆ. ಆದರೆ, ನಿಯಮಗಳಲ್ಲಿ ಸೂಚಿಸಿರುವ ಶಬ್ದ ಮಾಲಿನ್ಯದ ಮಿತಿಯು ಆರೋಗ್ಯಕರ ಮಟ್ಟಕ್ಕಿಂತ ಹೆಚ್ಚಿನ ಪ್ರಮಾಣದ್ದಾಗಿದೆ.

ಶಬ್ದ ಮಾಲಿನ್ಯದ ಮಿತಿ ಎಷ್ಟಿರಬೇಕು ಎಂಬುದನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ‘ಶಬ್ದ ಮಾಲಿನ್ಯ (ನಿಯಂತ್ರಣ) ನಿಯಮ’ಗಳಲ್ಲಿ ವಿವರಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಆಯೋಜಿಸುವ ಹಬ್ಬದ ಆಚರಣೆಗಳು, ಸಂಗೀತ ಕಾರ್ಯಕ್ರಮಗಳು ಮತ್ತು ನೃತ್ಯ ಕಾರ್ಯಕ್ರಮಗಳಲ್ಲಿ ಸಂಗೀತದ ಶಬ್ದದ ಪ್ರಮಾಣ 100 ಡೆಸಿಬಲ್ ಮೀರುವಂತಿಲ್ಲ ಎಂದು ಈ ನಿಯಮಗಳು ಹೇಳುತ್ತವೆ. 60 ಡೆಸಿಬಲ್ ಮೀರಿದ ಸಂಗೀತವೇ ಮನುಷ್ಯನ ಹೃದಯಕ್ಕೆ ಮಾರಕ ಎಂದು ಪರಿಗಣಿಸಲಾಗುತ್ತದೆಯಾದರೂ, ನಮ್ಮಲ್ಲಿ 100 ಡೆಸಿಬಲ್‌ವರೆಗೆ ಅವಕಾಶ ನೀಡಲಾಗಿದೆ.

ಮನೆಗಳಲ್ಲಿ ಬಳಸುವ ಸಾಮಾನ್ಯ ಹೋಮ್ ಥಿಯೇಟರ್‌ಗಳೇ 80 ಡೆಸಿಬಲ್‌ವರೆಗಿನ ಶಬ್ದವನ್ನು ಉತ್ಪಾದಿಸಬಲ್ಲವು. ಇನ್ನು ಪ್ರವೇಶಮಟ್ಟದ ಡಿಜೆ ಸಿಸ್ಟಂಗಳು 125–140 ಡೆಸಿಬಲ್‌ವರೆಗಿನ ಶಬ್ದವನ್ನು ಉತ್ಪಾದಿಸಬಲ್ಲವು. 100 ಡೆಸಿಬಲ್‌ವರೆಗಿನ ಶಬ್ದ ಉತ್ಪಾದಿಸುವ ಕಾರ್ಯಕ್ರಮಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಅನುಮತಿ ಪಡೆದಿದ್ದರೂ, ಮಿತಿಯ ಮಟ್ಟದಲ್ಲಿ ಮಾತ್ರ ಅಬ್ಬರದ ಸಂಗೀತವನ್ನು ಹಾಕಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವ ವ್ಯವಸ್ಥೆ ದೇಶದ ಎಲ್ಲಾ ಭಾಗಗಳಲ್ಲಿ ಇಲ್ಲ.

ಆಧಾರ: ಯೂರೋಪಿಯನ್ ಹಾರ್ಟ್ ಜರ್ನಲ್, ಮೆಸಾಚ್ಯುಸೆಟ್ಸ್ ವಿಶ್ವವಿದ್ಯಾಲಯ, ಫೈಝರ್, ಎಎಫ್‌ಪಿ, ಪಿಟಿಐ

ಸಿನಿ ಬಿಟ್ಸ್

ನ.24ರಂದು ‘ಸ್ವಾತಿ ಮುತ್ತಿನ...’ ತೆರೆಗೆ

ನಟಿ ರಮ್ಯಾ ನಿರ್ಮಿಸಿ, ರಾಜ್ ಬಿ. ಶೆಟ್ಟಿ ಹಾಗೂ ಸಿರಿ ರವಿಕುಮಾರ್ ಜೋಡಿಯಾಗಿ ನಟಿಸಿರುವ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರ ನವೆಂಬರ್ 24ರಂದು ತೆರೆಗೆ ಬರಲಿದೆ. ರಾಜ್ ಬಿ. ಶೆಟ್ಟಿ ನಿರ್ದೇಶಿಸಿರುವ ಈ ಚಿತ್ರದ ಮೂಲಕ ರಮ್ಯಾ ಚಿತ್ರರಂಗಕ್ಕೆ ಮರಳಿದ್ದರು. ತಾವೇ ನಾಯಕಿಯಾಗಿ ನಟಿಸುವುದಾಗಿಯೂ ಹೇಳಿದ್ದರು. ಆದರೆ ಬದಲಾದ ಸನ್ನಿವೇಶದಲ್ಲಿ ರಮ್ಯಾ ಚಿತ್ರದಲ್ಲಿ ನಟಿಸದೆ, ತಮ್ಮ ‘ಆ್ಯಪಲ್ ಬಾಕ್ಸ್ ಸ್ಟುಡಿಯೊ’ ಮೂಲಕ ನಿರ್ಮಾಪಕರಾಗಿ ಉಳಿದರು.

ಸಿನಿಮಾ ಬಿಡುಗಡೆಗೆ ಮುಂದಾಗಿರುವ ಚಿತ್ರತಂಡ ರಾಜ್ ಬಿ. ಶೆಟ್ಟಿ ಹಾಗೂ ಸಿರಿ ರವಿಕುಮಾರ್ ಒಟ್ಟಾಗಿ ಇರುವ ಪೋಸ್ಟರ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿ ಸಿನಿಮಾ ಸೆಟ್ಟೇರಿತ್ತು. ಊಟಿಯಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆದಿತ್ತು. ಲೈಟರ್ ಬುದ್ಧ ಫಿಲ್ಮ್ಸ್ ಸಹಯೋಗದಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಲಾಗಿದ್ದು, ಚಿತ್ರಕ್ಕೆ ರಾಜ್ ಬಿ. ಶೆಟ್ಟಿ ಅವರದ್ದೇ ಕಥೆ ಇದೆ. ರಾಜ್ ಅವರ ‘ಗರುಡ ಗಮನ ವೃಷಭ ವಾಹನ’ ಚಿತ್ರದ ತಾಂತ್ರಿಕ ತಂಡವೇ ಇಲ್ಲಿ ಕೆಲಸ ಮಾಡಿದೆ. ಮಿಥುನ್ ಮುಕುಂದನ್ ಅವರ ಸಂಗೀತ, ಪ್ರವೀಣ್ ಶ್ರೀಯಾನ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಮಿನರ್ವ ಸ್ಟುಡಿಯೋಸ್‌ನಲ್ಲಿ ಚಿತ್ರೀಕರಣಕ್ಕೆ ಅವಕಾಶವಿಲ್ಲ?

ಕೆಜಿಎಫ್ ಚಿತ್ರದ ದೃಶ್ಯ

ಹಿಂದಿನ ವಾರ ತೆರೆಕಂಡ ‘ಘೋಸ್ಟ್’ ಸಿನಿಮಾದ ಜೈಲು ಸೆಟ್ ಹಾಕಿದ್ದು ಮಿನರ್ವ ಸ್ಟುಡಿಯೋಸ್‌ನಲ್ಲಿ. ಅದಾದ ಬಳಿಕ ಅಲ್ಲಿ ಯಾವುದೇ ಚಿತ್ರದ ಚಿತ್ರೀಕರಣಕ್ಕೆ ಅವಕಾಶ ನೀಡುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಬಹುಬೇಡಿಕೆ ಇದ್ದ ಮಿನರ್ವ ಸ್ಟುಡಿಯೋಸ್‌ಗೆ ಬಹುತೇಕ ಬೀಗ ಬಿದ್ದಂತೆ ಎಂದು ಮೂಲಗಳು ಹೇಳುತ್ತಿವೆ.

‘ಆರು ತಿಂಗಳಿನಿಂದ ಯಾವುದೇ ಚಿತ್ರೀಕರಣಕ್ಕೆ ಅವಕಾಶ ನೀಡುತ್ತಿಲ್ಲ. ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ಕೇಳಿದರೆ ಕೇಂದ್ರ ಕಚೇರಿ ಕೊಯಮತ್ತೂರಿನಲ್ಲಿ ಕೇಳಿ ಎನ್ನುತ್ತಾರೆ. ಅಲ್ಲಿ ವಿಚಾರಿಸಿದರೆ, ದೆಹಲಿಯಿಂದ ಒಪ್ಪಿಗೆ ಬೇಕೆಂಬ ಉತ್ತರ ಬರುತ್ತದೆ. ದೆಹಲಿಯಲ್ಲಿ ಯಾರೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಒಟ್ಟಿನಲ್ಲಿ ಸ್ಟುಡಿಯೊ ಸ್ಥಗಿತಗೊಂಡಂತಿದೆ. ನಿಖರವಾದ ಕಾರಣ ತಿಳಿಯುತ್ತಿಲ್ಲ’ ಎನ್ನುತ್ತಾರೆ ಸಿನಿಮಾಗಳ ನಿರ್ಮಾಣ ನಿರ್ವಾಹಕ ರವಿ.

ಮಿನರ್ವ ಮಿಲ್ ಎಂದೇ ಜನಪ್ರಿಯವಾಗಿದ್ದ ಇಲ್ಲಿ ‘ಉಗ್ರಂ’, ‘ಕೆಜಿಎಫ್’, ‘ಕಬ್ಜ’, ‘ಘೋಸ್ಟ್’, ‘ಪೊಗರು’ ಸೇರಿ ನೂರಾರು ಚಿತ್ರಗಳ ಚಿತ್ರೀಕರಣವಾಗಿದೆ. ಸಿನಿಮಾದ ಸಾಹಸ ದೃಶ್ಯಗಳ ಚಿತ್ರೀಕರಣಕ್ಕೆ ಇದು ಹೇಳಿ ಮಾಡಿಸಿದಂತಹ ಜಾಗವಾಗಿತ್ತು. ಬಿನ್ನಿಪೇಟೆಯ ಬಿನ್ನಿ ಮಿಲ್, ಯಶವಂತಪುರ ಬಳಿಯ ಮೈಸೂರ್ ಲ್ಯಾಂಪ್ಸ್, ಮೈಸೂರು ರಸ್ತೆಯ ಟೊರಿನೋ ಫ್ಯಾಕ್ಟರಿ ಬಳಿಕ ಮಿನರ್ವ ಸ್ಟುಡಿಯೋಸ್ ಕೂಡ ಚಿತ್ರರಂಗಕ್ಕೆ ಮುಚ್ಚಿದ ಬಾಗಿಲು ಎಂಬಂತಾಗಿದೆ. ಎಚ್.ಎಂ.ಟಿ. ಫ್ಯಾಕ್ಟರಿ ಮಾತ್ರ ಸದ್ಯಕ್ಕೆ ಚಿತ್ರೀಕರಣಕ್ಕೆ ಲಭ್ಯವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಶಿವಮೊಗ್ಗದ ಘಟನೆಯಿಂದ ಎಚ್ಚೆತ್ತುಕೊಳ್ಳದಿದ್ದರೆ ನಿಮ್ಮಂತ ಮೂರ್ಖ ಹಿಂದೂಗಳನ್ನು ಕಾಪಾಡಲು ಯಾರೂ ಬರುವುದಿಲ್ಲ... ಎಲ್ಲಾ ಕಾಂಗ್ರೆಸ್ ಅಧಿಕಾರದ ಪರಿಣಾಮ’ ಎಂಬ ಬರಹದೊಂದಿಗೆ ವಿಡಿಯೊ ಒಂದನ್ನು ಹಂಚಿಕೊಳ್ಳಲಾಗುತ್ತಿದೆ. ಮುಸ್ಲಿಮರು ಕತ್ತಿ ಹಿಡಿದು ಮೆರವಣಿಗೆ ನಡೆಸುತ್ತಿರುವ ದೃಶ್ಯಗಳು ಅದರಲ್ಲಿವೆ. ಹಿಂದೂಗಳ ಮೇಲೆ ದಾಳಿ ನಡೆಸಲು ಮುಸ್ಲಿಮರು ಕತ್ತಿ ಹಿಡಿದು ಬಹಿರಂಗವಾಗಿ ಓಡಾಡುವಷ್ಟು ಧೈರ್ಯವನ್ನು ರಾಜ್ಯ ಸರ್ಕಾರ ನೀಡಿದೆ ಎಂದು ಹಲವರು ಈ ಪೋಸ್ಟ್‌ಗೆ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಈ ಘಟನೆ ಶಿವಮೊಗ್ಗದ್ದೂ ಅಲ್ಲ, ಕರ್ನಾಟಕದ್ದೂ ಅಲ್ಲ.

ವಿಡಿಯೊವಿನ ಕೀಫ್ರೇಂ ಸರ್ಚ್ ಮಾಡಿದಾಗ, ಈ ವಿಡಿಯೊದಲ್ಲಿ ಹೆದ್ದಾರಿಯ ಬೋರ್ಡ್ ಒಂದರ ದೃಶ್ಯ ಇರುವುದು ಪತ್ತೆಯಾಯಿತು. ಆ ಫಲಕದಲ್ಲಿ ಬೌದ್ಧ ಸ್ತೂಪ ಲೌರಿಯಾಗೆ ನಂದನಗಡ ಎಂದು ಬರೆಯಲಾಗಿದೆ. ನಂದನಗಡ ಇರುವುದು ಬಿಹಾರದಲ್ಲಿ. ಹೀಗಾಗಿ ಇದು ಕರ್ನಾಟಕದ ಶಿವಮೊಗ್ಗದ ದೃಶ್ಯ ಎಂಬುದು ಸುಳ್ಳು ಎಂದಾಯಿತು. ಇನ್ನು ಮೊಹರಂ ಮೆರವಣಿಗೆಯಲ್ಲಿ ಧಾರ್ಮಿಕ ಕ್ರಿಯೆಯ ಭಾಗವಾಗಿ ಕತ್ತಿ, ಇತರ ಶಸ್ತ್ರಾಸ್ತ್ರಗಳು, ವಸ್ತ್ರವನ್ನು ಬಳಸಲಾಗುತ್ತದೆ. ಹೀಗಾಗಿ ಹಿಂದೂಗಳ ಮೇಲೆ ದಾಳಿ ನಡೆಸಲು ಕತ್ತಿಯ ಮೆರವಣಿಗೆ ನಡೆಸಲಾಗುತ್ತಿದೆ ಎಂಬುದೂ ಸುಳ್ಳು ಸುದ್ದಿ.

ಗುಂಡಣ್ಣ

ನುಡಿ ಬೆಳಗು

ಗೆಳೆತನವೆಂಬ ಅಮೃತ

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಅವರು ಒಳ್ಳೆಯ ಉದ್ಯೋಗದಲ್ಲಿದ್ದರು. ಮೆಚ್ಚಿ ಮದುವೆಯಾದ ಹೆಂಡತಿ ಮುದ್ದಾದ ಪುಟಾಣಿ ಮಗಳೂ ಇದ್ದಳು. ಅವರ ಸಂಸಾರ ಸುಖವಾಗಿತ್ತು. ತುಂಬಾ ಸಂತೋಷದಿಂದ ಬದುಕುತ್ತಿದ್ದರು. ಅಷ್ಟರಲ್ಲೇ ಬಂದ ಕೊರೋನಾ ಮಹಾಮಾರಿ ಬಿರುಗಾಳಿ ಎಬ್ಬಿಸಿತು.

ಸೋಂಕಿಗೆ ಒಳಗಾದ ಹೆಂಡತಿ ಒಂದು ದಿನ ಉಸಿರು ನಿಲ್ಲಿಸಿದರು. ಈ ಘಟನೆಯಿಂದ ಅವರು ಕಂಗೆಟ್ಟು ಹೋದರು. ಬಿಕ್ಕಿ ಅತ್ತರೆ ಸಮಾಧಾನ ಹೇಳುವವರು ಯಾರೂ ಇರಲಿಲ್ಲ. ಸಣ್ಣ ಮಗುವನ್ನು ಆ ಫ್ಲ್ಯಾಟ್‌ನಲ್ಲಿಟ್ಟು ಸಾಕುವುದು ಕೂಡ ಕೂಡ ದುಸ್ತರ ಎನಿಸಿತು.

ಮನುಷ್ಯ ಹೆಚ್ಚು ದುಃಖಿತನಾದಾಗ, ಧೈರ್ಯ ಕಳೆದುಕೊಂಡಾಗ, ಒಂಟಿತನ ಕತ್ತು ಹಿಚುಕುವಾಗ ಮನಸ್ಸು ತೀರಾ ದುರ್ಬಲವಾಗುತ್ತದೆ. ಹಿತವಾದವರ ನಡುವೆ ಇದ್ದು ಮನಸ್ಸಿನ ಸಂಕಟ ಮರೆಯುವುದು ಸುಲಭ. ಅವರ ಮಾತುಕತೆಗಳು ಕೊಂಚ ಗೆಲುವಾದರೂ ಕೊಡುತ್ತವೆ. ಹಿರಿಯರ ಮಾತು ಮಾನಸಿಕ ಸ್ಥೈರ್ಯವನ್ನಾದರೂ ಹೆಚ್ಚಿಸುತ್ತದೆ. ಆದರೆ ಒಂಟಿತನವು ಆತ್ಮಹತ್ಯೆ ಮಾಡಿಕೊಂಡರೆ ಹೇಗಿರುತ್ತದೆ ಎಂಬ ದುಷ್ಟ ಆಲೋಚನೆಯ ವಿನಃ ಮತ್ತೇನೂ ಸೂಚಿಸುವುದಿಲ್ಲ.

ತಾನು ಸಾಯುವುದು ಸರಿ. ಆದರೆ ಮಗುವನ್ನು ಹೇಗೆ ಕೊಲ್ಲುವುದು? ಇಲ್ಲಿಗೆ ಜೀವನ ಮುಗಿದೇ ಹೋಯಿತು ಎನ್ನಿಸಿತು. ಉತ್ತರ ಸಿಗದೆ ರಾತ್ರಿಗಳು ಹಗಲಾಗಿ ಬದಲಾದವು. ಕ್ಷಣಕ್ಷಣವೂ ಜೀವನ ನರಕವೆನಿಸತೊಡಗಿತು. ಈ ಬದುಕು ಕೊನೆಗೊಳಿಸುವುದೇ ಸೂಕ್ತ ಪರಿಹಾರ ಎನಿಸಿತು.

ಒಂದು ದಿನ ಮನಸ್ಸು ಒಂದು ಹೊಸ ಅವಕಾಶ ಸೂಚಿಸಿತು. ಬಾಲ್ಯದಲ್ಲಿ ಒಟ್ಟಿಗೆ ಶಾಲೆಯಲ್ಲಿ ಕಲಿತ ಗೆಳೆಯ ಗೆಳತಿಯರ ನೆನಪು ಮೂಡಿತು. ಒಮ್ಮೆ ಮಾತಾಡುವುದು ಸರಿ ಎನಿಸಿತು. ತನ್ನ ಕಷ್ಟವನ್ನು ಯಾರಿಗೂ ಹೇಳುವುದು ಬೇಡ ಎಂದು ಅಚಲವಾಗಿದ್ದ ನಿರ್ಧಾರ ಸಡಿಲವಾಗಿತ್ತು. ಫೋನ್ ನಂಬರ್ ಹುಡುಕಿ ಒಬ್ಬೊಬ್ಬರನ್ನೇ ಮಾತಾಡಿಸುತ್ತಾ ಹೋದರು. ಗೆಳೆಯರು ಸಾಂತ್ವನ ಹೇಳಿದರು.

ಯಾವುದೇ ಕೆಟ್ಟ ನಿರ್ಧಾರ ತೆಗೆದುಕೊಳ್ಳಬಾರದೆಂದು ತಾಕೀತು ಮಾಡಿದರು. ಸ್ವಲ್ಪ ದಿನ ಕಾಯೋಣ. ಪರಿಸ್ಥಿತಿ ಕೊಂಚ ತಿಳಿಯಾದ ನಂತರ ಎಲ್ಲರೂ ಕೂತು ಮಾತೋಡೋಣ ಎಂದರು.

ಹೀಗೆ ಆಕಸ್ಮಿಕವಾಗಿ ತಮ್ಮ ಬದುಕಲ್ಲೂ ಆದ ವಿಭಿನ್ನ ದುರಂತಗಳ ಪಟ್ಟಿ ಕೊಟ್ಟರು. ನನ್ನ ಲೈಫಿನದೇ ಘನಘೋರ ದುರಂತ ಎಂದು ಭಾವಿಸಿದ್ದೆ. ನೋಡಿದರೆ ಅದೆಷ್ಟು ಜನ ಎಂತೆಂಥ ದುರಂತಗಳನ್ನು ಅನುಭವಿಸಿದ್ದಾರೆ. ಎಲ್ಲವನ್ನೂ ನುಂಗಿ ಮತ್ತೆ ಸಲೀಸಾಗಿ ಬದುಕುತ್ತಿದ್ದಾರೆ. ತಾನೇಕೆ ಇಷ್ಟು ದುರ್ಬಲವಾಗಿದ್ದೇನೆ ಎಂದು ತರ್ಕಿಸಿ ಆತ್ಮಹತ್ಯೆಯ ಯೋಚನೆಗೆ ಬ್ರೇಕ್ ಹಾಕಿದರು.

ದಿನದಿನವೂ ಗೆಳೆಯರು ಫೋನು ಮಾಡಿ ವಿಚಾರಿಸುವುದು ಬಾಲ್ಯದ ಹಳೆಯ ನೆನಪುಗಳ ಕೆದಕಿ ಮಾತಾಡುವುದು ಕೊಂಚ ನಿರಾಳತೆ ಕೊಟ್ಟಿತು. ಒಂದು ಸಾವಿನಿಂದ ಯಾರ ಬದುಕೂ ನಿಲ್ಲುವುದಿಲ್ಲ ಮತ್ತು ನಿಲ್ಲಬಾರದು ಎಂಬ ಸತ್ಯ ಕಾಲಕಳೆದಂತೆ ಅರಿವಾಯಿತು. ಎಲ್ಲಾ ಗೆಳೆಯರು ಒಂದು ಕಡೆ ಸೇರಿದರು. ತಾವೇ ಮುತುವರ್ಜಿ ವಹಿಸಿ ಈಗಿರುವ ಮಗುವಿಗೆ ತಾಯಿಯ ಪ್ರೀತಿ ಮುಂದುವರಿಸುವ ವಾಗ್ದಾನ ಮಾಡಿದ ಕನ್ಯೆಯನ್ನು ಹುಡುಕಿ ಮದುವೆ ಮಾಡಿದರು. ಬಾಲ್ಯದ ಸ್ನೇಹಿತರಿಗೆ ಕಷ್ಟಕಾಲದಲ್ಲಿ ಮಾಡಿದ ಒಂದು ಕರೆ ಜೀವನದ ದಿಕ್ಕನ್ನೇ ಬದಲಿಸಿತು. ಒಳ್ಳೆಯ ಗೆಳೆಯರ ಮನಸ್ಸು, ಮಾತು ಮತ್ತು ನಿಸ್ವಾರ್ಥ ಸಹಾಯ ಎರಡು ಜೀವಗಳ ಉಳಿಸಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಅಕ್ಟೋಬರ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಏಕಾದಶಿ ಗಂ. 12-33 ನಕ್ಷತ್ರ: ಶತಭಿಷ ಗಂ. 13-30 ಯೋಗ: ವೃದ್ಧಿ ಗಂ 12-17 ಕರಣ: ವಿಷ್ಟಿ ಗಂ. 12-33, ತುಲಾ ಮಾಸದ 08 ನೇ ದಿನ, ಮಳೆನಕ್ಷತ್ರ: ಸ್ವಾತಿ 1.
ರಾಹುಕಾಲ: ಮಧ್ಯಾಹ್ನ 12-00 - 01-30
ಸೂರ್ಯೋದಯ: 06-26 ಸೂರ್ಯಾಸ್ತ: 06-03, ಮುಸ್ಲಿಂ ದಿನಾಂಕ: 09 ರಬಿಯುಸ್ಸಾನಿ, ದಿನ ವಿಶೇಷ: ಭಾರತ್ ಮಿಲಾಪ್, ಪಾಪಂಕುಶ ಏಕಾದಶಿ (ಪಾಶಾಂಕುಶ)
ಅದೃಷ್ಟ ಸಂಖ್ಯೆ: 1, 8

ಮೇಷ: ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರದರ್ಶಕ್ಕೆ ಬೇಕಾದ ಅವಕಾಶಗಳು ಅರಸಿ ಬರಲಿದೆ. ಕಬ್ಬಿಣ, ಸಿಮೆಂಟ್ ದಾಸ್ತಾನುದಾರರಿಗೆ ಉತ್ತಮ ಆದಾಯ ಪ್ರಾಪ್ತಿಯಾಗುತ್ತದೆ. ಆಮದು ಆಹಾರ ಪದಾರ್ಥಗಳಿಂದ ಲಾಭ ಸಿಗಲಿದೆ.

ವೃಷಭ: ಮಕ್ಕಳ ಒತ್ತಾಯದಿಂದ ಕೇವಲ ಮನೋರಂಜನೆಗಾಗಿ ಹೆಚ್ಚು ಖರ್ಚು ಮಾಡುವ ಸಾಧ್ಯತೆ. ಗಂಟಲು ಬೇನೆ ಕಾಣಿಸಿಕೊಂಡಲ್ಲಿ ಗಿಡಮೂಲಿಕೆಗಳ ಬಳಕೆಯಿಂದ ಶಮನವಾಗುವುದು. ಹಣದ ಪರಿಸ್ಥಿತಿ ಹಿಡಿತದಲ್ಲಿರಲಿ.

ಮಿಥುನ: ಅತಿಯಾದ ಔದಾರ್ಯ ತೋರಬೇಕೆನಿಸಿದ್ದಲ್ಲಿ ನಿಮ್ಮ ಹಣಕಾಸಿನ ಸ್ಥಿತಿ ಗಮನಿಸಿಕೊಳ್ಳಿ. ನಿವೇಶನ ಖರೀದಿಸುವ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಯುವುದು. ಯೋಗಾಭ್ಯಾಸ, ಧ್ಯಾನದಿಂದ ಆರೋಗ್ಯ ಉತ್ತಮ.

ಕರ್ಕಾಟಕ: ಗುತ್ತಿಗೆದಾರರು ಹಣ ಉಳಿಸುವುದಕ್ಕಿಂತ ಹೆಸರು ಸಂಪಾದಿಸುವ ವಿಷಯದ ಬಗ್ಗೆ ಹೆಚ್ಚಿನ ಗಮನ ನೀಡಿ. ಆರ್ಥಿಕತೆಯಲ್ಲಿ ಅಗೌರವವಾಗುವ ಸನ್ನಿವೇಶ ಎದುರಾಗಿ, ಕೊನೆ ಕ್ಷಣದಲ್ಲಿ ಹಣದ ಹೊಂದಿಕೆಯಾಗುವುದು.

ಸಿಂಹ: ಹೂವಿನ ಬೆಳೆಗಾರರಿಗೆ ವಾತಾವರಣದಲ್ಲಿನ ಬದಲಾವಣೆಯಿಂದ ಸಣ್ಣಪುಟ್ಟ ತೊಂದರೆಗಳು ಸಂಭವಿಸಬಹುದು. ಶ್ರೀ ರಾಮನ ಭಜನೆಯ ಫಲವಾಗಿ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಗಳು ತೃಪ್ತಿಕರವಾಗಿರುವುದು.

ಕನ್ಯಾ: ನಿಮ್ಮ ಧೈರ್ಯ, ಸಹಾಸ, ಎದೆಗಾರಿಕೆ ಬಗ್ಗೆ ಮಿತ್ರರು, ಬಂಧುಗಳು ಟೀಕಿಸುವವರಿದ್ದಾರೆ, ಲೆಕ್ಕಿಸದೆ ಮುನ್ನುಗ್ಗಿ. ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿ, ಮಾರಾಟದಿಂದ ಅಧಿಕ ವರಮಾನ. ದುಃಖದ ತೀವ್ರತೆ ಕಡಿಮೆಯಾಗುವುದು.

ತುಲಾ: ಷರತ್ತುಗಳಿಗೆ ಒಪ್ಪಿಕೊಳ್ಳುವಂತಹ ಯಾವುದೇ ರೀತಿಯ ವ್ಯವಹಾರಕ್ಕೂ ಈ ದಿನ ಕೈ ಹಾಕದಿರುವುದು ಉತ್ತಮ. ವಿನಾ ಕಾರಣ ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ.

ವೃಶ್ಚಿಕ: ಕುಟುಂಬದ ಗಣ್ಯರಿಂದ ನಿಮ್ಮ ಮುಂದಿನ ಬದುಕಿನ ದಾರಿಯ ಬಗ್ಗೆ ಮಾರ್ಗದರ್ಶನ ಸಿಗಲಿದೆ. ಈ ದಿನ ವಿಶೇಷವಾಗಿ ಮಹಿಳೆಯರಿಗೆ ಆದರ ಮನ್ನಣೆ ಹೆಚ್ಚಲಿದ್ದು ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಧನು: ನಿಮ್ಮ ಹೊಸ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ನಿಮಗೆ ಮನದಟ್ಟಾಗಿದೆ. ಹಣಕಾಸಿನ ವಿಷಯದಲ್ಲಿ ಅಸ್ಥಿರತೆ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ.

ಮಕರ: ತಂದೆಯ ಅನಾರೋಗ್ಯ ನಿಮ್ಮ ದಿನಚರಿ ಬದಲಾವಣೆಗೆ ಕಾರಣವಾಗುವುದು. ಆಹಾರ ಪದಾರ್ಥದ ವ್ಯಾಪಾರ ಮಾಡುವವರು ಶುದ್ಧತೆಯ ಬಗ್ಗೆ ಹೆಚ್ಚಿನ ಗಮನ ನೀಡಿದರೆ ಹೆಸರುವಾಸಿಯಾಗುವಿರಿ.

ಕುಂಭ: ಅಕ್ಕ–ಪಕ್ಕದ ಭಿನ್ನಾಭಿಪ್ರಾಯಗಳಿಗೆ ಹೆಚ್ಚು ಪ್ರತಿಕ್ರಿಯಿಸುವುದು ಸಮಂಜಸವಲ್ಲ. ನಿಮ್ಮ ಉದಾರ ಮನೋಭಾವ ಅನುಕೂಲ ಒದಗಿಸಲಿದೆ. ನ್ಯಾಯಾಂಗ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಪ್ರಗತಿ ಉಂಟಾಗಲಿದೆ.

ಮೀನ: ಒಡಹುಟ್ಟಿದವರ ಮಾತು ಅಥವಾ ಹಾವಭಾವ ನಿಮ್ಮ ಮನಸ್ಸನ್ನು ಹಾಳುಮಾಡಬಹುದು. ಕೈಮಗ್ಗ ವಸ್ತ್ರದ ರಫ್ತು ಮಾರಾಟಗಾರರಿಗೆ ಲಾಭ. ಇತರರಿಗೆ ಅಸೂಯೆ ಉಂಟಾಗದಂತೆ ಕಾರ್ಯ ಸಾಧಿಸಿಕೊಳ್ಳುವುದು ಉತ್ತಮ.

ಪದಬಂಧ 5480 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೂಡುವ ಲೆಕ್ಕವಿದು (4)
2.ಗತಿಯಲ್ಲಿ ಕೊನೆಗೊಂಡಿರುವ ಮುನ್ನಡೆ (3)
4.ಕಲೆಸಿದ ಗೋಧಿ ಹಿಟ್ಟು (3)
6.ದರ ಹೇಳುತ್ತಲೇ ತೋರಿಸಿದ ಹೊಟ್ಟೆ! (3)
7.ಹೆಸರಿಡುವ ಶಾಸ್ತ್ರ (5)
10.ಕಣದಲ್ಲಿ ಅಗಿರುವ ಲಗ್ನ (3)
11.ಶರ ಬಿದ್ದಿರುವ ಸಮುದ್ರ (3)
13.ವಿಷ್ಣುವಿನ ವಾಹನ (3)
14.ಪರಾಕು ಹೇಳಿದವ ಕೆನ್ನೆಗೆ ನೀಡಿದ ಏಟು! (4)

ಮೇಲಿಂದ ಕೆಳಕ್ಕೆ
1.ಕಬ್ಬಿಣದ ಭಾರೀ ಪೆಟ್ಟಿಗೆ (3)
2.ಕೊನೆಗೆ ಚಾರನಿದ್ದಾಗಲೇ ಹರಡುವಿಕೆ (3)
3.ಮನಸ್ಸಿಗೆ ಬಂದಂತೆ ನಡೆಯುವುದು (3)
5.ನಾವೆ ನಡೆಸುವವ ತಿರುಗಿದ್ದಾನಲ್ಲಾ? (3)
6.ಕೆಲಸ ಮಾಡಲು ಬೇಕಾದ ಸಾಧನ (5)
8.ಶರ ಹಿಡಿದಿರುವ ಶೈವ ಭಕ್ತ ತಿರುಗಿದ್ದಾನೆ (3)
9.ಊರೊಳಗೆ ಕಾಣಿಸಿದ ಹಾವು (3)
10.ಕನ್ನಡಿಗರ ಹೆಮ್ಮೆಯ ಭಾಷೆ (3)
12.ಸೊಕ್ಕು ಹೀಗೆ ಬಂದಿದೆ (3)



5479ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊರವಂಕ 3.ಬಾಲರವಿ
5.ವಿಫಲ 6.ಕೆಸರು
8.ಗೈರತ್ತು 9.ಅರ್ಚಕ
10.ರಿವಾಜು 12.ಕಲಹ
14.ಕಡಿವಾಣ 15.ಸೆರೆಮನೆ

ಮೇಲಿಂದ ಕೆಳಕ್ಕೆ:
1.ಗೊರಕೆ 2.ಕವಿ
3.ಬಾಲ 4.ವಿಪತ್ತು
7.ರುದ್ರನಾಟಕ
8.ಗೈರುಹಾಜರಿ 9.ಅಷ್ಟಕ
11.ಜುಲ್ಮಾನೆ 12.ಕಣ
13.ಹಸೆ

ಸುಡೊಕು 5866

	2			6	7	4		
3		4						2
	7			4	8		6	
	4						8	5
8		9		7				
	5		8		4		9	
2				9			3	
4		3		5	2			8
	1		4			5		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5865 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗರಾಜು, ಅರಸೀಕೆರೆ

- **ಪ್ರಶ್ನೆ: ಮೇ ತಿಂಗಳ 10 ನೇ ತಾರೀಕಿನ ಪತ್ರಿಕೆಯಲ್ಲಿರುವ ನಿಮ್ಮ ಅಂಕಣದಲ್ಲಿ 75 ಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು, ಸೆಕ್ಷನ್ 194 ಪಿ ಇದರಡಿ ಆದಾಯ ತೆರಿಗೆ ವಿವರ ಸಲ್ಲಿಸುವುದು ಅಗತ್ಯವಿಲ್ಲ ಎಂದು ತಿಳಿಸಿದ್ದೀರಿ. ನನಗೀಗ 82 ವರ್ಷ. ನಾನು ಸರ್ಕಾರಿ ಪಿಂಚಣಿದಾರ. ನನ್ನ ಪಿಂಚಣಿ ಆದಾಯ ₹1 ಲಕ್ಷ ಇದೆ. ಒಂದೇ ಬ್ಯಾಂಕ್‌ನಲ್ಲಿ ಪಿಂಚಣಿ, ನಿಶ್ಚಿತ ಠೇವಣಿ ಎಲ್ಲಾ ಇದೆ. ಬೇರೆ ಯಾವ ಮೂಲಗಳಿಂದಲೂ ಆದಾಯವಿಲ್ಲ. ಬ್ಯಾಂಕಿನವರು ಆದಾಯ ತೆರಿಗೆಯನ್ನು ತಿಂಗಳ ಪಿಂಚಣಿಯಲ್ಲಿ ಕಡಿತ ಮಾಡಿ ಉಳಿದ ಮೊತ್ತ ಕೊಡುತ್ತಿದ್ದಾರೆ. ಈಗ ನಾನು ವಾರ್ಷಿಕ ತೆರಿಗೆ ವಿವರಸಲ್ಲಿಸದಿದ್ದಲ್ಲಿ ಕೆಲವು ರಿಯಾಯಿತಿಗಳಿಂದಾಗಿ ಉಳಿಸುವ ತೆರಿಗೆ ಮೊತ್ತವನ್ನು ರಿಫಂಡ್ ಪಡೆಯುವುದು ಹೇಗೆ ? ಹಾಗೇನಾದರೂ ವಿವರ ಸಲ್ಲಿಸದಿದ್ದರೆ ಬ್ಯಾಂಕ್ ಹಿಡಿಯುವ ಎಲ್ಲಾ ತೆರಿಗೆಯನ್ನು ಕೊಟ್ಟಂತಾಗುತ್ತದೆ. ಹಿರಿಯ ನಾಗರಿಕನಾಗಿ ನನಗೆ ಯಾವ ಅನುಕೂಲಗಳಿವೆ.? ನನಗೆ ಆರ್ಥಿಕ ವರ್ಷ 2023-24 ನೇ ಸಾಲಿಗೆ ಯಾವ ತೆರಿಗೆ ಪದ್ಧತಿ ಸೂಕ್ತ.**

ಉತ್ತರ: ನೀವು ನೀಡಿದ ಮಾಹಿತಿಯಂತೆ, ನಿಮ್ಮ ಪಿಂಚಣಿ ಆದಾಯದ ಮೇಲೆ ಬ್ಯಾಂಕಿನವರು ತೆರಿಗೆ ಕಡಿತಗೊಳಿಸುತ್ತಿದ್ದಾರೆ, ಹೆಚ್ಚುವರಿ ಮೊತ್ತ ಕಡಿತಗೊಳಿಸಿರುತ್ತಾರೆ. ಯಾವುದೇ ತೆರಿಗೆ ರಿಫಂಡ್ ನಿಮಗೆ ಬರಬೇಕಿದ್ದರೆ, ನೀವು ಕಡ್ಡಾಯವಾಗಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಯೇ ಅದನ್ನು ಆದಾಯ ತೆರಿಗೆ ಇಲಾಖೆಯಿಂದ ಹಿಂಪಡೆಯಬೇಕು. ಯಾವುದೇ ರಿಟರ್ನ್ಸ್ ಸಲ್ಲಿಸದಿದ್ದಲ್ಲಿ ರಿಫಂಡ್ ತನ್ನಷ್ಟಕ್ಕೆ ನೀಡುವ ಅವಕಾಶವಿಲ್ಲ. ಕೇವಲ ಪಿಂಚಣಿ ಹಾಗೂ ಬಡ್ಡಿ ಆದಾಯವಿದ್ದು ಒಂದೇ ಬ್ಯಾಂಕ್‌ನಿಂದ ಇವೆರಡೂ ಆದಾಯ ಮೂಲಗಳಿದ್ದಾಗ ಹಾಗೂ ಅಗತ್ಯವಿರುವ ತೆರಿಗೆಯನ್ನು ಬ್ಯಾಂಕಿನವರು ಸೆಕ್ಷನ್ 194 ಪಿ ಇದರಡಿ ಸಮರ್ಪಕವಾಗಿ ಕಡಿತಗೊಳಿಸಿದ್ದರೆ ಮಾತ್ರ ನೀವು ರಿಟರ್ನ್ಸ್ ಸಲ್ಲಿಸುವುದು ಅನಿವಾರ್ಯವಲ್ಲ. ಇದಲ್ಲದೆ ನೀವು ಬ್ಯಾಂಕಿಗೆ ಅಗತ್ಯ ಘೋಷಣೆಯನ್ನೂ ನೀಡಬೇಕು. ಬಂಡವಾಳ ಲಾಭ-ನಷ್ಟ, ಮನೆ ಬಾಡಿಗೆ ಆದಾಯ, ವಾಣಿಜ್ಯ ವ್ಯವಹಾರದಿಂದ ಆದಾಯ ಉಳ್ಳವರು ಈ ರಿಯಾಯಿತಿ ಪಡೆಯಲು ಅನರ್ಹರು.

ನೀವು ಅತಿ ಹಿರಿಯ ನಾಗರಿಕರಾಗಿರುವುದರಿಂದ, ಹಳೆಯ ತೆರಿಗೆ ಪದ್ಧತಿಯ ಪ್ರಕಾರ ನಿಮ್ಮ ಮೂಲ ಆದಾಯ ತೆರಿಗೆ ವಿನಾಯಿತಿ ಮಿತಿ ₹ 5 ಲಕ್ಷ. ಇದರಡಿ ಕೆಲವೆಲ್ಲಾ ಹೂಡಿಕೆಯ ಮೇಲೆ ವಿನಾಯಿತಿ ಇದೆ. ಆದರೆ ಹೊಸ ಪದ್ಧತಿಯ ಪ್ರಕಾರ ಮೂಲ ಆದಾಯ ತೆರಿಗೆ ವಿನಾಯಿತಿ ಮಿತಿ ₹ 3 ಲಕ್ಷ. ಅದರ ಮೇಲಿನ ಆದಾಯಕ್ಕೆ ವಿವಿಧ ದರಗಳಲ್ಲಿ ತೆರಿಗೆ ಇದೆ ಹಾಗೂ ಬಹುತೇಕ ಹೂಡಿಕೆಗಳನ್ನು ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ. ನಿಮಗೆ ಈಗಾಗಲೇ ಪಿಂಚಣಿಯ ಮೇಲೆ ತೆರಿಗೆ ಕಡಿತ ಆಗುತ್ತಿರುವುದರಿಂದ ಬರುವ ₹ 1 ಲಕ್ಷ ಆದಾಯ ಮಾಸಿಕ ಪಿಂಚಣಿ ಆದಾಯವೆಂದು ಊಹಿಸಬೇಕಾಗುತ್ತದೆ. ಒಂದು ವೇಳೆ ಇದು ವಾರ್ಷಿಕ ಮೊತ್ತವಾಗಿದ್ದರೆ, ಬಡ್ಡಿ ಆದಾಯವೂ ಪರಿಗಣಿಸಿ ಮೇಲಿನ ಮಿತಿಯೊಳಗಿದ್ದರೆ ಸಂಪೂರ್ಣ ತೆರಿಗೆ ವಿನಾಯಿತಿಯೂ ಸಿಗಬಹುದು. ಹೀಗಾಗಿ ನೀವು ಸಂಪೂರ್ಣ ವಿವರ ಹೊಂದಿ, ನಿಮ್ಮ ಅಂದಾಜು ಬಡ್ಡಿ ಆದಾಯದ ಮಾಹಿತಿಯೊಂದಿಗೆ, ಸೂಕ್ತ ತೆರಿಗೆ ಪದ್ಧತಿಯ ಆಯ್ಕೆಯ ಬಗ್ಗೆ ಹೆಚ್ಚಿನ ಸಲಹೆ ಪಡೆಯಿರಿ.

ವಿಜಯ್ ರಾಜ್, ಯಲಚೇನಹಳ್ಳಿ, ಬೆಂಗಳೂರು

- **ಪ್ರಶ್ನೆ: ನಾನು ಕಳೆದ ಕೆಲವು ತಿಂಗಳಿನಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಇದರಲ್ಲಿ ಈಕ್ವಿಟಿ, ಬ್ಯಾಲೆನ್ಸ್ಡ್ , ಗೋಲ್ಡ್ ಫಂಡ್ ಇತ್ಯಾದಿಗಳು ಹೆಚ್ಚಾಗಿವೆ. ಒಂದು ತಿಂಗಳಿಗೆ ಸುಮಾರು ₹ 20 ಸಾವಿರದ ಎಸ್‌ಐಪಿ ಮಾಡುತ್ತಿದ್ದೇನೆ. ಇದು ನನ್ನ ಕೈಗೆ ಬರುವ ಸಂಬಳದ ಸುಮಾರು ಕಾಲಂಶವಾಗಿದೆ. ಇತ್ತೀಚಿಗೆ ಒಂದು ಮ್ಯೂಚುವಲ್ ಫಂಡ್ ಹೌಸ್‌ನವರು ಇಎಸ್‌ಜಿ ಫಂಡ್‌ನಲ್ಲಿ ಹೂಡಿಕೆ ಮಾಡುವಂತೆ ಈ ಮೇಲ್ ಮಾಡಿದರು. ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದ ಕಾರಣ ಸದ್ಯ ಅದರಲ್ಲಿನ ಹೂಡಿಕೆಯ ಬಗ್ಗೆ ತಟಸ್ಥ ನಿಲುವು ಹೊಂದಿ ಹೂಡಿಕೆ ನಿರ್ಧಾರ ಮುಂದೂಡಿದ್ದೇನೆ. ಇದರಲ್ಲಿ ಹೂಡಿಕೆ ಮಾಡುವ ಬಗ್ಗೆ ನಿಮ್ಮ ಅಭಿಪ್ರಾಯ ಬೇಕಿತ್ತು.**

ಉತ್ತರ: ಮ್ಯೂಚುವಲ್ ಫಂಡ್‌ಗಳಲ್ಲಿ ಅನೇಕ ವಿಧದ ಹೂಡಿಕೆಗೆ ಅವಕಾಶವಿದೆ. ಇವು ಮುಖ್ಯವಾಗಿ ಹೂಡಿಕೆಯ ಉದ್ದೇಶ, ನಮ್ಮ ಹೂಡಿಕೆಯ ಕಾಲಾವಧಿ , ನಾವು ನಿರೀಕ್ಷೆ ಮಾಡುವ ಮಾರುಕಟ್ಟೆ ಗತಿ ಇತ್ಯಾದಿ ಅನೇಕ ವಿಷಯಗಳ ಮೇಲೆ ಅವಲಂಬಿತವಾಗಿದೆ ಎನ್ನುವುದು ಸರ್ವವಿಧಿತ ವಿಚಾರ. ಹೀಗಾಗಿ ಮಾರುಕಟ್ಟೆ ಅವಲಂಬಿತ ಮ್ಯೂಚುವಲ್ ಫಂಡ್‌ಗಳು ಯಾವತ್ತೂ 'ರಿಸ್ಕ್ ಫ್ರಿ' ಎಂಬ ಚೌಕಟ್ಟನೊಳಗೆ ಬರುವುದಿಲ್ಲ. ಇದು ನಮಗೆ ಮೊದಲೇ ಅರಿವಾಗಿದ್ದಷ್ಟು ಮುಂದಿನ ಅಪಾಯಗಳನ್ನು ಗ್ರಹಿಸುವ ಶಕ್ತಿ ನಮಗಿರುತ್ತದೆ.

ಇನ್ನು ಇಎಸ್‌ಜಿ ಫಂಡ್ ವಿಚಾರದ ಬಗ್ಗೆ ಹೇಳುವುದಾದರೆ, ಇವು ಎನ್ವಿರಾನ್‌ಮೆಂಟ್, ಸೋಶಿಯಲ್ ಹಾಗೂ ಗವರ್ನನ್ಸ್ - ಈ ಮೂರೂ ಪದಗಳ ಸಂಕ್ಷಿಪ್ತ ರೂಪವಾಗಿದೆ. ಇಲ್ಲಿ ಹೂಡಿಕೆಗೆ ಅನ್ವಯಿಸುವ ಮಾನದಂಡಗಳು ಇತರ ಫಂಡ್‌ಗಳಿಗಿಂತ ವಿಭಿನ್ನವಾದುದು. ಅಂದರೆ ಇವು ಪರಿಸರ, ಸಾಮಾಜಿಕ ಸುರಕ್ಷತೆ ಹಾಗೂ ಉತ್ತಮ ಆಡಳಿತ ಇರುವ ಕಂಪೆನಿಗಳಲ್ಲಷ್ಟೇ ಹೂಡಿಕೆ ಮಾಡುವಲ್ಲಿ ಗಮನಹರಿಸುತ್ತವೆ. ಹೀಗಾಗಿ ಹೂಡಿಕೆ ಮಾಡುವ ಮೊದಲು, ಇಂತಹ ಫಂಡ್ ಯಾವುದರಲ್ಲಿ ನಮ್ಮ ಹಣವನ್ನು ಮರು ಹೂಡಿಕೆ ಮಾಡುತ್ತವೆ ಎಂಬುದೂ ನಮಗೆ ಮುಖ್ಯವಾಗಿ ಗೊತ್ತಿರಬೇಕು.

ಉದಾಹರಣೆಗೆ, ಕಾರ್ಬನ್ ಡೈ ಆಕ್ಸೈಡ್, ಪರಿಸರ ಹಾನಿಕಾರಕ ತ್ಯಾಜ್ಯ , ವಾತಾವರಣ ಸಂರಕ್ಷಣೆ ಇತ್ಯಾದಿಗಳು ನಮ್ಮ ಇಂದಿನ ಅಗತ್ಯ ಹಾಗೂ ಸರ್ಕಾರ ಈ ಬಗ್ಗೆ ಅನೇಕ ಕಾನೂನುಗಳನ್ನು ರೂಪಿಸಿವೆ. ಈ ಬಗ್ಗೆ ಯಾವುದೇ ಉಲ್ಲಂಘನೆಯಾದರು ಅಂತಹ ಕಂಪನಿಗಳು ಎಷ್ಟೇ ಲಾಭದಾಯಕ ಕಂಪನಿಯಾಗಿದ್ದರೂ ಉತ್ತಮ ಶ್ರೇಯಾಂಕದಲ್ಲಿ ಬರಲಾರದು. ಇನ್ನು, ಸಾಮಾಜಿಕ ಬದ್ಧತೆಯ ಹಿನ್ನೆಲೆಯಲ್ಲಿ ತಮ್ಮ ಉದ್ಯೋಗಿಗಳ ಹಾಗೂ ಒಟ್ಟಾರೆ ಸಾಮಾಜಿಕ ಕಾನೂನು ಗಳ ಉಲ್ಲಂಘನೆಯಾಗದ ರೀತಿ ವ್ಯವಹರಿಸುವ ಕಂಪನಿಗಳನ್ನು ಇಲ್ಲಿ ಹೂಡಿಕೆಗೆ ಪರಿಗಣಿಸುತ್ತವೆ. ಎಲ್ಲದಕ್ಕಿಂತ ಮುಖವಾಗಿ, ಉತ್ತಮ ಆಡಳಿತ ಹಾಗೂ ಉತ್ತಮ ಆಂತರಿಕ ನಿಯಂತ್ರಣ , ಷೇರುದಾರರ ಹಿತ ಸಂರಕ್ಷಣೆ ಇತ್ಯಾದಿಗಳ ಬಗ್ಗೆ ಹೆಚ್ಚಿನ ಒಲವುವುಳ್ಳ ಕಂಪನಿಗಳು ಹೂಡಿಕೆಗೆ ಅರ್ಹತೆ ಪಡೆಯುತ್ತವೆ. ಒಟ್ಟು ಅರ್ಥದಲ್ಲಿ ಇಎಸ್‌ಜಿ ವರ್ಗದ ಮ್ಯೂಚುವಲ್ ಫಂಡ್‌ಗಳ ಹೂಡಿಕೆಯ ಗುರಿ ಇತರ ಫಂಡ್‌ಗಳಂತೆ ಲಾಭದಾಯಕ ಕಂಪನಿಗಳಲ್ಲಿ ಹೂಡಿಕೆ ಮಾಡುವುದಾಗಿದ್ದರೂ - ಪರಿಸರ, ಸಾಮಾಜಿಕ ಹಾಗೂ ಆಡಳಿತಾತ್ಮಕ ಕಾನೂನುಗಳ ಉಲ್ಲಂಘನೆ ಆಗಿದ್ದಾಗ ಗಳಿಸಿದ ಲಾಭ ಏನೇ ಇದ್ದರೂ, ಹೂಡಿಕೆ ನಿರ್ಧಾರಕ್ಕೆ ಹೆಚ್ಚಿನ ಪ್ರಧಾನ್ಯತೆ ಇರುವುದಿಲ್ಲ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು

ಇಎಸ್‌ಜಿ ವರ್ಗದ ಮ್ಯೂಚುವಲ್ ಫಂಡ್‌ಗಳ ಹೂಡಿಕೆಯ ಕಾರ್ಯ ವೈಖರಿ ಉತ್ತಮ ಕಂಪನಿಗಳನ್ನು ಹುಡುಕಿ ಹೂಡಿಕೆ ಮಾಡುವುದಾಗಿದ್ದರೂ ನಮ್ಮ ದೇಶದಲ್ಲಿ ಇವುಗಳ ಪಾಲು ಒಟ್ಟು ಮ್ಯೂಚುವಲ್ ಫಂಡ್ ಹೂಡಿಕೆಗೆ ಹೋಲಿಸಿದರೆ ತೀರಾ ಕಡಿಮೆಯೇ ಇದೆ. ಅಲ್ಲದೆ, ಇತ್ತೀಚಿನ ವರದಿಗಳ ಪ್ರಕಾರ ಇದರಲ್ಲಿನ ಒಟ್ಟು ಹೂಡಿಕೆಯ ಪ್ರಮಾಣ ತಟಸ್ಥವಾಗಿದೆ ಅಥವಾ ನಿಧಾನವಾಗಿ ಕಡಿಮೆಯಾಗುತ್ತಿದೆ ಹಾಗೂ ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಹೊಸದಾದ ಫಂಡ್‌ಗಳು ಸೇರ್ಪಡೆಗೊಂಡಿಲ್ಲದಿರುವುದೂ ಈ ಯೋಜನೆಗಳಗಳ ವ್ಯಾಪಕತೆಯನ್ನು ತೋರಿಸುತ್ತದೆ. ಹೀಗಾಗಿ, ದೊಡ್ಡ ಪ್ರಮಾಣದ ಹೂಡಿಕೆಗಿಂತ ಸಣ್ಣ ಮಟ್ಟದ ಹೂಡಿಕೆಗೆ ಇವು ಸೂಕ್ತವಾದೀತು. ಹೀಗಾಗಿ ಯೋಚಿಸಿ ಹೂಡಿಕೆ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

2030ರ ವೇಳೆಗೆ ಮೂರನೇ ಅತಿದೊಡ್ಡ ಆರ್ಥಿಕತೆ ಆಗಲಿದೆ: ಎಸ್ ಆ್ಯಂಡ್ ಪಿ

'ಆರ್ಥಿಕತೆ: ಜಪಾನ್ ಹಿಂದಿಕ್ಕಲಿದೆ ಭಾರತ'

ನವದೆಹಲಿ (ಪಿಟಿಐ): ಭಾರತದ ಆರ್ಥಿಕತೆಯ ಗಾತ್ರವು 2030ರ ವೇಳೆಗೆ ₹606 ಲಕ್ಷ ಕೋಟಿಯಷ್ಟು ಆಗಲಿದೆ. ಆ ಮೂಲಕ ಜಪಾನ್ ದೇಶವನ್ನು ಹಿಂದಿಕ್ಕಿ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಲಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟಲಿಜೆನ್ಸ್ ಸಂಸ್ಥೆಯು ಹೇಳಿದೆ.

ಸದ್ಯ ಭಾರತವು ಐದನೇ ಅತಿದೊಡ್ಡ ಆರ್ಥಿಕತೆ ಆಗಿದ್ದು, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆಯಾಗಿದೆ. 2021 ಮತ್ತು 2022ರಲ್ಲಿ ಅರ್ಥ ವ್ಯವಸ್ಥೆಯು ಉತ್ತಮ ಬೆಳವಣಿಗೆ ಕಂಡಿದ್ದು, 2023ನೇ ಕ್ಯಾಲೆಂಡರ್ ವರ್ಷದಲ್ಲಿಯೂ ಸ್ಥಿರವಾದ ಬೆಳವಣಿಗೆ ಪ್ರಮಾಣವನ್ನು ಮುಂದುವರಿಸಲಿದೆ ಎಂದು ಈಚಿನ ಪಿಎಂಐ ವರದಿಯಲ್ಲಿ ಅದು ತಿಳಿಸಿದೆ.

2024ರ ಮಾರ್ಚ್‌ಗೆ ಕೊನೆಗೊಳ್ಳಲಿರುವ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.2 ರಿಂದ ಶೇ 6.3ರವರೆಗೆ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ಹೇಳಿದೆ. ಅಲ್ಪಾವಧಿಯ ಮುನ್ನೋಟದ ಪ್ರಕಾರ, 2023ರ ಉಳಿದ ಅವಧಿಯಲ್ಲಿ ಮತ್ತು 2024ನೇ ಕ್ಯಾಲೆಂಡರ್ ವರ್ಷದಲ್ಲಿ ಭಾರತದ ಆರ್ಥಿಕತೆಯು ವೇಗವಾಗಿ ಬೆಳವಣಿಗೆ ಕಾಣಲಿದೆ. ದೇಶಿ ಬೇಡಿಕೆಯು ಉತ್ತಮವಾಗಿ ಇರುವುದು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುತ್ತಿದೆ ಎಂದು ಅದು ಹೇಳಿದೆ.

ಭಾರತದ ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣ ಇರಲಿದೆ ಎನ್ನುವುದನ್ನು ಕಳೆದ ದಶಕದಲ್ಲಿ ಆಗಿರುವ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಯೇ ಸೂಚಿಸುತ್ತಿದೆ. ಯುವ ಪೀಳಿಗೆ ಹೆಚ್ಚಿರುವುದು ಮತ್ತು ನಗರ ಪ್ರದೇಶಗಳಲ್ಲಿ ಕುಟುಂಬದ ಆದಾಯ ಹೆಚ್ಚಾಗುತ್ತಿರುವುದು ಸಹ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತಿದೆ.

2022ರಲ್ಲಿ ₹297 ಲಕ್ಷ ಕೋಟಿಯಷ್ಟು ಇದ್ದ ಭಾರತದ ಆರ್ಥಿಕತೆಯು 2030ರ ವೇಳೆಗೆ ₹606 ಲಕ್ಷ ಕೋಟಿಗೆ ಏರಿಕೆ ಕಾಣುವ ಅಂದಾಜು ಮಾಡಲಾಗಿದೆ. ಈ ಪ್ರಮಾಣದ ಬೆಳವಣಿಗೆಯ ಮೂಲಕ ಏಷ್ಯಾ-ಪೆಸಿಫಿಕ್ ಪ್ರದೇಶದಲ್ಲಿ ಭಾರತವು ಜಪಾನ್ ದೇಶವನ್ನು ಹಿಂದಿಕ್ಕಿ ಮೂರನೇ ಸ್ಥಾನಕ್ಕೆ ಏರಲಿದೆ ಎಂದು ತಿಳಿಸಿದೆ.

ಭಾರತದ ಆರ್ಥಿಕತೆಯು ಗಾತ್ರದಲ್ಲಿ ಈಗಾಗಲೇ ಬ್ರಿಟನ್ ಮತ್ತು ಫ್ರಾನ್ಸ್ ಅನ್ನು ಹಿಂದಿಕ್ಕಿದೆ. 2023ರ ವೇಳೆಗೆ ಜರ್ಮನಿಯನ್ನೂ ಹಿಂದಿಕ್ಕಲಿದೆ ಎಂದು ಸಂಸ್ಥೆಯು ಹೇಳಿದೆ.

ವಿಶ್ವದ ಅತಿದೊಡ್ಡ ಆರ್ಥಿಕತೆಗಳು
(₹ಲಕ್ಷ ಕೋಟಿಗಳಲ್ಲಿ)



'ವೇಗದ ಬೆಳವಣಿಗೆಗೆ ಇಲ್ಲ ಅಡ್ಡಿ'

2023-24ನೇ ಹಣಕಾಸು ವರ್ಷದಲ್ಲಿಯೂ ಭಾರತವು ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ತಿಳಿಸಿದೆ.

ಹಲವು ದೇಶಗಳಲ್ಲಿ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟುಗಳು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು. ಅದರಿಂದಾಗಿ ಭಾರತವನ್ನೂ ಒಳಗೊಂಡು ಹಲವು ದೇಶಗಳ ಆರ್ಥಿಕ ಚಟುವಟಿಕೆಗಳನ್ನು ಕಡಿಮೆ ಮಾಡುವ ಸಾಧ್ಯತೆ ಇದೆ. ಆದರೆ, ಭಾರತದ ಆರ್ಥಿಕ ತಳಹದಿ ಬಲಿಷ್ಠವಾಗಿ ಇರುವುದರಿಂದ 2023-24ರಲ್ಲಿ ಆರ್ಥಿಕ ಬೆಳವಣಿಗೆ ಮುನ್ನೋಟ ಉತ್ತಮವಾಗಿರುವ ನಿರೀಕ್ಷೆ ಮಾಡಲಾಗಿದೆ ಎಂದೂ ಸಚಿವಾಲಯ ಹೇಳಿದೆ.

'ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತವು ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ವಿಶ್ವದ ಪ್ರಮು ಆರ್ಥಿಕತೆ ಆಗಿರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯೂ (ಐಎಂಎಫ್) ಹೇಳಿದೆ' ಎಂದು ವರದಿಯಲ್ಲಿ ತಿಳಿಸಿದೆ. ಭಾರತದ ಆರ್ಥಿಕತೆಯು ಶೇ 6.3ರಷ್ಟು ಆಗಲಿದೆ ಎಂದು ಐಎಂಎಫ್ ಈಚಿನ ಅಂದಾಜಿನಲ್ಲಿ ಹೇಳಿದೆ.

ಬಾಸ್ಮತಿ ಅಕ್ಕಿ ರಫ್ತು ದರ ಇಳಿಕೆ ಸಾಧ್ಯತೆ

ನವದೆಹಲಿ (ರಾಯಿಟರ್ಸ್): ಬಾಸ್ಮತಿ ಅಕ್ಕಿಗೆ ನಿಗದಿ ಮಾಡಿರುವ ಕನಿಷ್ಠ ರಫ್ತು ದರವನ್ನು (ಎಂಇಪಿ) ಕಡಿಮೆ ಮಾಡುವ ಸಾಧ್ಯತೆ ಇದೆ ಎಂದು ಉದ್ಯಮ ಮೂಲಗಳು ಮಂಗಳವಾರ ಹೇಳಿವೆ. ಬಾಸ್ಮತಿ ಅಕ್ಕಿ ಪ್ರತಿ ಟನ್‌ಗೆ ಸದ್ಯ ₹99,600 ಎಂಇಪಿ ಇದ್ದು, ಅದನ್ನು ₹78,850ಕ್ಕೆ ಇಳಿಕೆ ಮಾಡುವ ಸಾಧತೆ ಇದೆ ಎಂದು ತಿಳಿಸಿವೆ.

ಹೊಸ ಬೆಳೆಯು ಮಾರುಕಟ್ಟೆಗೆ ಬಂದ ಬಳಿಕ ಸರ್ಕಾರವು ಎಂಇಪಿ ಕಡಿತ ಮಾಡುವ ನಿರೀಕ್ಷೆ ಮಾಡಲಾಗಿತ್ತು. ಆದರೆ, ಮುಂದಿನ ಆದೇಶದವರೆಗೆ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಅಕ್ಟೋಬರ್ 14ರಂದು ಸರ್ಕಾರ ಸ್ಪಷ್ಟಪಡಿಸಿತು. ಇದಕ್ಕೆ ರೈತರು ಮತ್ತು ರಫ್ತುದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹೊಸ ಬೆಳೆ ಬಂದಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ ಇಳಿಕೆ ಕಂಡಿದೆ ಎಂದು ಹೇಳಿದ್ದಾರೆ.

ರಫ್ತು ದರ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ರಫ್ತುದಾರರು ರೈತರಿಂದ ಅಕ್ಕಿ ಖರೀದಿಸುವುದನ್ನು ನಿಲ್ಲಿಸಿದ್ದಾರೆ ಎಂದು ಭಾರತೀಯ ಅಕ್ಕಿ ರಫ್ತುದಾರರ ಒಕ್ಕೂಟದ ಅಧ್ಯಕ್ಷ ಪ್ರೇಮ್ ಗರ್ಗ್ ತಿಳಿಸಿದ್ದಾರೆ.

ಭಾರತ ಮತ್ತು ಪಾಕಿಸ್ತಾನದಲ್ಲಿ ಮಾತ್ರವೇ ಬಾಸ್ಮತಿ ಅಕ್ಕಿ ಬೆಳೆಯಲಾಗುತ್ತದೆ. ಭಾರತವು 40 ಲಕ್ಷ ಟನ್‌ಗೂ ಅಧಿಕ ಪ್ರಮಾಣದ ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡುತ್ತಿದೆ. ಇರಾಕ್, ಇರಾನ್, ಯೆಮನ್, ಸೌದಿ ಅರೇಬಿಯಾ, ಯುಎಇ ಮತ್ತು ಅಮೆರಿಕಕ್ಕೆ ರಫ್ತು ಮಾಡಲಾಗುತ್ತಿದೆ.

ಕರಗಿತು ₹7.59 ಲಕ್ಷ ಕೋಟಿ ಸಂಪತ್ತು

ನವದೆಹಲಿ (ಪಿಟಿಐ): ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿದ್ದರಿಂದ ಸೋಮವಾರ ಜಾಗತಿಕ ಮಟ್ಟದಲ್ಲಿ ಇಳಿಮುಖ ವಹಿವಾಟು ನಡೆಯಿತು. ಅದರ ಪರಿಣಾಮವಾಗಿ ಮುಂಬೈ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದು, ಹೂಡಿಕೆದಾರರ ಸಂಪತ್ತು ಒಂದೇ ದಿನ ₹7.59 ಲಕ್ಷ ಕೋಟಿಯಷ್ಟು ಕರಗಿತು.

ಮುಂಬೈ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ₹311 ಲಕ್ಷ ಕೋಟಿಗೆ ಇಳಿಕೆ ಕಂಡಿತು. ನಾಲ್ಕು ದಿನಗಳ ವಹಿವಾಟಿನಲ್ಲಿ ಸಂಪತ್ತು ₹12.51 ಲಕ್ಷ ಕೋಟಿಯಷ್ಟು ಕರಗಿದೆ.

ಸೋಮವಾರ ಬಿಎಸ್‌ಇ ಸೆನ್ಸೆಕ್ಸ್ 825 ಅಂಶ ಇಳಿಕೆ ಕಂಡು 64,571 ಅಂಶಗಳಿಗೆ ತಲುಪಿತು. ಎನ್‌ಎಸ್‌ಇ ನಿಫ್ಟಿ 261 ಅಂಶ ಇಳಿಕೆಯಾಗಿ 19,281 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಮಂಗಳವಾರ ಷೇರುಪೇಟೆಗೆ ರಜೆ.

ಮುಂಬೈ ಧಾರಣೆ

ಶೇಂಗಾ
24-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (-)
ಒಂದು ವಾರದ ಡೆಲಿವರಿ	1575 (-)
ಸೋಯಾ ಕಚ್ಚಾ	855 (-)
ಪಾಮ್ ವಾರದ ಡೆಲಿವರಿ	813 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,200 (-)
ಬೆಳ್ಳಿ ಕೆ.ಜಿ 71,500 (-)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (-)
ಸೋಯಾ (ರಿಫೈನ್ಡ್)	₹910 (-)
ಸೂರ್ಯಕಾಂತಿ (ರಿಫೈನ್ಡ್)	₹920 (-)
ಪಾಮೋಲಿನ್	₹815 (-)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹565

ರಿಟೇಲ್ ಡೈರೆಕ್ಟ್‌ನಲ್ಲಿ ಬದಲಾಗುವ ದರದ ಉಳಿತಾಯ ಬಾಂಡ್

ಮುಂಬೈ (ಪಿಟಿಐ): ಸಣ್ಣ ಹೂಡಿಕೆದಾರರು ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ 'ಬದಲಾಗುವ ದರದ ಉಳಿತಾಯ ಬಾಂಡ್-2022' (ಎಫ್‌ಆರ್‌ಎಸ್‌ಬಿ) ಖರೀದಿಸಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

ಸಣ್ಣ ಹೂಡಿಕೆದಾರರು ಸರ್ಕಾರಿ ಬಾಂಡ್‌ಗಳನ್ನು ನೇರವಾಗಿ ಖರೀದಿಸಲು ಮತ್ತು ಮಾರಾಟ ಮಾಡಲು ಅನುಕೂಲ ಆಗುವಂತೆ ಆರ್‌ಬಿಐ 2021ರ ನವೆಂಬರ್ 12ರಂದು ರಿಟೇಲ್ ಡೈರೆಕ್ಟ್ ಯೋಜನೆಗೆ ಚಾಲನೆ ನೀಡಿದೆ. ಈ ಯೋಜನೆ ಅಡಿ ಹೂಡಿಕೆದಾರರು ಆರ್‌ಬಿಐ-ರಿಟೇಲ್ ಡೈರೆಕ್ಟ್ ಮೂಲಕ 'ರಿಟೇಲ್ ಡೈರೆಕ್ಟ್ ಗಿಲ್ಟ್' (ಆರ್‌ಡಿಜಿ) ಖಾತೆಯನ್ನು ತೆರೆದು, ಹೂಡಿಕೆ ಆರಂಭಿಸಬಹುದು. ಆರ್‌ಡಿಜಿ ಖಾತೆ ತೆರೆಯಲು ಸಣ್ಣ ಹೂಡಿಕೆದಾರರು ಭಾರತದಲ್ಲಿ ಉಳಿತಾಯ ಖಾತೆ ಹೊಂದಿರಬೇಕು, ಪ್ಯಾನ್ ಸಂಖ್ಯೆ, ಕೆವೈಸಿಗೆ ಅಗತ್ಯವಿರುವ ದಾಖಲೆಗಳನ್ನು ಹೊಂದಿರಬೇಕು. ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಕೂಡ ಹೊಂದಿರಬೇಕು.

ಈ ಬಾಂಡ್‌ಗಳು ತೆರಿಗೆಗೆ ಒಳಪಟ್ಟಿವೆ. ಮಾರಾಟ ಮಾಡಲು ಆಗದ ಬಾಂಡ್ ಇದಾಗಿದೆ. ಬಾಂಡ್ ವಿತರಿಸಿದ ದಿನದಿಂದ ಆರಂಭವಾಗಿ ಏಳು ವರ್ಷಗಳ ಅವಧಿ ಮುಗಿಯುವ ವೇಳೆಗೆ ಮೊತ್ತವು ಮರುಪಾವತಿ ಆಗಲಿದೆ.

ಮತ್ತೆ ವೇದಾಂತ ಸೇರಲಿರುವ ಅಜಯ್

ಬೆಂಗಳೂರು/ನವದೆಹಲಿ (ರಾಯಿಟರ್ಸ್/ಪಿಟಿಐ): ವೇದಾಂತ ಲಿಮಿಟೆಡ್‌ನ ಮುಖ್ಯ ಹಣಕಾಸು ಅಧಿಕಾರಿಯಾಗಿ (ಸಿಎಫ್‌ಒ) ಅಜಯ್ ಗೋಯಲ್ ಅವರು ಇದೇ 30ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಏಪ್ರಿಲ್‌ನಲ್ಲಿ ಅವರು ಕಂಪನಿ ತೊರೆದು ಬೈಜೂಸ್‌ನಲ್ಲಿ ಸಿಎಫ್‌ಒ ಹೊಣೆಗಾರಿಕೆ ವಹಿಸಿಕೊಂಡಿದ್ದರು. ವೇದಾಂತ ಸಿಎಫ್‌ಒ ಸೋನಾಲ್ ಶ್ರೀವಾಸ್ತವ ಅವರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದರಿಂದ ಅಜಯ್ ಅವರನ್ನು ನೇಮಿಸಲಾಗಿದೆ. ಬೈಜೂಸ್‌ನ 2022ನೇ ಹಣಕಾಸು ವರ್ಷದ ಲೆಕ್ಕಪರಿಶೋಧನೆ ಪೂರ್ಣಗೊಂಡ ಬಳಿಕ ಅವರು ವೇದಾಂತ ಕಂಪನಿಗೆ ಮರಳಲಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವೇದಾಂತ ಸಮೂಹವು ತನ್ನ ವಹಿವಾಟುಗಳನ್ನು ಪುನರ್‌ರಚನೆ ಮಾಡುವುದಾಗಿ ಕಳೆದ ತಿಂಗಳು ಘೋಷಣೆ ಮಾಡಿದ ಬಳಿಕ ಈ ಬೆಳವಣಿಗೆಗಳು ನಡೆಯುತ್ತಿವೆ. ಶ್ರೀವಾಸ್ತವ ಅವರು ಜೂನ್‌ನಲ್ಲಿ ವೇದಾಂತ ಸೇರಿದ್ದರು.

ಅಜಯ್ ಗೋಯಲ್ ರಾಜಿನಾಮೆಯಿಂದ ತೆರವಾದ ಸ್ಥಾನಕ್ಕೆ ಬೈಜೂಸ್‌ನ ಹಾಲಿ ಹಣಕಾಸು ಅಧ್ಯಕ್ಷವ ನಿತಿನ್ ಗೋಲಾನಿ ಅವರಿಗೆ ಹೆಚ್ಚುವರಿಯಾಗಿ ಸಿಎಫ್‌ಒ ಜವಾಬ್ದಾರಿಯನ್ನು ನೀಡಲಾಗಿದೆ ಎಂದು ಬೈಜೂಸ್ ತಿಳಿಸಿದೆ.

ಚೀನಾದ ರಕ್ಷಣಾ ಸಚಿವ ಸಂಪುಟದಿಂದ ವಜಾ

ಲಿ ಶಾಂಗ್ಫು

ತೈಪೆ (ತೈವಾನ್) (ಎಪಿ): ಚೀನಾದ ರಕ್ಷಣಾ ಸಚಿವ ಜನರಲ್ ಲಿ ಶಾಂಗ್ಫು ಅವರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ.

ಲಿ ಶಾಂಗ್ಫು ಅವರು ಎರಡು ತಿಂಗಳಿಂದ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಇವರು ಈ ವರ್ಷ ವಜಾಗೊಂಡಿರುವ ಎರಡನೇ ಸಚಿವರಾಗಿದ್ದಾರೆ. ವಿದೇಶಾಂಗ ಸಚಿವರಾಗಿದ್ದ ಕ್ವಿನ್ ಗಾಂಗ್ ಅವರನ್ನು ಕಳೆದ ಜುಲೈನಲ್ಲಿ ಯಾವುದೇ ವಿವರಣೆ ನೀಡದೆ ವಜಾಗೊಳಿಸಲಾಗಿತ್ತು.

ಮಾರ್ಚ್‌ನಲ್ಲಿ ಸಂಪುಟ ವಿಸ್ತರಣೆಯಾದಾಗ ಲಿ ಶಾಂಗ್ಫು ಅವರನ್ನು ರಕ್ಷಣಾ ಸಚಿವರನ್ನಾಗಿ ನೇಮಕ ಮಾಡಲಾಗಿತ್ತು. ಅಧ್ಯಕ್ಷ ಮತ್ತು ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ನಾಯಕ ಷಿ ಜಿನ್‌ಪಿಂಗ್ ಅವರ ಸಾಮರ್ಥ್ಯದ ಬಗ್ಗೆ ಲಿ ಶಾಂಗ್ಫು ಮತ್ತು ಕ್ವಿನ್ ಗಾಂಗ್ ಅವರು ಪ್ರಶ್ನೆ ಮಾಡಿದ್ದರು.

ಲಿ ಶಾಂಗ್ಫು ಮತ್ತು ಕ್ವಿನ್ ಗಾಂಗ್ ಅವರನ್ನು ವಜಾಗೊಳಿಸಿರುವುದರಿಂದ ಚೀನಾದ ವಿದೇಶಿ ಮತ್ತು ರಕ್ಷಣಾ ನೀತಿಗಳಲ್ಲಿ ಯಾವುದೇ ಬದಲಾವಣೆಗಳಾಗುವ ಸೂಚನೆಗಳು ಕಂಡುಬಂದಿಲ್ಲ ಎಂದು ಮೂಲಗಳು ಹೇಳಿವೆ.

ಧಮ್ಮ ಚಕ್ರ ಪ್ರವರ್ತನ ದಿನ

ನಾಗ್ಪುರದ ದೀಕ್ಷಾಭೂಮಿಯಲ್ಲಿ ಮಂಗಳವಾರ ನಡೆದ ಧಮ್ಮ ಚಕ್ರ ಪ್ರವರ್ತನ ದಿನಾಚರಣೆಯಲ್ಲಿ ಬೌದ್ಧ ಧರ್ಮದ ಅನುಯಾಯಿಗಳು ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ನಮನ ಸಲ್ಲಿಸಲು ಬೃಹತ್ ಸಂಖ್ಯೆಯಲ್ಲಿ ಸೇರಿದ್ದರು. – ಪಿಟಿಐ ಚಿತ್ರ

ನೋಂದಣಿಯಾಗದ ಮದರಸಕ್ಕೆ ದಿನಕ್ಕೆ ₹10 ಸಾವಿರ ದಂಡ

ಮುಜಾಫರ್‌ನಗರ (ಪಿಟಿಐ): ನೋಂದಣಿಯಾಗದೆ ಕಾರ್ಯನಿರ್ವಹಿಸುತ್ತಿರುವ ಮದರಸಗಳಿಗೆ ದಿನಕ್ಕೆ ₹10 ಸಾವಿರ ದಂಡ ವಿಧಿಸಲಾಗುವುದು ಎಂದು ಉತ್ತರ ಪ್ರದೇಶದ ಶಿಕ್ಷಣ ಇಲಾಖೆ ಹೇಳಿದೆ.

ದಾಖಲೆಗಳಿಲ್ಲದೆ ಮುಜಾಫರ್‌ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹತ್ತಕ್ಕೂ ಹೆಚ್ಚು ಮದರಸಗಳಿಗೆ ಪ್ರಾಥಮಿಕ ಶಿಕ್ಷಣ ಇಲಾಖೆಯು ನೋಟಿಸ್ ಜಾರಿ ಮಾಡಿದೆ.

'ನೋಟಿಸ್ ತಲುಪಿದ ಮೂರು ದಿನಗಳೊಳಗೆ ಸರಿಯಾದ ದಾಖಲೆಗಳನ್ನು ಸಲ್ಲಿಸಿ, ಇಲ್ಲವೇ ಕ್ರಮ ಎದುರಿಸಿ' ಎಂದು ಸೂಚನೆ ನೀಡಲಾಗಿದೆ.

'ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ಮದರಸಗಳು ಮಾನ್ಯತೆ ಅಥವಾ ನೋಂದಣಿಯಾಗದೆ ಕಾರ್ಯನಿರ್ವಹಿಸುತ್ತಿವೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಮಾಹಿತಿ ನೀಡಿತ್ತು' ಎಂದು ಪ್ರಾಥಮಿಕ ಶಿಕ್ಷಣಾಧಿಕಾರಿ ಶುಭಂ ಶುಕ್ಲಾ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ 24 ಸಾವಿರ ಮದರಸಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳಲ್ಲಿ 16 ಸಾವಿರ ಮದರಸಗಳಷ್ಟೇ ಮಾನ್ಯತೆ ಪಡೆದುಕೊಂಡಿವೆ. ಉಳಿದ ಎಂಟು ಸಾವಿರ ಮದರಸಗಳು ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಕ್ಷಣ ಇಲಾಖೆಯ ಈ ಆದೇಶವನ್ನು ಕಾನೂನುಬಾಹಿರ ಎಂದು ಜಮಿಯತ್ ಉಲಮಾ-ಎ-ಹಿಂದ್ ಸಂಘಟನೆ ಹೇಳಿದೆ.

'ಕಾನೂನುಬಾಹಿರವಾಗಿ ನೋಟಿಸ್ ನೀಡುವ ಮೂಲಕ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಲಾಗುತ್ತದೆ' ಎಂದು ಜಮಿಯತ್ ಉಲಮಾ-ಎ-ಹಿಂದ್ ಸಂಘಟನೆಯ ಉತ್ತರಪ್ರದೇಶ ಘಟಕದ ಕಾರ್ಯದರ್ಶಿ ಮೌಲಾನ ಜಾಕಿರ್ ಹುಸೈನ್ ಆರೋಪಿಸಿದ್ದಾರೆ.

'ಮದರಸಗಳು ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿದ್ದು, ₹10 ಸಾವಿರ ದಂಡ ಪಾವತಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ವಿದೇಶಿ ದೇಣಿಗೆ ಸ್ವೀಕರಿಸಿದ ಆರೋಪ ಹೊತ್ತಿರುವ ಕಾರಣಕ್ಕೆ ರಾಜ್ಯದ ನಾಲ್ಕು ಸಾವಿರ ಮದರಸಗಳ ಮೇಲೆ ನಿಗಾ ಇರಿಸಲಾಗಿದೆ. ಇವುಗಳ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು ರಾಜ್ಯ ಸರ್ಕಾರ ರಚಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500-47,500. SSLC, PUC. 8861041526, 7022121680.

Call Centre

ಗಯಾ, ಬಿಹಾರದಲ್ಲಿ ಕೆಲಸ ಮಾಡಲು ಟೆಲಿಕಾಲರ್ ಗಳು ಬೇಕಾಗಿದ್ದಾರೆ.ವೇತನ ತಿಂಗಳಿಗೆ 12000/- ಊಟ -ವಸತಿ ಉಚಿತ. ಕನ್ನಡ, ಮಲಯಾಳಂ, ತೆಲುಗು, ತಮಿಳು ಭಾಷೆಗಳನ್ನು ತಿಳಿದಿರಬೇಕು. ಸಂಪರ್ಕಿಸಿ: ಮೊಬೈಲ್ - 09540509611

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ಪ್ರವಾಸ

Pilgrimage Tours

ಮೈತ್ರಿ ಟ್ರಾವೆಲ್ಸ್.ಶಿರಡಿ ಪ್ರವಾಸ. 5 ದಿನ. 22/11/23. ಕೊಲ್ಹಾಪುರ, ಪಂಡರಾಪುರ, ತುಳಜಾಪುರ, ಶಿರಿಡಿ, ಶನಿಸಿಂಗಪೂರ, ಎಲ್ಲೋರ, 3ಜ್ಯೋತಿರ್ಲಿಂಗ. 6360422209

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ತನಿಖೆಯಿಂದ ರಕ್ಷಣೆ ನೀಡಲು ನಿರಾಕರಣೆ

ಸಹ ಜೀವನ ತಾತ್ಕಾಲಿಕ ಅಲಹಾಬಾದ್ ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಲಖನೌ : ಸಹಜೀವನ ಸಂಬಂಧಗಳು 'ಸಮಯ ಕಳೆಯುವ' ಉದ್ದೇಶದವು, 'ತಾತ್ಕಾಲಿಕ'ವಾದುವು ಎಂದು ಹೇಳಿರುವ ಅಲಹಾಬಾದ್ ಹೈಕೋರ್ಟ್, ಅಂತರ್‌ಧರ್ಮೀಯ ಜೋಡಿಯೊಂದಕ್ಕೆ ತನಿಖೆಯಿಂದ ರಕ್ಷಣೆ ಒದಗಿಸಲು ನಿರಾಕರಿಸಿದೆ. ತಮಗೆ ಪೊಲೀಸ್ ರಕ್ಷಣೆ ಕೊಡಿಸಬೇಕು, ಯುವಕನ ವಿರುದ್ಧ ದಾಖಲಾಗಿರುವ ಅಪಹರಣ ಪ್ರಕರಣವನ್ನು ರದ್ದುಪಡಿಸಬೇಕು ಎಂದು ಕೋರಿ ಜೋಡಿಯು ಹೈಕೋರ್ಟ್ ಮೆಟ್ಟಿಲೇರಿತ್ತು.

ಇಂತಹ ಸಂಬಂಧಗಳಲ್ಲಿ 'ಮೋಹ' ಹೆಚ್ಚಿರುತ್ತದೆಯೇ ವಿನಾ 'ಸ್ಥಿರತೆ ಮತ್ತು ಪ್ರಾಮಾಣಿಕತೆ' ಅಲ್ಲ ಎಂದು ಕೂಡ ವಿಭಾಗೀಯ ನ್ಯಾಯಪೀಠ ಹೇಳಿದೆ. ನ್ಯಾಯಮೂರ್ತಿಗಳಾದ ರಾಹುಲ್ ಚತುರ್ವೇದಿ ಮತ್ತು ಎಂ.ಎ.ಎಚ್. ಇದ್ರಿಸಿ ಅವರು ಈ ಪೀಠದಲ್ಲಿ ಇದ್ದರು.

'ಜೋಡಿಯು ವಿವಾಹ ಆಗುವುದಕ್ಕೆ ಒಪ್ಪದಿದ್ದರೆ ಅಥವಾ ಪರಸ್ಪರರ ವಿಚಾರವಾಗಿ ಪ್ರಾಮಾಣಿಕತೆ ಬೆಳೆಸಿಕೊಳ್ಳದಿದ್ದರೆ, ಅಂತಹ ಸಂಬಂಧಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಕೋರ್ಟ್ ಮುಂದಾಗುವುದಿಲ್ಲ' ಎಂದು ಪೀಠ ಹೇಳಿದೆ.

'ಸಹಜೀವನ ಸಂಬಂಧಗಳಿಗೆ ಸುಪ್ರೀಂ ಕೋರ್ಟ್ ಹಲವು ಸಂದರ್ಭಗಳಲ್ಲಿ ಮಾನ್ಯತೆ ನೀಡಿದೆ ಎಂಬುದು ನಿಜ. ಆದರೆ, ಎರಡು ತಿಂಗಳ ಅವಧಿಯಲ್ಲಿ, 22 ಹಾಗೂ 20 ವರ್ಷ ವಯಸ್ಸಿನ ಎಳೆಯರ ಜೋಡಿಯು ತಮ್ಮ ಇಂತಹ ತಾತ್ಕಾಲಿಕ ಸಂಬಂಧದ ಬಗ್ಗೆ ಗಂಭೀರವಾಗಿ ಆಲೋಚಿಸಿರುತ್ತದೆ ಎಂದು ನಿರೀಕ್ಷಿಸಲಾಗದು' ಎಂದು ಪೀಠ ಹೇಳಿದೆ.

'ಜೀವನವೆಂಬುದು ಹೂವಿನ ಹಾಸಿಗೆಯಲ್ಲ. ಪ್ರತಿ ಜೋಡಿಯನ್ನು ಜೀವನವು ಕಠಿಣವಾಗಿ ಪರೀಕ್ಷಿಸುತ್ತದೆ. ಇಂತಹ ಸಂಬಂಧಗಳು ಸಮಯ ಕಳೆಯುವುದಕ್ಕೆ, ತಾತ್ಕಾಲಿಕವಾಗಿ ಇರುತ್ತವೆ ಎಂಬುದನ್ನು ನಮ್ಮ ಅನುಭವ ಹೇಳುತ್ತದೆ. ಹೀಗಾಗಿ, ಪ್ರಕರಣದ ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ನಾವು ಅರ್ಜಿದಾರರಿಗೆ ತನಿಖೆಯಿಂದ ಯಾವುದೇ ರಕ್ಷಣೆ ಒದಗಿಸುವುದಿಲ್ಲ' ಎಂದು ಪೀಠ ತಿಳಿಸಿದೆ.

ಹಿಂದೂ ಯುವತಿ ಹಾಗೂ ಮುಸ್ಲಿಂ ಯುವಕನ ನಡುವಿನ ಸಂಬಂಧದ ಪ್ರಕರಣ ಇದು. ತಾವು ಪ್ರೌಢರು, ಒಬ್ಬರನ್ನೊಬ್ಬರು ತಾವಾಗಿಯೇ ಆಯ್ಕೆ ಮಾಡಿಕೊಂಡಿದ್ದೇವೆ ಎಂದು ಅವರು ಹೇಳಿದ್ದಾರೆ. ವಯಸ್ಕರಾಗಿ ತಮಗೆ ತಮ್ಮ ಭವಿಷ್ಯ ತೀರ್ಮಾನಿಸುವ ಅಧಿಕಾರ ಇದೆ ಎಂದು ವಾದಿಸಿದ್ದಾರೆ. ಯುವಕನು ಯುವತಿಯನ್ನು ಅಪಹರಿಸಿದ್ದಾನೆ ಎಂದು ಪೊಲೀಸರಲ್ಲಿ ದೂರು ನೀಡಲಾಗಿದೆ. ಈ ಯುವಕ ಒಬ್ಬ 'ರೋಡ್ ರೋಮಿಯೊ', ಈತನ ವಿರುದ್ಧ ಹಲವು ಪ್ರಕರಣಗಳು ದಾಖಲಾಗಿವೆ, ಅವನ ಜೊತೆ ಹೋದರೆ ಯುವತಿಗೆ ಭವಿಷ್ಯವೇ ಇರುವುದಿಲ್ಲ ಎಂದು ದೂರು ಸಲ್ಲಿಸಿರುವ ಯುವತಿಯ ಸಂಬಂಧಿ ಹೇಳಿದ್ದಾರೆ.

ಪಾಕ್‌ನಿಂದ 'ಘೌರಿ' ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನವು ಮಂಗಳವಾರ 'ಘೌರಿ' ಖಂಡಾಂತರ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿತು ಎಂದು ಸೇನೆಯು ಹೇಳಿಕೆಯಲ್ಲಿ ತಿಳಿಸಿದೆ. ಕಳೆದ ವಾರವಷ್ಟೇ 'ಅಬಬೀಲ್' ಕ್ಷಿಪಣಿಯ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಿತ್ತು.

ಕ್ಷಿಪಣಿ ವ್ಯವಸ್ಥೆಯು ಕಾರ್ಯನಿರ್ವಹಣೆ ಮತ್ತು ತಾಂತ್ರಿಕವಾಗಿ ಕರಾರುವಾಕ್ಕಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಪ್ರಯೋಗ ನಡೆಸಲಾಯಿತು ಎಂದು ತಿಳಿಸಿದೆ. ಸೇನೆಯ ಎಎಸ್‌ಎಫ್‌ಸಿ ತುಕಡಿಯ ಕಮಾಂಡರ್, ಹಿರಿಯ ಅಧಿಕಾರಿಗಳು, ವಿಜ್ಞಾನಿಗಳು, ಎಂಜಿನಿಯರ್‌ಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಪರಿಕರ ಪೂರೈಸಿದ ಚೀನಾದ ಮೂರು ಕಂಪನಿಗಳ ಮೇಲೆ ಅಮೆರಿಕವು ನಿರ್ಬಂಧ ವಿಧಿಸಿದ ಬೆಳವಣಿಗೆಯ ನಂತರ ಪಾಕಿಸ್ತಾನವು ಈ ಕ್ಷಿಪಣಿ ಪ್ರಯೋಗವನ್ನು ಕೈಗೊಂಡಿದೆ. ಪಾಕಿಸ್ತಾನಕ್ಕೆ ಅಗತ್ಯವಿರುವ ಸೇನಾ ಪರಿಕಗಳನ್ನು ಚೀನಾ ಪ್ರಮುಖವಾಗಿ ಪೂರೈಸುತ್ತಿದೆ.

'ಪುಟಿನ್ ಆರೋಗ್ಯವಾಗಿದ್ದಾರೆ'

ಮಾಸ್ಕೊ (ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅನಾರೋಗ್ಯಪೀಡಿತರಾಗಿದ್ದಾರೆ ಎಂಬ ವದಂತಿಯನ್ನು ಸರ್ಕಾರ ತಿರಸ್ಕರಿಸಿದೆ.

ಈ ಕುರಿತು ವರದಿಗಾರರಿಗೆ ಸ್ಪಷ್ಟನೆ ನೀಡಿರುವ ರಷ್ಯಾ ಸರ್ಕಾರದ ವಕ್ತಾರ ಡಿಮಿತ್ರಿ ಪೆಸ್ಕೋವ್ ಅವರು, 'ಪುಟಿನ್ ಅವರು ಆರೋಗ್ಯದಿಂದ ಇದ್ದಾರೆ. ಪುಟಿನ್ ಅವರು ತಮ್ಮ ಪ್ರತಿರೂಪದ ವ್ಯಕ್ತಿಯನ್ನು ಬಳಸುತ್ತಿದ್ದಾರೆ ಎಂಬ ಸುದ್ದಿಯೂ ಸುಳ್ಳು' ಎಂದಿದ್ದಾರೆ.

'ಭಾನುವಾರ ಸಂಜೆಯಿಂದ ಪುಟಿನ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ' ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದರಿಂದ ಪೆಸ್ಕೋವ್ ಈ ಸ್ಪಷ್ಟನೆ ನೀಡಿದ್ದಾರೆ.

ಏಳು ದೇಶಗಳ ನಾಗರಿಕರಿಗೆ ಉಚಿತ ಪ್ರವಾಸಿ ವೀಸಾ: ಶ್ರೀಲಂಕಾ

ಕೊಲಂಬೊ (ರಾಯಿಟರ್ಸ್): ಏಳು ದೇಶಗಳ ನಾಗರಿಕರಿಗೆ ಉಚಿತ ಪ್ರವಾಸಿ ವೀಸಾ ನೀಡಲು ಶ್ರೀಲಂಕಾದ ಸಂಪುಟ ಅನುಮೋದನೆ ನೀಡಿದೆ.

ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವ ನಿಟ್ಟಿನಲ್ಲಿ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಶ್ರೀಲಂಕಾ ಈ ಕ್ರಮಕೈಗೊಂಡಿದೆ.

ಭಾರತ, ಚೀನಾ, ರಷ್ಯಾ, ಜಪಾನ್, ಥಾಯ್ಲೆಂಡ್, ಇಂಡೊನೇಷ್ಯಾ ಮತ್ತು ಮಲೇಷ್ಯಾದ ನಾಗರಿಕರಿಗೆ ಪ್ರಾಯೋಗಿಕವಾಗಿ 2024 ಮಾರ್ಚ್ 31ರ ವರೆಗೆ ಉಚಿತ ಪ್ರವಾಸಿ ವೀಸಾ ನೀಡಲು ಅನುಮೋದನೆ ನೀಡಲಾಗಿದೆ.

2026ರ ವೇಳೆಗೆ 50 ಲಕ್ಷ ಪ್ರವಾಸಿಗರನ್ನು ಸೆಳೆಯುವ ಉದ್ದೇಶವನ್ನು ಈ ಯೋಜನೆ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್ ಸಾಂಕ್ರಾಮಿಕದ ಬಳಿಕ ಶ್ರೀಲಂಕಾದ ಪ್ರವಾಸೋದ್ಯಮ ನೆಲಕಚ್ಚಿತ್ತು. ಇದರಿಂದ ದೇಶದಲ್ಲಿ ಆರ್ಥಿಕ ಸಂಕಷ್ಟ ಎದುರಾಗಿತ್ತು. ಅಗತ್ಯ ವಸ್ತುಗಳ ಕೊರತೆಯ ಪರಿಣಾಮವಾಗಿ ಕಳೆದ ವರ್ಷ ಜನರು ಬೀದಿಗಿಳಿದು ಭಾರಿ ಪ್ರತಿಭಟನೆ ನಡೆಸಿದ್ದರು.

ಈ ವರ್ಷ ಪ್ರವಾಸೋದ್ಯಮ ಚೇತರಿಕೆ ಕಾಣುತ್ತಿದ್ದು, ಸೆಪ್ಟೆಂಬರ್‌ವರೆಗೆ 10 ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಸಿಗರು ಶ್ರೀಲಂಕಾಕ್ಕೆ ಭೇಟಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ಶ್ರೀಲಂಕಾಕ್ಕೆ ಭಾರತದಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ.

ದಕ್ಷಿಣ ಆಫ್ರಿಕಾ ಗೆಲುವಿನ ಓಟ • ಬಾಂಗ್ಲಾದೇಶ ವಿರುದ್ಧ 149 ರನ್ ಜಯ

ಮತ್ತೆ ಮಿಂಚಿದ ಕ್ವಿಂಟನ್

ಶತಕ ಗಳಿಸಿದ ದಕ್ಷಿಣ ಆಫ್ರಿಕಾ ತಂಡದ ಕ್ವಿಂಟನ್ ಡಿ ಕಾಕ್ (ಬಲ) ಅವರನ್ನು ಅಭಿನಂದಿಸಿದ ಸಹ ಆಟಗಾರ ಹೆನ್ರಿಕ್ ಕ್ಲಾಸೆನ್ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಕ್ವಿಂಟನ್ ಡಿ ಕಾಕ್ ಗಳಿಸಿದ ಭರ್ಜರಿ ಶತಕ ಮತ್ತು ಹೆನ್ರಿಕ್ ಕ್ಲಾಸೆನ್ ಅವರ ಬಿರುಸಿನ 90 ರನ್‌ಗಳ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಏಡನ್ ಮರ್ಕರಂ ಬಳಗ 149 ರನ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಪರಾಭವಗೊಳಿಸಿತು.

ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ, 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 382 ರನ್ ಪೇರಿಸಿತು. ಬಾಂಗ್ಲಾ ತಂಡದ ಹೋರಾಟ 46.4 ಓವರ್‌ಗಳಲ್ಲಿ 233 ರನ್‌ಗಳಿಗೆ ಕೊನೆಗೊಂಡಿತು. ಮಹಮೂದುಲ್ಲಾ (111; 111 ಎ., 4X11, 6X4) ಅವರು ಶತಕದ ಮೂಲಕ ಸೋಲಿನಲ್ಲೂ ಗಮನ ಸೆಳೆದರು.

ನಾಲ್ಕನೇ ಗೆಲುವು ಪಡೆದ ದಕ್ಷಿಣ ಆಫ್ರಿಕಾ, 8 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನಕ್ಕೇರಿತು. ಎರಡನೇ ಸ್ಥಾನದಲ್ಲಿದ್ದ ನ್ಯೂಜಿಲೆಂಡ್ ಎಂಟು ಪಾಯಿಂಟ್ಸ್ ಹೊಂದಿದೆಯಾದರೂ, ಕಡಿಮೆ ರನ್‌ರೇಟ್ ಕಾರಣ ಮೂರನೇ ಸ್ಥಾನಕ್ಕೆ ಸರಿಯಿತು.

> **ಕ್ವಿಂಟನ್ ಡಿ ಕಾಕ್ ಅವರ ಆಟ ನಿಜಕ್ಕೂ ಅದ್ಭುತವಾಗಿತ್ತು. ಕೊನೆಯಲ್ಲಿ ಹೆನ್ರಿಕ್ ಕ್ಲಾಸೆನ್ ಕೂಡ ಬಿರುಸಿನ ಆಟವಾಡಿ ತಂಡವು ಬೃಹತ್ ಮೊತ್ತ ಗಳಿಸಲು ಕಾರಣರಾದರು.**
> **ಏಡನ್ ಮರ್ಕರಂ,** ದಕ್ಷಿಣ ಆಫ್ರಿಕಾ ತಂಡದ ನಾಯಕ

ಈ ಟೂರ್ನಿಯಲ್ಲಿ ಮೂರನೇ ಶತಕ ಗಳಿಸಿದ ಡಿ ಕಾಕ್ (174; 140 ಎ., 4X15, 6X7) ಹಾಗೂ ಮತ್ತೊಮ್ಮೆ ಅಬ್ಬರಿಸಿದ ಕ್ಲಾಸೆನ್ (90; 49 ಎ., 4X2, 6X8) ಅವರು ದಕ್ಷಿಣ ಆಫ್ರಿಕಾ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ತೆಂಬಾ ಬವುಮಾ ಅನುಪಸ್ಥಿತಿಯಲ್ಲಿ ತಂಡವನ್ನು ಮುನ್ನಡೆಸಿದ ಮರ್ಕರಂ 69 ಎಸೆತಗಳಲ್ಲಿ 60 ರನ್ ಗಳಿಸಿದರು.

ಭಾರಿ ಸವಾಲು ಬೆನ್ನಟ್ಟಿದ ಶಕೀಬ್ ಅಲ್ ಹಸನ್ ಬಳಗ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಮೊತ್ತ 58 ಆಗುವಷ್ಟರಲ್ಲಿ ಅಗ್ರ ಕ್ರಮಾಂಕದ ಐವರು ಬ್ಯಾಟರ್‌ಗಳು ಪೆವಿಲಿಯನ್ ಸೇರಿದರು.

ಮಾರ್ಕೊ ಜಾನ್ಸೆನ್ ಅವರು ಇನಿಂಗ್ಸ್‌ನ ಆರನೇ ಓವರ್‌ನ ಸತತ ಎರಡು ಎಸೆತಗಳಲ್ಲಿ ತಂಜಿದ್ ಹಸನ್ (12) ಮತ್ತು ನಜ್ಮುಲ್ ಹೊಸೇನ್ ಶಾಂತೊ (0) ಅವರನ್ನು ಔಟ್ ಮಾಡಿದರು. ಶಕೀಬ್ (1) ಮತ್ತು ಮುಷ್ಫಿಕುರ್ ರಹೀಂ (8) ವಿಫಲರಾದರು. ಲಿಟನ್ ದಾಸ್ ಕೂಡಾ ಔಟಾದಾಗ ಬಾಂಗ್ಲಾ ಹೀನಾಯ ಸೋಲಿನ ಆತಂಕ ಎದುರಿಸಿತು.

ಆದರೆ ಮಹಮೂದುಲ್ಲಾ ಅವರು ಕೆಳಗಿನ ಕ್ರಮಾಂಕದ ಬ್ಯಾಟರ್‌ಗಳ ನೆರವಿನಿಂದ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಏಕಾಂಗಿ ಹೋರಾಟದ ಮೂಲಕ ಶತಕ ಪೂರೈಸಿದರು.

ಮುಖ್ಯಾಂಶಗಳು

- ಡಿ ಕಾಕ್‌ಗೆ ಟೂರ್ನಿಯಲ್ಲಿ ಮೂರನೇ ಶತಕ
- 140 ಎಸೆತಗಳಲ್ಲಿ 174 ರನ್ ಗಳಿಸಿದ ಆರಂಭಿಕ ಬ್ಯಾಟರ್
- ನಾಲ್ಕನೇ ವಿಕೆಟ್‌ಗೆ 87 ಎಸೆತಗಳಲ್ಲಿ 142 ರನ್ ಜತೆಯಾಟ

ಕೊನೆಯಲ್ಲಿ ಅಬ್ಬರ: ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ, ಆರಂಭದಲ್ಲಿ ರನ್ ಗಳಿಸಲು ಪರದಾಡಿತು. ಸ್ಕೋರ್ 36 ಆಗುವಷ್ಟರಲ್ಲಿ ಎರಡು ವಿಕೆಟ್‌ಗಳು ಬಿದ್ದವು. ರೀಜಾ ಹೆಂಡ್ರಿಕ್ಸ್ (12) ಮತ್ತು ರಸಿ ವ್ಯಾನ್ ಡರ್ ಡಸೆ (1) ಅವರು ಬೇಗನೇ ಮರಳಿದರು. ಡಿ ಕಾಕ್ ಮತ್ತು ಮರ್ಕರಂ ಮೂರನೇ ವಿಕೆಟ್‌ಗೆ 131 ರನ್ ಕಲೆಹಾಕಿದರು. 31ನೇ ಓವರ್‌ಗಳಲ್ಲಿ ಸ್ಕೋರ್ 167 ಆಗಿದ್ದಾಗ ಮರ್ಕರಂ ಔಟಾದರು.

ಡಿ ಕಾಕ್ ಮತ್ತು ಕ್ಲಾಸೆನ್ ಜತೆಯಾದ ಬಳಿಕ ದಕ್ಷಿಣ ಆಫ್ರಿಕಾ ಇನಿಂಗ್ಸ್‌ನ ಚಿತ್ರಣವೇ ಬದಲಾಯಿತು. ರನ್ ರೇಟ್‌ನ ವೇಗ ಹೆಚ್ಚಿತು. ನಾಲ್ಕನೇ ವಿಕೆಟ್‌ಗೆ ಇವರಿಬ್ಬರು 87 ಎಸೆತಗಳಲ್ಲಿ 142 ರನ್ ಸೇರಿಸಿದರು. ಕೊನೆಯ 10 ಓವರ್‌ಗಳಲ್ಲಿ 144 ರನ್‌ಗಳು ಹರಿದುಬಂದವು. ಡೇವಿಡ್ ಮಿಲ್ಲರ್ 15 ಎಸೆತಗಳಲ್ಲಿ 34 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 382 (ಕ್ವಿಂಟನ್ ಡಿ ಕಾಕ್ 174, ಏಡನ್ ಮರ್ಕರಂ 60, ಹೆನ್ರಿಕ್ ಕ್ಲಾಸೆನ್ 90, ಡೇವಿಡ್ ಮಿಲ್ಲರ್ ಔಟಾಗದೆ 34, ಹಸನ್ ಮಹಮೂದ್ 67ಕ್ಕೆ 2)

ಬಾಂಗ್ಲಾದೇಶ: 46.4 ಓವರ್‌ಗಳಲ್ಲಿ 233 (ಲಿಟನ್ ದಾಸ್ 22, ಮಹಮೂದುಲ್ಲಾ 111, ನಸುಮ್ ಅಹ್ಮದ್ 19, ಜೆರಾಲ್ಡ್ ಕೊಯೆಟ್ಜಿ 62ಕ್ಕೆ 3, ಕಗಿಸೊ ರಬಾಡ 42ಕ್ಕೆ 2, ಮಾರ್ಕೊ ಜಾನ್ಸೆನ್ 39ಕ್ಕೆ 2)

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 149 ರನ್ ಗೆಲುವು

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	5	5	0	0	10	1.353
ದಕ್ಷಿಣ ಆಫ್ರಿಕಾ	5	4	1	0	8	2.370
ನ್ಯೂಜಿಲೆಂಡ್	5	4	1	0	8	1.481
ಆಸ್ಟ್ರೇಲಿಯಾ	4	2	2	0	4	-0.193
ಪಾಕಿಸ್ತಾನ	5	2	3	0	4	-0.400
ಅಫ್ಗಾನಿಸ್ತಾನ	5	2	3	0	4	-0.969
ನೆದರ್ಲೆಂಡ್ಸ್	4	1	3	0	2	-0.790
ಶ್ರೀಲಂಕಾ	4	1	3	0	2	-1.048
ಇಂಗ್ಲೆಂಡ್	4	1	3	0	2	-1.248
ಬಾಂಗ್ಲಾದೇಶ	5	1	4	0	2	-1.253

ಪಥಿರಾಣ ಬದಲು ಮ್ಯಾಥ್ಯೂಸ್

ಬೆಂಗಳೂರು (ಪಿಟಿಐ): ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಅವರು ಗಾಯಗೊಂಡಿರುವ ಮಥೀಷ ಪಥಿರಾಣ ಅವರಿಗೆ ಬದಲಿ ಆಟಗಾರನಾಗಿ ಶ್ರೀಲಂಕಾ ತಂಡವನ್ನು ಸೇರಿಕೊಂಡಿದ್ದಾರೆ. ಪಾಕ್ ವಿರುದ್ಧದ ಪಂದ್ಯದಲ್ಲಿ ಪಥಿರಾಣ ಭುಜಕ್ಕೆ ಗಾಯವಾಗಿತ್ತು. ಆಸ್ಟ್ರೇಲಿಯಾ ಮತ್ತು ನೆದರ್ಲೆಂಡ್ಸ್ ಎದುರಿನ ಪಂದ್ಯಗಳಲ್ಲಿ ಆಡಿರಲಿಲ್ಲ.

ಶ್ರೀಲಂಕಾ ತಂಡ ವಿಶ್ವಕಪ್ ಟೂರ್ನಿಯ ತನ್ನ ಮುಂದಿನ ಪಂದ್ಯದಲ್ಲಿ ಗುರುವಾರ ಬೆಂಗಳೂರಿನಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಮ್ಯಾಥ್ಯೂಸ್ ಅವರಿಗೆ ಇದು ನಾಲ್ಕನೇ ವಿಶ್ವಕಪ್ ಎನಿಸಿದೆ. 2011, 2015 ಮತ್ತು 2019ರ ಟೂರ್ನಿಗಳಲ್ಲಿ ಅವರು ಆಡಿದ್ದರು. 36 ವರ್ಷದ ಅವರು 221 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 5,865 ರನ್ ಕಲೆಹಾಕಿದ್ದು, 120 ವಿಕೆಟ್‌ಗಳನ್ನು ಪಡೆದಿದ್ದಾರೆ.

ಪಾಕಿಸ್ತಾನ ಕ್ರಿಕೆಟ್ ತಂಡದಲ್ಲಿ ಒಡಕು?

ಕರಾಚಿ (ಪಿಟಿಐ): ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಂಡಿರುವ ಪಾಕಿಸ್ತಾನ ತಂಡದಲ್ಲಿ ಒಗ್ಗಟ್ಟು ಇಲ್ಲ, ಒಡಕು ಉಂಟಾಗಿದೆ ಎಂಬ ಊಹಾಪೋಹ ಹರಡಿದೆ. ಆದರೆ, ಪಾಕಿಸ್ತಾನ ಕ್ರಿಕೆಟ್ ಮಂಡಳಿ ಈ ಸುದ್ದಿಯನ್ನು ತಳ್ಳಿಹಾಕಿದೆ.

ತಂಡದಲ್ಲಿ ಒಳಜಗಳ ತಾರಕಕ್ಕೇರಿದೆ ಎಂದು ಪಾಕಿಸ್ತಾನದ ಕೆಲವು ಪತ್ರಕರ್ತರು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಾರೆ.

‘ಇಬ್ಬರು ಆಟಗಾರರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ತಂಡದಲ್ಲಿ ಒಂದು ಗುಂಪು, ನಾಯಕ ಬಾಬರ್ ಅಜಂ ವಿರುದ್ಧ ಬಂಡಾಯ ಎದ್ದಿದೆ’ ಎಂದು ಹೇಳಿಕೊಂಡಿದ್ದಾರೆ. ಇದನ್ನು ನಿರಾಕರಿಸಿರುವ ಪಿಸಿಬಿ, ‘ಕೆಲವು ಮಾಧ್ಯಮಗಳು ಹರಡಿರುವ ಸುದ್ದಿಯಲ್ಲಿ ಹುರುಳಿಲ್ಲ. ಪಾಕ್ ತಂಡದಲ್ಲಿ ಒಗ್ಗಟ್ಟು ಇದೆ’ ಎಂದು ಹೇಳಿದೆ.

ಈ ಮಧ್ಯೆ ಪಾಕ್ ತಂಡದ ನಾಯಕ ಅಜಂ ಬಾಬರ್ ಅವರನ್ನು ವಿಶ್ವಕಪ್ ಟೂರ್ನಿಯ ಬಳಿಕ ಬದಲಾಯಿಸಬೇಕು ಎಂಬ ಆಗ್ರಹವೂ ಮುನ್ನಡೆಗೆ ಬಂದಿದೆ.

ಇಂದು ದೆಹಲಿಯಲ್ಲಿ ಮುಖಾಮುಖಿ

ಆಸ್ಟ್ರೇಲಿಯಾಕ್ಕೆ ಡಚ್ ಸವಾಲು

ನವದೆಹಲಿ (ಪಿಟಿಐ): ಎಂದಿನ ಬ್ಯಾಟಿಂಗ್ ಲಹರಿಗೆ ಮರಳಿರುವ ಆಸ್ಟ್ರೇ ಲಿಯಾ ತಂಡ ಬುಧವಾರ ನಡೆಯುವ ವಿಶ್ವಕಪ್ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡದ ಎದುರೂ ಅಂಥದ್ದೇ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ಆದರೆ ಇದುವರೆಗಿನ ಪಂದ್ಯಗಳನ್ನು ಗಮನಿಸಿದರೆ, ನೆದರ್ಲೆಂಡ್ಸ್ ತಂಡ ಸುಲಭಕ್ಕೆ ಬಗ್ಗದ ತಂಡವಲ್ಲವೆಂಬುದನ್ನು ಸಾಬೀತುಪಡಿಸಿದೆ.

ನಿರಾಶಾದಾಯಕ ರೀತಿಯಲ್ಲಿ ವಿಶ್ವಕಪ್ ಅಭಿಯಾನ ಆರಂಭಿಸಿದ್ದ ಐದು ಬಾರಿಯ ಚಾಂಪಿಯನ್ನರು ಕಳೆದ ಎರಡು ಪಂದ್ಯಗಳಲ್ಲಿ– ಶ್ರೀಲಂಕಾ ಮತ್ತು ಪಾಕಿಸ್ತಾನ ವಿರುದ್ಧ– ಅಧಿಕಾರಯುತ ಪ್ರದರ್ಶನ ನೀಡಿದ್ದಾರೆ. ಆದರೆ, ಕೆಲವು ಅನಿರೀಕ್ಷಿತ ಫಲಿತಾಂಶಗಳನ್ನು ಕಂಡ ಈ ಕೂಟದಲ್ಲಿ ಡಚ್ ತಂಡವನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ ಎಂಬುದು ಕಾಂಗರೂ ಪಡೆಗೆ ಗೊತ್ತೇ ಇದೆ.

ನೆದರ್ಲೆಂಡ್ಸ್ ತಂಡ ಧರ್ಮಶಾಲಾದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಪರಾಕ್ರಮ ಮೆರೆದಿತ್ತು. ಸೋಮವಾರ, ಪಾಕ್ ತಂಡವನ್ನು ಅಫ್ಗಾನಿಸ್ತಾನ ಮಣಿಸಿದ್ದು, ಆ ತಂಡಕ್ಕೆ ಮತ್ತಷ್ಟು ಪ್ರೇರಣೆ ನೀಡಬಲ್ಲದು.

ಆದರೆ, ಪಾಕಿಸ್ತಾನ ತಂಡದ ಮೇಲೆ ಸಾಧಿಸಿದ ಗೆಲುವಿನ ರೀತಿ ಆಸ್ಟ್ರೇಲಿಯಾಕ್ಕೆ ಬಲ ತುಂಬಿದೆ. ಅಗ್ರ ಕ್ರಮಾಂಕದ ಆಟಗಾರರು ಲಯಕ್ಕೆ ಮರಳಿದ್ದಾರೆ. ಸ್ಪಿನ್ನರ್ ಆ್ಯಡಂ ಜಂಪಾ ಅವರೂ ಮೊನಚು ಕಂಡುಕೊಂಡಿದ್ದಾರೆ. ವೇಗಿಗಳಾದ ಜೋಶ್ ಹ್ಯಾಜಲ್‌ವುಡ್ ಮತ್ತು ಮಿಚೆಲ್ ಸ್ಟಾರ್ಕ್ ಅವರು ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ. ಹ್ಯಾಜಲ್‌ವುಡ್ ಎರಡು ಬಾರಿ ನಾಲ್ಕು ವಿಕೆಟ್‌ಗಳ ಗೊಂಚಲು ಪಡೆದಿದ್ದಾರೆ. ಆದರೆ ನಾಯಕ ಕಮಿನ್ಸ್ ಹೇಳಿಕೊಳ್ಳುವಂಥ ಪ್ರದರ್ಶನ ನೀಡಿಲ್ಲ.

ಎದುರಾಳಿ ಬೌಲಿಂಗ್ ಮೇಲೆ ದಂಡೆತ್ತಿ ಹೋಗಬಲ್ಲ ವಾರ್ನರ್ ಮತ್ತು ಮಿಚೆಲ್ ಮಾರ್ಷ್ ಅವರು ಫಾರ್ಮ್‌ಗೆ ಮರಳಿರುವುದು ತಂಡಕ್ಕೆ ಶುಭಸುದ್ದಿ. ಮಾರ್ಷ್ 108ರ ಸ್ಟ್ರೈಕ್‌ರೇಟ್‌ನಲ್ಲಿ 351 ರನ್ ಪೇರಿಸಿದ್ದಾರೆ. ಟ್ರಾವಿಸ್ ಹೆಡ್ ಜಾಗಕ್ಕೆ ಬಂದ ಅವರು ಅವಕಾಶವನ್ನು ಎರಡೂ ಕೈಗಳಿಂದ ಬಾಚಿಕೊಂಡಿದ್ದಾರೆ.

ಮಧ್ಯಮ ಕ್ರಮಾಂಕದಲ್ಲಿ ಅನುಭವಿ ಸ್ಟೀವ್ ಸ್ಮಿತ್ ಮತ್ತು ಲಾಬುಷೇನ್ ಅವರು ಪರದಾಟ ಮುಂದುವರಿದಿದೆ. ನಾಲ್ಕು ಇನಿಂಗ್ಸ್‌ಗಳಲ್ಲಿ ಸ್ಮಿತ್ ಒಮ್ಮೆ ಮಾತ್ರ 30ರ ಗಡಿ ದಾಟಿದ್ದಾರೆ. ಲಾಬುಷೇನ್ ಒಮ್ಮೆಯೂ ಅರ್ಧ ಶತಕ ಗಳಿಸಿಲ್ಲ. ಮ್ಯಾಕ್ಸ್‌ವೆಲ್ ಮತ್ತು ಮಾರ್ಕಸ್ ಸ್ಟೊಯಿನಿಸ್ ತಮ್ಮ ಪಾತ್ರದಲ್ಲಿ ಇದುವರೆಗೆ ಮಿಂಚಿಲ್ಲ. ಆದರೆ ವಿಕೆಟ್ ಕೀಪರ್ ಜೋಶ್ ಇಂಗ್ಲಿಷ್ ನಿರ್ಣಾಯಕ ಸಂದರ್ಭದಲ್ಲಿ ಎರಡು ಅರ್ಧಶತಕ ಗಳಿಸಿದ್ದಾರೆ.

ಆಲ್‌ರೌಂಡರ್‌ಗಳ ಪಡೆ ಹೊಂದಿರುವ ಡಚ್ ಪಡೆ, ಯೋಜನೆ ಕಾರ್ಯಗತ ಮಾಡುವಲ್ಲಿ ಹಿಂದೆಬೀಳುತ್ತಿದೆ. ವಿಶೇಷವಾಗಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಯಶಸ್ವಿ ಆಗುತ್ತಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಯಾರಾದರೊಬ್ಬರು ಆಡುತ್ತಿರುವ ಕಾರಣ ತಂಡ ಕುಸಿಯುತ್ತಿಲ್ಲ. ಬೌಲಿಂಗ್ ಮತ್ತು ಕ್ಷೇತ್ರ ರಕ್ಷಣೆ ವಿಭಾಗದಲ್ಲೂ ಅದು ಎಡವುತ್ತಿದೆ. ಬಾಸ್ ಡಿ ಲೀಡ್, ಆರ್ಯನ್ ದತ್, ವಾನ್ ಮೀಕೆರೆನ್ ವಿವಿಧ ಸಂದರ್ಭಗಳಲ್ಲಿ ಯಶಸ್ವಿ ಆದರೂ ಇತರ ಬೌಲರ್‌ಗಳಿಂದ ಬೆಂಬಲ ಸಿಗುತ್ತಿಲ್ಲ. ನೆದರ್ಲೆಂಡ್ಸ್ –ಆಸ್ಟ್ರೇಲಿಯಾ ವಿಶ್ವಕಪ್‌ನಲ್ಲಿ (2003 ಮತ್ತು 2007) ಮಾತ್ರ ಮುಖಾಮುಖಿ ಆಗಿದ್ದು ಎರಡೂ ಬಾರಿ ಆಸ್ಟ್ರೇಲಿಯಾ ಜಯಗಳಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆಸ್ಟ್ರೇಲಿಯಾ ತಂಡದ ಸ್ಟೀವ್ ಸ್ಮಿತ್

ಪಾಕ್ ಸೆಮಿಫೈನಲ್ ಹಾದಿ ಕಠಿಣ

ಅಫ್ಗನ್‌ಗೆ ಶರಣಾದ ಬಾಬರ್ ಬಳಗ • ಎಂಟು ವಿಕೆಟ್‌ಗಳಿಂದ ಗೆದ್ದ ಶಾಹಿದಿ ಪಡೆ

ಚೆನ್ನೈ (ಪಿಟಿಐ/ ಎಎಫ್‌ಪಿ): ಅಫ್ಗಾನಿಸ್ತಾನದ ಕೈಯಲ್ಲಿ ಎದುರಾದ ಅನಿರೀಕ್ಷಿತ ಸೋಲು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡದ ಸೆಮಿಫೈನಲ್ ಪ್ರವೇಶದ ಸಾಧ್ಯತೆಗೆ ಅಡ್ಡಿಯಾಗಿ ಪರಿಣಮಿಸಿದೆ.

ಮೊದಲ ಎರಡು ಪಂದ್ಯಗಳನ್ನು ಗೆದ್ದು ಉತ್ತಮ ಆರಂಭ ಪಡೆದಿದ್ದ ಬಾಬರ್ ಅಜಂ ಬಳಗ, ಹ್ಯಾಟ್ರಿಕ್ ಸೋಲಿನಿಂದ ಕಂಗೆಟ್ಟಿದೆ. ಚೆನ್ನೈನಲ್ಲಿ ಸೋಮವಾರ ನಡೆದಿದ್ದ ಪಂದ್ಯದಲ್ಲಿ ಹಷ್ಮತ್‌ಉಲ್ಲಾ ಶಾಹಿದಿ ಬಳಗವು ಪಾಕ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತ್ತು. ಏಕದಿನ ಕ್ರಿಕೆಟ್‌ನಲ್ಲಿ ಅಫ್ಗನ್ ತಂಡಕ್ಕೆ ಪಾಕ್ ಎದುರು ದೊರೆತ ಮೊದಲ ಜಯ ಇದು. ಈ ಹಿಂದೆ ಏಳು ಸಲ ಪೈಪೋಟಿ ನಡೆಸಿದ್ದರೂ ಗೆಲುವು ದಕ್ಕಿರಲಿಲ್ಲ.

ಮೊದಲು ಬ್ಯಾಟ್ ಮಾಡಿದ ಪಾಕ್ ತಂಡ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 282 ರನ್ ಪೇರಿಸಿತು. 92 ಎಸೆತಗಳಲ್ಲಿ 74 ರನ್ ಗಳಿಸಿದ ಬಾಬರ್ ಅಜಂ ಹಾಗೂ ಕೊನೆಯಲ್ಲಿ ಅಬ್ಬರಿಸಿದ ಶಾದಾಬ್ ಖಾನ್ (40; 38 ಎ.) ಮತ್ತು ಇಫ್ತಿಕಾರ್ ಅಹಮದ್ (40; 27 ಎ., 4X2, 6X4) ಅವರು ಗಮನ ಸೆಳೆದರು. 49 ರನ್‌ಗಳಿಗೆ ಮೂರು ವಿಕೆಟ್ ಪಡೆದ ಯುವ ಸ್ಪಿನ್ನರ್ ನೂರ್ ಅಹ್ಮದ್ ಪಾಕ್ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಅಫ್ಗನ್ ತಂಡಕ್ಕೆ ಈ ಗುರಿ ಸವಾಲಾಗಿ ಪರಿಣಮಿಸಲೇ ಇಲ್ಲ. 49 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು ಐತಿಹಾಸಿಕ ಗೆಲುವು ದಾಖಲಿಸಿತು. ರಹಮಾನುಲ್ಲಾ ಗುರ್ಬಾಜ್ (65; 53 ಎ., 4X9, 6X1) ಮತ್ತು ಇಬ್ರಾಹಿಂ ಜದ್ರಾನ್ (87; 113 ಎ., 4X10) ಮೊದಲ ವಿಕೆಟ್‌ಗೆ 130 ರನ್ ಸೇರಿಸಿ ಭದ್ರ ಬುನಾದಿ ಹಾಕಿಕೊಟ್ಟರು.

ಜದ್ರಾನ್, ಔಟಾಗುವ ಮುನ್ನ ಎರಡನೇ ವಿಕೆಟ್‌ಗೆ ರಹಮತ್ ಶಾ (ಔಟಾಗದೆ 77; 84 ಎ., 4X5, 6X2) ಜತೆ 60 ರನ್ ಸೇರಿಸಿದರು. ರಹಮತ್ ಮತ್ತು ನಾಯಕ ಹಷ್ಮತ್‌ಉಲ್ಲಾ (ಔಟಾಗದೆ 48; 45 ಎ., 4X4) ಅವರು ಮುರಿಯದ ಮೂರನೇ ವಿಕೆಟ್‌ಗೆ 96 ರನ್ ಕಲೆಹಾಕಿ ತಂಡವನ್ನು ಸ್ಮರಣೀಯ ಜಯದತ್ತ ಕೊಂಡೊಯ್ದರು.

ಮೊನಚು ಕಳೆದುಕೊಂಡ ಬೌಲಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಮಾಡಿದ ಲೋಪಗಳು ಪಾಕ್ ತಂಡಕ್ಕೆ ಮುಳುವಾಗಿ ಪರಿಣಮಿಸಿದವು. ಅಫ್ಗನ್ ತಂಡ ಇದಕ್ಕೂ ಮುನ್ನ ದೆಹಲಿಯಲ್ಲಿ ನಡೆದಿದ್ದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ಅಚ್ಚರಿ ಉಂಟುಮಾಡಿತ್ತು.

ಐದು ಪಂದ್ಯಗಳಿಂದ 4 ಪಾಯಿಂಟ್ಸ್ ಕಲೆಹಾಕಿರುವ ಪಾಕ್ ತಂಡ ಸೆಮಿ ಪ್ರವೇಶದ ಸಾಧ್ಯತೆ ಜೀವಂತವಾಗಿರಬೇಕಾದರೆ ಇನ್ನುಳಿದ ನಾಲ್ಕೂ ಪಂದ್ಯಗಳಲ್ಲಿ ಗೆಲುವು ಸಾಧಿಸುವುದು ಅನಿವಾರ್ಯ.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 282 (ಅಬ್ದುಲ್ಲಾ ಶಫೀಕ್ 58, ಬಾಬರ್ ಅಜಂ 74, ಸೌದ್ ಶಕೀಲ್ 25, ಶಾದಾಬ್ ಖಾನ್ 40, ಇಫ್ತಿಕಾರ್ ಅಹ್ಮದ್ 40, ನೂರ್ ಅಹ್ಮದ್ 49ಕ್ಕೆ 3, ನವೀನ್ ಉಲ್ ಹಕ್ 52ಕ್ಕೆ 2, ಮೊಹಮ್ಮದ್ ನಬಿ 31ಕ್ಕೆ 1): **ಅಫ್ಗಾನಿಸ್ತಾನ** 49 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 286 (ರಹಮಾನುಲ್ಲಾ ಗುರ್ಬಾಜ್ 65, ಇಬ್ರಾಹಿಂ ಜದ್ರಾನ್ 87, ರಹಮತ್ ಶಾ ಔಟಾಗದೆ 77, ಹಷ್ಮತ್‌ಉಲ್ಲಾ ಶಾಹಿದಿ ಔಟಾಗದೆ 48, ಹಸನ್ ಅಲಿ 44ಕ್ಕೆ 1)

ಫಲಿತಾಂಶ: ಅಫ್ಗಾನಿಸ್ತಾನಕ್ಕೆ 8 ವಿಕೆಟ್ ಗೆಲುವು

ಪಾಕಿಸ್ತಾನ ವಿರುದ್ಧ ಗೆದ್ದ ಅಫ್ಗಾನಿಸ್ತಾನ ತಂಡದ ಆಟಗಾರರು ಪ್ರೇಕ್ಷಕರತ್ತ ಕೈಬೀಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ದಿನಕ್ಕೆ 8 ಕೆ.ಜಿ. ಮಟನ್ ತಿನ್ನುವರು; ಫಿಟ್‌ನೆಸ್ ಎಲ್ಲಿ: ಅಕ್ರಮ್ ಪ್ರಶ್ನೆ

ಅಫ್ಗನ್ ಎದುರು ಸೋತ ಪಾಕ್ ತಂಡದ ಆಟಗಾರರ ಪ್ರದರ್ಶನದ ಬಗ್ಗೆ ಮಾಜಿ ನಾಯಕ ವಾಸಿಂ ಅಕ್ರಮ್ ಕಿಡಿ ಕಾರಿದ್ದಾರೆ. ಆಟಗಾರರ ಫಿಟ್‌ನೆಸ್ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆ.

‘ಈ ಸೋಲಿನಿಂದ ಮುಜುಗರ ಉಂಟಾಗಿದೆ. ಅಫ್ಗನ್ ತಂಡ ಎರಡು ವಿಕೆಟ್ ಕಳೆದುಕೊಂಡು 280ಕ್ಕೂ ಅಧಿಕ ರನ್ ಬೆನ್ನಟ್ಟಿರುವುದು ದೊಡ್ಡ ಸಾಧನೆಯೇ ಸರಿ. ಪಂದ್ಯದಲ್ಲಿ ಪಾಕ್ ತಂಡದ ಫೀಲ್ಡಿಂಗ್, ಅವರ ಫಿಟ್‌ನೆಸ್ ಮಟ್ಟ ಹೇಗಿತ್ತು ಎಂಬುದನ್ನು ನೋಡಿ. ಇವರು ಎರಡು ವರ್ಷಗಳಿಂದ ಫಿಟ್‌ನೆಸ್ ಪರೀಕ್ಷೆ ಎದುರಿಸಿಲ್ಲ ಎಂದು ಕಳೆದ ಮೂರು ವಾರಗಳಿಂದ ನಾನು ಹೇಳುತ್ತಾ ಬಂದಿದ್ದೇನೆ. ಈ ಆಟಗಾರರು ಪ್ರತಿದಿನ 8 ಕೆ.ಜಿ. ಮಟನ್ ತಿನ್ನುವಂತೆ ಕಾಣಿಸುತ್ತದೆ. ಫಿಟ್‌ನೆಸ್ ಪರೀಕ್ಷೆ ಬೇಕಲ್ಲವೇ?’ ಎಂದು ‘ಎ ಸ್ಪೋರ್ಟ್ಸ್’ ಚಾನೆಲ್‌ಗೆ ತಿಳಿಸಿದ್ದಾರೆ.

ಈ ಜಯ ಮುಂದಿನ ತಲೆಮಾರಿಗೂ ಸ್ಫೂರ್ತಿ: ಟ್ರಾಟ್

ಚೆನ್ನೈ (ಪಿಟಿಐ): ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ ಸೋಮವಾರ ಪಡೆದ ಚಾರಿತ್ರಿಕ ಗೆಲುವು, ಮುಂದಿನ ಅಫ್ಗನ್ ಪೀಳಿಗೆಗೆ ಕ್ರಿಕೆಟ್ ಆಟದತ್ತ ಆಸಕ್ತಿ ಬೆಳೆಸಲು ಸ್ಫೂರ್ತಿದಾಯಕವಾಗಲಿದೆ ಎಂದು ಅಫ್ಗಾನಿಸ್ತಾನ ತಂಡದ ಕೋಚ್ ಜೊನಾಥನ್ ಟ್ರಾಟ್ ಹೆಮ್ಮೆಯಿಂದ ಪ್ರತಿಕ್ರಿಯಿಸಿದ್ದಾರೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಆಘಾತಕಾರಿ ಸೋಲುಣಿಸಿದ ಹತ್ತು ದಿನಗಳ ಒಳಗೇ ಅಫ್ಗಾನಿಸ್ತಾನ ತಂಡ, ಪಾಕಿಸ್ತಾನ ತಂಡದ ಮೇಲೂ ಏಕದಿನ ಮಾದರಿಯಲ್ಲಿ ಮೊದಲ ಬಾರಿ ಜಯಗಳಿಸಿದೆ. ಅದೂ ಎಂಟು ವಿಕೆಟ್‌ಗಳ ಗೆಲುವು.

‘ಮೊದಲು ಇಂಗ್ಲೆಂಡ್ ಮೇಲೆ ಗೆಲುವು. ಈಗ ಪಾಕ್ ಮೇಲೆ ಗೆಲುವು. ದೇಶವು ಹೊಂದಿರುವ ಕ್ರಿಕೆಟ್ ಪ್ರತಿಭೆಗಳ ಪ್ರಮಾಣವನ್ನು ಇದು ಮತ್ತೊಮ್ಮೆ ತೋರಿಸಿದೆ’ ಎಂದು ಟ್ರಾಟ್ ಹೇಳಿದರು.

‘ಈ ಗೆಲುವು ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಮೂಡಿಸಿದೆ. ಮುಂದಿನ ಪಂದ್ಯಗಳನ್ನೂ ನಾವು ಆತ್ಮವಿಶ್ವಾಸದಿಂದ ಎದುರು ನೋಡಲು ಸಾಧ್ಯವಾಗಲಿದೆ’ ಎಂದು ಇಂಗ್ಲೆಂಡ್ ಮಾಜಿ ಆಟಗಾರ ವಿಶ್ವಾಸ ವ್ಯಕ್ತಪಡಿಸಿದರು.

‘ನಾವು ಚೆನ್ನಾಗಿ ಆಡಿದೆವು. ಈ ಆಟಗಾರರು ಪರಿಶ್ರಮ ಪಡುತ್ತಾರೆ. ಗೆಲುವಿಗೆ ಯೋಗ್ಯರಾಗಿದ್ದಾರೆ’ ಎಂದು ಶ್ಲಾಘಿಸಿದರು.

ಈ ಗೆಲುವಿನಿಂದ ಪಾಯಿಂಟ್ ಪಟ್ಟಿಯ ತಳದಲ್ಲಿದ್ದ ಅಫ್ಗಾನ್ ಈಗ ಆರನೇ ಸ್ಥಾನಕ್ಕೆ ಜಿಗಿದಿದೆ.

‘ನಾವು ಆಟದಲ್ಲಿ ಸ್ಥಿರತೆ ಮೂಡಿಸಬೇಕಾಗಿದೆ. ಎಲ್ಲಿ ಸುಧಾರಣೆಯಾಗಬೇಕಿದೆ ಎಂಬುದು ಕಂಡುಕೊಂಡಿರುವ ಕಾರಣ ಆ ಕಡೆ ಗಮನವಿಟ್ಟು ಪರಿಶ್ರಮ ಹಾಕಿದರೆ ಪ್ರಬಲ ಎದುರಾಳಿಗಳನ್ನು ಸೋಲಿಸಲು ಸಾಧ್ಯವಿದೆ’ ಎಂದರು.

ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ, 18 ವರ್ಷದ ಸ್ಪಿನ್ನರ್ ನೂರ್ ಅಹ್ಮದ್ ಅವರ ಬಗ್ಗೆಯೂ ಟ್ರಾಟ್ ಮೆಚ್ಚುಗೆಯ ಮಾತುಗಳನ್ನಾಡಿದರು.

‘ದಿ ಲಾರ್ಡ್ಸ್ ಆಫ್ ವಾಂಖೆಡೆ’ ಪುಸ್ತಕ ಲೋಕಾರ್ಪಣೆ

‘1983ರ ಗೆಲುವು ಮಹತ್ವದ ತಿರುವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘1983ರ ಏಕದಿನ ವಿಶ್ವಕಪ್ ಟೂರ್ನಿಯ ಗೆಲುವು ಭಾರತದ ಕ್ರಿಕೆಟ್‌ಗೆ ಮಹತ್ವದ ತಿರುವು. ಪ್ರಶಸ್ತಿ ಗೆದ್ದ ನಂತರ ಈ ಕ್ರೀಡೆಯನ್ನು ಜನರು ನೋಡುವ ದೃಷ್ಟಿಕೋನವೇ ಬದಲಾಯಿತು’ ಎಂದು 1983ರ ವಿಶ್ವಕಪ್ ವಿಜೇತ ಭಾರತ ತಂಡದಲ್ಲಿದ್ದ ದಿಲೀಪ್ ವೆಂಗ್‌ಸರ್ಕರ್ ಹೇಳಿದರು.

ಬೆಂಗಳೂರಿನ ಸೆಂಚುರಿ ಕ್ಲಬ್‌ನಲ್ಲಿ ಮಂಗಳವಾರ ಮಾಜಿ ಕ್ರಿಕೆಟಿಗ ಡಬ್ಲ್ಯು.ವಿ. ರಾಮನ್ ಮತ್ತು ಕ್ರೀಡಾ ಪತ್ರಕರ್ತ ಆರ್. ಕೌಶಿಕ್ ಅವರ ‘ದಿ ಲಾರ್ಡ್ಸ್ ಆಫ್ ವಾಂಖೆಡೆ’ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕ್ರಿಕೆಟ್‌ನ ಒಳನೋಟ ಮತ್ತು ಅನನ್ಯ ದ್ವಂದ್ವ ದೃಷ್ಟಿಕೋನದ ಮೇಲೆ ಬೆಳಕು ಚೆಲ್ಲುವ ‘ದಿ ಲಾರ್ಡ್ಸ್ ಆಫ್ ವಾಂಖೆಡೆ’ ಪುಸ್ತಕವು ಕ್ರೀಡಾ ಅಭಿಮಾನಿಗಳಿಗೆ ಹಳೆಯ ನೆನಪುಗಳನ್ನು ಮೆಲುಕು ಹಾಕಿಸುತ್ತದೆ. ಮಾತ್ರವಲ್ಲ, ಸಂಗ್ರಹ ಯೋಗ್ಯವಾಗಿದೆ’ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಕ್ರಿಕೆಟಿಗ ವಿ.ವಿ.ಎಸ್. ಲಕ್ಷ್ಮಣ್ ಮಾತನಾಡಿ, ‘ಒಂದು ತಂಡವಾಗಿ ನಾವು ಹೇಗೆ ಸ್ಥಿರ ಪ್ರದರ್ಶನ ನೀಡುತ್ತೇವೆ ಎಂಬುದು ಮುಖ್ಯವಾಗುತ್ತದೆ. 2001ರಲ್ಲಿ ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ಮಹತ್ವದ ಗೆಲುವು ಸಾಧಿಸಿದ ನಂತರ ಭಾರತ ತಂಡವು ಸ್ಥಿರ ಪ್ರದರ್ಶನ ನೀಡುವಲ್ಲಿ ಯಶಸ್ವಿಯಾಗಿದೆ. 2009ರಲ್ಲಿ ತಂಡವು ಟೆಸ್ಟ್ ಕ್ರಿಕೆಟ್‌ನಲ್ಲಿ ಅಗ್ರಸ್ಥಾನಕ್ಕೆ ಏರಿದ್ದು ಅವಿಸ್ಮರಣೀಯ ಕ್ಷಣ’ ಎಂದು ಹೇಳಿದರು.

ನಾಲ್ಕು ದಶಕಗಳ ಕಾಲ ಕ್ರಿಕೆಟಿಗರಾಗಿ, ಕೋಚ್ ಆಗಿ ಅನುಭವ ಹೊಂದಿರುವ ರಾಮನ್ ಮತ್ತು 30 ವರ್ಷ ಕ್ರೀಡಾ ಪತ್ರಕರ್ತರಾಗಿ ಅನುಭವ ಹೊಂದಿರುವ ಕೌಶಿಕ್ ಅವರು ಭಾರತದಲ್ಲಿ ಕ್ರಿಕೆಟ್‌ನ ಬೆಳವಣಿಗೆಯ ಕುರಿತು ಆಳವಾದ ಅಧ್ಯಯನ ನಡೆಸಿ ಕೃತಿಯನ್ನು ಹೊರತಂದಿದ್ದಾರೆ. ವಿಶೇಷವಾಗಿ 1983 ಮತ್ತು 2011ರ ಏಕದಿನ ಕ್ರಿಕೆಟ್ ವಿಶ್ವಕಪ್ ಗೆಲುವಿನ ಜತೆಗೆ ಭಾರತ ಕ್ರಿಕೆಟ್ ತಂಡದ ಏರಿಳಿತಗಳ ಬಗ್ಗೆ ಅವರು ಬೆಳಕು ಚೆಲ್ಲಿದ್ದಾರೆ.

‘ದಿ ಲಾರ್ಡ್ಸ್ ಆಫ್ ವಾಂಖೆಡೆ’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ (ಎಡದಿಂದ) ಆರ್. ಕೌಶಿಕ್, ಡಬ್ಲ್ಯು.ವಿ. ರಾಮನ್, ಕ್ರಿಕೆಟಿಗರಾದ ವೆಂಕಟೇಶ್ ಪ್ರಸಾದ್, ದಿಲೀಪ್ ವೆಂಗ್‌ಸರ್ಕರ್, ವಿ.ವಿ.ಎಸ್. ಲಕ್ಷ್ಮಣ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

> **1983ರ ವಿಶ್ವಕಪ್ ಗೆದ್ದ ಬಳಿಕ ಭಾರತ ಕ್ರಿಕೆಟ್ ತಂಡದ ಮೇಲೆ ಅಭಿಮಾನಿಗಳಿಗೆ ನಿರೀಕ್ಷೆಯೂ ಅಧಿಕವಾಯಿತು. ಅವರ ನಿರೀಕ್ಷೆಗಳಿಗೆ ತಕ್ಕಂತೆ ಆಡುವುದು ಸವಾಲಾಗಿತ್ತು.**
> **ದಿಲೀಪ್ ವೆಂಗ್‌ಸರ್ಕರ್**
> ಮಾಜಿ ಕ್ರಿಕೆಟಿಗ

ಎರಡನೇ ಸುತ್ತಿಗೆ ಸಾತ್ವಿಕ್– ಚಿರಾಗ್

ರೆನ್, ಫ್ರಾನ್ಸ್ (ಪಿಟಿಐ): ವಿಶ್ವದ ಅಗ್ರ ರ‍್ಯಾಂಕ್‌ನ ಜೋಡಿ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಫ್ರೆಂಚ್ ಓಪನ್ ಸೂಪರ್ ಸೀರಿಸ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಪುರುಷರ ಡಬಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಜೋಡಿ 35 ನಿಮಿಷಗಳ ಹೋರಾಟದಲ್ಲಿ 21–13, 21–13 ರಿಂದ ಲೂಕಾಸ್ ಕೊರ್ವಿ– ರೊನನ್ ಲೆಬರ್ ಅವರನ್ನು ಮಣಿಸಿತು.

ಮುಂದಿನ ಸುತ್ತಿನಲ್ಲಿ ಅವರು ಮೂರು ಬಾರಿಯ ವಿಶ್ವ ಚಾಂಪಿಯನ್ ಆಗಿರುವ ಇಂಡೊನೇಷ್ಯಾದ ಮೊಹಮ್ಮದ್ ಅಹ್ಸನ್ ಮತ್ತು ಹೆಂದ್ರಾ ಸತಿಯವಾನ್ ವಿರುದ್ಧ ಹಣಾಹಣಿ ನಡೆಸುವರು.

ಸಿಂಧುಗೆ ಜಯ: ಪಿ.ವಿ. ಸಿಂಧು ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ12–21, 21–18, 21–15 ರಿಂದ ಏಳನೇ ಶ್ರೇಯಾಂಕದ ಆಟಗಾರ್ತಿ ಇಂಡೊನೇಷ್ಯಾದ ಗ್ರೆಗೊರಿಯಾ ಮರಿಸ್ಕಾ ಅವರನ್ನು ಪರಾಭವಗೊಳಿಸಿದರು.

ಸರಬ್ಜೋತ್‌ಗೆ ಒಲಿಂಪಿಕ್ಸ್ ಕೋಟಾ

ನವದೆಹಲಿ (ಪಿಟಿಐ): ಭಾರತದ ಸರಬ್ಜೋತ್ ಸಿಂಗ್ ಅವರು ದಕ್ಷಿಣ ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಪುರುಷರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಜೊತೆಗೇ ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಗಿಟ್ಟಿಸಿದರು.

ಸರಬ್ಜೋತ್ 221.1 ಪಾಯಿಂಟ್ಸ್ ಕಲೆಹಾಕಿದರು. ಚೀನಾದ ಝೂಂಗ್ ಯಿಫಾನ್ (243.7 ಪಾಯಿಂಟ್ಸ್) ಚಿನ್ನ ಗೆದ್ದರೆ ಅದೇ ದೇಶದ ಲಿಯು ಜಿನ್ಯಾವೊ (242.1) ಬೆಳ್ಳಿ ಪದಕ ಪಡೆದರು. ಶೂಟಿಂಗ್‌ನಲ್ಲಿ ಕೋಟಾ ಸ್ಥಾನ ಕಾದಿರಿಸಿದರ ಅವರು ಭಾರತದ ಎಂಟನೇ ಸ್ಪರ್ಧಿ. ಪಿಸ್ತೂಲ್ ವಿಭಾಗದಲ್ಲಿ ಮೊದಲನೆಯವರು.

ಚೀನಾ ಎರಡು ಸ್ಥಾನ ಪಡೆದ ಕಾರಣ ಇನ್ನೊಂದು ಸ್ಥಾನಕ್ಕೆ ಸರಬ್ಜೋತ್ ಜೊತೆ ಕೊರಿಯಾ ಸ್ಪರ್ಧಿ ನಡುವೆ ಪೈಪೋಟಿ ಏರ್ಪಟಿತು. ಮೊದಲ ಐದು ಪ್ರಯತ್ನಗಳ ನಂತರ ಅವರು ಮೊದಲ ಸ್ಥಾನದಲ್ಲಿದ್ದರು. ಆದರೆ ಚೀನಾ ಸ್ಪರ್ಧಿಗಳು ಮುನ್ನಡೆ ಸಾಧಿಸಿದ ನಂತರ ಅವರಿಗೆ ಪೈಪೋಟಿ ಎದುರಾಗಲಿಲ್ಲ.

ಮಹಿಳೆಯರ ವಿಭಾಗದ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯಲ್ಲಿ ಭಾರತದ ಐವರು ಕಣದಲ್ಲಿದ್ದರೂ, ಯಾರೂ ಮೊದಲ ಎಂಟರಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿ ಆಗಲಿಲ್ಲ.

ಕರಾಟೆ: ಸುಜಲ್‌ಗೆ ಚಿನ್ನದ ಪದಕ

ಬೆಂಗಳೂರು: ಸುಜಲ್ ಜೆ. ಶೆಟ್ಟಿ ಅವರು ಇಂಡೊನೇಷ್ಯಾದ ಬಾಲಿಯಲ್ಲಿ ನಡೆದ ಬಾಲಿ ಬದುಂಗ್ ಓಪನ್ ಇಂಟರ್‌ನ್ಯಾಷನಲ್ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ (21 ವರ್ಷದೊಳಗಿನವರ) ಕಟಾ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

21 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ಸಂದೀಪ್ ಚಾಂಪಿಯನ್ ಆದರು. ಜೂನಿಯರ್ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಕ್ರಮವಾಗಿ ಶ್ರೀಜಿತ್ ಮತ್ತು ದರ್ಶಿನಿ ಚಿನ್ನ ಗೆದ್ದರೆ, ಸಬ್ ಜೂನಿಯರ್ ಬಾಲಕರ ವಿಭಾಗದಲ್ಲಿ ಜ್ಞಾನ್ ಸಿಂಗ್ ಬೆಳ್ಳಿ ತಮ್ಮದಾಗಿಸಿಕೊಂಡರು.

ಬಾಲಕರ ಕೆಡೆಟ್ ಕಟಾ ವಿಭಾಗದಲ್ಲಿ ಸಾಯಿ ಸಂದೇಶ್ ಮತ್ತು ಸಬ್ ಜೂನಿಯರ್ ಬಾಲಕರ ವಿಭಾಗದಲ್ಲಿ ಸಚಿನ್ ಬೆಳ್ಳಿ ಗೆದ್ದರು. ಅವರಿಗೆ ಡೊಮಿನಿಕ್ ಸವಿಯೊ ತರಬೇತಿ ನೀಡಿದ್ದರು.

ಅ.19ರಿಂದ 22ರ ವರೆಗೆ ನಡೆದ ಕೂಟದಲ್ಲಿ 25ಕ್ಕೂ ಅಧಿಕ ದೇಶಗಳ 3,500 ಕರಾಟೆಪಟುಗಳು ಭಾಗವಹಿಸಿದ್ದರು.

ಚಿನ್ನದ ಪದಕದೊಂದಿಗೆ (ಎಡದಿಂದ) ಸಚಿನ್ ಶೆಣೈ, ಸಾಯಿ ಸಂದೇಶ್, ಜ್ಞಾನ್ ಸಿಂಗ್ ಮತ್ತು ಸುಜಲ್ ಜೆ. ಶೆಟ್ಟಿ

ಟೆನಿಸ್: ರಾಮ್–ಪುರವ್‌ಗೆ ಪ್ರಯಾಸದ ಗೆಲುವು

• ಜಿ.ಶಿವಕುಮಾರ

ದಾವಣಗೆರೆ: ವೇಗದ ಸರ್ವ್‌ಗಳು ಹಾಗೂ ಆಕರ್ಷಕ ರಿಟರ್ನ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ ಭಾರತದ ರಾಮಕುಮಾರ್ ರಾಮನಾಥನ್ ಹಾಗೂ ಪುರವ್ ರಾಜಾ, ‘ಟೈ ಬ್ರೇಕರ್’ನಲ್ಲಿ ಪುಟಿದೆದ್ದು ಗೆಲುವು ಒಲಿಸಿಕೊಂಡರು.

ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಮಂಗಳವಾರ 6-3, 7-6 ರಿಂದ ಭಾರತದ ದೇವ್ ಜೇವಿಯಾ ಮತ್ತು ಮಲೇಷ್ಯಾದ ಮಿತ್ಸುಕಿ ವೀ ಕಾಂಗ್ ಲಿಯೊಂಗ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಅಗ್ರ ಶ್ರೇಯಾಂಕ ಹೊಂದಿರುವ ರಾಮ್ ಹಾಗೂ ಪುರವ್‌ಗೆ ದೇವ್ ಮತ್ತು ಮಿತ್ಸುಕಿ ತೀವ್ರ ಪೈಪೋಟಿ ಒಡ್ಡಿದರು. ಮೊದಲ ಸೆಟ್‌ನ ಆರಂಭದ ಆರು ಗೇಮ್‌ಗಳಲ್ಲಿ ಉಭಯ ಜೋಡಿ ಸಮಬಲದಿಂದ ಸೆಣಸಿತು. 7ನೇ ಗೇಮ್‌ನಲ್ಲಿ ಸರ್ವ್ ಉಳಿಸಿಕೊಂಡ ರಾಮ್ ಹಾಗೂ ಪುರವ್, ಮರು ಗೇಮ್‌ನಲ್ಲಿ ಎದುರಾಳಿಗಳ ಸರ್ವ್ ಮುರಿದು 5–3ರಿಂದ ಮುನ್ನಡೆ ಪಡೆದರು. 9ನೇ ಗೇಮ್‌ನಲ್ಲಿ ರಾಮ್‌ಕುಮಾರ್ ಸಿಡಿಸಿದ ಶರವೇಗದ ಸರ್ವ್‌ಗಳಿಗೆ ಎದುರಾಳಿ ಆಟಗಾರರು ನಿರುತ್ತರರಾದರು.

ರಾಮ್ ಹಾಗೂ ಪುರವ್ ಎರಡನೇ ಸೆಟ್‌ನ ಮೊದಲ ಗೇಮ್‌ನಲ್ಲಿ ಎದುರಾಳಿಗಳ ಸರ್ವ್ ಬ್ರೇಕ್ ಮಾಡಿದ್ದರಿಂದ ಗೆಲುವು ಸುಲಭವೆಂದೇ ಭಾವಿಸಲಾಗಿತ್ತು. ಆದರೆ ದೇವ್ ಮತ್ತು ಮಿತ್ಸುಕಿ, ಫೀನಿಕ್ಸ್‌ನಂತೆ ಪುಟಿದೆದ್ದರು. ಒಂದು ಹಂತದಲ್ಲಿ 6–5ರಿಂದ ಮುನ್ನಡೆ ಗಳಿಸಿ ತಿರುಗೇಟು ನೀಡುವ ಭರವಸೆ ಮೂಡಿಸಿದ್ದರು. 12ನೇ ಗೇಮ್‌ನಲ್ಲಿ ಪುರವ್ ಸರ್ವ್ ಉಳಿಸಿಕೊಂಡಿದ್ದರಿಂದ ಸೆಟ್ ‘ಟೈ ಬ್ರೇಕರ್’ಗೆ ಸಾಗಿತು. ಶುರುವಿನಲ್ಲಿ ಪ್ರತಿರೋಧ ಎದುರಿಸಿದ ಪುರವ್ ಹಾಗೂ ರಾಮ್ ನಂತರ ಮೇಲುಗೈ ಸಾಧಿಸಿದರು.

ಡಬಲ್ಸ್‌ನಲ್ಲಿ ‘ವೈಲ್ಡ್ ಕಾರ್ಡ್’ ಅರ್ಹತೆ ಗಳಿಸಿರುವ ಕರ್ನಾಟಕದ ಮನೀಷ್ ಗಣೇಶ್ ಹಾಗೂ ಸೂರಜ್ ಆರ್. ಪ್ರಬೋಧ್ 7–6, 6–4ರಿಂದ ಕಬೀರ್ ಹನ್ಸ್ ಮತ್ತು ಜಗಮೀತ್ ಸಿಂಗ್ ಅವರನ್ನು ಸೋಲಿಸಿ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟರು.

ಸ್ಪಿನ್ ದಿಗ್ಗಜನಿಗೆ ಕನ್ನಡಿಗ ಸುನಿಲ್ ಜೋಶಿ ನುಡಿನಮನ

ಶಿಸ್ತು, ಸ್ಪಷ್ಟ ನಿಲುವಿನ ಬೇಡಿ ಸರ್...

● ಸುನಿಲ್ ಜೋಶಿ

ಸೋಮವಾರ ಬಿಷನ್ ಸಿಂಗ್ ಬೇಡಿ ಸರ್ ನಿಧನ ಸುದ್ದಿ ಕೇಳಿದಾಗಿನಿಂದಲೂ ದೇಹ ಮಾತ್ರ ಇಲ್ಲಿದೆ. ಮನಸ್ಸಿನ ತುಂಬ ಅವರದ್ದೇ ಬಿಂಬಗಳು. ಅವರ ಒಡನಾಟದಲ್ಲಿ ಕಲಿತದ್ದು, ಇನ್ನೂ ಕಲಿಯದೇ ಉಳಿದಿದ್ದು ಎಲ್ಲವೂ ಸಾಗರದ ಅಲೆಗಳಂತೆ ಅಪ್ಪಳಿಸುತ್ತಿವೆ.

ಅವರಲ್ಲಿ ಒಬ್ಬ ಅದ್ಭುತ ಕ್ರಿಕೆಟಿಗ ಇದ್ದ. ಅದಕ್ಕೂ ಮಿಗಿಲಾಗಿ ಅತ್ಯುತ್ತಮ ವ್ಯಕ್ತಿತ್ವ ಅವರದ್ದಾಗಿತ್ತು. ನೇರ ನಿಷ್ಠುರ, ಸ್ನೇಹಪರ, ಬದ್ಧತೆ, ಕೆಚ್ಚೆದೆಯ ಹೋರಾಟಗಾರ ಮತ್ತು ಶಿಸ್ತಿನ ವ್ಯಕ್ತಿ ಅವರಾಗಿದ್ದರು. ಹೊಗಳಿಕೆ ಇರಲಿ, ಟೀಕೆ ಇರಲಿ ಯಾರಿಗೆ ಹೇಳಬೇಕೋ ಅವರಿಗೇ ಹೇಳುವ ಗಟ್ಟಿತನವಿತ್ತು. ತೀರ್ಮಾನ ಕೈಗೊಳ್ಳುವಲ್ಲಿ ಸ್ಪಷ್ಟತೆ ಇತ್ತು. ಅದೇ ಅವರನ್ನು ಮಹಾನ್ ವ್ಯಕ್ತಿಯನ್ನಾಗಿಸಿತು.

ಅವರ ನನ್ನ ಒಡನಾಟ ಸುಮಾರು 25 ವರ್ಷಗಳಷ್ಟು ಹಳೆಯದು. ಎಡಗೈ ಸ್ಪಿನ್ನರ್ ಆಗಿರುವ ನಾನು ಬಾಲ್ಯದಿಂದಲೂ ಅವರ ಆಟದ ಬಗ್ಗೆ ಓದುತ್ತ, ಚಿತ್ರ, ವಿಡಿಯೊಗಳಲ್ಲಿ ನೋಡುತ್ತ ಪ್ರೇರಣೆಗೊಂಡವನು. ನನ್ನ ವೃತ್ತಿಜೀವನಕ್ಕೆ ತಿರುವು ಸಿಗಲು ಅವರ ಮಾರ್ಗದರ್ಶನ ಕಾರಣವಾಗಿದೆ. 24 ವರ್ಷಗಳ ಹಿಂದೆ ನೈರೋಬಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ (10–6–6–5) ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದೆ. ಆ ಟೂರ್ನಿಗೆ ತೆರಳುವ ಮುನ್ನ ಅವರೊಂದಿಗೆ ನಡೆಸಿದ ಮಾತುಕತೆ, ಪಡೆದ ಮಾರ್ಗದರ್ಶನಗಳು ನನ್ನ ಆತ್ಮವಿಶ್ವಾಸ ಹೆಚ್ಚಿಸಿದ್ದವು.

ಇದಾದ ನಂತರ ಇಂಗ್ಲಿಷ್ ಪತ್ರಿಕೆಯೊಂದಕ್ಕೆ ತಾವು ಬರೆಯುತ್ತಿದ್ದ ಅಂಕಣದಲ್ಲಿ ನನ್ನ ಬಗ್ಗೆ ಸವಿಸ್ತಾರವಾಗಿ ಉಲ್ಲೇಖಿಸಿದ್ದರು. ತಮ್ಮ ಮಗನಿಂದ ಸಿಗದ ಸಂಭ್ರಮ ನನ್ನಿಂದ ಸಿಕ್ಕಿತು ಎಂದೂ ಹೇಳಿದ್ದರು. ಅದಕ್ಕಿಂತ ದೊಡ್ಡ ಗೌರವ ನನಗೆ ಇನ್ನೊಂದಿಲ್ಲ.

ನಾನು ಆಟಗಾರನಾಗಿ ಅವರೊಂದಿಗೆ ಬಹಳಷ್ಟು ಪ್ರವಾಸ ಮಾಡಿದ್ದೆ. ಕಡುಶಿಸ್ತಿನ ವ್ಯಕ್ತಿತ್ವ ಅವರದ್ದು. ಸಮಯ ಪರಿಪಾಲನೆಯಲ್ಲಿ ಒಂದೂ ಸೆಕೆಂಡು ಆಚೆ ಇಚೆ ಇಲ್ಲ. ಸಿಖ್ ಧರ್ಮದಲ್ಲಿ 'ನಿಮ್ಮ ಪಾಲಿನಲ್ಲಿ ಏನಿದೆಯೋ ಅದನ್ನು ನಿಷ್ಠೆಯಿಂದ ಮಾಡಿ. ಪರರಿಂದ ಏನೂ ಬಯಸಬೇಡಿ' ಎಂಬ ಹಿತನುಡಿ ರೂಢಿಯಲ್ಲಿದೆ. ಅವರು ಆ ನುಡಿಯಂತೆ ಬಾಳಿದರು. ನಮಗೂ ಅದನ್ನೇ ಕಲಿಸಿಕೊಟ್ಟರು. ಅವರಿಂದ ಕಲಿತ ಶಿಸ್ತು, ಸ್ನೇಹಪರತೆ, ಬದ್ಧತೆಗಳು ಇವತ್ತಿಗೂ ನನಗೆ ದಾರಿದೀಪ.

ಎಷ್ಟೇ ಖಡಕ್ ವ್ಯಕ್ತಿತ್ವ ಇದ್ದರೂ ಅದು ಕ್ರಿಕೆಟ್ ಅಂಗಳದಲ್ಲಿ ಮಾತ್ರ. ಬೌಂಡರಿಗೆರೆಯಾಚೆ ಬಂದರೆ ಹಿರಿಯ, ಕಿರಿಯರೆಲ್ಲರಿಗೂ ಆಪ್ತವಾಗಿರುತ್ತಿದ್ದರು. ಇಂಗ್ಲೆಂಡ್ ಪ್ರವಾಸದಲ್ಲಿ ಅವರು ನಮ್ಮೊಂದಿಗೆ ಇದ್ದರು. ತಮ್ಮ ಕೋಣೆಯಲ್ಲಿಯೇ ರುಚಿಕಟ್ಟಾದ ಅಡುಗೆ ಮಾಡಿ ಬಡಿಸುತ್ತಿದ್ದರು. ವಿದೇಶದಲ್ಲಿಯೂ ಭಾರತೀಯ ಊಟದ ಕೊರಗು ಕಾಡದಂತೆ ಮುತುವರ್ಜಿ ವಹಿಸಿದ್ದರು.

ಆಟ ಅಥವಾ ಆಟಗಾರರ ಹಿತಾಸಕ್ತಿಯ ಮಾತು ಬಂದಾಗ ಬೇಡಿ ಸರ್ ಯಾರೊಂದಿಗೆ ಬೇಕಾದರೂ ಹೋರಾಟ ಮಾಡುತ್ತಿದ್ದರು. ಎಷ್ಟೇ ದೊಡ್ಡ ವ್ಯಕ್ತಿ ಇರಲಿ, ಆಡಳಿತಾಧಿಕಾರಿಗಳಿರಲಿ ನಿಷ್ಠುರವಾದಿಯಾಗಿದ್ದರು. ಕ್ರಿಕೆಟ್ ಮತ್ತು ಕ್ರಿಕೆಟಿಗರಿಗೆ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಅವರ ಪಾತ್ರ ದೊಡ್ಡದು. ಅಪ್ಪಟ ನಾಯಕತ್ವದ ಗುಣ, ಯಾರೊಂದಿಗೂ ರಾಜಿ ಆಗದ ಸ್ವಭಾವ ಅವರದ್ದು.

ಪ್ರತಿದಿನ 8–10 ಇಂಗ್ಲಿಷ್ ಪತ್ರಿಕೆಗಳನ್ನು ಓದುವ ಹವ್ಯಾಸ ಅವರಿಗೆ ಇತ್ತು. ಆಟಗಾರರು ಆಟಕ್ಕಷ್ಟೆ ಅಲ್ಲ, ವಿಶ್ವದ ಆಗುಹೋಗುಗಳ ಅರಿವು ಕೂಡ ಇಟ್ಟುಕೊಂಡಿರಬೇಕು. ಜ್ಞಾನಾರ್ಜನೆ ಮುಖ್ಯ ಎಂಬುದು ಅವರ ಸಿದ್ಧಾಂತವಾಗಿತ್ತು. ತಮ್ಮ ಸಹ ಕ್ರಿಕೆಟಿಗರು ಮತ್ತು ಜೂನಿಯರ್ ಆಟಗಾರರಿಗೂ ಪತ್ರಿಕೆಗಳನ್ನು ಪ್ರತಿದಿನ ಓದುವಂತೆ ಸೂಚಿಸುತ್ತಿದ್ದರು.

ನಾನು ಆಟದಿಂದ ನಿವೃತ್ತಿ ಪಡೆದ ನಂತರವೂ ದೂರವಾಣಿಯಲ್ಲಿ ಸಂಪರ್ಕದಲ್ಲಿರುವುದು ರೂಢಿಯಾಗಿತ್ತು. ದೆಹಲಿಗೆ ಹೋದರೆ ಅವರ ಮನೆಯಲ್ಲಿ 5–6 ಗಂಟೆ ಕಳೆಯುತ್ತಿದ್ದೆ. ಹರಟೆ, ನಗು ಮತ್ತು ಕ್ರಿಕೆಟ್ ಕುರಿತ ಮಾತುಗಳು ನಮ್ಮ ನಡುವೆ ನಡೆಯುತ್ತಿದ್ದವು. ನನ್ನ ಕೆಲಸವನ್ನು ಉತ್ಕೃಷ್ಟಗೊಳಿಸುವ ಸಲಹೆಗಳನ್ನು ನೀಡುತ್ತಿದ್ದರು. ಅವರ ಮೊದಲ ಭೇಟಿಯಿಂದ ತೀರಾ ಇತ್ತೀಚೆಗೆ ತೀವ್ರ ಅನಾರೋಗ್ಯಕ್ಕೆ ಒಳಗಾಗುವವರೆಗೂ ನಿಕಟ ಸಂಪರ್ಕ ಇತ್ತು. ಆದರೆ ಬೇಡವಾಗಿದ್ದ ಸುದ್ದಿ ಬಂದೇ ಬಿಟ್ಟಿತು. ಸರ್ ನಮ್ಮನ್ನು ಅಗಲಿದ್ದನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಸೈಯದ್ ಮುಷ್ತಾಕ್ ಅಲಿ ಟೂರ್ನಿಗಾಗಿ ಡೆಹ್ರಾಡೂನ್‌ನಲ್ಲಿದ್ದೇನೆ. ಅವರ ಅಂತಿಮ ದರ್ಶನಕ್ಕೆ ಹೋಗಲು ಸಾಧ್ಯ ಆಗುತ್ತಿಲ್ಲ.

(ಸುನಿಲ್ ಜೋಶಿ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಬೇಡಿ ಅವರ ಬಳಿ ಕೆಲಕಾಲ ತರಬೇತಿ ಪಡೆದಿದ್ದರು)

ನಿರೂಪಣೆ: ಗಿರೀಶ ದೊಡ್ಡಮನಿ

ಬಿಷನ್ ಸಿಂಗ್ ಬೇಡಿ ಅವರಿಗೆ 59ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಕೇಕ್ ತಿನ್ನಿಸಿದ್ದ ಸುನಿಲ್ ಜೋಶಿ –ಪ್ರಜಾವಾಣಿ ಸಂಗ್ರಹ ಚಿತ್ರ

'ಸಹ ಆಟಗಾರನಿಗಿಂತ ಎತ್ತರದ ಸ್ಥಾನದಲ್ಲಿದ್ದ ಬೇಡಿ'

ಬೆಂಗಳೂರು (ಪಿಟಿಐ): 'ಬೇಡಿ ಅವರು ಭಾರತ ತಂಡದಲ್ಲಿ ನನ್ನ ಪಾಲಿಗೆ ಬರೇ ಸಹ ಆಟಗಾರನಾಗಿರಲಿಲ್ಲ. ಅದಕ್ಕಿಂತ ಎತ್ತರದ ಸ್ಥಾನವನ್ನು ಪಡೆದುಕೊಂಡಿದ್ದರು. ಆತ್ಮೀಯ ಮಿತ್ರ. ಅಷ್ಟೇ ಅಲ್ಲ, ಅವರ ಜೊತೆ ನಾನು ಯಾವಾಗ ಬೇಕಾದರೂ ಕರೆ ಮಾಡಿ ಮಾತನಾಡುವಷ್ಟು ನಿಕಟವಾಗಿದ್ದೆ.....'

– ಹೀಗೆಂದು ಪ್ರತಿಕ್ರಿಯಿಸಿದವರು ಅವರ ಜೊತೆ ರಾಷ್ಟ್ರೀಯ ತಂಡದಲ್ಲಿ ದೀರ್ಘ ಕಾಲ ಸ್ಪಿನ್ ದಾಳಿಯ ಭಾಗವಾಗಿದ್ದ ಕರ್ನಾಟಕದ ಬಿ.ಎಸ್.ಚಂದ್ರಶೇಖರ್ ಅವರು. ದೆಹಲಿಯ ಸ್ಪಿನ್ ಸರದಾರನ ಸಾಧನೆಯನ್ನು ಸಮೀಪದಿಂದ ಬಲ್ಲವರು 'ಚಂದ್ರು'.

'ಅವರು ಅದ್ಭುತ ಬೌಲರ್. ಕ್ರೀಸ್‌ನ ಬಳಕೆ ಮತ್ತು ಅವರ ಆ್ಯಂಗಲ್‌ಗಳು (ಕೋನ) ಬೆರಗು ಮೂಡಿಸುವಂತಿದ್ದವು. ಅವರನ್ನು ಎದುರಿಸುವುದು ಹೇಗೆಂಬ ಯೋಚನೆಯಲ್ಲೇ ಬ್ಯಾಟ್ಸಮನ್ನರು ನರ್ವಸ್ ಆಗುತ್ತಿದ್ದರು. ಎದುರಾಳಿ ಆಟಗಾರರ ಲಯ ತಪ್ಪಿಸಲು ಅವರು ಚೆಂಡಿಗೆ ಫ್ಲೈಟ್ ಸೇರಿದಂತೆ ಬೇರೆ ಬೇರೆ ತಂತ್ರಗಳನ್ನು ಬಳಸುತ್ತಿದ್ದರು' ಎಂದು ಚಂದ್ರಶೇಖರ್ ಸೋಮವಾರ ನೆನಪಿಸಿಕೊಂಡರು.

ಸ್ಪಿನ್ ಮಾಂತ್ರಿಕ ಬಿಷನ್ ಬೇಡಿ ಇನ್ನಿಲ್ಲ

ಬೌಲಿಂಗ್ ರೀತಿ ಹರಿತ ಮಾತುಗಳಿಗೆ ಹೆಸರಾಗಿದ್ದ ಭಾರತದ ಕ್ರಿಕೆಟಿಗ

ನವದೆಹಲಿ (ಪಿಟಿಐ/ ಎಎಫ್‌ಪಿ): ನೇರ ಮತ್ತು ನಿಷ್ಠುರ ಮಾತುಗಳಿಗೆ ಹೆಸರಾಗಿದ್ದ ಭಾರತದ ಸ್ಪಿನ್ ದಿಗ್ಗಜ ಬಿಷನ್ ಸಿಂಗ್ ಬೇಡಿ (77) ಅವರು ದೀರ್ಘಕಾಲದ ಅನಾರೋಗ್ಯದಿಂದ ಸೋಮವಾರ ಇಲ್ಲಿ ನಿಧನರಾದರು.

ಅಮೃತಸರದಲ್ಲಿ 1946ರಲ್ಲಿ ಜನಿಸಿದ ಎಡಗೈ ಸ್ಪಿನ್ ಮಾಂತ್ರಿಕ ಬೇಡಿ 67 ಟೆಸ್ಟ್ ಪಂದ್ಯಗಳನ್ನು ಆಡಿದ್ದು 266 ವಿಕೆಟ್‌ಗಳನ್ನು ಪಡೆದಿದ್ದಾರೆ. 14 ಬಾರಿ ಐದು ಅಥವಾ ಅದಕ್ಕಿಂತ ಹೆಚ್ಚು ವಿಕೆಟ್ ಪಡೆದಿದ್ದಾರೆ. ಒಂದು ಬಾರಿ ಹತ್ತು ವಿಕೆಟ್‌ಗಿಂತ ಹೆಚ್ಚು ಪಡೆದಿದ್ದಾರೆ. ಬೇಡಿ ಅವರಿಗೆ ಪತ್ನಿ ಅಂಜು, ಪುತ್ರ ಅಂಗದ್ ಮತ್ತು ಪುತ್ರಿ ನೇಹಾ ಇದ್ದಾರೆ.

ಭಾರತದ ಕ್ರಿಕೆಟ್ ಸುವರ್ಣಯುಗದ 'ಸ್ಪಿನ್ ಚತುಷ್ಟ'ರಲ್ಲಿ ಅವರು ಒಬ್ಬರಾಗಿದ್ದರು. ಕರ್ನಾಟಕದ ಎರಪಳ್ಳಿ ಪ್ರಸನ್ನ, ಭಗವತ್ ಚಂದ್ರಶೇಖರ್ ಮತ್ತು ತಮಿಳುನಾಡಿನ ಶ್ರೀನಿವಾಸ ವೆಂಕಟ ರಾಘವನ್ ಅವರು ಇತರ ಮೂವರು ಸ್ಪಿನ್ ಮಾಂತ್ರಿಕರು. 1966ರಿಂದ 1978ರವರೆಗೆ ಬೇಡಿ ಅವರು ತಂಡದ ಭಾಗವಾಗಿದ್ದರು.

ಮನ್ಸೂರ್ ಅಲಿ ಖಾನ್ ಪಟೌಡಿ ಅವರ ಉತ್ತರಾಧಿಕಾರಿಯಾಗಿ 22 ಟೆಸ್ಟ್‌ಗಳಲ್ಲಿ ಭಾರತ ತಂಡವನ್ನು ಅವರು ಮುನ್ನಡೆಸಿದ್ದರು. ತಂಡದ ಕೋಚ್ ಆಗಿದ್ದರು. ಅಲ್ಪಕಾಲ– 1990ರಲ್ಲಿ ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸದ ವೇಳೆ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ರಾಷ್ಟ್ರೀಯ ತಂಡದ ಆಯ್ಕೆಗಾರರಾಗಿಯೂ ಕೆಲಸ ಮಾಡಿದ್ದರು. ಭಾರತ ತಂಡದಲ್ಲಿ ಆಡಿರುವ ಮಣಿಂದರ್ ಸಿಂಗ್ ಮತ್ತು ಮುರಳಿ ಕಾರ್ತಿಕ್ ಅವರು ಬೇಡಿ ಅವರ ಶಿಷ್ಯರು.

ತಮ್ಮ ಹರಿತ ಸ್ಪಿನ್ ಬೌಲಿಂಗ್ ರೀತಿ ಅವರ ಮಾತುಗಳೂ ಅಷ್ಟೇ ಮೊನಚು. ನಿಷ್ಠುರ ಮಾತು, ಟೀಕೆಗಳಿಂದಲೂ ಸುದ್ದಿಯಾಗುತ್ತಿದ್ದರು. ಆಟವನ್ನು ಕಾಡುತ್ತಿರುವ ವಿಷಯಗಳಿಗೆ, ಕ್ರಿಕೆಟಿಗರ ಹಿತಾಸಕ್ತಿ ವಿಷಯದಲ್ಲಿ, ಅನ್ಯಾಯಕ್ಕೊಳಗಾದ ಕ್ರಿಕೆಟಿಗರ ಪರ ಧ್ವನಿಯೆತ್ತುವಾಗಲೂ ಅವರ ಅಭಿಪ್ರಾಯಗಳು ಹರಿತ ಬಾಣದಂತಿದ್ದವು.

'ಟೀಕಾಕಾರರು ಅವರನ್ನು ರೆಬೆಲ್ ಎಂದು ಕರೆಯಬಹುದು. ಅದು ತಪ್ಪು. ನನ್ನ ಪ್ರಕಾರ ಅವರು ತಮ್ಮ ಹಕ್ಕುಗಳನ್ನು ಚೆನ್ನಾಗಿ ತಿಳಿದುಕೊಂಡ ಕ್ರಿಕೆಟಿಗ' ಎಂದು ಬೇಡಿ ಅವರ ಬಗ್ಗೆ ಕಪಿಲ್ ದೇವ್ ಅವರು ಪುಸ್ತಕವೊಂದರಲ್ಲಿ ಬರೆದಿದ್ದಾರೆ.

'ಅವರು ಕ್ರಿಕೆಟಿಗರ ಪರ ನಿಲ್ಲುತ್ತಿದ್ದರು. ಅವರ ಪಂದ್ಯ ಸಂಭಾವನೆ ಹೆಚ್ಚಿಸಲು, ಪ್ರಯಾಣ, ವಸತಿ ಸೌಲಭ್ಯ ಉತ್ತಮಗೊಳಿಸಲು ಹೋರಾಡಿದ್ದರು. ಅವರು ಭಾರತದ ಕ್ರಿಕೆಟ್ ಹೆಮ್ಮೆಪಡುವಂತೆ ಮಾಡಿದ್ದರು' ಎಂದು ಕಪಿಲ್ ಮೆಚ್ಚಿದ್ದರು. 1976–77ರಲ್ಲಿ ಇಂಗ್ಲೆಂಡ್ ತಂಡದ ಭಾರತ ಪ್ರವಾಸದ ವೇಳೆ, ಆ ತಂಡದ ವೇಗಿ ಜಾನ್ ಲಿವರ್ ಅವರು ಚೆಂಡಿಗೆ ಹೊಳಪು ನೀಡಲು ಪೆಟ್ರೋಲಿಯಂ ಜೆಲ್ಲಿ ಬಳಸಿದ್ದರು ಎಂದು ಬೇಡಿ ಆರೋಪಿಸಿದ್ದರು. ಆ ಆರೋಪವನ್ನು ನಂತರ ತಳ್ಳಿಹಾಕಲಾಯಿತು.

1978ರಲ್ಲಿ ಏಕದಿನ ಪಂದ್ಯವನ್ನು ಬಿಟ್ಟುಕೊಟ್ಟು ಸುದ್ದಿಯಾಗಿದ್ದರು. ಪಾಕಿಸ್ತಾನ ವಿರುದ್ಧದ ಆ ಪಂದ್ಯದಲ್ಲಿ ಸರ್ಫರಾಜ ನವಾಜ್ ಅವರು ನಾಲ್ಕು ಬೌನ್ಸರ್‌ಗಳನ್ನು ಎಸೆದಿದ್ದು ಅಂಪೈರ್ ಗಳು ವೈಡ್ ಕೊಡದ ಕಾರಣ ಅವರು ಆಟ ಮುಂದುವರಿಸಲು ನಿರಾಕರಿಸಿದ್ದರು. ಅವರು ಶ್ರೀಲಂಕಾದ ಸ್ಪಿನ್ ದಿಗ್ಗಜ ಮುತ್ತಯ್ಯ ಮುರಳೀಧರನ್ ಅವರು 'ಥ್ರೊ' ಮಾಡುತ್ತಾರೆ ಎಂದೂ ದೂರಿದ್ದರು.

'ಮುರಳಿ ಚಕ್ ಮಾಡುತ್ತಾರೆ. ಅದನ್ನು ಬೌಲಿಂಗ್ ಎಂದು ಹೇಗೆ ಕರೆಯುತ್ತೀರಿ? ಅವರು ಚೆಂಡೆಸೆಯುವ ವೇಳೆ ಭುಜದ ಬಳಕೆ ಮಾಡುತ್ತಿರಲಿಲ್ಲ. ಅವರು ಒಳ್ಳೆಯ ಜಾವೆಲಿನ್ ಥ್ರೋವರ್ ರೀತಿ ಕಾಣುತ್ತಾರೆ' ಎಂದು ಲೇವಡಿ ಮಾಡಿದ್ದರು.

ಬೇಡಿ ದೀರ್ಘಕಾಲ ಕೋಚ್ ಆಗಿಯೂ ಕೆಲಸ ಮಾಡಿದ್ದಾರೆ. ಸಚಿನ್ ತೆಂಡೂಲ್ಕರ್ ಪ್ರವರ್ಧಮಾನಕ್ಕೆ ಬರುವ ಸಂದರ್ಭವದು. 'ಅವರನ್ನು ನೆಟ್ಸ್‌ನಲ್ಲಿ ಎದುರಿಸಿದ ಭಾಗ್ಯ ನನ್ನದು. ಅವರನ್ನು ಎದುರಿಸುವಾಗ ನಾನು ಅತ್ಯುತ್ತಮ ರೀತಿ ಸಜ್ಜಾಗಬೇಕಿತ್ತು' ಎಂದು ತೆಂಡೂಲ್ಕರ್ ಒಮ್ಮೆ ಹೇಳಿದ್ದರು.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಭಾರತದ ಸ್ಪಿನ್ ದಿಗ್ಗಜರಾದ (ಎಡದಿಂದ) ಬಿ.ಎಸ್. ಚಂದ್ರಶೇಖರ್, ಬಿಷನ್ ಸಿಂಗ್ ಬೇಡಿ, ಅನಿಲ್ ಕುಂಬ್ಳೆ ಮತ್ತು ಇ.ಎ.ಎಸ್. ಪ್ರಸನ್ನ –ಪ್ರಜಾವಾಣಿ ಸಂಗ್ರಹ ಚಿತ್ರ

ಅಂತಿಮ ನಮನ ಸಲ್ಲಿಸಿದ ಕ್ರಿಕೆಟಿಗರು

ನವದೆಹಲಿ (ಪಿಟಿಐ): ಕಪಿಲ್ ದೇವ್, ವಿರೇಂದ್ರ ಸೆಹ್ವಾಗ್ ಸೇರಿದಂತೆ ಹಲವು ಕ್ರಿಕೆಟಿಗರು, ಮಂಗಳವಾರ ಬಿಷನ್ ಸಿಂಗ್ ಬೇಡಿ ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡರು.

ಕಪಿಲ್ ಜೊತೆ 1983ರ ವಿಶ್ವಕಪ್ ತಂಡದಲ್ಲಿ ಆಡಿದ್ದ ಕೀರ್ತಿ ಆಜಾದ್, ಮದನ್ ಲಾಲ್, ಭಾರತ ತಂಡದ ಮಾಜಿ ಆಟಗಾರರಾದ ಆಶಿಷ್ ನೆಹ್ರಾ, ಅಜಯ್ ಜಡೇಜಾ, ಮುರಳಿ ಕಾರ್ತಿಕ್ ಅವರೂ 'ಸ್ಪಿನ್ ಸರದಾರ'ನಿಗೆ ಅಂತಿಮ ನಮನ ಸಲ್ಲಿಸಿದರು.

ಪ್ಯಾರಾ ಏಷ್ಯನ್ ಕ್ರೀಡಾಕೂಟ: ಭಾರತದ ಪದಕ ಬೇಟೆ

ಹಾಂಗ್‌ಝೌ (ಪಿಟಿಐ): ಪ್ರಾಚಿ ಯಾದವ್ ಪ್ಯಾರಾ ಏಷ್ಯನ್ ಕ್ರೀಡಾಕೂಟದ ಕೆನೊಯಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಕ್ರೀಡಾಪಟು ಎಂಬ ಗೌರವಕ್ಕೆ ಪಾತ್ರರಾದರು.

ಮಂಗಳವಾರ ನಡೆದ ಮಹಿಳೆಯರ ಕೆಎಲ್2 ವಿಭಾಗದಲ್ಲಿ ಅವರು ಅಗ್ರಸ್ಥಾನ ಪಡೆದರು. ಸೋಮವಾರ ನಡೆದಿದ್ದ ವಿಎಲ್2 ಸ್ಪರ್ಧೆಯಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

ಎರಡು ದಿನಗಳ ಬಳಿ ಭಾರತ ತಂಡ ಒಟ್ಟು 34 ಪದಕಗಳೊಂದಿಗೆ ಐದನೇ ಸ್ಥಾನದಲ್ಲಿದೆ. 9 ಚಿನ್ನ, 12 ಬೆಳ್ಳಿ ಮತ್ತು 13 ಕಂಚಿನ ಪದಕಗಳನ್ನು ಗೆದ್ದುಕೊಂಡಿದೆ. ಭಾರತದ ಕ್ರೀಡಾಪಟುಗಳು ಸೋಮವಾರ ಮತ್ತು ಮಂಗಳವಾರ ತಲಾ 17 ಪದಕಗಳನ್ನು ಗೆದ್ದುಕೊಂಡರು.

165 ಪದಕಗಳನ್ನು ಜಯಿಸಿರುವ ಚೀನಾ, ಅಗ್ರಸ್ಥಾನದಲ್ಲಿದೆ. ಇರಾನ್ (47), ಜಪಾನ್ (45) ಮತ್ತು ಉಜ್ಬೆಕಿಸ್ತಾನ (38) ಬಳಿಕದ ಸ್ಥಾನಗಳಲ್ಲಿವೆ.

ದೀಪ್ತಿ ಜೀವಾಂಜಿ (ಮಹಿಳೆಯರ 400ಮೀ. ಓಟ) ಮತ್ತು ನೀರಜ್ ಯಾದವ್ (ಪುರುಷರ ಡಿಸ್ಕಸ್ ಥ್ರೊ) ಅವರು ಮಂಗಳವಾರ ಚಿನ್ನ ಗೆದ್ದ ಭಾರತದ ಇತರ ಕ್ರೀಡಾಪಟುಗಳು.

ಶರತ್ ಶಂಕರಪ್ಪ ಅವರು ಪುರುಷರ 5000 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದರು. ಆದರೆ ಈ ವಿಭಾಗದಲ್ಲಿ ಇಬ್ಬರು ಸ್ಪರ್ಧಿಗಳು ಮಾತ್ರ ಕಣದಲ್ಲಿದ್ದ ಕಾರಣ ಸಂಘಟಕರು ಪದಕ ನೀಡಲಿಲ್ಲ. ಏಷ್ಯನ್ ಪ್ಯಾರಾಲಿಂಪಿಕ್ಸ್ ನಿಯಮಗಳ ಪ್ರಕಾರ ಮೂವರಿಗಿಂತ ಕಡಿಮೆ ಸ್ಪರ್ಧಿಗಳು ಇದ್ದರೆ, ಪದಕ ನೀಡುವ ನಿರ್ಧಾರವನ್ನು ತಾಂತ್ರಿಕ ಅಧಿಕಾರಿಗಳು ತೆಗೆದುಕೊಳ್ಳುತ್ತಾರೆ.

ಪ್ರಾಚಿ ಯಾದವ್ –ಪಿಟಿಐ ಚಿತ್ರ

ಬಿಎಫ್‌ಸಿ–ಗೋವಾ ಇಂದು ಮುಖಾಮುಖಿ

ಬೆಂಗಳೂರು: ಬಿಎಫ್‌ಸಿ ತಂಡವು ಇಲ್ಲಿನ ಕಂಠೀರವ ಸ್ಟೇಡಿಯಂನಲ್ಲಿ ಬುಧವಾರ ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವನ್ನು ಎದುರಿಸಲಿದೆ.

ಐಎಸ್‌ಎಲ್‌ನ 10ನೇ ಆವೃತ್ತಿಯಲ್ಲಿ ಬಿಎಫ್‌ಸಿ ತಂಡವು ಈವರೆಗೆ ಆಡಿದ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಸೋತರೆ, ಒಂದರಲ್ಲಿ ಗೆಲುವು ಸಾಧಿಸಿ ಪಾಯಿಂಟ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ.

ಕೇರಳ ಬ್ಲಾಸ್ಟರ್ ವಿರುದ್ಧ 1–2ರಿಂದ, ಮೋಹನ್ ಬಾಗನ್ ವಿರುದ್ಧ 0–1ರಿಂದ ಪರಾಭವಗೊಂಡಿದ್ದ ಬಿಎಫ್‌ಸಿ, ತವರಿನಲ್ಲಿ ನಡೆದ ಮೂರನೇ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ತಂಡವನ್ನು 2–1ರಿಂದ ಮಣಿಸಿತ್ತು. ಕೋಚ್ ಸೈಮನ್ ಗ್ರೇಸನ್ ಮಾರ್ಗದರ್ಶನದಲ್ಲಿ ಮತ್ತೆ ತವರಿನಲ್ಲಿ ಮಿಂಚುವ ವಿಶ್ವಾಸದಲ್ಲಿದೆ.

ಹೊಸ ಕೋಚ್ ಮನೊಲೊ ಮಾರ್ಕ್ವೆಜ್ ಮಾರ್ಗದರ್ಶನದಲ್ಲಿ ಗೋವಾ ತಂಡವು ಆಡಿರುವ 3 ಪಂದ್ಯಗಳನ್ನೂ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. ಪಂಜಾಬ್ ಎಫ್‌ಸಿ ತಂಡವನ್ನು 1–0 ಯಿಂದ, ಒಡಿಶಾ 3–2 ರಿಂದ ಮತ್ತು ಈಸ್ಟ್ ಬೆಂಗಾಲ್ ತಂಡವನ್ನು 2–1ರಿಂದ ಮಣಿಸಿದ್ದ ಗೋವಾ ತಂಡ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಜಯ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ 1–1ರಿಂದ ಡ್ರಾ ಸಾಧಿಸಿತು.

WT.5660.2023KAN